ಭಾರತದ ಸಂಜು ಸ್ಯಾಮ್ಸನ್ (ಔಟಾಗದೆ 97;50ಎ) ಟಿ20 ವಿಶ್ವಕಪ್‌ನ ಸೂಪರ್ ಎಂಟರ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಅಬ್ಬರಿಸಿದರು. 5 ವಿಕೆಟ್‌ಗಳಿಂದ ಗೆದ್ದ ಭಾರತ ಸೆಮಿಫೈನಲ್ ಪ್ರವೇಶಿಸಿತು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

'ಕ್ರಿಯೇಟಿವ್ ಕ್ಲಸ್ಟರ್ ನಿರ್ಮಾಣ' 6

ಖಮೇನಿ ಹತ್ಯೆ: ಪ್ರತೀಕಾರದ ಶಪಥ

ಇರಾನ್‌ನಿಂದ ಪ್ರತಿದಾಳಿಗೆ ಇಸ್ರೇಲ್‌ನಲ್ಲಿ 9 ಮಂದಿ ಸಾವು; ಖಮೇನಿ ಜೊತೆಗಿದ್ದ 48 ನಾಯಕರೂ ಹತ: ಟ್ರಂಪ್

ಜೆರುಸಲೇಂ (ಪಿಟಿಐ/ಎಎಫ್‌ಪಿ): ಇರಾನ್‌ನ ಪರಮೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಅವರು ಅಮೆರಿಕ ಹಾಗೂ ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಹತರಾಗಿದ್ದಾರೆ.

'ನಿಖರ ಹಾಗೂ ಬೃಹತ್ ಕಾರ್ಯಾಚರಣೆಯಲ್ಲಿ ಭಯೋತ್ಪಾದಕ ನಾಯಕನನ್ನು ಹೊಡೆದುರುಳಿಸಲಾಗಿದೆ. ಈ ಮೂಲಕ ಇರಾನ್‌ನಲ್ಲಿ ದಶಕಗಳ ಅಧ್ಯಾಯವೊಂದಕ್ಕೆ ತೆರೆ ಎಳೆಯಲಾಗಿದೆ' ಎಂದು ಇಸ್ರೇಲ್ ರಕ್ಷಣಾ ಪಡೆ (ಐಡಿಎಫ್) ಭಾನುವಾರ ಹೇಳಿದೆ.

ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್‌ನ ಮುಖ್ಯಸ್ಥ ಜನರಲ್ ಮೊಹಮ್ಮದ್ ಪಾಕ್‌ಪೋರ್, ಹಿರಿಯ ಭದ್ರತಾ ಸಲಹೆಗಾರ ಅಲಿ ಶಮ್‌ಖಾನಿ ಕೂಡ ಈ ದಾಳಿಯಲ್ಲಿ ಹತರಾಗಿದ್ದಾರೆ. ಇವರ ಸಾವನ್ನು ಇರಾನ್‌ನ ನ್ಯಾಯಾಂಗ ಇಲಾಖೆ ದೃಢಪಡಿಸಿದೆ.

ಇನ್ನೊಂದೆಡೆ, ತನ್ನ ನಾಯಕ ಖಮೇನಿ ಹತ್ಯೆಗೆ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಇರಾನ್ ಗುಡುಗಿದೆ. ಪ್ರತಿದಾಳಿ ನಡೆಸಿದಲ್ಲಿ ಹಿಂದೆಂದೂ ಕಂಡರಿಯದ ರೀತಿಯಲ್ಲಿ ದಾಳಿ ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿರುವ ಎಚ್ಚರಿಕೆಯನ್ನು ಲೆಕ್ಕಿಸದೇ, ಕೊಲ್ಲಿ ರಾಷ್ಟ್ರಗಳಲ್ಲಿನ ಅದರ ಸೇನಾ ನೆಲೆಗಳನ್ನು ಗುರಿಯಾಗಿಸಿ ಇರಾನ್ ಭಾರಿ ದಾಳಿ ನಡೆಸಿದೆ.

'ಟೆಹರಾನ್ ಮೇಲೆ ಶನಿವಾರ ಇಸ್ರೇಲ್ ವಾಯುಪಡೆ ನಡೆಸಿದ ದಾಳಿಯಲ್ಲಿ ಖಮೇನಿಯನ್ನು ಹತ್ಯೆ ಮಾಡಲಾಗಿದೆ. ಟೆಹರಾನ್‌ನ ಹೃದಯಭಾಗದಲ್ಲಿರುವ ತನ್ನ ನಿವಾಸದಲ್ಲಿದ್ದ ವೇಳೆ, ನಿಖರ ಹಾಗೂ ದೊಡ್ಡ ಪ್ರಮಾಣದ ದಾಳಿ ನಡೆಸಲಾಯಿತು. ಇತರ ಹಿರಿಯ ಅಧಿಕಾರಿಗಳು ಈ ವೇಳೆ ಖಮೇನಿ ಜೊತೆಗಿದ್ದರು' ಎಂದು ಐಡಿಎಫ್ ಹೇಳಿದೆ.

'ಇರಾನ್ ಜನರ ದನಿಯನ್ನು ದಶಕಗಳಿಂದ ಹತ್ತಿಕ್ಕಲಾಗಿತ್ತು. ಇದಕ್ಕೆ ಖಮೇನಿಯೇ ನೇರ ಹೊಣೆಯಾಗಿದ್ದ' ಎಂದೂ ಹೇಳಿದೆ.

7

ವಿಶ್ವದಲ್ಲಿ ದಬ್ಬಾಳಿಕೆ ನಡೆಸುವವರು ಎಂದಿಗೂ ಮರೆಯಲಾರದಂತಹ ಪಾಠವನ್ನು ಇರಾನ್‌ನ ವೀರ ಯೋಧರು ಹಾಗೂ ಜನರು ಕಲಿಸಲಿದ್ದಾರೆ
ಅಲಿ ಲರಿಜಾನಿ, ಸುಪ್ರೀಂ ನ್ಯಾಷನಲ್ ಸೆಕ್ಯುರಿಟಿ ಕೌನ್ಸಿಲ್ ಮುಖ್ಯಸ್ಥ, ಇರಾನ್



ಅಯಾ ತೊಲ್ಲಾ ಅಲಿ ಖಮೇನಿ

'ಮಧ್ಯಂತರ ಅವಧಿ'ಗೆ ಅರಾಫಿ ನೇಮಕ

ಟೆಹರಾನ್: ಅಮೆರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಯಲ್ಲಿ ತನ್ನ ಪರಮೋಚ್ಚ ನಾಯಕ ಅಯಾ ತೊಲ್ಲಾ ಖಮೇನಿ ಹತರಾದ ಬೆನ್ನಲ್ಲೇ, ದೇಶವನ್ನು ಮುನ್ನಡೆಸುವ ಜವಾಬ್ದಾರಿ ಹೊತ್ತ 'ಮಧ್ಯಂತರ ನಾಯಕತ್ವ ಸಮಿತಿ'ಯ ಸದಸ್ಯರನ್ನಾಗಿ ಅಯತೊಲ್ಲಾ ಅಲಿರೆಝಾ ಅರಾಫಿ ಅವರನ್ನು ಇರಾನ್ ಭಾನುವಾರ ನೇಮಿಸಿದೆ.

'ದಿ ಎಕ್ಸ್‌ಪಿಡಿಯೆನ್ಸಿ ಡಿಸರ್ನ್‌ಮೆಂಟ್ ಕೌನ್ಸಿಲ್' ಅರಾಫಿ ಅವರನ್ನು ಈ ಕೌನ್ಸಿಲ್ ಸದಸ್ಯರನ್ನಾಗಿ ನೇಮಕ ಮಾಡಿದೆ. ಇರಾನ್ ಅಧ್ಯಕ್ಷ, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಕೂಡ ಈ ಕೌನ್ಸಿಲ್‌ನಲ್ಲಿ ಇರುವರು. ದೇಶದ ನೂತನ ನಾಯಕನನ್ನು ತ್ವರಿತವಾಗಿ ಆಯ್ಕೆ ಮಾಡಲಾಗುತ್ತಿದ್ದು, ಅಲ್ಲಿಯವರೆಗೆ ದೇಶವನ್ನು ಈ ಕೌನ್ಸಿಲ್ ಮುನ್ನಡೆಸಲಿದೆ' ಎಂದು ಕೌನ್ಸಿಲ್ ವಕ್ತಾರ ಮೊಹಸಿನ್ ದೆಹ್ನವಿ ತಿಳಿಸಿದ್ದಾರೆ.

ಪ್ರತೀಕಾರ ನ್ಯಾಯಬದ್ಧ ಕರ್ತವ್ಯ

'ದೇಶದ ಪರಮೋಚ್ಚ ನಾಯಕ ಖಮೇನಿ ಹತ್ಯೆಯು ಮುಸ್ಲಿಮರ ವಿರುದ್ಧ ಯುದ್ಧ ಸಾರಿದಂತೆ' ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಹೇಳಿದ್ದಾರೆ.

'ಈ ಐತಿಹಾಸಿಕ ಅಪರಾಧದ ಸೂತ್ರಧಾರ ಹಾಗೂ ದುಷ್ಕೃತ್ಯ ಎಸಗಿದವರ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳುವುದು ತನ್ನ ನ್ಯಾಯಬದ್ಧ ಕರ್ತವ್ಯ ಎಂಬುದಾಗಿ ಇರಾನ್ ಪರಿಗಣಿಸುತ್ತದೆ' ಎಂದು ಹೇಳಿದ್ದಾರೆ.

ಕನ್ನಡಿಗರು ಸುರಕ್ಷಿತ: ಸಿ.ಎಂ

ಬೆಂಗಳೂರು: 'ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಇರುವ ಕನ್ನಡಿಗರು ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆದಿರುವುದು ತುಸು ಸಮಾಧಾನಕರ ವಿಚಾರ. ಯಾರೊಬ್ಬರೂ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ಪ್ರತಿಯೊಬ್ಬರನ್ನೂ ಸುರಕ್ಷಿತವಾಗಿ ಕರೆತರಲು ನಿರಂತರವಾಗಿ ಸರ್ಕಾರ ಪ್ರಯತ್ನಿಸಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಭರವಸೆ ನೀಡಿದರು.

ದುಬೈನಲ್ಲಿ ಸಿಲುಕಿರುವ ಕನ್ನಡಿಗರ ಜೊತೆ ವಿಡಿಯೊ ಕರೆ ಮೂಲಕ ಮಾತನಾಡಿ, ಧೈರ್ಯ ತುಂಬಿದ್ದಾರೆ.

7

ಇರಾನ್ ನಡೆಸಿದ ಕ್ಷಿಪಣಿ ದಾಳಿಯಿಂದಾಗಿ ಇಸ್ರೇಲ್ ರಾಜಧಾನಿ ಟೆಲ್ ಅವೀವ್ ನಗರದಲ್ಲಿ ಆಗಿರುವ ಹಾನಿ ಕುರಿತು ರಕ್ಷಣಾ ಸಿಬ್ಬಂದಿ ಹಾಗೂ ಸೇನೆ ಅಧಿಕಾರಿಗಳು ಭಾನುವಾರ ಸಮೀಕ್ಷೆ ನಡೆಸಿದರು ಎಪಿ/ಪಿಟಿಐ ಚಿತ್ರ

ತೈಲ ಬೆಲೆ ಏರಿಕೆ ಭೀತಿ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಸಮರವು ವ್ಯಾಪಾರ ವಹಿವಾಟಿಗೆ ಧಕ್ಕೆ ಉಂಟುಮಾಡಬಹುದು, ಸರಕು ಸಾಗಣೆ ಮತ್ತು ವಿಮಾ ವೆಚ್ಚವನ್ನು ಹೆಚ್ಚಿಸಬಹುದು, ಸರಕು ಸಾಗಣೆಯಲ್ಲಿ ವಿಳಂಬಕ್ಕೆ ಕಾರಣವಾಗಬಹುದು, ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಗೆ ದಾರಿ ಮಾಡಿಕೊಟ್ಟು ಭಾರತದ ಆಮದು ವೆಚ್ಚಗಳು ಹೆಚ್ಚುವಂತೆ ಮಾಡಬಹುದು ಎಂದು ಪರಿಣತರು ಅಂದಾಜು ಮಾಡಿದ್ದಾರೆ.

ಭಾನುವಾರದ ವಹಿವಾಟಿನಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 10ರಷ್ಟು ಜಿಗಿದು, ಪ್ರತಿ ಬ್ಯಾರೆಲ್‌ಗೆ 80 ಡಾಲರ್ ಸನಿಹಕ್ಕೆ ಬಂದಿದೆ. ಸಮರ ಮುಂದುವರಿದಲ್ಲಿ ಕಚ್ಚಾ ತೈಲದ ಬೆಲೆಯು ಬ್ಯಾರೆಲ್‌ಗೆ 100ರಿಂದ 130 ಡಾಲರ್‌ವರೆಗೆ ಹೆಚ್ಚಬಹುದು ಎಂದು ಅಂದಾಜಿಸಲಾಗಿದೆ.

7

ದಿನದ ಬೆಳವಣಿಗೆಗಳು

- ಒಮಾನ್ ಕೊಲ್ಲಿಯಲ್ಲಿ ಇರಾನ್‌ನ ಯುದ್ಧ ನೌಕೆಯ ಮೇಲೆ ದಾಳಿ ನಡೆಸಿದ್ದು, ಮುಳುಗಡೆಯಾಗಿದೆ- ಅಮೆರಿಕ ಸೇನೆ
- ಇರಾನ್‌ನ ನೌಕಾಪಡೆಯ 9 ಹಡಗುಗಳ ನಾಶ: ಡೊನಾಲ್ಡ್ ಟ್ರಂಪ್
- ಇರಾನ್ ನಡೆಸಿದ ದಾಳಿಗೆ ಅಮೆರಿಕದ ಮೂವರು ಸೈನಿಕರ ಸಾವು- ಐವರಿಗೆ ಗಂಭೀರ ಗಾಯ
- ಯುಎಇ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಮೂವರು ಮೃತಪಟ್ಟಿದ್ದು, ಒಬ್ಬ ಭಾರತೀಯ ಸೇರಿ 58 ಜನರಿಗೆ ಗಾಯ
- ಅಮೆರಿಕದ ವಿಮಾನವಾಹಕ ನೌಕೆ ಅಬ್ರಹಾಂ ಲಿಂಕನ್ ಗುರಿಯಾಗಿರಿಸಿ 4 ಕ್ಷಿಪಣಿಗಳಿಂದ ದಾಳಿ-ಇರಾನ್; ದಾಳಿ ನಿರಾಕರಿಸಿದ ಅಮೆರಿಕ
- ಇರಾನ್‌ನಲ್ಲಿ ಮೃತಪಟ್ಟವರ ಸಂಖ್ಯೆ 200ಕ್ಕೆ ಏರಿಕೆ
- ಕರಾಚಿಯಲ್ಲಿ ಅಮೆರಿಕ ಕಾನ್ಸುಲೇಟ್ ಕಚೇರಿ ಮೇಲೆ ದಾಳಿ
- ಸೌದಿ ಅರೇಬಿಯಾ, ಯುಎಇ, ಕತಾರ್, ಕುವೈತ್, ಬಹರೇನ್, ಇರಾಕ್ ಕೂಡ ಗುರಿ- ಎಚ್ಚರಿಕೆ ನೀಡಿದ ಇರಾನ್
- ಎರಡನೇ ದಿನವೂ ವಾಯುಪ್ರದೇಶವನ್ನು ಮುಚ್ಚಿದ ಇರಾನ್, ಇಸ್ರೇಲ್ ಹಾಗೂ ಇರಾಕ್
- ಜಾಗತಿಕ ಮಟ್ಟದಲ್ಲಿ ವಿಮಾನಯಾನ ಸಂಚಾರ ವ್ಯತ್ಯಯ
- ಭಾರತದ 350ಕ್ಕೂ ಹೆಚ್ಚು ವಿಮಾನಗಳ ಸಂಚಾರ ರದ್ದು

10 ಸಾವಿರ ವಾಹನಗಳಿಗೆ ತಪಾಸಣೆ ಇಲ್ಲದೇ ಎಫ್‌ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ತಪಾಸಣೆ ನಡೆಸದೇ ಗುಜರಾತ್, ಮಹಾರಾಷ್ಟ್ರ, ಕೇರಳದ 10 ಸಾವಿರಕ್ಕೂ ಅಧಿಕ ವಾಹನಗಳಿಗೆ ವಾಹನ ಸದೃಢ (ಫಿಟ್‌ನೆಸ್) ಪ್ರಮಾಣಪತ್ರ ನೀಡಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿವೃತ್ತ ಮೋಟಾರು ವಾಹನ ನಿರೀಕ್ಷಕ ನಿಸಾರ್ ಅಹಮದ್ ವಿರುದ್ಧ ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬೆಂಗಳೂರು ಕೇಂದ್ರ ಪ್ರಾದೇಶಿಕ ಸಾರಿಗೆ ಕಚೇರಿ ಅಧಿಕಾರಿ ಎಲ್. ದೀಪಕ್ ನೀಡಿದ ದೂರಿನಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ದೂರಿನಲ್ಲೇನಿದೆ?: ನಿಸಾರ್ ಅಹಮದ್ ಸುಮಾರು ಎಂಟು ವರ್ಷಗಳಿಂದ ಮೋಟಾರು ವಾಹನ ನಿರೀಕ್ಷಕರಾಗಿ ಕೇಂದ್ರ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿ ಈ ವರ್ಷ ಜನವರಿ 31ರಂದು ನಿವೃತ್ತರಾಗಿದ್ದಾರೆ. ಅವರು ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ 2025ರ ಆಗಸ್ಟ್ 1ರಿಂದ 2026ರ ಜ.20ರವರೆಗೆ ಹೊರರಾಜ್ಯಗಳ 10,210 ವಾಹನಗಳಿಗೆ ವಾಹನ ಸದೃಢ ಪ್ರಮಾಣಪತ್ರ (ಫಾರಂ 38ಎ) ನೀಡಿದ್ದರು. ಆದರೆ, ಯಾವುದೇ ವಾಹನವನ್ನು ಭೌತಿಕವಾಗಿ ಪರಿಶೀಲನೆ ನಡೆಸಿರಲಿಲ್ಲ. ಈ ಬಗ್ಗೆ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ ಶರ್ಮಾ ಅವರು ಸಾರಿಗೆ ಆಯುಕ್ತರಿಗೆ ದೂರು ನೀಡಿದ್ದರು.

ಈ ದೂರಿನ ಬಗ್ಗೆ ಪರಿಶೀಲನೆ ನಡೆಸಿ ವರದಿ ನೀಡಲು ಸಾರಿಗೆ ಜಂಟಿ ಆಯುಕ್ತರಿಗೆ ಸಾರಿಗೆ ಆಯುಕ್ತರು ಸೂಚನೆ ನೀಡಿದ್ದರು. ಜಂಟಿ ಆಯುಕ್ತರು ವಾಹನ್ ತಂತ್ರಾಂಶದಲ್ಲಿ ವಾಹನಗಳ ಮಾಹಿತಿ ಪಡೆದುಕೊಂಡಿದ್ದರು.

6

ಉತ್ತಮ ಕೆಲಸ

'ನಾನು ಈ ಬಗ್ಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ಸಾರಿಗೆ ಆಯುಕ್ತ ಎ.ಎಂ. ಯೋಗೀಶ್ ಅವರಿಗೆ ದೂರು ಸಲ್ಲಿಸಿದ್ದೆ. ಜಂಟಿ ಆಯುಕ್ತರಾದ ಶೋಭಾ ಅವರು ಇಲಾಖಾ ತನಿಖೆ ನಡೆಸಿ ವರದಿ ನೀಡಿದ್ದರು. ಅದರಂತೆ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿರುವುದು ಉತ್ತಮ ಕಾರ್ಯ' ಎಂದು ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ ಶರ್ಮಾ ಪ್ರತಿಕ್ರಿಯಿಸಿದ್ದಾರೆ.

ನಾಗ್ಪುರ: ಕಾರ್ಖಾನೆಯಲ್ಲಿ ಸ್ಫೋಟ– 18 ಮಂದಿ ಸಾವು

ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ನಾಗ್ಪುರ ಜಿಲ್ಲೆಯ ಕಾರ್ಖಾನೆಯೊಂದರಲ್ಲಿ ಭಾನುವಾರ ಬೆಳಿಗ್ಗೆ ಸ್ಫೋಟ ಸಂಭವಿಸಿದ್ದು, 18 ಜನರು ಮೃತಪಟ್ಟು, 24ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಕಟೋಲ್ ತಾಲ್ಲೂಕಿನ ಗಣಿಗಾರಿಕೆ ಮತ್ತು ಕೈಗಾರಿಕಾ ಸ್ಫೋಟಕ ತಯಾರಿಕಾ ಕಾರ್ಖಾನೆ 'ಎಸ್‌ಬಿಎಲ್ ಎನರ್ಜಿ ಲಿಮಿಟೆಡ್'ನಲ್ಲಿ ಸ್ಫೋಟ ಸಂಭವಿಸಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತದೇಹಗಳು ಗುರುತು ಸಿಗದಷ್ಟು ಸುಟ್ಟು ಕರಕಲಾಗಿದ್ದು, ಡಿಎನ್‌ಎ ಪರೀಕ್ಷೆಗಾಗಿ ಕುಟುಂಬಸ್ಥರ ಮಾದರಿಯನ್ನು ಪಡೆಯಲಾಗುತ್ತಿದೆ' ಎಂದು ಹೇಳಿದರು.

ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ದುರಂತಕ್ಕೆ ಸಂಬಂಧಿಸಿದಂತೆ ತನಿಖೆಗೆ ಆದೇಶಿಸಿದ್ದಾರೆ. 'ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಸೇರಿದಂತೆ ಮತ್ತಿತರ ಇಲಾಖೆಗಳ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಯುದ್ಧೋಪಾದಿಯಲ್ಲಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ' ಎಂದು ಫಡಣವೀಸ್ ತಿಳಿಸಿದರು.

10

PLASTO®
10 YEAR GUARANTEE
7767000185

ಒ.ಸಿಗೆ ವಿನಾಯಿತಿ: ಷರತ್ತಿನಿಂದಾಗಿ ತೊಂದರೆ
ಗ್ರಾಮೀಣರಿಗಿಲ್ಲ ವಿದ್ಯುತ್ ಭಾಗ್ಯ

ಎ.ಎಂ.ಸುರೇಶ

ಬೆಂಗಳೂರು: ನಕ್ಷೆ ಮಂಜೂರಾತಿ ಇಲ್ಲದೆ 1,200 ಚದರ ಅಡಿ ವಿಸ್ತೀರ್ಣದ ಒಳಗಿನ ನಿವೇಶನಗಳಲ್ಲಿ ನಿರ್ಮಿಸಿರುವ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ) ಪಡೆಯುವುದರಿಂದ ವಿನಾಯಿತಿ ನೀಡಿದ್ದರೂ, ಗ್ರಾಮೀಣ ಭಾಗದಲ್ಲಿ ವಿದ್ಯುತ್ ಹಾಗೂ ನೀರಿನ ಸಂಪರ್ಕ ಪಡೆಯಲು ಸಾಧ್ಯವಾಗುತ್ತಿಲ್ಲ.

ಸರ್ಕಾರದ ಆದೇಶದಲ್ಲಿ 1,200 ಚದರ ಅಡಿ ವಿಸ್ತೀರ್ಣದ ಒಳಗಿನ ನಿವೇಶನಗಳಲ್ಲಿ ನಿರ್ಮಿಸಿರುವ ವಸತಿ ಕಟ್ಟಡಗಳಿಗೆ ಮಾತ್ರ ಅನ್ವಯವಾಗಲಿದೆ ಎಂದು ತಿಳಿಸಲಾಗಿದೆ. ಆದರೆ, ಗ್ರಾಮೀಣ ಭಾಗದ ಬಹುತೇಕ ಕಡೆ ಸರ್ಕಾರ ನಿಗದಿಪಡಿಸಿರುವ ಮಿತಿಯ ಒಳಗೆ ಮನೆಗಳನ್ನು ನಿರ್ಮಿಸಿಲ್ಲ. ಹೀಗಾಗಿ ವಿದ್ಯುತ್ ಸಂಪರ್ಕ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಮಲೆನಾಡು ಹಾಗೂ ಕರಾವಳಿ ಭಾಗದ ತೋಟಗಳಲ್ಲಿ ಅಥವಾ 5ರಿಂದ 10 ಗುಂಟೆ ಜಾಗದಲ್ಲಿ ಮನೆಗಳನ್ನು ನಿರ್ಮಿಸಿಕೊಳ್ಳಲಾಗುತ್ತಿದೆ. 30X40 ಅಡಿ ಎಂದು ಲೆಕ್ಕಾಚಾರ ಮಾಡಿ ಮನೆಗಳನ್ನು ನಿರ್ಮಿಸುವ ಪದ್ಧತಿ ಆ ಭಾಗದಲ್ಲಿ ಇಲ್ಲ. ಇದನ್ನು ಅರ್ಥ ಮಾಡಿಕೊಳ್ಳದೆ, ನಗರ ಪ್ರದೇಶದಲ್ಲಿ ವಿಧಿಸಿರುವ ಷರತ್ತುಗಳನ್ನೇ ಗ್ರಾಮೀಣ ಭಾಗಕ್ಕೂ ವಿಸ್ತರಿಸಿರುವುದು ಸರಿಯಲ್ಲ' ಎಂದು 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ನಾಗರಿಕರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

ನಗರ ಪ್ರದೇಶದ ಬಡಾವಣೆಗಳಲ್ಲಿ ಯೋಜಿತ ರೀತಿಯಲ್ಲಿ ಮನೆಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಆದರೆ, ಗ್ರಾಮೀಣ ಭಾಗದ ಬಹುತೇಕ ಕಡೆ ಇದಕ್ಕೆ ತದ್ವಿರುದ್ಧವಾಗಿ ಮನೆಗಳನ್ನು ನಿರ್ಮಿಸಿದ್ದಾರೆ. ತೋಟ ಅಥವಾ ವಿಶಾಲವಾದ ಜಾಗದಲ್ಲಿ ಮನೆಗಳನ್ನು ನಿರ್ಮಿಸಲಾಗಿದೆ. ದೊಡ್ಡದಾದ ಮನೆಯ ಒಂದು ಕಡೆ ಕುಟುಂಬ ವಾಸವಿದ್ದರೆ, ಉಳಿದ ಕಡೆ ಧಾನ್ಯ ಸಂಗ್ರಹ ಕೊಠಡಿ, ದನದ ಕೊಟ್ಟಿಗೆ, ಕೃಷಿಗೆ ಬಳಸುವ ಉಪಕರಣಗಳ ದಾಸ್ತಾನು ಕೊಠಡಿ... ಹೀಗೆ ಬೇರೆ ಬೇರೆ ಕೊಠಡಿಗಳು ಇರುತ್ತವೆ.

6



'ಯಾರ ಬಳಿಯೂ ಉತ್ತರ ಇಲ್ಲ'

'ನಗರ ಪ್ರದೇಶದಲ್ಲಿ 30X40 ಅಡಿಗಿಂತ ಹೆಚ್ಚಿನ ವಿಸ್ತೀರ್ಣದಲ್ಲಿ ನಿರ್ಮಿಸಿರುವ ಮನೆಗಳ ಸಂಖ್ಯೆ ಹೆಚ್ಚಾಗಿದೆ. ಅಲ್ಲದೆ ವಾಣಿಜ್ಯ ಹಾಗೂ ಕೈಗಾರಿಕಾ ಉದ್ದೇಶಕ್ಕೆ ನಿರ್ಮಿಸಿರುವ ಕಟ್ಟಡಗಳು, ಪಿ.ಜಿಗಳು ಹೆಚ್ಚಾಗಿವೆ. ಇವುಗಳಿಗೆ ಯಾವಾಗ ವಿದ್ಯುತ್ ಸಂಪರ್ಕ ನೀಡಲಾಗುತ್ತದೆ ಎಂಬ ಪ್ರಶ್ನೆಗೆ ಯಾರೂ ಸ್ಪಷ್ಟ ಉತ್ತರ ನೀಡುತ್ತಿಲ್ಲ' ಎಂದು ವಿದ್ಯುತ್ ಗುತ್ತಿಗೆದಾರರ ಸಂಘದ ಪದಾಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು

'2025ರ ಡಿಸೆಂಬರ್‌ನಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದಾಗ, ವಿಧಾನ ಮಂಡಲದ ಅಧಿವೇಶನ ಮುಗಿಯಲಿ ನೋಡೋಣ ಎಂದಿದ್ದರು. ಆ ಬಳಿಕ ಈ ಬಗ್ಗೆ ಚಕಾರ ಎತ್ತಿಲ್ಲ. ಅಧಿಕಾರಿಗಳನ್ನು ಕೇಳಿದರೆ ನಮಗೆ ಏನೂ ಗೊತ್ತಿಲ್ಲ. ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುತ್ತಾರೆ. ಯಾರೂ ಸ್ಪಷ್ಟ ಉತ್ತರ ನೀಡುತ್ತಿಲ್ಲ' ಎಂದು ಅವರು ಹೇಳಿದರು.

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಸರ್ಕಾರ ಘೋಷಿಸಿದ ಬಹುಮಾನಕ್ಕಾಗಿ ಒಂದೂ ಅರ್ಜಿ ಬಂದಿಲ್ಲ
ಬಾಲ್ಯವಿವಾಹ ಮುಕ್ತವಾಗದ ಸಿ.ಎಂ ತವರು

ಎಂ.ಮಹೇಶ್

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರಾದ ಮೈಸೂರು ಜಿಲ್ಲೆಯಲ್ಲಿ 'ಬಾಲ್ಯವಿವಾಹ ಮುಕ್ತ ಗ್ರಾಮ ಪಂಚಾಯಿತಿ' ಒಂದೂ ಇಲ್ಲ ಎಂಬ ಅಂಶ ಹೊರಬಿದ್ದಿದೆ. ಇದು, ಈ 'ಸಾಮಾಜಿಕ ಪಿಡುಗು' ನಿಂತಿಲ್ಲದಿರುವುದಕ್ಕೆ ಕನ್ನಡಿ ಹಿಡಿದಿದೆ.

'ಬಾಲ್ಯವಿವಾಹಮುಕ್ತ ಗ್ರಾಮ ಪಂಚಾಯಿತಿಗೆ ₹25ಸಾವಿರ ಬಹುಮಾನ ನೀಡಲಾಗುವುದು' ಎಂದು ರಾಜ್ಯ ಸರ್ಕಾರ ತಿಳಿಸಿತ್ತು. ಇದಕ್ಕಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಅರ್ಜಿ ಆಹ್ವಾನಿಸಲಾಗಿತ್ತು. ಜಿಲ್ಲಾ ಪಂಚಾಯಿತಿ ಮೂಲಕ ಗ್ರಾ.ಪಂ.ಗಳಿಗೆ ಮಾಹಿತಿಯನ್ನೂ ಕೊಡಿಸಲಾಗಿತ್ತು. ಅರ್ಜಿ ಸಲ್ಲಿಸಿ ಘೋಷಿಸಿಕೊಳ್ಳಲು ಜನವರಿ 30 ಕೊನೆಯ ದಿನವಾಗಿತ್ತು. ಗಡುವು ಮುಗಿದು, ಫೆಬ್ರುವರಿಯೇ ಕಳೆದಿದ್ದರೂ ಜಿಲ್ಲೆಯ ಯಾವೊಂದು ಪಂಚಾಯಿತಿಯಿಂದಲೂ ಅರ್ಜಿ ಸಲ್ಲಿಕೆಯಾಗಿಲ್ಲ. ಬಹುಮಾನಕ್ಕೆ ಬೇಡಿಕೆಯೇ ವ್ಯಕ್ತವಾಗಿಲ್ಲ.

ಇದು ರಾಜ್ಯಮಟ್ಟದಲ್ಲಿ 'ಬಾಲ್ಯವಿವಾಹ ಮುಕ್ತ ಜಿಲ್ಲೆ' ಎಂದು ಘೋಷಿಸಿಕೊಳ್ಳುವುದಕ್ಕೆ ತೊಡಕಾಗಿ ಪರಿಣಮಿಸಿದೆ.

256 ಗ್ರಾ.ಪಂ.: ಜಿಲ್ಲೆಯಲ್ಲಿ ಒಟ್ಟು 256 ಗ್ರಾಮ ಪಂಚಾಯಿಗಳಿವೆ. ಇವುಗಳಲ್ಲಿ ಯಾವ ಪಂಚಾಯಿತಿಯೂ 'ಬಾಲ್ಯವಿವಾಹ ಮುಕ್ತ' ಎಂದು ಘೋಷಿಸಿಕೊಳ್ಳಲು ಮುಂದೆ ಬಂದಿಲ್ಲ. ಪಂಚಾಯಿತಿ ವ್ಯಾಪ್ತಿಯ ಒಂದಿಲ್ಲೊಂದು ಗ್ರಾಮದಲ್ಲಿ ಬಾಲ್ಯವಿವಾಹ ನಡೆದಿರುವುದು ಇದಕ್ಕೆ ಕಾರಣ. ಇತರ ಹಲವು ಜಿಲ್ಲೆಗಳಿಂದಲೂ ಅರ್ಜಿಗಳು ಸಲ್ಲಿಕೆಯಾಗಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಗಳು ತಿಳಿಸಿವೆ.

ಮಾನದಂಡವೇನು?: ಗ್ರಾ.ಪಂ. ವ್ಯಾಪ್ತಿಯಲ್ಲಿ 3 ವರ್ಷಗಳಲ್ಲಿ ಬಾಲ್ಯ ವಿವಾಹ ನಡೆದಿರಬಾರದು. ಈ ಅವಧಿಯಲ್ಲಿ, ಬಾಲ್ಯ ವಿವಾಹದಿಂದ ರಕ್ಷಿಸಲಾದ ಮಕ್ಕಳ ಶಿಕ್ಷಣ ಮುಂದುವರಿಕೆಗೆ ಪ್ರೋತ್ಸಾಹಿಸಿರಬೇಕು. ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ನಿಯಮಿತವಾಗಿ ನಡೆಸಿರಬೇಕು. ಗ್ರಾ.ಪಂ. ಅಭಿವೃದ್ಧಿ ಯೋಜನೆಯಲ್ಲಿ ಬಾಲ್ಯವಿವಾಹ ನಡೆಯದಂತೆ ಯೋಜನೆ ರೂಪಿಸಿರುವ ಬಗ್ಗೆ ದಾಖಲೆ ಇರಬೇಕು ಎಂಬಿತ್ಯಾದಿ ಮಾನದಂಡಗಳನ್ನು ಬಹುಮಾನಕ್ಕಾಗಿ ನಿಗದಿಪಡಿಸಲಾಗಿದೆ.

'ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಮಾಹಿತಿ ಆಧರಿಸಿ, ಬಾಲ್ಯವಿವಾಹ ತಡೆಯುವ ಕೆಲಸವನ್ನೂ ಮಾಡುತ್ತಿದ್ದೇವೆ' ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಯೋಗೇಶ್ ಎನ್.ಟಿ. ಪ್ರತಿಕ್ರಿಯಿಸಿದರು.

ಜಿಲ್ಲೆಯಲ್ಲಿ 2024ರಲ್ಲಿ 224 ಬಾಲ್ಯವಿವಾಹ ತಡೆಯಲಾಗಿತ್ತು. ಆದಾಗ್ಯೂ 56 ಮದುವೆ ನಡೆದಿವೆ. 2025ರಲ್ಲಿ 268 ಬಾಲ್ಯ ವಿವಾಹ ತಡೆದಿದ್ದು, 24 ಮದುವೆ ನಡೆದಿವೆ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

> **ಬಾಲ್ಯ ವಿವಾಹದ ದುಷ್ಪರಿಣಾಮ ಅಪಾರ. ಇದು ದೊಡ್ಡ ಸಾಮಾಜಿಕ ಸಮಸ್ಯೆಯಾಗಿದ್ದು, ಮಕ್ಕಳ ಹಕ್ಕುಗಳ ರಕ್ಷಣೆಗೆ ಕಟ್ಟುನಿಟ್ಟಿನ ಕ್ರಮದ ಅಗತ್ಯವಿದೆ**
> **ಎಂ.ಎಲ್.ಪರಶುರಾಮ್,** ನಿರ್ದೇಶಕ, ಒಡನಾಡಿ ಸೇವಾ ಸಂಸ್ಥೆ, ಮೈಸೂರು

> **ಗ್ರಾ.ಪಂ.ಗಳಿಂದ ಈವರೆಗೆ ಒಂದು ಅರ್ಜಿಯೂ ಬಂದಿಲ್ಲ. ಹೀಗಾಗಿ, ಪೊಲೀಸ್ ಠಾಣೆಗಳಿಂದ ಮಾಹಿತಿ ಕೇಳಿದ್ದೇವೆ. ಅಲ್ಲಿ ಮಾಹಿತಿ ಸಿಕ್ಕರೆ ಪ್ರಸ್ತಾವ ಸಲ್ಲಿಸಲಾಗುವುದು**
> **ಯೋಗೇಶ್ ಎನ್.ಟಿ.,** ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಮೈಸೂರು

INSIGHTSIAS
SIMPLIFYING IAS EXAM PREPARATION
OGP 2027
Offline & Online Guidance Program 2027
Integrated Foundation Program for UPSC CSE 2027
Under the Guidance of VINAY KUMAR G B
Founder & Director, Insights IAS
BATCH- 3 | Duration of Course 1.5 years
STARTS ON 20th March 2026
REGISTER HERE
Daily & Weekly Revision Tests for Prelims & Mains & Full Length Tests
Integrated Coverage of Prelims & Mains by In-House Faculties
ETHICS, ESSAY & CSAT Classes are Integrated & given Prominence
Free Access to All India Prelims Test Series
Weekly Current Affairs Classes & Daily Current Affairs Soft Copy
Personalized One-on-one Mentorship Provided by Experts
KNOWLEDGE. PRACTICE. SUCCESS - THE INSIGHTS IAS WAY
Website: www.insightsonindia.com
Courses: instacourses.insightsonindia.com
Mail: support@insightsias.com
EARLY BIRD OFFER DISCOUNT 10% OFF VALID TILL 18TH MAR. 2026
FEE: OFFLINE CLASSES ₹ 1,38,000/- ₹ 1,24,200/- incl. taxes
FEE: ONLINE CLASSES ₹ 1,00,000/- ₹ 90,000/- incl. taxes
250+ RANKS IN UPSC CSE 2024 FROM VARIOUS ONLINE & OFFLINE COURSES & OGP EXCELLENCE
SHOBHIKA, SREEKANTH, DIYA DASGUPTA, SURYABHAN YADAV, PUSAPATI SAHITYA, AVINASH V, VAIBHAV RAWAT, AKSHAY SIMHA, JEYDEV
08069405205
Bengaluru Office: Nanda Ashirwad Complex, 3rd floor, Above Village Hyper Market, Chandra layout, Bengaluru-560072

ಸೂರ್ಯೋದಯ: 6:28 ಸೂರ್ಯಾಸ್ತ : 6:36 | ಚಂದ್ರೋದಯ: ಮ. 4:41 ಚಂದ್ರಾಸ್ತ: ಬೆ. 4:51 | ಭಾನುವಾರದ ಉಷ್ಣಾಂಶ : ಗರಿಷ್ಠ 32° ಕನಿಷ್ಠ 20°

ಸೋಮವಾರದ ಉಷ್ಣಾಂಶ 32° ಗರಿಷ್ಠ 20° ಕನಿಷ್ಠ | ಮಂಗಳವಾರ 32° : 19° | ಬುಧವಾರ 32° : 19° | ಗುರುವಾರ 32° : 18°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ.

‘ಕೆಂಗೇರಿ ಆರೋಗ್ಯ ಕೇಂದ್ರಕ್ಕೆ ಸೌಲಭ್ಯ ಕೊಡಿ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ಕೆಂಗೇರಿ ಸಮುದಾಯ ಆರೋಗ್ಯ ಕೇಂದ್ರವನ್ನು ಕೆಳದರ್ಜೆಗೆ ಇಳಿಸದೇ ಹೆಚ್ಚಿನ ಸೌಲಭ್ಯ ಒದಗಿಸಬೇಕು’ ಎಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಸರ್ಕಾರಕ್ಕೆ ಸೂಚನೆ ನೀಡಿದೆ.

‘ಇಲ್ಲಿನ ವೈದ್ಯರನ್ನು ವರ್ಗ ಮಾಡಲಾಗುತ್ತಿದೆ. ಕೇಂದ್ರವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಪರಿವರ್ತಿಸಲಾಗುತ್ತಿದೆ. ಇದರಿಂದ 32 ಗ್ರಾಮಗಳ ನಾಗರಿಕರಿಗೆ, ಗರ್ಭಿಣಿಯರಿಗೆ ತೊಂದರೆಯಾಗಲಿದೆ’ ಎಂದು ಬಿ.ಎಂ. ಶಿವಕುಮಾರ್ ಆಯೋಗಕ್ಕೆ ದೂರು ಸಲ್ಲಿಸಿದ್ದರು.

ಪರಿಶೀಲನೆ ನಡೆಸಿದ ಮಾನವ ಹಕ್ಕು ಆಯೋಗ, ‘ಗೌರವಯುತ ಜೀವನಕ್ಕೆ ಆರೋಗ್ಯ ಸೇವೆ ಅನಿವಾರ್ಯ. ಆರೋಗ್ಯ ಸೇವೆ ಸರ್ಕಾರದ ಕರ್ತವ್ಯವಾಗಿದ್ದು, ಸೇವೆ ಕುಂಠಿತಗೊಳಿಸುವ ಕ್ರಮ ಸಂವಿಧಾನದ ಆಶಯಗಳಿಗೆ ವಿರುದ್ಧ. ಜತೆಗೆ ಮಾನವ ಹಕ್ಕುಗಳ ಉಲ್ಲಂಘನೆಗೆ ಸಮಾನವಾಗಿದೆ’ ಎಂದು ಅಭಿಪ್ರಾಯಪಟ್ಟಿದೆ.

‘ಕೇಂದ್ರದ ವೈದ್ಯರನ್ನು ವರ್ಗ ಮಾಡುವ ಸನ್ನಿವೇಶ ಬಂದಲ್ಲಿ, ಪರ್ಯಾಯವಾಗಿ ನುರಿತ ವೈದ್ಯಾಧಿಕಾರಿಗಳನ್ನು ಆರೋಗ್ಯ ಇಲಾಖೆ ನೇಮಿಸಬೇಕು. ಆಸ್ಪತ್ರೆಯಲ್ಲಿನ ವೈದ್ಯಕೀಯ ಹಾಗೂ ಮೂಲಸೌಲಭ್ಯಗಳನ್ನು ಹೆಚ್ಚಿಸಬೇಕು’ ಎಂದು ಆಯೋಗ ಸೂಚನೆ ನೀಡಿದೆ.

ಮೂಲ ಸೌಲಭ್ಯ ಕೊರತೆ ಸಂಬಂಧ ಜ.15ರಂದು ‘ಬಾಣಂತಿಯರ ಊಟಕ್ಕೂ ಕತ್ತರಿ’ ಶೀರ್ಷಿಕೆಯಡಿ ಪ್ರಜಾವಾಣಿ ವರದಿ ಮಾಡಿತ್ತು.

ದೇವನಹಳ್ಳಿ ರಸ್ತೆ ಕಾಮಗಾರಿ ವಿಳಂಬ

ನೆಲಮಂಗಲದಿಂದ ವಿಮಾನ ನಿಲ್ದಾಣಕ್ಕೆ ಸಾಗುವ ರಸ್ತೆಯಲ್ಲಿ ಸಂಚಾರ ತಾಪತ್ರಯ

• ಮಹಾಂತೇಶ್ ಎಂ.ನೆಗಳೂರ

ಹೆಚ್ಚಿನ ಪರಿಹಾರಕ್ಕೆ ಆಗ್ರಹಿಸಿ ರೈತರು ನ್ಯಾಯಾಲಯದ ಮೊರೆಹೋಗಿರುವುದರಿಂದ ವಿಳಂಬವಾಗಿದೆ. ಶೀಘ್ರ ಪರಿಹಾರ ಕಂಡುಕೊಳ್ಳುತ್ತೇವೆ

ಎನ್.ಶ್ರೀನಿವಾಸ್, ಶಾಸಕ

ನೆಲಮಂಗಲ: ದೇವನಹಳ್ಳಿ ವಿಮಾನ ನಿಲ್ದಾಣ ರಸ್ತೆಯಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಆರು ವರ್ಷಗಳದ ಹಿಂದೆ ಆರಂಭವಾದ ನೆಲಮಂಗಲ-ದೇವನಹಳ್ಳಿ ಸಿಗ್ನಲ್‌ರಹಿತ ರಸ್ತೆ ಕಾಮಗಾರಿ ಸದ್ಯಕ್ಕೆ ಮುಗಿಯುವಂತೆ ಕಾಣುತ್ತಿಲ್ಲ.

ಈ ರಸ್ತೆಯಲ್ಲಿ ನಿತ್ಯ ಸಂಚರಿಸುವ ವಾಹನ ಸವಾರರು ಹೈರಾಣಾಗಿದ್ದಾರೆ. ರಸ್ತೆಯ ಇಕ್ಕೆಲಗಳಲ್ಲಿ ಇರುವ ಅಂಗಡಿಗಳವರು, ನಿವಾಸಿಗಳು ದೂಳು ಸೇವಿಸಿ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಅಲ್ಲದೆ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದಾರೆ.

ಈಗಾಗಲೇ ಕಾಮಗಾರಿ ಮುಗಿಯಬೇಕಾಗಿತ್ತಾದರೂ ಯೋಜನೆ ಬದಲಾದ ಕಾರಣ ಭೂಸ್ವಾಧೀನ ಮತ್ತಿತರ ಕಾರಣದಿಂದ ಕಾಮಗಾರಿ ವಿಳಂಬವಾಗುತ್ತಲೇ ಇದೆ.

ಕೆಆರ್‌ಡಿಸಿಎಫ್‌ಗೆ ವರ್ಗ: ಒಟ್ಟು 39 ಕಿ.ಮೀ. ಉದ್ದದ ರಸ್ತೆ ಇದಾಗಿದ್ದು, ಗೊಲ್ಲಹಳ್ಳಿ, ಚಿಕ್ಕಮದುರೆ (ಕನಸವಾಡಿ), ಬ್ಯಾತ, ರಾಜಾನುಕುಂಟೆ, ದೇವನಹಳ್ಳಿ ಮಾರ್ಗವಾಗಿ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸಲಿದೆ.

ಪಟ್ಟಣದ ಬಿ.ಎಚ್ ರಸ್ತೆಯಿಂದ ದೊಡ್ಡಬಳ್ಳಾಪುರಕ್ಕೆ ತಿರುವು ಪಡೆಯುವಲ್ಲಿಯಿಂದ ಬಸವನಹಳ್ಳಿವರೆಗೆ ಹಾಗೂ ಹ್ಯಾಡಾಳು, ರೈಲ್ವೆ ಗೊಲ್ಲಹಳ್ಳಿ, ಅರ್ಜುನ ಬೆಟ್ಟಹಳ್ಳಿ, ಕ್ರಾಸ್‌ವರೆಗಿನ ರಸ್ತೆ ಕಾಮಗಾರಿ ಸ್ಥಗಿತಗೊಂಡಿದೆ.

ಆರಂಭದಲ್ಲಿ ಲೋಕೋಪಯೋಗಿ ಇಲಾಖೆ ಕೈಗೆತ್ತಿಕೊಂಡಿದ್ದ ಈ ಕಾಮಗಾರಿಯು ಬಳಿಕ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಡಿಸಿಎಲ್) ವರ್ಗಾವಣೆಯಾಗಿದೆ. ಆದರೆ, ಇದರಿಂದ ಯಾವುದೇ ಪ್ರಯೋಜನ ಆದಂತೆ ಕಾಣುತ್ತಿಲ್ಲ.

‘ರಸ್ತೆಯಲ್ಲಿ ಗುಂಡಿಗಳು ಇರುವುದರಿಂದ ಸಂಜೆ ವೇಳೆ ನೆಲಮಂಗಲದಿಂದ ಬಸವನಹಳ್ಳಿಗೆ 1 ಕಿ.ಮೀ. ದೂರ ಕ್ರಮಿಸಲು 30 ನಿಮಿಷದಿಂದ ಒಂದು ತಾಸು ಬೇಕಾಗುತ್ತದೆ. ಎಷ್ಟೋ ಬಾರಿ ಟೈರ್‌ಗಳು ಒಡೆದು ಆಕ್ಸೆಲ್ ತುಂಡಾಗಿ ವಾಹನಗಳು ಹಾಳಾಗುತ್ತಿವೆ’ ಎಂದು ಸೋಲೂರು ಹೋಬಳಿ ಗುಡೆಮಾರನಹಳ್ಳಿಯಿಂದ ನಿತ್ಯ ದಾಸನಪುರದ ಎಪಿಎಂಸಿಗೆ ತರಕಾರಿ ಸಾಗಿಸುವ ಪ್ರವೀಣ್ ಪರಿಸ್ಥಿತಿ ವಿವರಿಸಿದರು.

ಎಲ್ಲೆಲ್ಲಿ ಹೇಗಿದೆ ಸ್ಥಿತಿ?: ಗೊಲ್ಲಹಳ್ಳಿ ರೈಲ್ವೆ ಹಳಿ ದಾಟಲು ಪ್ರಾರಂಭಿಸಿದ್ದ ಮೇಲ್ಸೇತುವೆ ಕಾಮಗಾರಿ ಅರ್ಧಕ್ಕೆ ನಿಂತಿದೆ. ಮೇಲ್ಸೇತುವೆ ಕಾಮಗಾರಿ ವಿನ್ಯಾಸ ಬದಲಾವಣೆ ಹಾಗೂ ಭೂಸ್ವಾಧೀನಕ್ಕೆ ನಿಗದಿಯಾಗಿದ್ದ ದರ ಹೆಚ್ಚಳ, ಕೆಆರ್‌ಡಿಸಿಎಲ್, ಸರ್ಕಾರ ಹಾಗೂ ಗುತ್ತಿಗೆದಾರರ ನಡುವಿನ ಹಗ್ಗಜಗ್ಗಾಟದಿಂದಾಗಿ ಕಾಮಗಾರಿ ಮುಗಿಯುತ್ತಿಲ್ಲ.

‘ರೈಲ್ವೆ ಮೇಲ್ಸೇತುವೆ ಕಾಮಗಾರಿ ತುರ್ತಾಗಿ ಆಗಬೇಕಾಗಿದೆ. ಈಗಿರುವ ಅಂಡರ್ ಪಾಸ್‌ನಲ್ಲಿ ಭಾರಿ ವಾಹನಗಳು ತಿರುವು ಪಡೆಯುವುದು ಕಷ್ಟವಾಗಿದೆ. ನಿಧಾನಗತಿಯ ಸಂಚಾರದಿಂದ ಅರ್ಜುನ ಬೆಟ್ಟಹಳ್ಳಿಯ 1 ಕಿ.ಮೀವರೆಗೂ ಸಂಚಾರ ದಟ್ಟಣೆ ಉಂಟಾಗುತ್ತದೆ’ ಎಂದು ಬೊಮ್ಮಶೆಟ್ಟಹಳ್ಳಿ ನಿವಾಸಿ ಕೆಂಪರಾಜು ಹೇಳಿದರು.

‘18 ಮೀಟರ್ ಅಗಲಕ್ಕೆ ಮಂಜೂರಾಗಿದ್ದ ರಸ್ತೆ ನಂತರ 20.6 ಮೀಟರ್‌ಗೆ ಚತುಷ್ಪಥ ರಸ್ತೆಯಾಗಿ ವಿಸ್ತರಣೆಯಾಯಿತು. ಇದರಿಂದ ಭೂ ಸ್ವಾಧೀನ ಪ್ರಕ್ರಿಯೆ ಹಾಗೂ ಪರಿಹಾರ ವಿತರಣೆ ವಿಳಂಬವಾಯಿತು. ಭೂಮಿಯ ಬೆಲೆ ಹೆಚ್ಚಾಗಿದ್ದರಿಂದ ಸ್ವಾಧೀನ ದರ ಹೆಚ್ಚಾಯಿತು. ಈಗ ಪ್ರಕ್ರಿಯೆ ಮುಗಿದಿದ್ದು, ಬಾಕಿ ಇರುವ ರಸ್ತೆ ಕಾಮಗಾರಿ ಶೀಘ್ರ ಪೂರ್ಣಗೊಳ್ಳಲಿದೆ’ ಎಂದು ಕೆಆರ್‌ಡಿಸಿಎಲ್ ಅಧಿಕಾರಿಯೊಬ್ಬರು ತಿಳಿಸಿದರು.

ಹಾಳಾಗಿರುವ ರಸ್ತೆಯಲ್ಲಿ ಸಂಚರಿಸಲು ವಾಹನ ಸವಾರರು ಪಡಿಪಾಟಲು ಪಡುವಂತಾಗಿದೆ (ಎಡಚಿತ್ರ) ಅರ್ಧಕ್ಕೆ ನಿಂತಿರುವ ಕಾಮಗಾರಿ

ರಸ್ತೆ ಹಾಳಾಗಿರುವುದರಿಂದ ಸಂಚಾರ ದಟ್ಟಣೆ ಉಂಟಾಗಿ ವಿಪರೀತ ಶಬ್ದದಿಂದ ರಾತ್ರಿ ವೇಳೆ ನಿದ್ದೆ ಬರುತ್ತಿಲ್ಲ, ಕಾಮಗಾರಿ ಯಾವಾಗ ಮುಗಿಯುವುದೋ ಎಂದು ಕಾಯುತ್ತಿದ್ದೇವೆ

ಎನ್.ಎಸ್.ಶಿವರಾಜ್

ವಿಶ್ವೇಶ್ವರಪುರ ನಿವಾಸಿ

ಅಪಘಾತ ಹೆಚ್ಚಳ

ಕಾಮಗಾರಿ ಅಪೂರ್ಣವಾಗಿರುವ ಕಡೆ ವಾಹನಗಳು ನಿಧಾನವಾಗಿ ಸಾಗುವುದರಿಂದ ನಿತ್ಯವೂ ಸಂಚಾರ ದಟ್ಟಣೆ ಉಂಟಾಗುತ್ತದೆ. ಕಾಮಗಾರಿ ಉದಿಗಿರುವ ಕಡೆಯೂ ಅಲ್ಲಲ್ಲಿ ಮತ್ತೆ ಗುಂಡಿಗಳು ಬಿದ್ದಿದ್ದು, ಪಡಿಪಾಟಲು ಅನುಭವಿಸುವಂತಾಗಿದೆ.

‘ನಿರ್ವಹಣೆ ಇಲ್ಲದ ಕಾರಣ ರಸ್ತೆ ಅಕ್ಕಪಕ್ಕದಲ್ಲಿ ಎದೆ ಎತ್ತರದವರೆಗೆ ಹುಲ್ಲು, ಗಿಡ–ಗಂಟೆಗಳು ಬೆಳೆದಿವೆ. ರಸ್ತೆಯಲ್ಲಿನ ಗುಂಡಿಗಳು ಕಾಣದೆ ದ್ವಿಚಕ್ರ ವಾಹನ ಸವಾರರು ಅಪಘಾತಕ್ಕೀಡಾಗುತ್ತಿದ್ದಾರೆ. ಕೆಲವರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆಗಳು ನಡೆದಿವೆ’ ಎಂದು ಸ್ಥಳೀಯರು ದೂರಿದರು.

ಸುದ್ದಿ 2 ನಿಮಿಷ

ಕೆಐಎ: 37 ವಿಮಾನ ಹಾರಾಟ ರದ್ದು

ದೇವನಹಳ್ಳಿ: ಇರಾನ್–ಇಸ್ರೇಲ್ ನಡುವೆ ಉದ್ವಿಗ್ನತೆ ಹೆಚ್ಚುತ್ತಿರುವುದರಿಂದ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರ 37 ವಿಮಾನಗಳ ಹಾರಾಟವನ್ನು ರದ್ದುಪಡಿಸಲಾಗಿದೆ.

ಪಶ್ಚಿಮ ಏಷ್ಯಾ ದೇಶಗಳಿಗೆ ತೆರಳಬೇಕಿದ್ದ ವಿಮಾನಗಳು ರದ್ದಾದ ಪರಿಣಾಮ ಪ್ರಯಾಣಿಕರು ಸಂಕಷ್ಟಕ್ಕೆ ಸಿಲುಕಿದರು. ಮಾರ್ಚ್ 1ರಂದು 18 ಆಗಮನ ಮತ್ತು 19 ನಿರ್ಗಮನ ಸೇರಿ ಒಟ್ಟು 37 ವಿಮಾನಗಳನ್ನು ರದ್ದುಪಡಿಸಲಾಗಿದೆ ಎಂದು ಬಿಐಎಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಅಬುಧಾಬಿ, ರಿಯಾದ್, ಜೆಡ್ಡಾ, ದಮಾಮ್, ದುಬೈ ಮತ್ತು ದೋಹಾಕ್ಕೆ ತೆರಳಬೇಕಿದ್ದ ವಿಮಾನಗಳು ರದ್ದಾಗಿವೆ. ಕೆಐಎದಿಂದ ದುಬೈ ಮತ್ತು ಅಬುಧಾಬಿಗೆ ಹೆಚ್ಚು ಮಂದಿ ಪ್ರಯಾಣಿಸುತ್ತಾರೆ. ಶನಿವಾರ ಹಲವು ವಿಮಾನಗಳು ರದ್ದಾದ ಕಾರಣ ಪ್ರಯಾಣಿಕರು ಆತಂಕಕ್ಕೆ ಒಳಗಾದರು.

‘ಇರಾನ್–ಇಸ್ರೇಲ್ ಯುದ್ಧಭೀತಿಯಿಂದ ವಿಮಾನ ಸಂಚಾರ ರದ್ದುಪಡಿಸಲಾಗಿದೆ. ಅಧಿಕಾರಿಗಳು ಬೇರೊಂದು ನಗರಕ್ಕೆ ಹೋಗುವ ಆಯ್ಕೆ ನೀಡಿದರು. ಆದರೆ, ನಾನು ಹೋಗಬೇಕಿದ್ದ ಸ್ಥಳವನ್ನೇ ಆಯ್ಕೆ ಮಾಡಿಕೊಂಡಿದ್ದೆ. ಈಗ ವಿಮಾನವೇ ರದ್ದಾಗಿದೆ’ ಎಂದು ದೆಹಲಿಯಿಂದ ಬೆಂಗಳೂರು ಮೂಲಕ ಅಬುಧಾಬಿಗೆ ತೆರಳಬೇಕಿದ್ದ ರಶೀದ್ ಖಾನ್ ಅಸಮಾಧಾನ ವ್ಯಕ್ತಪಡಿಸಿದರು.

ಭದ್ರತಾ ಕಾರಣದಿಂದ ಏರ್ ಇಂಡಿಯಾ ಎಕ್ಸ್‌ಪ್ರೆಸ್, ಏರ್ ಇಂಡಿಯಾ ಹಾಗೂ ಇಂಡಿಗೊ ಸೇರಿದಂತೆ ಹಲವು ವಿಮಾನ ಕಂಪನಿಗಳು ಪಶ್ಚಿಮ ಏಷ್ಯಾ ದೇಶಗಳಿಗೆ ಸೇವೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿವೆ.

ಬಹರೇನ್, ಕುವೈತ್, ಒಮಾನ್, ಕತಾರ್, ಸೌದಿ ಅರೇಬಿಯಾ ಮತ್ತು ಯುಎಇಗೆ ಮಾರ್ಚ್ 2ರ ರಾತ್ರಿ 11.59ರವರೆಗೆ ವಿಮಾನ ಸೇವೆ ಸ್ಥಗಿತಗೊಳಿಸಲಾಗಿದೆ. ಫೆಬ್ರುವರಿ 28ರೊಳಗೆ ಬುಕ್ಕಿಂಗ್ ಮಾಡಿರುವ ಮತ್ತು ಮಾರ್ಚ್ 5ರವರೆಗೆ ಪ್ರಯಾಣ ನಿಗದಿಪಡಿಸಿರುವವರಿಗೆ ದಿನಾಂಕ ಬದಲಾವಣೆ ಶುಲ್ಕ ಇಲ್ಲದೆ ಮುಂದೂಡುವ ಅಥವಾ ಸಂಪೂರ್ಣ ಹಣ ಮರುಪಾವತಿ ಪಡೆಯುವ ಅವಕಾಶ ನೀಡಲಾಗಿದೆ ಎಂದು ಏರ್ ಇಂಡಿಯಾ ಎಕ್ಸ್‌ಪ್ರೆಸ್ ಪ್ರಕಟಣೆ ತಿಳಿಸಿದೆ.

ದೇಶದ ವಿವಿಧ ವಿಮಾನ ನಿಲ್ದಾಣಗಳಲ್ಲಿ ಸಹಾಯ ಕೇಂದ್ರಗಳನ್ನು ತೆರೆಯಲಾಗಿದೆ. ಮರು ಬುಕಿಂಗ್ ಮತ್ತು ಹಣ ಮರುಪಾವತಿ ಕುರಿತು ಮಾಹಿತಿ ನೀಡಲಾಗುತ್ತಿದೆ. ಕೆಐಎದಲ್ಲೂ ಕೌಂಟರ್‌ಗಳ ಮುಂದೆ ಪ್ರಯಾಣಿಕರ ಉದ್ದನೆ ಸಾಲು ಕಂಡುಬಂದಿತು.

ರೈಲು ಹಳಿಯಲ್ಲಿ ಕೆಟ್ಟು ನಿಂತ ಬಿಎಂಟಿಸಿ ಬಸ್

ಆನೇಕಲ್: ಅತ್ತಿಬೆಲೆ-ಆನೇಕಲ್ ಮುಖ್ಯರಸ್ತೆ ಹಾಲ್ದೇನಹಳ್ಳಿ ರೈಲ್ವೆ ಗೇಟ್ ಬಳಿ ಬಿಎಂಟಿಸಿ ಬಸ್ಸೊಂದು ಕೆಟ್ಟು ನಿಂತಿದ್ದರಿಂದ ಕೆಲಕಾಲ ಆತಂಕ ಉಂಟಾಗಿತ್ತು. ಸ್ಥಳೀಯರು ಮತ್ತು ವಾಹನ ಸವಾರರು ಬಸ್ ಅನ್ನು ತಳ್ಳಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು.

ಅತ್ತಿಬೆಲೆಯಿಂದ ಆನೇಕಲ್‌ಗೆ ಹೋಗುತ್ತಿದ್ದ ಬಿಎಂಟಿಸಿ ಬಸ್ ಕೆಟ್ಟು ನಿಂತಿತು. ಇದರಿಂದಾಗಿ ಆನೇಕಲ್, ದಿನ್ನೂರು, ಅತ್ತಿಬೆಲೆ, ಕರ್ಪೂರುವರೆಗೂ ಸುಮಾರು 2 ಕಿ.ಮೀ.ಗೂ ಹೆಚ್ಚು ದೂರ ವಾಹನ ದಟ್ಟಣೆ ಉಂಟಾಗಿತ್ತು. ಬೈಕ್ ಮತ್ತು ಕಾರುಗಳು ನಿಂತಲ್ಲೇ 40 ನಿಮಿಷಕ್ಕೂ ಹೆಚ್ಚು ಕಾಲ ನಿಂತಿದ್ದವು. ರೈಲ್ವೆ ಗೇಟ್ ಸಮಸ್ಯೆಯಿಂದ ಸಾರ್ವಜನಿಕರು ಹಿಡಿಶಾಪ ಹಾಕುತ್ತಿದ್ದ ದೃಶ್ಯ ಕಂಡುಬಂದಿತು.

‘ನಿರಂತರ ಪುಸ್ತಕ ಖರೀದಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೇಖಕರಿಂದ 300 ಪುಸ್ತಕಗಳನ್ನು ಕರ್ನಾಟಕ ಗ್ರಂಥಾಲಯ ಇಲಾಖೆಯ ಮೂಲಕ ನಿರಂತರವಾಗಿ ಖರೀದಿ ಮಾಡಲು ಸರ್ಕಾರ ವ್ಯವಸ್ಥೆ ಮಾಡಬೇಕು’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಗ್ರಂಥಾಲಯ ಇಲಾಖೆಯ ನಿವೃತ್ತ ನಿರ್ದೇಶಕ ಪಿ.ವೈ.ರಾಜೇಂದ್ರ ಕುಮಾರ್ ಅವರ ‘ಗ್ರಾಮೀಣ ಜ್ಞಾನ ಸಮುಚ್ಚಯಗಳು- ಒಂದು ಪರಿಕಲ್ಪನೆ’ ಪುಸ್ತಕ ಜನಾರ್ಪಣೆಗೊಳಿಸಿ ಮಾತನಾಡಿದರು.

‘2006-07ರಲ್ಲಿ ನಾನು ಗ್ರಂಥಾಲಯ ಇಲಾಖೆ ಸಚಿವನಾಗಿದ್ದಾಗ ಲೇಖಕರಿಂದ 300 ಕನ್ನಡ ಪುಸ್ತಕ ಖರೀದಿಸುವ ಯೋಜನೆ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಿತ್ತು. ಆಗ ನಿರ್ದೇಶಕರಾಗಿದ್ದ ರಾಜೇಂದ್ರಕುಮಾರ್ ಅವರು ಕಾರ್ಯಕ್ರಮ ಜಾರಿಗೆ ಬೆಂಬಲ ನೀಡಿದರು. ಇದರಿಂದ ಲೇಖಕರಿಗೂ ಹೆಚ್ಚಿನ ಪ್ರೋತ್ಸಾಹ ದೊರೆಯುವಂತಾಯಿತು. ಕೆಲ ವರ್ಷದಿಂದ ಪುಸ್ತಕ ಖರೀದಿ ಸಮರ್ಪಕವಾಗಿ ಆಗುತ್ತಿಲ್ಲ. ಸರ್ಕಾರದ ಹಂತದಲ್ಲಿ ಮಾತನಾಡಿ ಪುಸ್ತಕ ಖರೀದಿಗೆ ಸೂಚನೆ ನೀಡುತ್ತೇನೆ’ ಎಂದು ಹೇಳಿದರು.

ಸಾಹಿತಿ ಹಂಪ ನಾಗರಾಜಯ್ಯ ಮಾತನಾಡಿ, ‘ರಾಜೇಂದ್ರಕುಮಾರ್ ಅವರ ಅವಧಿಯಲ್ಲಿ ಗ್ರಂಥಾಲಯ ಇಲಾಖೆ ನಿರ್ವಹಣೆ ಚೆನ್ನಾಗಿತ್ತು. ಜೈನ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳ ಪ್ರಕಟಣೆಗೆ ಪ್ರೋತ್ಸಾಹ ದೊರೆತಿತ್ತು’ ಎಂದು ತಿಳಿಸಿದರು.

ಲೇಖಕ ರಾಜೇಂದ್ರ ಕುಮಾರ್ ಮಾತನಾಡಿ, ‘ಗ್ರಂಥಾಲಯ ಇಲಾಖೆ ಮೂಲಕ ಜನರಿಗೆ ಒಳ್ಳೆಯ ಕೆಲಸ ಮಾಡಲು ಸಾಧ್ಯವಾಗಿದೆ. ತುಮಕೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಡಿಲಿಟ್ ಪದವಿ ಪ್ರಬಂಧವನ್ನು ಈಗ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದು, ಗ್ರಂಥಾಲಯದ ಮಹತ್ವವನ್ನು ಇದು ತಿಳಿಸಲಿದೆ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಿ.ವೈ. ರಾಜೇಂದ್ರ ಕುಮಾರ್ ಮತ್ತು ಅವರ ಪತ್ನಿ ನಾಗವೇಣಿ ಅವರನ್ನು ಗೌರವಿಸಲಾಯಿತು. ಕೆ.ಇ. ರಾಧಾಕೃಷ್ಣ, ಬಸವರಾಜ ಎಸ್ ಹೊರಟ್ಟಿ, ಕರ್ನಾಟಕ ಜೈನ್ ಅಸೋಸಿಯೇಷನ್‌ನ ಅಧ್ಯಕ್ಷ ಎಸ್ ಜೀತೇಂದ್ರ ಕುಮಾರ್, ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡ, ಹಂಪ ನಾಗರಾಜಯ್ಯ, ಸತೀಶ್ ಕುಮಾರ್ ಹೊಸಮನಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ನೈಋತ್ಯ ರೈಲ್ವೆ

ನಿರ್ಮಾಣ ಸಂಸ್ಥೆ

ನಿರ್ಮಾಣ ಸಂಸ್ಥೆ, ನೈಋತ್ಯ ರೈಲ್ವೆ, ಭಾರತೀಯ ರೈಲ್ವೆ ಎಂಜಿನಿಯರ್‌ಗಳ ಸೇವೆ (ಐಆರ್‌ಎಸ್‌ಇ)ಯಿಂದ **ಎಸ್‌ಎಜಿ ಅಥವಾ ಉನ್ನತ ದರ್ಜೆಯಿಂದ ನಿವೃತ್ತರಾದ ಅಧಿಕಾರಿಗಳನ್ನು** 03 (ಮೂರು) ವರ್ಷಗಳ ಅವಧಿಗೆ ಡಿಪಿಆರ್‌ಗಳ ಪೀರ್ ವಿಮರ್ಶೆಗಾಗಿ ವಲಯ ತಜ್ಞರಾಗಿ ನೇಮಿಸಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸುತ್ತದೆ.

ಅವಶ್ಯಕತೆ ಇರುವ ಒಟ್ಟು ಹುದ್ದೆಗಳ ಸಂಖ್ಯೆ 03.

ಇ–ಮೇಲ್ ವಿಳಾಸ **dycecnwbnc@gmail.com** ಮೂಲಕ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **25.03.2026 ರ 24:00 ಗಂಟೆಗಳವರೆಗೆ** ಆಗಿದ್ದು ಅದು ಏಕೈಕ ಮತ್ತು ಓದಬಹುದಾದ ಪಿಡಿಎಫ್ ಫೈಲ್‌ನಲ್ಲಿ ಇರಬೇಕು.

ಹೆಚ್ಚಿನ ಆದೇಶ/ಅಧಿಸೂಚನೆಗಳಿಗಾಗಿ/ಇತರ ವಿವರಗಳಿಗಾಗಿ

www.swr.indianrailways.gov.in > About Us > Contruction Organisation- > Engaging Sector Expert ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ಕಾಮಗಾರಿ/ನಿರ್ಮಾಣ ಬೆಂಗಳೂರು ಕಂಟೋನ್ಮೆಂಟ್

PUB/943/AAF/PRB/SWR/2025-26

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. **RailOne** ಭಾರತೀಯ ರೈಲ್ವೆಯ ಆಲ್–ಇನ್–ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್ ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, **PNR** ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಆರ್ಡರ್ ಮಾಡಬಹುದು ಮತ್ತು ತಮ್ಮ ಬೆರಳ ತುದಿಯಲ್ಲಿ ಇನ್ನೂ ಅನೇಕ ಸೇವೆಗಳನ್ನು ಪ್ರವೇಶಿಸಬಹುದು. **RailOne** ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಗಳನ್ನು ಬಳಸಿ ಹಾಗೂ 3% ವರೆಗೆ ರಿಯಾಯಿತಿಯನ್ನು ಆನಂದಿಸಿ.

South Western Railway - SWR | SWRRLY | SWRAILWAYHQ | sw_railways

ಹೊರಮಾವು ಅಗರ ಕೆರೆ ಸ್ವಚ್ಛತೆ ಅಭಿಯಾನ

ಕೆ.ಆರ್.ಪುರ: ಪ್ಲಾಸ್ಟಿಕ್ ಮುಕ್ತ ಕೆರೆ ಅಂಗವಾಗಿ ಹೊರಮಾವು ಅಗರ ಕೆರೆ ಅಂಗಳದಲ್ಲಿ ಪರಿಸರ ಪ್ರೇಮಿಗಳು ಕೆರೆಯ ಅಂಚಿನಲ್ಲಿ ಕೆರೆ ನಡಿಗೆ ಹಮ್ಮಿಕೊಂಡು ಕೆರೆ ಸುತ್ತಲೂ ಬಿದ್ದಿದ್ದ ಹಸಿ ಹಾಗೂ ಒಣ ಕಸ ಸಂಗ್ರಹಿಸಿದರು.

ಸ್ಥಳೀಯ ನಿವಾಸಿಗಳು, ಸುತ್ತಮುತ್ತಲಿನ ಶಾಲೆ ಮಕ್ಕಳು ಪಾಲ್ಗೊಂಡು ಕೆರೆಯ ಸುತ್ತಲೂ ಸ್ವಚ್ಛತೆ ಕಾಪಾಡುವ ಕುರಿತು ಜನರಿಗೆ ಮನವರಿಕೆ ಮಾಡಿದರು. ‘ಕೆರೆ ಮಳೆಯಿಂದ ಮೈದುಂಬಿ ಹರಿದರೆ ಸುತ್ತಮುತ್ತಲಿನ ಬಡಾವಣೆಗಳಿಗೆ ಕೊಳವೆಬಾವಿಗಳಿಗೆ ಮರುಪೂರಣ ಆಗುತ್ತಿದೆ. ಇಂತಹ ಕೆರೆಯನ್ನು ಸಂರಕ್ಷಿಸಬೇಕಿದೆ’ ಎಂದು ಕಾಂಗ್ರೆಸ್ ಮುಖಂಡ ಅಗರ ಪ್ರಕಾಶ್ ಹೇಳಿದರು. ಅಭಿಯಾನದ ಸಂಯೋಜಕ ನಾಗರಾಜ್ , ಕೊಚಿ ಶಂಕರ್, ಶಾಫಿ, ಪುರುಷೋತ್ತಮಬಾಬು, ದೇವರಾಜ, ಸತೀಶ್ ಚಂದ್ರ ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಸದಸ್ಯರು ಇದ್ದರು.

ಚಿತ್ರಾವಳಿ

ಇರಾನ್‌ನ ಪರಮೋಚ್ಚ ನಾಯಕ ಆಯಾತೊಲ್ಲಾ ಅಲಿ ಖಮೇನಿ ಹತ್ಯೆಯನ್ನು ಖಂಡಿಸಿ ನಗರದ ರಿಚ್ಮಂಡ್‌ಟೌನ್‌ನಲ್ಲಿ ಶಿಯಾ ಸಮುದಾಯದ ಸದಸ್ಯರು ಭಾನುವಾರ ಪ್ರತಿಭಟನೆ ನಡೆಸಿದರು ಚಿತ್ರ: ಪುಷ್ಕರ್ ವಿ.

ನಗರದ ಸಂಸ ಬಯಲು ರಂಗ ಮಂದಿರದಲ್ಲಿ ನಡೆದ ರಾಜ್ಯಮಟ್ಟದ ಅಂತರ ಕಾಲೇಜು ರಂಗ ಸ್ಪರ್ಧೆ ‘ಸೌರಭ–26’ ಸಮಾರೋಪ ಸಮಾರಂಭದಲ್ಲಿ ಚಲನಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್, ನಟರಾದ ವಿಜಯ ರಾಘವೇಂದ್ರ, ಅರುಣ್ ಸಾಗರ್, ನಿರಂಜನ ದೇಶಪಾಂಡೆ, ಸುಜಯ್ ಶಾಸ್ತ್ರಿ ಭಾಗವಹಿಸಿದ್ದರು. ಪದ್ಮಭೂಷಣ ಡಾಕ್ಟರ್ ರಾಜಕುಮಾರ್ ಸರ್ವೋತ್ತಮ ಕಾಲೇಜು ಪರ್ಯಾಯ ಪಾರಿತೋಷಕವನ್ನು ನಾಗಾರ್ಜುನ ಡಿಗ್ರಿ ಕಾಲೇಜು ಪಡೆಯಿತು

ಆರ್.ವಿ.ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರತಿಭಾನ್ವಿತ ಹಳೆಯ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ಗೋ ಡಿಜಿಟ್ ಜನರಲ್ ಇನ್ಸುರೆನ್ಸ್‌ನ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ ಜಸ್ಲೀನ್ ಕೊಹ್ಲಿ, ಬೆಳಗಾವಿ ಇಸ್ಕಾನ್ ಗೋಕುಲಧಾಮದ ಮಾಧವ ಪ್ರಭು, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್ ಮತ್ತು ಕಾಲೇಜಿನ ಆಡಳಿತ ಮಂಡಳಿ ಮುಖ್ಯಸ್ಥ ಎಂ.ಡಿ. ಕಸ್ತೂರಿರಂಗ, ನಿರ್ದೇಶಕ ಡಾ. ಪುರುಷೋತ್ತಮ ಬಂಗ್ ಇದ್ದರು

ನಗರದಲ್ಲಿ ಇಂದು

ಕಾಮಣ್ಣನ ಹಬ್ಬದ ಆಚರಣೆ: ‘ಮನ್ಮಥನಿಗೆ ಬೃಹಸ್ಪತಾಚಾರ್ಯರಿಂದ ಶಿವನ ತಪೋಭಂಗಕ್ಕೆ ಉಪದೇಶ, ಆಯೋಜನೆ ಮತ್ತು ಸ್ಥಳ: ಕಾಮಣ್ಣನ ಗುಡಿ ಸೇವಾ ಸಮಿತಿ ಟ್ರಸ್ಟ್, ಅರಳೇಪೇಟೆ, ಸಂಜೆ 6.30ರಿಂದ

ನಿಧನ ವಾರ್ತೆ

ಮಂಜುಳಾ

ಪೀಣ್ಯ ದಾಸರಹಳ್ಳಿ: ಹೆಗ್ಗನಹಳ್ಳಿ ಕಾಂಗ್ರೆಸ್ ಮುಖಂಡರಾದ ಉಮೇಶ್ ಬೋರೇಗೌಡ ಮತ್ತು ಆಶಾ ಬೋರೇಗೌಡ ಅವರ ತಾಯಿ ಮಂಜುಳಾ ಬೋರೆಗೌಡ(61) ನಿಧನರಾದರು.

‘ಮೃತರಿಗೆ ಪುತ್ರ ಮತ್ತು ಇಬ್ಬರು ಪುತ್ರಿಯರಿದ್ದಾರೆ. ಅಂತ್ಯಕ್ರಿಯೆಯನ್ನು ಹೆಗ್ಗನಹಳ್ಳಿಯಲ್ಲಿ ನೆರವೇರಿಸಲಾಯಿತು’ ಎಂದು ಕುಟುಂಬದವರು ತಿಳಿಸಿದ್ದಾರೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

‘ಅವೆನ್ಯೂ ರಸ್ತೆ ಗುಂಡಿಮಯ’

ಅವೆನ್ಯೂ ರಸ್ತೆ ಗುಂಡಿಮಯವಾಗಿದ್ದು, ವಾಹನ ಸಂಚಾರಕ್ಕೆ ತೊಂದರೆ ಆಗಿದೆ. ಈ ರಸ್ತೆಯಲ್ಲಿ ಪ್ರತಿದಿನ ನೂರಾರು ವಾಹನಗಳು ಸಂಚರಿಸುತ್ತಿವೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಆಗುತ್ತಿದೆ. ಇದರ ಜೊತೆಗೆ ಅಪಘಾತಗಳು ಸಂಭವಿಸುತ್ತಿವೆ. ದ್ವಿಚಕ್ರ ವಾಹನ ಸವಾರರು ರಸ್ತೆ ಗುಂಡಿಗಳಲ್ಲಿ ಬಿದ್ದು ಕೈ ಕಾಲುಗಳನ್ನು ಮುರಿದುಕೊಂಡಿರುವ ಘಟನೆಗಳು ನಡೆದಿವೆ. ಈ ಬಗ್ಗೆ ಪಾಲಿಕೆಯ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ.

ಶಿವಪ್ರಸಾದ್ ಎಸ್., ಗಾಂಧಿನಗರ

‘ವಾಲಿದ ಬೀದಿ ದೀಪದ ಕಂಬ’

ಸೆಂಟ್ರಲ್ ಕಾಲೇಜಿನ ಮುಂಭಾಗದ ಪಾದಚಾರಿ ಮಾರ್ಗದಲ್ಲಿ ಇರುವ ಬೀದಿದೀಪದ ಕಂಬವೊಂದು ವಾಲಿಕೊಂಡಿದೆ. ಪ್ರತಿನಿತ್ಯ ವಿದ್ಯಾರ್ಥಿಗಳು, ವೃದ್ಧರು ಪ್ರಯಾಣಿಕರು ಇಲ್ಲಿಂದಲೇ ಸಂಚರಿಸುತ್ತಾರೆ. ಅಪಾಯ ಸಂಭವಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಈ ಕಂಬವನ್ನು ತೆರವುಗೊಳಿಸಬೇಕು.

ಸುಚಿತ್, ವಿದ್ಯಾರ್ಥಿ

‘ಪಾದಚಾರಿ ಮಾರ್ಗ ದುರಸ್ತಿಗೊಳಿಸಿ’

ಮಲ್ಲತ್ತಹಳ್ಳಿಯ ಕಲಾಗ್ರಾಮ ದಿಂದ ಬೆಂಗಳೂರು ವಿಶ್ವವಿದ್ಯಾಲಯದ ಕ್ವಾಟರ್ಸ್‌ವರೆಗಿನ ಪಾದಚಾರಿ ಮಾರ್ಗವನ್ನು ಅಗೆದು, ಹಾಗೆಯೇ ಬಿಡಲಾಗಿದೆ. ಇದರಿಂದ ಮಹಿಳೆಯರು, ಮಕ್ಕಳು ಹಾಗೂ ವೃದ್ಧರು ಮುಖ್ಯ ರಸ್ತೆಯಲ್ಲಿ ಓಡಾಡುವ ಅನಿವಾರ್ಯ ಎದುರಾಗಿದೆ. ಯಾವುದೇ ರೀತಿಯ ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲ. ರಾತ್ರಿ ಸಮಯದಲ್ಲಿ ಸಾರ್ವಜನಿಕರು ಈ ಗುಂಡಿಗಳಲ್ಲಿ ಬೀಳುವ ಅಪಾಯ ಇದೆ. ಆದ್ದರಿಂದ ಪಾದಚಾರಿ ಮಾರ್ಗದಲ್ಲಿ ತೆಗೆದಿರುವ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಬೇಕು.

ಮಲ್ಲತ್ತಹಳ್ಳಿ ನಿವಾಸಿಗಳು

‘ಪಾದಚಾರಿ ಮಾರ್ಗದಲ್ಲಿನ ಗುಂಡಿ ಮುಚ್ಚಿ’

ಕುಂಬ್ಳೆ ವೃತ್ತದ ಬಳಿಯ ಪಾದಚಾರಿ ಮಾರ್ಗದಲ್ಲಿ ಗುಂಡಿ ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಆಗಿದೆ. ಪಾದಚಾರಿ ಮಾರ್ಗದಲ್ಲಿ ಗುಂಡಿ ಅಗೆದು, ಸುತ್ತಲೂ ಬಟ್ಟೆ ಕಟ್ಟಲಾಗಿದೆ. ಇದರಿಂದ ಸಾರ್ವಜನಿಕರು ಮುಖ್ಯರಸ್ತೆಯಲ್ಲಿ ಹಾದು ಹೋಗಬೇಕಾದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತಿದ್ದು, ಅಪಘಾತ ಆಗುವ ಸಂಭವ ಇದೆ. ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಕೂಡಲೇ ಪಾದಚಾರಿ ಮಾರ್ಗದಲ್ಲಿನ ಗುಂಡಿಯನ್ನು ಮುಚ್ಚಬೇಕು.

ವಿಶ್ವಾಸ, ಶಿವಾಜಿನಗರ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business to Business

Hotel & Restaurant

WELL FURNISHED Restaurant with well equipped kitchen & Everything in 1000 Sft area for SALE or RENT in Posh Vijaya Bank Layout, Bannerghatta Road. Lease Agreement Transferable. For Details Call: 9900001954

JOB OPPORTUNITIES

Graphic Designers

REQUIRED GRAPHIC Designer- Photoshop/ Corel Draw/ Illustrator. Experience 1 Year or Above in around Rajajinagar Contact: 9902891620/ 9845579620

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

TOURS & TRAVEL

Travel Agencies

DUBAI TOUR 6 Days, Vietnam Tour 6 Days, Bangkok Tour 5 Days,Krabi Phuket 5 Days SuvarnaYatra 6360146483/ 9008381022

OFFICE OF THE CHIEF ENGINEER M.P.P.W.D BRIDGE CONSTRUCTION ZONE BHOPAL (M.P.)

TENDER NOTICE

NIT No- 29/C.E. (Bridge Zone) /2025-26 Date 24.02.2026

Online Tender for mentioned below are being invited. The Tender have been uploaded on the mptenders. system of Public Works Department on the Portal **www.mptenders.gov.in** Tender details are as below:-

Sl. No.	Tender No.	District	Nature of work	Name of work	Call No.	Cost of Project (PAC) (Rs. In Lack)	(EMD Fee / Tender Fee) All Tender Document & Other Document Submission
1	2	3	4	5	6	7	8
1.	2026_PWDRB_484722_1	Narsinghpur	Bridge Work	Construction of submersible Bridge including approach Road Across Narmada River on Hirapur Sankal Road in District Narsinghpur in EPC Mode.	First	4041.94	Online Only
				Total		4041.94	

The document can only be purchased online from the above website after making online payment. The last date & time for purchase of Document on line is Dated 07/04/2026 up to (17:30.) Detailed NIT and other details can be viewed on the above mentioned portal. Amendments to NIT, if any, would be published on website only, and not in newspaper.

Sd/- Chief Engineer,
PWD Bridge Construction Zone Bhopal

G-26677/25

ಕನ್ನಡಿಗರ ರಕ್ಷಣೆ: ಕೇಂದ್ರಕ್ಕೆ ಸಿ.ಎಸ್ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುದ್ಧಪೀಡಿತ ಪಶ್ಚಿಮ ಏಷ್ಯಾ ಹಾಗೂ ಕೊಲ್ಲಿ ರಾಷ್ಟ್ರಗಳಲ್ಲಿ ಸಿಲುಕಿರುವ ಕನ್ನಡಿಗರನ್ನು ಸುರಕ್ಷಿತವಾಗಿ ಕರೆತರಲು ಸೌಲಭ್ಯ ಕಲ್ಪಿಸುವಂತೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹಾಗೂ ನಾಗರಿಕ ವಿಮಾನಯಾನ ಸಚಿವಾಲಯಕ್ಕೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಪತ್ರ ಬರೆದಿದ್ದಾರೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರಿಗೆ ಪತ್ರ ಬರೆದಿರುವ ಅವರು, 'ಪಶ್ಚಿಮ ಏಷ್ಯಾ ದೇಶಗಳಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟುಗಳಿಂದ ಕನ್ನಡಿಗರು ಸೇರಿದಂತೆ ಭಾರತೀಯರು ಸಂಕಷ್ಟಕ್ಕೆ ಸಿಲುಕಿದ್ದಾರೆ. ನಾಗರಿಕರ ಸಂಚಾರ ಮೊಟಕು, ವಾಯು ಗಡಿ ನಿರ್ಬಂಧದಿಂದ ಅಲ್ಲಿನ ಭಾರತೀಯರಲ್ಲಿ ಆತಂಕ ಸೃಷ್ಟಿಯಾಗಿದೆ' ಎಂದಿದ್ದಾರೆ.

'ದುಬೈ ಸೇರಿದಂತೆ ಪಶ್ಚಿಮ ಏಷ್ಯಾದ ದೇಶಗಳ ಮೇಲೆಯೂ ಯುದ್ಧ ಪರಿಣಾಮ ಬೀರಿದ್ದು, ಅಲ್ಲಿರುವ ಕನ್ನಡಿಗರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೇಂದ್ರ ಸರ್ಕಾರವು ಅವರ ಸುರಕ್ಷತೆ ಖಚಿತಪಡಿಸಬೇಕು' ಪತ್ರದಲ್ಲಿ ತಿಳಿಸಿದ್ದಾರೆ.

ನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿ ಸಮೀರ್ ಕುಮಾರ್ ಸಿನ್ಹಾ ಅವರಿಗೆ ಬರೆದಿರುವ ಪತ್ರದಲ್ಲಿ, 'ಮಾರ್ಚ್ 2ರವರೆಗೆ ಎಲ್ಲ ವಿಮಾನ ಸೇವೆ ಬಂದ್ ಮಾಡಲಾಗಿದೆ. ವಿಮಾನಗಳ ಕಾರ್ಯಾಚರಣೆ ಸಹಜ ಸ್ಥಿತಿಗೆ ಬರುತ್ತಿದ್ದಂತೆ ಕನ್ನಡಿಗರು ಸೇರಿದಂತೆ ದೇಶದ ಜನರನ್ನು ಸುರಕ್ಷಿತವಾಗಿ ವಾಪಸು ಕಳುಹಿಸಲು ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದ್ದಾರೆ.

ಅತ್ಯಾಚಾರಕ್ಕೆ ಸಹಕಾರ: ಯುವಕರ ಸೆರೆ

ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಪ್ರಕರಣ ಬಂಧಿತರ ಸಂಖ್ಯೆ ಐದಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಲೇಜು ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರವೆಸಗಿದ ಆರೋಪ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಅಮೃತಹಳ್ಳಿ ಠಾಣೆ ಪೊಲೀಸರು, ಮತ್ತೆ ಮೂವರು ಯುವಕರನ್ನು ಬಂಧಿಸಿದ್ದಾರೆ. ಇದರೊಂದಿಗೆ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಐದಕ್ಕೇರಿದೆ.

19 ವರ್ಷದ ಯುವತಿ ನೀಡಿದ್ದ ದೂರಿನ ಮೇಲೆ ತನಿಖೆ ಕೈಗೊಂಡಿದ್ದ ಪೊಲೀಸರು ಕೃತ್ಯಕ್ಕೆ ಸಹಕರಿಸಿದ ಆರೋಪದಡಿ ಶಿವಮೊಗ್ಗದ ಶ್ರವಣ್ (21), ದಾವಣಗೆರೆಯ ಅನಿರುದ್ಧ್ (33) ಹಾಗೂ ಗುಜರಾತ್‌ನ ಮೋಹಿತ್ ಜೈನ್ (23) ಎಂಬುವವರನ್ನು ಬಂಧಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ 7 ಸಾಕ್ಷಿದಾರರನ್ನು ವಿಚಾರಣೆ ಮಾಡಲಾಗಿದೆ. ಕೃತ್ಯಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಕಾರಣ ಮೂವರನ್ನು ಬಂಧಿಸಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈಗಾಗಲೇ ಪಶ್ಚಿಮ ಬಂಗಾಳದ ಡಿಕ್ಸನ್ ಸ್ಯಾಂತ್ರಾ (21), ಸಕಲೇಶಪುರದ ನಿಖಿಲ್‌ನನ್ನು (34) ಬಂಧಿಸಲಾಗಿದೆ.

ಫೆಬ್ರುವರಿ 14ರ ರಾತ್ರಿ ಜಕ್ಕೂರಿನಲ್ಲಿರುವ ವಿಲ್ಲಾದಲ್ಲಿ ನಡೆದ ಪಾರ್ಟಿಯಲ್ಲಿ ಅನಿರುದ್ಧ್ ಕೂಡ ಭಾಗಿಯಾಗಿದ್ದ. ಈತ ಕೆಲವು ಪ್ರಭಾವಿಗಳೊಂದಿಗೆ ನಂಟು ಹೊಂದಿದ್ದು, ನಿಖಿಲ್‌ಗೂ ಸ್ನೇಹಿತ. ಪಾರ್ಟಿಯಲ್ಲಿ ಏನೇನು ನಡೆಯಿತು, ಪಾರ್ಟಿಯ ಉದ್ದೇಶ ಏನಾಗಿತ್ತು ಎಂಬುದರ ಕುರಿತು ತನಿಖೆ ನಡೆದಿದ್ದು, ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಾರ್ಟಿಯಲ್ಲಿ ಭಾಗಿಯಾಗಿದ್ದ ಯುವತಿಯರ ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳು ಎಷ್ಟು ಪಾರ್ಟಿಗಳನ್ನು ಆಯೋಜಿಸಿದ್ದಾರೆ? ಯಾರ್‍ಯಾರು ಪಾರ್ಟಿಯಲ್ಲಿ ಭಾಗಿಯಾಗಿದ್ದರು? ಫೆಬ್ರುವರಿ 14ರಂದು ನಡೆದ ಪಾರ್ಟಿಯಲ್ಲಿ ಎಷ್ಟು ಮಂದಿ ಇದ್ದರು? ಎಂಬುದರ ಬಗ್ಗೆಯೂ ಮಾಹಿತಿ ಕಲೆಹಾಕಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಪಾರ್ಟಿಯಲ್ಲಿ ಭಾಗಿಯಾಗಿದ್ದ ನಿಖಿಲ್, ಡಿಕ್ಸನ್ ಸಾಂತ್ರಾ, ಸಂತ್ರಸ್ತೆ ಸೇರಿ ಕೆಲವು ಯುವತಿಯರು ಮಾದಕವಸ್ತು ಸೇವನೆ ಮಾಡಿರುವ ಶಂಕೆಯಿದೆ. ಪಾರ್ಟಿಯಲ್ಲಿದ್ದ ಎಂಟು ಮಂದಿಯ ರಕ್ತದ ಮಾದರಿಯನ್ನು ಸಂಗ್ರಹಿಸಿ, ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿಯಲ್ಲಿ ಮಾದಕವಸ್ತು ಸೇವನೆ ದೃಢಪಟ್ಟರೆ ಆರೋಪಿಗಳ ವಿರುದ್ಧ ಮಾದಕವಸ್ತು ಮಾರಾಟದ ಆರೋಪದಡಿ ಕ್ರಮ ಜರುಗಿಸಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಪಾರ್ಟಿ ನಡೆದಿರುವ ವಿಲ್ಲಾ, ಪೊಲೀಸ್ ಅಧಿಕಾರಿಗೆ ಸೇರಿದ್ದು ಎಂಬುದು ಗೊತ್ತಾಗಿದೆ. ಆದರೆ, ಅಧಿಕಾರಿಯು ಕೆಲ ವರ್ಷಗಳ ಹಿಂದೆಯೇ ಕಂಪನಿಯೊಂದಕ್ಕೆ ಗುತ್ತಿಗೆಗೆ ನೀಡಿದ್ದರು. ಆ ಕಂಪನಿ ಮೂಲಕ ನಿಖಿಲ್, ಅನಿರುದ್ಧ್ ವಿಲ್ಲಾ ಬಾಡಿಗೆಗೆ ಪಡೆದಿದ್ದಾರೆ ಎನ್ನಲಾಗಿದೆ. ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಇನ್‌ಸ್ಟಾಗ್ರಾಂ ಮೂಲಕ ಆರೋಪಿಗಳು, ಯುವತಿಯರ ಸ್ನೇಹ ಬೆಳೆಸಿ ನಂತರ ಫೋಟೊಶೂಟ್, ಮಾಡೆಲಿಂಗ್ ಹಾಗೂ ಪಾರ್ಟಿ ನೆಪದಲ್ಲಿ ಆಹ್ವಾನಿಸುತ್ತಿದ್ದರು. ಆರಂಭದಲ್ಲಿ ಅವರ ನಂಬಿಕೆ ಗಳಿಸಲು ಪಬ್ ಮತ್ತು ಕೆಫೆಗಳಲ್ಲಿ ಭೇಟಿಯಾಗಿ ಸಭ್ಯರಂತೆ ವರ್ತಿಸುತ್ತಿದ್ದರು. ಬಳಿಕ ಸ್ನೇಹ ಮುಂದುವರಿಸಿ ಪಾರ್ಟಿ ನೆಪದಲ್ಲಿ ವಿಲ್ಲಾಗಳಿಗೆ ಕರೆದೊಯ್ಯುತ್ತಿದ್ದರು ಎಂದು ಮೂಲಗಳು ಹೇಳಿವೆ.

ಜಕ್ಕೂರಿನಲ್ಲಿ ನಡೆದ ಪಾರ್ಟಿಯ ವಿಡಿಯೊಗಳು ಜಾಲತಾಣದಲ್ಲಿ ಹರಿದಾಡುತ್ತಿವೆ. ಯುವತಿಯರು ನೃತ್ಯ ಮಾಡುತ್ತಿರುವುದು, ಆರೋಪಿಗಳು ಮದ್ಯಸೇವನೆ ಮಾಡುತ್ತಿರುವ ದೃಶ್ಯ ಇದೆ.

ಯುವತಿಯ ದೂರಿಗೂ ಮೊದಲೇ ಮಲ್ಲೇಶ್ವರಂ ಠಾಣೆಗೆ ನಿಖಿಲ್ ದೂರು ನೀಡಿದ್ದ. 'ಫೆಬ್ರುವರಿ 14ರಂದು ಪಾರ್ಟಿಗೆ ಬಂದಿದ್ದ ಯುವತಿ, ಸಲುಗೆಯಿಂದ ವರ್ತಿಸುತ್ತಿದ್ದಳು. ಅದೇ ದಿನ ಆಕೆಯನ್ನು ಸುರಕ್ಷಿತವಾಗಿ ರಾಜಾಜಿನಗರದ ವಾರಿಯರ್ ಬೇಕರಿ ಬಳಿ ಡ್ರಾಪ್ ಮಾಡಿದ್ದೆ. ಆ ನಂತರ ಆಕೆ ಇನ್‌ಸ್ಟಾಗ್ರಾಂ ವಿಡಿಯೊ ಮೂಲಕ ಸುಳ್ಳು ಆರೋಪ ಮಾಡಿದ್ದಾಳೆ. ನಂತರ ಖಾಸಗಿ ವಾಹಿನಿ ಪ್ರತಿನಿಧಿಯ ಹೆಸರಿನಲ್ಲಿ ಇಮ್ರಾನ್ ಎಂಬಾತ ಕರೆ ಮಾಡಿ ಹಣಕ್ಕೆ ಬೇಡಿಕೆ ಇಟ್ಟಿದ್ದ' ಎಂದು ನಿಖಿಲ್ ದೂರಿನಲ್ಲಿ ತಿಳಿಸಿದ್ದ.

ಅಪರಾಧ ಸುದ್ದಿ

ಗೋದಾಮಿಗೆ ಬೆಂಕಿ: ವಸ್ತುಗಳು ಭಸ್ಮ

ತಲಘಟ್ಟಪುರ ಪೊಲೀಸ್ ಠಾಣೆ ವ್ಯಾಪ್ತಿಯ ಅಂಜನಾಪುರ ಸಮೀಪದ ಕೆಂಬತ್ತಹಳ್ಳಿಯ ಹಾಸಿಗೆ, ಸೋಫಾ ಗೋದಾಮಿನಲ್ಲಿ ಬೆಂಕಿ ಕಾಣಿಸಿಕೊಂಡು, ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ಭಸ್ಮವಾಗಿವೆ.

ಈ ಗೋದಾಮಿನಲ್ಲಿ ಹಾಸಿಗೆ ಮತ್ತು ಸೋಫಾ ತಯಾರಿಸಲಾಗುತ್ತದೆ. ಬೆಳಿಗ್ಗೆ 8.30ರ ಸುಮಾರಿಗೆ ಗೋದಾಮಿನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದ್ದು, ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ಬೆಂಕಿಗೆ ಆಹುತಿಯಾಗಿವೆ.

ಬೆಂಕಿಯಿಂದ ದಟ್ಟ ಹೊಗೆ ಆವರಿಸಿದ ಪರಿಣಾಮ ಕೂಡಲೇ ಸ್ಥಳೀಯರು ಪೊಲೀಸ್ ಠಾಣೆ ಮತ್ತು ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದಾರೆ. ಸುಮಾರು 9 ವಾಹನಗಳ ಜತೆ ಸ್ಥಳಕ್ಕೆ ಬಂದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸಿದರು.

ಗೋದಾಮಿನ ಒಳಗೆ ಹತ್ತಿ, ಸಿದ್ಧಪಡಿಸಿದ್ದ ಹಾಸಿಗೆ, ಸೋಫಾಗಳು ಮಾತ್ರವಲ್ಲದೆ, ಈ ಕಾಂಪೌಂಡ್‌ನೊಳಗೆ ನಿಲ್ಲಿಸಿದ್ದ ಮೂರು ಕಾರುಗಳು ಹಾಗೂ ಎರಡು ಗೂಡ್ಸ್ ವಾಹನಗಳು ಬೆಂಕಿಯಲ್ಲಿ ಸುಟ್ಟು ಕರಕಲಾಗಿವೆ.

ಗೋದಾಮು ಅಕ್ಕ-ಪಕ್ಕದಲ್ಲಿರುವ ಎರಡು ಅಪಾರ್ಟ್‌ಮೆಂಟ್‌ಗಳಿಗೂ ಬೆಂಕಿ ತಗುಲಿದ್ದರಿಂದ ಕಿಟಕಿ ಗಾಜುಗಳಿಗೆ ಹಾನಿಯಾಗಿದೆ. ಹೀಗಾಗಿ ಅಪಾರ್ಟ್‌ಮೆಂಟ್ ನಿವಾಸಿಗಳನ್ನು ಮತ್ತೊಂದು ಬ್ಲಾಕ್‌ಗೆ ಸ್ಥಳಾಂತರಿಸಲಾಯಿತು.

ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಿರುವ ಸಾಧ್ಯತೆ ಇದೆ ಎಂದು ಪೊಲೀಸರು ಮಾಹಿತಿ ನೀಡಿದರು. ಈ ಸಂಬಂಧ ತಲ್ಲಘಟ್ಟಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

641 ಮೊಬೈಲ್ ವಾರಸುದಾರರಿಗೆ ಹಸ್ತಾಂತರ

ಪೂರ್ವ ವಿಭಾಗದ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ, ಸಿಇಐಆರ್ ತಂತ್ರಾಂಶದ ಮೂಲಕ ಪತ್ತೆಯಾಗಿದ್ದ ₹1.6 ಕೋಟಿ ಮೌಲ್ಯದ ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಜನವರಿಯಿಂದ ಈವರೆಗೆ ಪೂರ್ವ ವಿಭಾಗದ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ, 641 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ.

ಇಂದಿರಾ ನಗರದಲ್ಲಿ ನಡೆದ ಮಾಸಿಕ ಜನ ಸಂಪರ್ಕ ಸಭೆಯಲ್ಲಿ ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ವಾರಸುದಾರರಿಗೆ ಮೊಬೈಲ್ ಫೋನ್ ಹಸ್ತಾಂತರಿಸಿದರು.

ಜಂಟಿ ಪೊಲೀಸ್ ಕಮಿಷನರ್ ಬಿ.ರಮೇಶ್, ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ ಹಾಜರಿದ್ದರು.

ಚಿತ್ರಾವಳಿ

ಬನ್ನೇರುಘಟ್ಟ ರಸ್ತೆಯ ಹುಳಿಮಾವಿನಲ್ಲಿರುವ ಸ್ಫೂರ್ತಿ ವಿನಾಯಕ ಸಹಿತ ಸತ್ಯನಾರಾಯಣಸ್ವಾಮಿ ದೇವಸ್ಥಾನದಲ್ಲಿ ಶನಿವಾರ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನೆರವೇರಿತು

ಭಾರತ ಕ್ರಿಕೆಟ್ ತಂಡದ ಆಟಗಾರ ಕೆ.ಎಲ್ ರಾಹುಲ್ ಅವರು ಹೊನ್ನಾವರ ತಾಲ್ಲೂಕಿನ ಶ್ರೀಕ್ಷೇತ್ರ ಬಂಗಾರಮಕ್ಕಿಯ ವೀರಾಂಜನೇಯ ದೇವಸ್ಥಾನಕ್ಕೆ ಭಾನುವಾರ ಭೇಟಿ ನೀಡಿ ದೇವರ ದರ್ಶನ ಮಾಡಿ ಕ್ಷೇತ್ರದ ಧರ್ಮಾಧಿಕಾರಿ ಮಾರುತಿ ಗುರೂಜಿ ಅವರ ಆಶೀರ್ವಾದ ಪಡೆದರು

12 ಸಾವಿರಕ್ಕೂ ಹೆಚ್ಚು ಮಂದಿ ಭಾಗಿ, ಗಮನಸೆಳೆದ ಮಕ್ಕಳು

ಕ್ರೀಡೋತ್ಸಾಹ ಹೆಚ್ಚಿಸಿದ ಪೊಲೀಸ್ ಓಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇಲಾಖೆ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪೊಲೀಸ್ ಓಟದಲ್ಲಿ(ಕೆಎಸ್‌ಪಿ ರನ್) 12 ಸಾವಿರಕ್ಕೂ ಹೆಚ್ಚು ಕ್ರೀಡಾಪ್ರಿಯರು ಪಾಲ್ಗೊಂಡು ಭಾನುವಾರದ ಮುಂಜಾನೆಯ ಸೊಬಗನ್ನು ಹೆಚ್ಚಿಸಿದರು.

'ನಮ್ಮ ಪೊಲೀಸ್ ನಮ್ಮ ಹೆಮ್ಮೆ' ಎಂಬ ಘೋಷವಾಕ್ಯದಡಿ ಆಯೋಜಿಸಿದ್ದ ಸ್ಪರ್ಧೆಗೆ ಗೃಹ ಸಚಿವ ಜಿ.ಪರಮೇಶ್ವರ ಅವರು ವಿಧಾನಸೌಧದ ಮೆಟ್ಟಿಲು ಬಳಿ ಹಸಿರು ನಿಶಾನೆ ತೋರಿದರು. 5 ಕಿ.ಮೀ ಹಾಗೂ 10 ಕಿ.ಮೀ. ಓಟವು ಜನರನ್ನು ಆಕರ್ಷಿಸಿತು. ಜತೆಗೆ ಪೊಲೀಸ್ ಬ್ಯಾಂಡ್ ಗಮನ ಸೆಳೆಯಿತು.

ಹಸಿರು ಬೆಂಗಳೂರು', 'ಡ್ರಗ್ಸ್ ಮುಕ್ತ ಕರ್ನಾಟಕ', 'ಸೈಬರ್ ಅಪರಾಧ' ಕುರಿತು ಜಾಗೃತಿ ಮೂಡಿಸಲಾಯಿತು. ಪೊಲೀಸರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸಿಬ್ಬಂದಿ, ವೃತ್ತಿಪರ ಓಟಗಾರರು, ಹಿರಿಯ ನಾಗರಿಕರು ಓಟದಲ್ಲಿ ಪಾಲ್ಗೊಂಡಿದ್ದರು. ಹಿರಿಯರ ಜತೆ ಮಕ್ಕಳು ಸಹ ಹೆಜ್ಜೆ ಹಾಕಿದರು. ಸ್ಪರ್ಧಿಗಳಿಗೆ ಓಟದ ಮಧ್ಯೆ ನೀರು, ಬಿಸ್ಕತ್ ನೀಡಲಾಯಿತು.

ಸ್ಪರ್ಧೆಯಲ್ಲಿ ಮೂರು ಸಾವಿರ ಪೊಲೀಸ್ ಸಿಬ್ಬಂದಿ ಭಾಗವಹಿಸಿದ್ದು ವಿಶೇಷ. ಸ್ಪರ್ಧೆಯಲ್ಲಿ ಹಿರಿಯರು ಹಾಗೂ ಅಂಗವಿಕಲರು ಗಮನಸೆಳೆದರು. ಓಟದಲ್ಲಿ ಬೆವರು ಹರಿಸಿದವರು, ಜಿಂಕೆಯಂತೆ ಓಡಿದವರು, ಭಾಗವಹಿಸಿದ್ದ ಎಲ್ಲಾ ಸ್ಪರ್ಧಿಗಳು ಪ್ರಮಾಣಪತ್ರ ಹಾಗೂ ಪದಕದೊಂದಿಗೆ ಸಂಭ್ರಮಿಸಿದರು.

ಬೆಳಿಗ್ಗೆ 7.30ಕ್ಕೆ 5 ಕಿ.ಮೀ. ಹಾಗೂ 6.30 ಕ್ಕೆ 10 ಕಿ.ಮೀ. ಓಟ ಆರಂಭಗೊಂಡಿತು. ಎರಡೂ ಓಟಗಳು ವಿಧಾನಸೌಧದಿಂದ ಆರಂಭವಾಗಿ, ಕಬ್ಬನ್ ಪಾರ್ಕ್‌ನಲ್ಲಿ ಸಂಚರಿಸಿ, ವಿಧಾನ ಸೌಧದಲ್ಲಿ ಮುಕ್ತಾಯಗೊಂಡವು. ಪೊಲೀಸ್, ಎಸ್‌ಬಿಐ ಹಾಗೂ ಮುಕ್ತ ವಿಭಾಗಗಳಲ್ಲಿ ಸ್ಪರ್ಧೆ ನಡೆಯಿತು. ಪ್ರತಿಯೊಬ್ಬ ಸ್ಪರ್ಧಿಗೂ ಟೀ ಶರ್ಟ್ ನೀಡಲಾಯಿತು. ಎಲ್ಲರಿಗೂ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು.

10 ಕಿ.ಮೀ. ಓಟದ ಸ್ಪರ್ಧೆ ಅನುಭವಿ ಓಟಗಾರರು ಹಾಗೂ 5 ಕಿ.ಮೀ. ಸ್ಪರ್ಧೆಯಲ್ಲಿ ಎಲ್ಲರೂ ಭಾಗವಹಿಸಲು ಅವಕಾಶ ನೀಡಲಾಗಿತ್ತು. ಎರಡು ವಿಭಾಗಗಳಿಂದ ವಿಜೇತರಿಗೆ ₹18 ಲಕ್ಷ ನಗದು ಬಹುಮಾನ ನೀಡಲಾಯಿತು. ಭಾನುವಾರ ಏಕಕಾಲಕ್ಕೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪೊಲೀಸ್ ಓಟ ನಡೆಯಿತು. ಅಂದಾಜು ಒಂದು ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ, ಜಿಬಿಎ ಆಯುಕ್ತ ಮಹೇಶ್ವರ ರಾವ್, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಎಸ್‌ಬಿಐ ಬೆಂಗಳೂರು ವಲಯ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ, ಡಿಜಿಪಿಗಳಾದ ಪ್ರಣವ್ ಮೊಹಂತಿ, ಉಮೇಶ್ ಕುಮಾರ್, ಅರುಣ್ ಚಕ್ರವರ್ತಿ, ಕಂದಾಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಠಾರಿಯ, ಆಡಳಿತ ವಿಭಾಗ ಎಡಿಜಿಪಿ ಸೌಮೆಂದು ಮುಖರ್ಜಿ, ಗುಪ್ತ ವಾರ್ತೆ ಎಡಿಜಿಪಿ ಎಸ್.ರವಿ, ಕೆಎಸ್‌ಆರ್‌ಪಿ (ಪ್ರಭಾರ) ಎಡಿಜಿಪಿ ಸಂದೀಪ್ ಪಾಟೀಲ್, ಎನ್‌ಇಬಿ ಸಂಸ್ಥೆ ಮುಖ್ಯಸ್ಥ ನಾಗರಾಜ ಅಡಿಗ ಹಾಜರಿದ್ದರು.

ರಾಜ್ಯ ಪೊಲೀಸ್ ಇಲಾಖೆ ಹಮ್ಮಿಕೊಂಡಿದ್ದ ಓಟದಲ್ಲಿ ಪಾಲ್ಗೊಂಡಿದ್ದ ಸ್ಪರ್ಧಿಗಳು –ಚಿತ್ರ: ಎಂ.ಎಸ್.ಮಂಜುನಾಥ್

ವಿಜೇತರ ವಿವರ

10 ಕಿ.ಮೀ. ಓಟ (ಮಹಿಳಾ ವಿಭಾಗ): ಅಂಜು ಕುರ್ರೆ (35 ನಿಮಿಷ, 29 ಸೆಕೆಂಡು), ಬಾಬ್ಲಿ ವರ್ಮಾ (35 ನಿಮಿಷ, 33 ಸೆಕೆಂಡು), ಯಶಿ ಸಾಚನ್ (36 ನಿಮಿಷ, 49 ಸೆಕೆಂಡು)
ಪುರುಷರ ವಿಭಾಗ: ಶಿವಾಜಿ ಪರಶುರಾಮಮಾದಪ್ಪಗೌಡರ (29 ನಿಮಿಷ, 24 ಸೆಕೆಂಡು), ಹರೀಶ್ (29 ನಿಮಿಷ, 29 ಸೆಕೆಂಡು), ನವರತನ್ (29 ನಿಮಿಷ, 32ಸೆಕೆಂಡು)
5 ಕಿ.ಮೀ. ಓಟ (ಪುರುಷರ ವಿಭಾಗ): ಶಾರುಖ್ ಖಾನ್ (14 ನಿಮಿಷ, 51 ಸೆಕೆಂಡು), ಲೋಕೇಶ್ ಚೌಧರಿ (14 ನಿಮಿಷ, 55 ಸಕೆಂಡು), ನಿಖಿಲ್ ಬಾಲ್ವಿ (15 ನಿಮಿಷ, 21 ಸೆಕೆಂಡು)
ಮಹಿಳಾ ವಿಭಾಗ: ಮಿಥಾಲಿ ಬೋಯಾರ್ (17 ನಿಮಿಷ, 11ಸೆಕೆಂಡು), ಆರಾಧನಾ (17 ನಿಮಿಷ, 12ಸೆಕೆಂಡು), ಸಿ.ಬಬಿತಾ (17 ನಿಮಿಷ, 59 ಸೆಕೆಂಡು)

ಗುಂಡ್ಲುಪೇಟೆ ತಾಲ್ಲೂಕಿನ ರಂಗೂಪುರ ಗ್ರಾಮದ ಚಿರತೆಯ ಕಳೇಬರ

ರಂಗೂಪುರ: ಚಿರತೆ ಕಳೇಬರ ಪತ್ತೆ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ರಂಗೂಪುರ ಗ್ರಾಮದ ಹೊರವಲಯದ ಗುಡ್ಡದ ಸಮೀಪ ಮಹದೇವಪ್ಪ ಎಂಬುವರ ಜಮೀನಿನ ಬಳಿ ಚಿರತೆ ಚಿರತೆ ಕಳೇಬರ ಪತ್ತೆಯಾಗಿದೆ.

'ಚಿರತೆ ಒಂದರಿಂದ ಎರಡು ವರ್ಷ ವಯಸ್ಸಿನದು ಎಂದು ಅಂದಾಜಿಸಲಾಗಿದೆ. ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. 'ಮುಳ್ಳು ಹಂದಿ ತಿನ್ನುವ ಪ್ರಯತ್ನದಲ್ಲಿ ಆಗಿರುವ ಗಾಯಗಳಿಂದ ಮೃತಪಟ್ಟಿರಬಹುದು' ಎಂದು ಅವರು ಶಂಕಿಸಿದ್ದಾರೆ. ಗುಂಡ್ಲುಪೇಟೆ ಪಶುವೈದ್ಯಾಧಿಕಾರಿ ಮರಣೋತ್ತರ ಪರೀಕ್ಷೆ ನಡೆಸಿ, ಪ್ರಯೋಗಾಲಯಕ್ಕೆ ಕಳುಹಿಸಲು ಮಾದರಿ ಸಂಗ್ರಹಿಸಿದರು. ಅಂತ್ಯಕ್ರಿಯೆ ನೆರವೇರಿಸಲಾಯಿತು.

'ಇದೇ ಸ್ಥಳದಲ್ಲಿ ಕರಡಿ ಸೆರೆಗೆ ಬೋನು ಇಡಲಾಗಿದೆ. ಪಕ್ಕದಲ್ಲೇ ಚಿರತೆ ಮೃತಪಟ್ಟಿದೆ' ಎಂದು ಓಂಕಾರ ವಲಯಾರಣ್ಯಾಧಿಕಾರಿ ಹನುಮಂತಪ್ಪ ಪಾಟೀಲ ತಿಳಿಸಿದ್ದಾರೆ.

ಹೆಬ್ಬಾಳ: ಕಿರು ಸುರಂಗ ನಿರ್ಮಾಣ ಬಿಡ್ ಸಲ್ಲಿಸಿದ ನಾಲ್ಕು ಸಂಸ್ಥೆಗಳು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶ
- ಯೋಜನೆಗೆ ₹1,086 ಕೋಟಿ ವೆಚ್ಚ

ಬೆಂಗಳೂರು: ನಗರದ ಹೆಬ್ಬಾಳದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಆರು ಪಥಗಳ ಕಿರು ಸುರಂಗ ರಸ್ತೆ ನಿರ್ಮಿಸಲು ನಾಲ್ಕು ಮೂಲಸೌಕರ್ಯ ಯೋಜನಾ ಸಂಸ್ಥೆಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿವೆ.

ಕಳೆದ ವಾರ ಬಿಡ್‌ಗಳನ್ನು ತೆರೆದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಈ ಯೋಜನೆಗೆ ₹1,086 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಿದೆ.

ಮೂಲಗಳ ಪ್ರಕಾರ, ದಿಲೀಪ್ ಬಿಲ್ಡ್‌ಕಾನ್ ಲಿಮಿಟೆಡ್ (ಡಿಬಿಎಲ್), ಮ್ಯಾಕ್ಸ್ ಇನ್‌ಫ್ರಾ (ಇಂಡಿಯಾ) ಲಿಮಿಟೆಡ್, ಸೆಮಿಂಡಿಯಾ ಪ್ರಾಜೆಕ್ಟ್ಸ್ ಹಾಗೂ ರಿತ್ವಿಕ್ ಪ್ರಾಜೆಕ್ಟ್ಸ್ ನಿರ್ಮಾಣ ಸಂಸ್ಥೆಗಳು ಭಾಗವಹಿಸಿವೆ. 17 ಕಿ.ಮೀ. ಉದ್ದದ ಸುರಂಗ ರಸ್ತೆ (ಹೆಬ್ಬಾಳ–ಸಿಲ್ಕ್ ಬೋರ್ಡ್ ಜಂಕ್ಷನ್) ಯೋಜನೆಗೆ ಕೇವಲ ಇಬ್ಬರು ಬಿಡ್‌ದಾರರು ಮಾತ್ರ ಆಸಕ್ತ ವಹಿಸಿದ್ದರು.

ಟೆಂಡರ್ ಪ್ರಕ್ರಿಯೆಯ ಭಾಗವಾಗಿ, ಸುರಂಗ ನಿರ್ಮಾಣದ ಅನುಭವ, ಅರ್ಹತೆ ಹಾಗೂ ಆರ್ಥಿಕ ಸಾಮರ್ಥ್ಯವನ್ನು ಪರಿಶೀಲಿಸಲು ಪ್ರಾಧಿಕಾರದ ಅಧಿಕಾರಿಗಳು ಮೊದಲು ತಾಂತ್ರಿಕ ಬಿಡ್‌ಗಳನ್ನು ಮೌಲ್ಯಮಾಪನ ಮಾಡುವ ನಿರೀಕ್ಷೆಯಿದೆ. ಬಳಿಕ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುತ್ತದೆ ನಂತರ ಗುತ್ತಿಗೆ ನೀಡುವ ಪ್ರಕ್ರಿಯೆ ನಡೆಯಬಹುದು. ಕಿರು ಸುರಂಗ ಯೋಜನೆಯನ್ನು 18 ತಿಂಗಳಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಡಿಸೆಂಬರ್‌ನಲ್ಲಿ 2.18 ಕಿ.ಮೀ ಉದ್ದದ ಸುರಂಗ ರಸ್ತೆ ನಿರ್ಮಾಣಕ್ಕಾಗಿ ಬಿಡಿಎ ಟೆಂಡರ್ ಆಹ್ವಾನಿಸಿತ್ತು. ಈ ಸುರಂಗ ರಸ್ತೆಗೆ ಎಸ್ಟೀಮ್ ಮಾಲ್ ಹಾಗೂ ಬ್ಯಾಪ್ಟಿಸ್ಟ್ ಆಸ್ಪತ್ರೆ ಬಳಿ ಪ್ರವೇಶ ಮತ್ತು ನಿರ್ಗಮನ ರ್‍ಯಾಂಪ್‌ಗಳನ್ನು ನಿರ್ಮಿಸಲಾಗುತ್ತದೆ. ಭೂಗತ ರಸ್ತೆಯ ಭಾಗವಾಗಿ ರೈಲ್ವೆ ಕೆಳಸೇತುವೆ ನಿರ್ಮಾಣವೂ ಒಳಗೊಂಡಿದ್ದು, 'ಕಟ್ ಅಂಡ್ ಕವರ್' ವಿಧಾನ ಬಳಸಿ ನಿರ್ಮಿಸಲಾಗುವುದು. ಅಂದರೆ, ಸುರಂಗ ಕೊರೆಯುವ ಯಂತ್ರಗಳನ್ನು (ಟನಲ್ ಬೋರಿಂಗ್ ಮಷಿನ್) ಬಳಸುವುದಿಲ್ಲ.

ಹೆಬ್ಬಾಳ ಮೇಲ್ಸೇತುವೆ ಸುತ್ತಮುತ್ತಲಿನ ಪ್ರದೇಶದಲ್ಲಿ ಸಂಚಾರ ಸುಧಾರಣೆಯ ಉದ್ದೇಶದಿಂದ ಹಲವು ಸಂಸ್ಥೆಗಳು ವಿವಿಧ ಯೋಜನೆಗಳನ್ನು ಪ್ರಸ್ತಾಪಿಸಿವೆ. ಅವುಗಳಲ್ಲಿ ಭೂಗತ ಮೆಟ್ರೊ ಮಾರ್ಗ, ಉಪನಗರ ರೈಲು ಕಾರಿಡಾರ್ ಹಾಗೂ 18 ಕಿ.ಮೀ. ಉದ್ದದ ಸುರಂಗ ರಸ್ತೆ ಯೋಜನೆ ಸೇರಿವೆ.

ಸಂಚಾರ ತಜ್ಞ ಸತ್ಯ ಅರಿಕುತಾರಂ ಅವರ ಪ್ರಕಾರ, 'ಸಣ್ಣ ಸುರಂಗ ಯೋಜನೆ ಟ್ರಾಫಿಕ್ ದಟ್ಟಣೆ ಸಮಸ್ಯೆಗೆ ಪರಿಹಾರ ಅಲ್ಲ. ಈ ಯೋಜನೆಗೆ ನೀಡಿರುವ ಸಮರ್ಥನೆ ಹಾಸ್ಯಾಸ್ಪದವಾಗಿದೆ. ದೀರ್ಘ ಸುರಂಗ ಯೋಜನೆಯನ್ನು ಪೂರ್ಣಗೊಳಿಸಲು ಒಂದು ದಶಕ ಬೇಕಾಗುತ್ತದೆ ಎಂಬ ಕಾರಣ ನೀಡಿ ತಕ್ಷಣದ ಪರಿಹಾರ ಕ್ರಮವಾಗಿ ಸರ್ಕಾರ ಈ ಯೋಜನೆಯನ್ನು ಪ್ರಸ್ತಾಪಿಸಿತ್ತು. ಆದರೆ ಅದೇ ಸರ್ಕಾರ, ದೀರ್ಘ ಸುರಂಗವನ್ನು ಕೇವಲ 26 ತಿಂಗಳಲ್ಲಿ ಪೂರ್ಣಗೊಳಿಸುವ ಉದ್ದೇಶದಿಂದ ಅದರ ವೆಚ್ಚವನ್ನು ₹2,300 ಕೋಟಿ ಹೆಚ್ಚಿಸಿದ್ದನ್ನು ಮರೆತಿದೆ' ಎಂದು ಹೇಳಿದರು.

ಕಾರು ಅಪಘಾತ: ನವ ದಂಪತಿ ಸಾವು

ಹಾವೇರಿ: ಜಿಲ್ಲೆಯ ಶಿಗ್ಗಾವಿ ಬಳಿಯ ಅಂಬುಜಾ ಕಾರ್ಖಾನೆ ಸಮೀಪದ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರು ಅಪಘಾತ ಸಂಭವಿಸಿದ್ದು, ನವ ದಂಪತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹಾವೇರಿಯ ಕಾರ್ತಿಕ ಹೂಗಾರ ಹಾಗೂ ಅವರ ಪತ್ನಿ ಐಶ್ವರ್ಯ ಮೃತಪಟ್ಟವರು. ಇವರಿಬ್ಬರು ಫೆ. 13ರಂದು ಮದುವೆಯಾಗಿದ್ದರು. ಅವರಿಬ್ಬರು ಭಾನುವಾರ ನಸುಕಿನಲ್ಲಿ ಹುಬ್ಬಳ್ಳಿಯಿಂದ ಹಾವೇರಿಗೆ ಕಾರಿನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ.

ಅಪಘಾತದಿಂದಾಗಿ ಕಾರಿನ ಮುಂಭಾಗ ಸಂಪೂರ್ಣ ಜಖಂಗೊಂಡಿದೆ. ಕಾರಿನ ಮುಂದಿನ ಸೀಟಿನಲ್ಲಿ ಸಿಲುಕಿಕೊಂಡಿದ್ದ ದಂಪತಿಯ ಮೃತದೇಹವನ್ನು ಪೊಲೀಸರು ಹೊರಗೆ ತೆಗೆದು ಆಸ್ಪತ್ರೆಗೆ ಸಾಗಿಸಿದ್ದಾರೆ. ಕಾರಿನಲ್ಲಿದ್ದ ಇಬ್ಬರು ಗಾಯಗೊಂಡಿದ್ದಾರೆ. ತಡಸ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರ್ತಿಕ ಹೂಗಾರ

ಐಶ್ವರ್ಯ

'ದೇಶದ ಅಭಿವೃದ್ಧಿಯಲ್ಲಿ ಎಂಜಿನಿಯರ್‌ಗಳ ಪಾತ್ರ ಹಿರಿದು'

ಬೆಂಗಳೂರು: ದೇಶದ ಅಭಿವೃದ್ಧಿಯಲ್ಲಿ ಎಂಜಿನಿಯರ್‌ಗಳು ಮಹತ್ವದ ಪಾತ್ರ ವಹಿಸುತ್ತಾರೆ ಎಂದು ಬಿಸಿನೆಸ್ ಕಾರಿಡಾರ್ ಲಿಮಿಟೆಡ್‌ನ ಅಧ್ಯಕ್ಷ ಎಲ್.ಕೆ.ಅತೀಕ್ ತಿಳಿಸಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ (ವಿಟಿಯು) ಸಂಯೋಜಿತವಾಗಿರುವ ಸ್ವಾಯತ್ತ ಸಂಸ್ಥೆ ಬೆಂಗಳೂರಿನ ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜಿನ 2025ರ ಬ್ಯಾಚ್‌ನ ಪದವಿ ದಿನ-II ಸಮಾರಂಭದಲ್ಲಿ ಅವರು ಮಾತನಾಡಿದರು.

ದೇಶದಲ್ಲಿ ಎಂಜಿನಿಯರ್‌ಗಳಿಗೆ ಹೆಚ್ಚಿನ ಅವಕಾಶವಿದ್ದು, ಎಂಜಿನಿಯರಿಂಗ್ ಪದವಿ ಪಡೆಯುವವರ ಸಂಖ್ಯೆ ಹೆಚ್ಚಬೇಕು ಎಂದು ಆಶಿಸಿದರು.

ಉತ್ತಮ ಮನುಷ್ಯರಾಗಲು ಕಠಿಣ ಪರಿಶ್ರಮ ಪಡಬೇಕು. ಸಾಧನೆ ಮಾಡಲು ಗುರಿ ಇರಬೇಕು ಮತ್ತು ಗುರುಗಳ ಮಾರ್ಗದರ್ಶನದಲ್ಲಿ ನಡೆಯಬೇಕು ಎಂದರು.

ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನ ಬಿಒಜಿ ಸದಸ್ಯ, ಕರ್ನಲ್ (ನಿವೃತ್ತ) ಎಚ್.ಎಸ್. ಶಂಕರ್, ಪ್ರಾಂಶುಪಾಲ ಭೀಮಶಾ ಆರ್ಯ ಉಪಸ್ಥಿತರಿದ್ದರು.

ಬಿ.ಎಂ.ಎಸ್ ಎಂಜಿನಿಯರಿಂಗ್ ಕಾಲೇಜಿನ 2025ರ ಬ್ಯಾಚ್‌ನ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು

'ಮಲಯಾಳ ಭಾಷಾ ಮಸೂದೆ: ಮರುಪರಿಶೀಲಿಸಿ'

ಮಂಗಳೂರು: ಕೇರಳ ಸರ್ಕಾರ ರೂಪಿಸಿರುವ 'ಮಲಯಾಳ ಭಾಷಾ ಮಸೂದೆ 2025'ರಲ್ಲಿ ಕನ್ನಡ ಭಾಷಿಕರಿಗೆ ಮತ್ತು ಕನ್ನಡ ಮಾಧ್ಯಮದಲ್ಲಿ ಕಲಿಯುವ ಮಕ್ಕಳಿಗೆ ಮಾರಕವಾಗುವ ಅಂಶಗಳಿವೆ ಎಂಬ ಟೀಕೆಗಳು ವ್ಯಕ್ತವಾದ ಬೆನ್ನಲ್ಲೇ, 'ಈ ಮಸೂದೆಯನ್ನು ಮರುಪರಿಶೀಲಿಸಿ' ಎಂದು ಕೇಂದ್ರ ಭಾಷಾ ಅಲ್ಪಸಂಖ್ಯಾತ ಸಹಾಯಕ ಆಯುಕ್ತರು ಕೇರಳ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಈ ಮಸೂದೆಯನ್ನು ವಿರೋಧಿಸಿ ವಿವಿಧ ಕನ್ನಡ ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು. ಭಾಷಾ ಅಲ್ಪಸಂಖ್ಯಾತರ ರಕ್ಷಣೆಗಾಗಿ ಸಂವಿಧಾನಬದ್ಧ ಭಾಷಾ ಹಕ್ಕುಗಳನ್ನು ಪ್ರಜಾಸತ್ತಾತ್ಮಕ ಚೌಕಟ್ಟಿನಲ್ಲಿ ರೂಪಿಸಲಾಗಿದೆ. ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳುವುದು ಭಾಷಾ ಅಲ್ಪಸಂಖ್ಯಾತರ ಮೂಲಭೂತ ಹಕ್ಕು. ರಾಜ್ಯಗಳು ಅಧಿಕೃತ ಭಾಷೆಯನ್ನು ಕಡ್ಡಾಯಗೊಳಿಸುವಾಗ ಈ ಹಕ್ಕಿಗೆ ಧಕ್ಕೆಯಾಗದಂತೆ ನೀತಿಗಳನ್ನು ರೂಪಿಸಬೇಕಾಗುತ್ತದೆ ಎಂದು ಕನ್ನಡ ಸಂಘಟನೆಗಳು ಪ್ರತಿಪಾದಿಸಿದ್ದವು.

ಉತ್ತರ ಕರ್ನಾಟಕದ ಸಂಸ್ಕೃತಿ ತೆರೆದಿಟ್ಟ ಹೋಳಿ ಹಲಗೆ ಮೇಳ

ಹಲಗೆಯ ನಾದ, ಬಣ್ಣದ ರಂಗಿನ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲಗೆಯ ನಾದ, ಶಹನಾಯಿಯ ಸ್ವರ, ಬಣ್ಣಗಳ ರಂಗುಗಳೊಂದಿಗೆ ಹಿರಿಯರು–ಕಿರಿಯರೆನ್ನದೇ ಎಲ್ಲರೂ ಕುಣಿದು ಸಂಭ್ರಮಿಸಿದರು.

ಚಾಲುಕ್ಯ ಸಾಂಸ್ಕೃತಿಕ ಸಂಘವು ರಾಜಾಜಿನಗರದ ಕೆಎಲ್‌ಇ ಕಾಲೇಜು ಮೈದಾನದಲ್ಲಿ ಭಾನುವಾರ ಹಮ್ಮಿಕೊಂಡಿದ್ದಬಾಗಲ ಕೋಟೆ ಹೋಳಿ ಹಲಗೆ ಮೇಳವು ಈ ಸಡಗರಕ್ಕೆ ವೇದಿಕೆಯಾಯಿತು. ಉತ್ತರ ಕರ್ನಾಟಕದ ಸಂಸ್ಕೃತಿಯು ಇಲ್ಲಿ ಅನಾವರಣಗೊಂಡಿತು.

ಹಲವು ಶತಮಾನಗಳ ಹಿಂದಿನ ಸಾಂಪ್ರದಾಯಿಕ ಆಚರಣೆಯು ಇತ್ತೀಚೆಗೆ ಉತ್ತರ ಕರ್ನಾಟಕ ಮೀರಿ ಹರಡುತ್ತಿದೆ. ಬೆಂಗಳೂರು ನಗರದಲ್ಲಿಯೂ ಹೋಳಿ–ಹಲಗೆ ಸದ್ದು ಮಾಡಿದೆ. ಬಾಗಲಕೋಟೆಯ ಹೋಳಿ ಹಬ್ಬದ ಆಚರಣೆಯಲ್ಲಿ ಹಲಗೆ ಮಜಲು ಪ್ರಮುಖ ಮತ್ತು ಸಾಂಪ್ರದಾಯಿಕ ಅಂಶವಾಗಿದ್ದು, ಹೋಳಿ ಹಬ್ಬದ ಆರಂಭದ ಸಂಕೇತವಾಗಿ ಹಲಗೆ ವಾದ್ಯವನ್ನು ನುಡಿಸಲಾಗುತ್ತದೆ. ಭಾನುವಾರ ಚರ್ಮವಾದ್ಯಗಳಾದ ಹಲಗೆ, ಕಂಸಾಳೆ ಮತ್ತು ತಮಟೆಗಳ ಸಮ್ಮಿಶ್ರ ನಾದವು ಹೋಳಿಯ ಸಂಭ್ರಮವನ್ನು ಇಮ್ಮಡಿಗೊಳಿಸಿತು.

ಶಹನಾಯಿ, ಕಾನಿ, ಜುಮರ್, ನಿಶಾನ್‌ನಂಥ ವಾದ್ಯಗಳನ್ನು ನುಡಿಸುವ ಮೂಲಕ ಜನಪದ ಗೀತೆಗಳ ಗಾಯನ ನಡೆಯಿತು. ತಾಳ, ಮೃದಂಗಗಳೂ ಇದಕ್ಕೆ ಸಾಥ್ ನೀಡಿದವು. ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕುವ ಮೂಲಕ ಹಬ್ಬದ ವಾತಾವರಣ ಸೃಷ್ಟಿಯಾಯಿತು. ಆ ನಂತರ ಬಣ್ಣ ಎರಚಿ ಹೋಳಿಯಾಟ ಆಡಲಾಯಿತು.

ಜಾತಿ, ಮತ ಅಥವಾ ಲಿಂಗ ಭೇದವಿಲ್ಲದೇ ಎಲ್ಲರೂ ಸೌಹಾರ್ದದಿಂದ ಆಚರಿಸುವ ಹಬ್ಬ ಇದು. ಹೋಳಿ ಹುಣ್ಣಿಮೆಯ ಸಂದರ್ಭಗಳಲ್ಲಿ ಬಾಗಲಕೋಟೆಯಲ್ಲಿ ಆಚರಿಸಲಾಗುತ್ತದೆ. ಉತ್ತರ ಕರ್ನಾಟಕಕ್ಕೆ ಸೀಮಿತವಾಗಬಾರದು ಎಂಬ ಕಾರಣಕ್ಕೆ ಬೆಂಗಳೂರಿನಲ್ಲಿಯೂ ಆಯೋಜಿಸಿದ್ದೇವೆ ಎಂದು ಆಯೋಜಕರಲ್ಲಿ ಒಬ್ಬರಾದ ನಾಗರಾಜ್ ಹುಂಡೇಕರ್ ತಿಳಿಸಿದರು.

ಹೋಳಿ–ಹಲಗೆ ಮೇಳವು ಬೆಂಗಳೂರಿನಲ್ಲಿರುವ ಉತ್ತರ ಕರ್ನಾಟಕದ ಜನರು ಒಂದೆಡೆ ಸಮಾಗಮಗೊಳ್ಳುವಂತೆ ಮಾಡಿದೆ. ಜೊತೆಗೆ ಇಲ್ಲಿನ ಜನರೂ ಭಾಗವಹಿಸಿ ನಮ್ಮ ಸಂಸ್ಕೃತಿಯ ಸೊಬಗನ್ನು ಸವಿಯುವಂತಾಯಿತು ಎಂದು ಚಾಲುಕ್ಯ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಸಂಗಮೇಶ ಹದ್ಲಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಜನಪದ ಕಲೆಯನ್ನು ಗುರುತಿಸಿ ಪ್ರೋತ್ಸಾಹಿಸಬೇಕು ಎಂದು ಆಗ್ರಹಿಸಿದರು.

ಬಿಜೆಪಿಯ ಬೆಂಗಳೂರು ಕೇಂದ್ರ ಘಟಕದ ಅಧ್ಯಕ್ಷ ಸಪ್ತಗಿರಿ ಗೌಡ, ಉತ್ತರ ಕರ್ನಾಟಕ ಸಂಘದ ಅಧ್ಯಕ್ಷ ಜಿ.ಬಿ.ಔಟಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಚಾಲುಕ್ಯ ಸಾಂಸ್ಕೃತಿಕ ಸಂಘವು ಭಾನುವಾರ ಆಯೋಜಿಸಿದ್ದ ಬಾಗಲಕೋಟೆಯ ಸಾಂಪ್ರದಾಯಿಕ ಹೋಳಿ ಹಬ್ಬದಲ್ಲಿ ಮಹಿಳೆಯರು ಹಲಗೆ ಬಾರಿಸಿ, ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ

ಆನ್ವಯಿಕ ಮನೋವಿಜ್ಞಾನ
ಮನೋಬಲವೇ ಮಹಾಬಲ

ಪಿಯುಸಿ ಮುಂದೇನು? ಭಾಗ–4

• ಪ್ರದೀಪ್ ಎಸ್. ವೆಂಕಟರಾಮ್

ಅರ್ಜುನ್ ಐ.ಟಿ ಕಂಪನಿಯೊಂದರಲ್ಲಿ ದೀರ್ಘಾವಧಿ ಸೇವೆ ಸಲ್ಲಿಸಿದ ನಂತರ ಕೆಲಸ ಕಳೆದುಕೊಂಡ. ಕುಟುಂಬ ನಿರ್ವಹಣೆಯ ಹೊಣೆ, ಸಾಲದ ಕಂತುಗಳು, ಭವಿಷ್ಯದ ಅನಿಶ್ಚಿತತೆಯಿಂದ ಖಿನ್ನತೆ, ನಿದ್ರಾಹೀನತೆ ಎದುರಿಸಬೇಕಾಯಿತು. ಆದರೆ, ಕೌನ್ಸೆಲಿಂಗ್ ಮೂಲಕ ಆತ್ಮಸ್ಥೈರ್ಯವನ್ನು ಮರಳಿ ಪಡೆದು, ನೂತನ ಕೌಶಲಗಳೊಂದಿಗೆ ಹೊಸ ಉದ್ಯೋಗವನ್ನು ಆರಂಭಿಸಿದ. ಎಲ್ಲರೂ ಅರ್ಜುನ್‌ನಷ್ಟು ಅದೃಷ್ಟವಂತರಲ್ಲ; ಇಂತಹ ಪರಿಸ್ಥಿತಿಯಲ್ಲಿ ಹಲವರು ದುಡುಕಿನ ನಿರ್ಧಾರಗಳನ್ನು ಮಾಡಿಬಿಡುತ್ತಾರೆ.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಭೌತಿಕ ಯುದ್ಧಗಳು, ಸುಂಕ-ತೆರಿಗೆಯ ಯುದ್ಧಗಳು, ಆರ್ಥಿಕ ಅಸ್ಥಿರತೆ, ಉದ್ಯೋಗ ನಷ್ಟ ಎಲ್ಲವೂ ಮಾನವನ ಆರೋಗ್ಯ ಮತ್ತು ಸ್ವಾಸ್ಥ್ಯದ ಮೇಲೆ ದುಷ್ಪರಿಣಾಮಗಳನ್ನು ಉಂಟು ಮಾಡುತ್ತಿವೆ. ಜೊತೆಗೆ ಕೆಲಸದ ಒತ್ತಡ, ವೃತ್ತಿ-ವೈಯಕ್ತಿಕ ಜೀವನದಲ್ಲಿನ ಅಸಮತೋಲನ, ಜಡತ್ವ, ಕೌಟುಂಬಿಕ ಕಲಹದಂತಹ ಸಮಸ್ಯೆಗಳು ಬದುಕಿನ ಯಾಂತ್ರಿಕತೆ ಮತ್ತು ಅಸಂತೃಪ್ತಿಯನ್ನು ಎತ್ತಿ ತೋರಿಸುತ್ತವೆ. ಇಂತಹ ಸಮಸ್ಯೆಗಳಿಗೆ ಸಮಗ್ರವಾದ ಪರಿಹಾರವನ್ನು ನೀಡಿ ಪುನರುಜ್ಜೀವನಗೊಳಿಸುವ ಕ್ಷೇತ್ರವೇ ಆನ್ವಯಿಕ ಮನೋವಿಜ್ಞಾನ.

ಮನೋವಿಜ್ಞಾನದ ಸಿದ್ಧಾಂತಗಳನ್ನು ಬರೀ ಸಿದ್ಧಾಂತ, ಸಂಶೋಧನೆಗೆ ಸೀಮಿತಗೊಳಿಸದೆ, ದೈನಂದಿನ ಬದುಕಿನ ಜಟಿಲ ಸಂದರ್ಭಗಳನ್ನು ಬಗೆಹರಿಸಲು ಅನುವಾಗುವುದೇ ಆನ್ವಯಿಕ ಮನೋವಿಜ್ಞಾನ. ಮಾನವ ಸಂಬಂಧಿತ ಹಲವಾರು ಸಮಸ್ಯೆಗಳಿಗೆ ಇಲ್ಲಿ ಪ್ರಾಯೋಗಿಕ ಪರಿಹಾರಗಳಿದ್ದು, ವ್ಯಕ್ತಿ ಮತ್ತು ಸಮಾಜದ ಸ್ವಾಸ್ಥ್ಯಕ್ಕೆ ಅತ್ಯಗತ್ಯವಾದ ಕ್ಷೇತ್ರವಾಗಿ ಇದು ಹೊರಹೊಮ್ಮಿದೆ.

ಆನ್ವಯಿಕ ಮನೋವಿಜ್ಞಾನದಲ್ಲಿ ವೈವಿಧ್ಯ ಇದೆ, ನೊಂದವರ ಸಮಸ್ಯೆಗಳನ್ನು ಬಗೆಹರಿಸುವ ಅಗಾಧ ಶಕ್ತಿಯಿದೆ. ಸಮಸ್ಯೆಗಳಿಗೆ ಜ್ಞಾನ, ಅನುಭೂತಿ, ಸಂವಹನದಿಂದಲೇ ಪರಿಹಾರವನ್ನು ನೀಡಬಹುದು. ತರಬೇತಿಯ ನಂತರ ಖುದ್ದಾಗಿ ಪ್ರ್ಯಾಕ್ಟೀಸ್ ಮಾಡಬಹುದು. ಮುಖ್ಯವಾಗಿ, ಬೇರೆಯವರ ಸಮಸ್ಯೆಗಳು, ಧೋರಣೆಗಳು ನಮ್ಮ ಮೇಲೆ ನಕಾರಾತ್ಮಕ ಪರಿಣಾಮ ಬೀರದಂತೆ ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳಬೇಕು.

ಇಲ್ಲಿ ಕೌಶಲಗಳೇ ಬಂಡವಾಳ. ಆಸಕ್ತಿ, ಅಭಿರುಚಿಯ ಜೊತೆಗೆ ಸೂಕ್ಷ್ಮ ಅವಲೋಕನ, ಅನುಭೂತಿ, ಆಲಿಸುವ ಕಲೆ, ಮನವರಿಕೆ, ತಾಳ್ಮೆ, ನೈತಿಕತೆ, ಗೋಪ್ಯತೆ, ಡೇಟಾ ವಿಶ್ಲೇಷಣೆಯ ಕೌಶಲಗಳಿರಬೇಕು.

ಉದ್ಯೋಗಕ್ಕಾಗಿ ಕ್ಯಾಂಪಸ್ ನೇಮಕಾತಿ ಜೊತೆಗೆ ಇಂಟರ್ನ್‌ಷಿಪ್ ಅವಕಾಶಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬೇಕು. ಆಸಕ್ತಿಯಿರುವ ವಿಭಾಗದ ಸಂಸ್ಥೆಗಳು ಹಾಗೂ ವೃತ್ತಿಪರರೊಡನೆ ಲಿಂಕ್ಡ್‌ಇನ್ ಮೂಲಕ ನೆಟ್‌ವರ್ಕಿಂಗ್ ಮಾಡುವುದು ಸೂಕ್ತ. ಉದ್ಯೋಗಾವಕಾಶಗಳ ವೈವಿಧ್ಯದ ಕಾರಣದಿಂದ, ಪ್ರಾರಂಭಿಕ ವೇತನದ ಬಗ್ಗೆ ನಿಖರವಾಗಿ ಹೇಳಲಾಗದಿದ್ದರೂ ವೇತನ ವಾರ್ಷಿಕವಾಗಿ ಸುಮಾರು ₹ 3 ಲಕ್ಷದಿಂದ ₹ 5 ಲಕ್ಷದವರೆಗೆ ಇರಬಹುದು. ಮಾನಸಿಕ ಆರೋಗ್ಯ, ವೃತ್ತಿಜೀವನ ಹಾಗೂ ಸಮಾಜದ ಸ್ವಾಸ್ಥ್ಯಕ್ಕೆ ಸಮಗ್ರ ಪರಿಹಾರ ನೀಡುವ ಕ್ಷೇತ್ರವಿದು. ಇದು ಬರೀ ಉದ್ಯೋಗವಲ್ಲ, ಸಮಾಜಕ್ಕೆ ನೀಡುವ ಅಮೂಲ್ಯ ಕೊಡುಗೆ. ಹಾಗಾಗಿ, ವೃತ್ತಿಯ ಜೊತೆಗೆ ಆತ್ಮತೃಪ್ತಿಯನ್ನೂ ನೀಡುತ್ತದೆ.

ಲೇಖಕ: ಶಿಕ್ಷಣ ತಜ್ಞ
ವೃತ್ತಿ ಸಲಹೆಗಾರ

ವೃತ್ತಿಪರರಾಗಲು...

ಮನೋವಿಜ್ಞಾನದಲ್ಲಿ ಪದವಿ (ಬಿಎ/ಬಿ.ಎಸ್ಸಿ) ಪಡೆದ ನಂತರ ಆನ್ವಯಿಕ ಮನೋವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ (ಎಂಎ/ಎಂಎಸ್ಸಿ) ಪಡೆದರೆ ಹೆಚ್ಚಿನ ಮನ್ನಣೆ ಇರುತ್ತದೆ. ಅಥವಾ ಮನೋವಿಜ್ಞಾನ/ಆನ್ವಯಿಕ ಮನೋವಿಜ್ಞಾನದ ಪದವಿಯ (ಬಿಎ/ಬಿ.ಎಸ್ಸಿ) ನಂತರ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಅಲ್ಪಾವಧಿ ಡಿಪ್ಲೊಮಾ/ಸರ್ಟಿಫಿಕೇಟ್ ಕೋರ್ಸ್ (ಸ್ಪೋರ್ಟ್ಸ್ ಸೈಕಾಲಜಿ, ನ್ಯೂರೊಸೈಕಾಲಜಿ, ಡೇಟಾ ಅನಲಿಟಿಕ್ಸ್) ಮಾಡಿ ವೃತ್ತಿಜೀವನಕ್ಕೆ ತಯಾರಾಗಬಹುದು.

ಕ್ಲಿನಿಕಲ್ ಸೈಕಾಲಜಿಸ್ಟ್ ಆಗಬೇಕೆ?

ಭಾರತೀಯ ಪುನರ್ವಸತಿ ಮಂಡಳಿಯಿಂದ (ರಿಹ್ಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾ) ಮಾನ್ಯತೆ ಪಡೆದ ಸಂಸ್ಥೆಯಿಂದ ಎಂ.ಎ ಮಾಡಿ ಪರವಾನಗಿ ಪಡೆಯಬೇಕು. ಹೆಚ್ಚಿನ ಮಾಹಿತಿ: https://rehabcouncil.nic.in

ಪ್ರತಿಷ್ಠಿತ ಸಂಸ್ಥೆಗಳಿವು

ಮುಂಬೈನ ಟಾಟಾ ಇನ್‌ಸ್ಟಿಟ್ಯೂಟ್, ಬೆಂಗಳೂರಿನ ನಿಮ್ಹಾನ್ಸ್, ಕ್ರೈಸ್ಟ್, ಜೈನ್, ಪಾಂಡಿಚೆರಿ, ಅಶೋಕ, ಅಮಿಟಿ ವಿಶ್ವವಿದ್ಯಾಲಯಗಳು.

ಪ್ರಜಾವಾಣಿ | DH DECCAN HERALD
ಎಡ್ಯುವರ್ಸ್™
ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಶೈಕ್ಷಣಿಕ ಮೇಳ ನಿಮಗಾಗಿ

‘ಪಿಯುಸಿ ನಂತರ ಮುಂದೇನು?’ ಎನ್ನುವ ಪ್ರಶ್ನೆ ಕಾಡುತ್ತಿದೆಯೇ? ಚಿಂತೆ ಬಿಡಿ. ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಏಪ್ರಿಲ್‌ನಲ್ಲಿ ಆಯೋಜಿಸಲಿರುವ ‘ಎಡ್ಯುವರ್ಸ್’ ಶೈಕ್ಷಣಿಕ ಮೇಳದಲ್ಲಿ ಪಾಲ್ಗೊಳ್ಳಿ, ನಿಮ್ಮ ಪ್ರಶ್ನೆಗೆ ಸೂಕ್ತ ಉತ್ತರ ಕಂಡುಕೊಂಡು ಉತ್ತಮ ಭವಿಷ್ಯ ನಿಮ್ಮದಾಗಿಸಿಕೊಳ್ಳಿ. ಅಷ್ಟೇ ಅಲ್ಲ, ಸಿಇಟಿ, ಕಾಮೆಡ್–ಕೆ, ವೃತ್ತಿಪರ ಕೋರ್ಸ್ ಸೇರಿದಂತೆ ವಿವಿಧ ಕೋರ್ಸ್‌ಗಳು, ಉದ್ಯೋಗಾವಕಾಶ, ಕಾಲೇಜುಗಳಲ್ಲಿ ಸಿಗುವ ಬಗೆಬಗೆ ಸೌಲಭ್ಯಗಳ ಮಾಹಿತಿ, ವಿಶೇಷ ಗೋಷ್ಠಿಗಳು, ಸಂವಾದ... ಎಲ್ಲವೂ ನಿಮಗಾಗಿ. ಮೇಳದ ದಿನಾಂಕಕ್ಕಾಗಿ ನಿರೀಕ್ಷಿಸಿ, ಶೈಕ್ಷಣಿಕ ಮಾಹಿತಿಯ ಕಣಜವನ್ನು ಎದುರುಗೊಳ್ಳಲು ಸಿದ್ಧರಾಗಿ.

ವೈವಿಧ್ಯಮಯ ಶಾಖೆಗಳಿವೆ

- ಕ್ಲಿನಿಕಲ್ ಸೈಕಾಲಜಿ: ಮಾನಸಿಕ ಅಸ್ವಾಸ್ಥ್ಯ, ಖಿನ್ನತೆ, ಒತ್ತಡ ನಿರ್ವಹಣೆ, ನಕಾರಾತ್ಮಕ ಧೋರಣೆ, ವ್ಯಸನ ಪುನರ್ವಸತಿ– ಆಸ್ಪತ್ರೆಗಳು, ನರ್ಸಿಂಗ್ ಹೋಮ್‌ಗಳು, ವ್ಯಸನ ನಿವಾರಣಾ ಕೇಂದ್ರಗಳು.
- ಎಜುಕೇಷನಲ್ ಸೈಕಾಲಜಿ: ಅಧ್ಯಾಪನ, ಕಲಿಕೆಯ ಸಮಸ್ಯೆಗಳು, ನ್ಯೂನತೆ– (ಶಾಲೆಗಳು, ವಸತಿಶಾಲೆಗಳು, ಕಾಲೇಜುಗಳು.
- ಇಂಡಸ್ಟ್ರಿಯಲ್/ಆರ್ಗನೈಸೇಷನಲ್ ಸೈಕಾಲಜಿ: ಉದ್ಯೋಗಿಗಳ ಉತ್ಪಾದಕತೆ, ಮಾನವ ಸಂಪನ್ಮೂಲದ ಸಮಸ್ಯೆ– ಉದ್ಯಮಗಳು, ನವೋದ್ಯಮಗಳು.
- ಹೆಲ್ತ್ ಸೈಕಾಲಜಿ: ಸ್ವಾಸ್ಥ್ಯ, ಜೀವನಶೈಲಿ, ಸ್ಥೂಲಕಾಯ– ಆರೋಗ್ಯಧಾಮ, ಯೋಗ ಕೇಂದ್ರಗಳು.
- ಫೊರೆನ್ಸಿಕ್ ಸೈಕಾಲಜಿ: ಅಪರಾಧ ತನಿಖೆ, ಅಪರಾಧಿ ನಡವಳಿಕೆಯ ಅಧ್ಯಯನ, ಸುಧಾರಣೆ– ಪೊಲೀಸ್, ತನಿಖಾ ಸಂಸ್ಥೆಗಳು, ಸ್ವತಂತ್ರ ತನಿಖಾದಾರರು.
- ಕನ್‌ಸ್ಯೂಮರ್ ಸೈಕಾಲಜಿ: ಗ್ರಾಹಕರ ಕೊಳ್ಳುವಿಕೆಯ ನಡವಳಿಕೆ– ಕನ್‌ಸ್ಯೂಮರ್ ಕಂಪನಿಗಳು, ಸಂಶೋಧನಾ ಸಂಸ್ಥೆಗಳು.
- ಸ್ಪೋರ್ಟ್ಸ್ ಸೈಕಾಲಜಿ: ಸಾಮರ್ಥ್ಯ ಸುಧಾರಣೆ, ಒತ್ತಡ ಹಾಗೂ ವೈಫಲ್ಯ ನಿರ್ವಹಣೆ– ಕ್ರೀಡಾ ಸಂಸ್ಥೆಗಳು, ಆಟಗಾರರು...
- ಯುಎಕ್ಸ್ ಸೈಕಾಲಜಿ: ವಿನ್ಯಾಸ, ಬಣ್ಣಗಳ ಆಯ್ಕೆ, ಜಾಹೀರಾತು– ಡಿಜಿಟಲ್ ಕಂಪನಿಗಳು, ಜಾಹೀರಾತು ಸಂಸ್ಥೆಗಳು.
- ವೈಯಕ್ತಿಕ ಸೈಕಾಲಜಿ: ಮದುವೆ, ವಿಚ್ಛೇದನ, ಮಕ್ಕಳ ಸಮಸ್ಯೆ, ಹಿರಿಯ ನಾಗರಿಕರ ಸಮಸ್ಯೆ, ದುಃಖ– ಚಿಕಿತ್ಸಾಲಯಗಳು, ಸ್ವಂತ ಪ್ರ್ಯಾಕ್ಟೀಸ್.

ಆಶ್ಚರ್ಯಪಡಬೇಡಿ, ಪೆಟ್ ಸೈಕಾಲಜಿ ಎಂಬ ಶಾಖೆಯೂ ಅಭಿವೃದ್ಧಿಯಾಗುತ್ತಿದೆ!

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ಮೆಗಾಮೈಂಡ್ಸ್ ಐಟಿ ಸರ್ವಿಸಸ್: ಕಂಟೆಂಟ್ ರೈಟಿಂಗ್ (ರಿಸರ್ಚ್ ಅಸೋಸಿಯೇಟ್ ಇನ್ ಕಂಪ್ಯೂಟರ್ ಸೈನ್ಸ್) ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಅಡೋಬ್ ಆಫ್ಟರ್ ಎಫೆಕ್ಟ್ಸ್, ಫಿಗ್ಮ, ಗ್ರ್ಯಾಫಿಕ್ ಡಿಸೈನ್, ಮೋಷನ್ ಗ್ರ್ಯಾಫಿಕ್ಸ್, ವಿಡಿಯೊ ಎಡಿಟಿಂಗ್, ವಿಡಿಯೊಗ್ರಫಿ ಮತ್ತು ವಿಷುಯಲ್ ಡಿಸೈನ್ ಬಗ್ಗೆ ಜ್ಞಾನ ಉಳ್ಳವರು ಮಾರ್ಚ್ 27ರ ಒಳಗೆ ಅರ್ಜಿ ಸಲ್ಲಿಸಬಹುದು.
ಸ್ಟೈಪೆಂಡ್– ತಿಂಗಳಿಗೆ ₹ 8,000– ₹ 15,000. ಸಂಪರ್ಕ: https://tinyurl.com/bddtjxsp.

ಯೂನಿಕಾರ್ನ್ ಡಿಜಿಟಲ್ಸ್: ವರ್ಡ್‌ಪ್ರೆಸ್ ಡೆವಲಪ್‌ಮೆಂಟ್ ಇಂಟರ್ನಿಗಳನ್ನು ಆಹ್ವಾನಿಸಿದೆ. ವಿದ್ಯಾರ್ಥಿಗಳು ಸಿಎಸ್‌ಎಸ್ ಮತ್ತು ವರ್ಡ್‌ಪ್ರೆಸ್ ಬಗ್ಗೆ ಅರಿತಿರಬೇಕು. ಮಾರ್ಚ್ 27ರ ಒಳಗೆ ಅರ್ಜಿ ಸಲ್ಲಿಸಬೇಕು.
ಸ್ಟೈಪೆಂಡ್– ತಿಂಗಳಿಗೆ ₹ 5,000.
ಸಂಪರ್ಕ: https://tinyurl.com/yw44b3wm.

‘ನಿನ್ನ ಏಳ್ಗೆಗೆ ನೀನೇ ಶಿಲ್ಪಿ’

ಸಮಾಧಾನ

ಡಾ.ಡಿ.ಎಂ. ಹೆಗಡೆ, ಸಮಾಲೋಚಕರು

ನನಗೆ 23 ವರ್ಷ. ಪದವೀಧರ. ನಾನು ಸರ್ಕಾರಿ ನೌಕರಿ ಸೇರಬೇಕೆಂಬುದು ನನ್ನ ಹಾಗೂ ನನ್ನ ಪಾಲಕರ ಆಸೆ. ಆದರೆ ಎಷ್ಟೇ ಪ್ರಯತ್ನಪಟ್ಟರೂ ನನಗೆ ಸರ್ಕಾರಿ ನೌಕರಿ ಸಿಗುತ್ತಿಲ್ಲ. ಬೇರೆಡೆ ಕೆಲಸಕ್ಕೆ ಸೇರಿದರೆ ಏನೇನೋ ಕಿರಿಕಿರಿ. ಆರು ತಿಂಗಳಲ್ಲಿ ನಾಲ್ಕು ಕಡೆ ಕೆಲಸ ಬಿಟ್ಟಿದ್ದೇನೆ. ನಾವೇನೂ ಸ್ಥಿತಿವಂತರಲ್ಲ. ಇತ್ತೀಚೆಗೆ ಜ್ಯೋತಿಷಿಯೊಬ್ಬರ ಬಳಿ ಭವಿಷ್ಯ ನೋಡಿಸಿದೆ. ಮೂವತ್ತೈದರವರೆಗೂ ನನಗೆ ಸರ್ಕಾರಿ ನೌಕರಿ ಸಿಗುವುದು ಕಷ್ಟವಂತೆ. ನನಗೆ ನಾಗಶಾಪವಿದೆಯಂತೆ. ಹಾಗಾಗಿ, ನನ್ನ ಮನಸ್ಸು ಚಂಚಲವಂತೆ, ಯಾವುದೂ ಕೈ ಸೇರುವುದಿಲ್ಲವಂತೆ. ನಾನು ಪ್ರೀತಿಸಿದ ಹುಡುಗಿಯನ್ನು ಮದುವೆಯಾಗಲು ಆಗುವುದಿಲ್ಲವಂತೆ. ನಲವತ್ತರ ನಂತರ ಬದುಕು ಸಮಾಧಾನದ ಹಂತಕ್ಕೆ ಬರುತ್ತದೆಯಂತೆ. ಅವರ ಮಾತಿನಿಂದ ಭಯವಾಗಿದೆ. ನನ್ನ ಹುಡುಗಿಯನ್ನು ಬಿಟ್ಟು ಬದುಕಲಾರೆ. ಏನು ಮಾಡಬೇಕು ತಿಳಿಯದಾಗಿದೆ.

ಸುರೇಶ ಬೈತಕೋಲ್, ರಾಯಭಾಗ

ಮಿತ್ರ, ಜ್ಯೋತಿಷಿ ಹೇಳಿದಂತೆ ನಿನ್ನ ಜೀವನ ನಡೆಯುತ್ತದೆ ಎನ್ನುವುದನ್ನು ನಂಬಬೇಕಾಗಿಲ್ಲ. ಒಬ್ಬೊಬ್ಬರು ಒಂದೊಂದು ರೀತಿ ಹೇಳುತ್ತಾರೆ. ಬೇಕಾದರೆ ಇನ್ನೂ ಕೆಲವು ಜ್ಯೋತಿಷಿಗಳನ್ನು ಕೇಳು. ಅವರಲ್ಲಿ ಒಬ್ಬಿಬ್ಬರಾದರೂ ನಿನಗೆ ಸಾಂತ್ವನವಾಗುವ ಹಾಗೆ ಹೇಳುತ್ತಾರೆ. ಜ್ಯೋತಿಷಿ ಮಾತು ಕೇಳಿ ತನ್ನ ಅಂಗೈಯಲ್ಲಿ ಕತ್ತಿಯಿಂದ ಗೆರೆಯನ್ನು ಮಾಡಿಕೊಂಡ ಮಹಾಯೋಧ ಅಲೆಕ್ಸಾಂಡರ್ ಬಗ್ಗೆ ಓದು. ನಿನ್ನ ಜೀವನವನ್ನು ನಿನಗೆ ಬೇಕಾದಂತೆ ರೂಪಿಸಿಕೊಳ್ಳುವ ಅವಕಾಶ ಹಾಗೂ ಶಕ್ತಿ ನಿನಗೆ ಇದೆ. ನಿನ್ನ ಏಳ್ಗೆಗೆ ನೀನೇ ಶಿಲ್ಪಿ.

ನಿನಗೆ ಸರ್ಕಾರಿ ನೌಕರಿ ಸಿಗಲಾರದ ವಯಸ್ಸಲ್ಲ. ಇನ್ನು, ಪರಸ್ಪರರಿಗೆ ಪರಸ್ಪರರ ಮೇಲಿರುವ ಪ್ರೀತಿಯ ಆಳ ಹಾಗೂ ನಂಬಿಕೆಯ ಮಟ್ಟದ ಮೇಲೆ ನಿಮ್ಮಿಬ್ಬರ ಪ್ರೀತಿಯ ಸಾರ್ಥಕತೆ ಅವಲಂಬಿಸಿರುತ್ತದೆ. ‘ನಾಗಶಾಪ’ದ ಮಾತಿನಿಂದ ನಿನಗೆ ಭಯವಾಗಿ, ಮನಸ್ಸು ಚಂಚಲವಾಗಿದೆ. ಮನುಷ್ಯನ ಜೀವನದಲ್ಲಿ ಬಹಳಷ್ಟು ಏರುಪೇರುಗಳು, ಸೋಲು–ಗೆಲುವು ಸಹಜ. ಬಂದದ್ದನ್ನು ಬಂದಂತೆಯೇ ಅನುಭವಿಸುತ್ತ ಮುಂದೆ ಸಾಗುತ್ತಿರಬೇಕು. ಯಾವುದಕ್ಕೂ ಹೆಚ್ಚು ತಲೆಕೆಡಿಸಿಕೊಳ್ಳಬಾರದು.

ಅದ್ಯಾವುದೋ ಕಾರಣದಿಂದ ನಿನ್ನ ಪ್ರೀತಿಯ ಹುಡುಗಿ ಬೇರೆಯವರನ್ನು ಮದುವೆಯಾದರೂ ನೀನು ಎದೆಗುಂದಬೇಕಾಗಿಲ್ಲ. ಜೀವನದಲ್ಲಿ ಏನೇ ಆದರೂ ಒಳ್ಳೆಯದಕ್ಕೇ ಆಗುತ್ತದೆ ಎನ್ನುವುದನ್ನು ನಂಬಿಕೊಂಡು ಮುಂದುವರಿಯಬೇಕು.

ನೀನು ಕೆಲಸ ಬಿಟ್ಟಿದ್ದಕ್ಕೆ ನಿನಗೆ ತಾಳ್ಮೆ ಕಡಿಮೆ, ನಿರೀಕ್ಷೆ ಜಾಸ್ತಿ, ನಿನ್ನ ಯೋಗ್ಯತೆಗೆ ತಕ್ಕ ಕೆಲಸವಲ್ಲ ಎನ್ನುವ ಮೇಲರಿಮೆಯಂತಹ ಕಾರಣಗಳಿರಬಹುದು. ನೀನು ನಿನ್ನ ಬಗ್ಗೆ ಕೀಳರಿಮೆಯನ್ನಾಗಲೀ ಹಿರಿಮೆಯನ್ನಾಗಲೀ ಬೆಳೆಸಿಕೊಳ್ಳಬಾರದು.

ಎಲ್ಲರಂತೆ ನೀನೂ ಒಬ್ಬ, ಎಲ್ಲರಿಗೆ ಇರುವಂತೆ ನಿನಗೂ ಬದುಕುವ ಅವಕಾಶವಿದೆ ಎಂಬುದನ್ನು ಮನಗಾಣಬೇಕು. ಇನ್ನು, ಒಂದು ಕೆಲಸಕ್ಕೆ ಸೇರು. ಎಷ್ಟೇ ಕಷ್ಟವಾದರೂ ತಾಳ್ಮೆಗೆಡದೆ ಆರು ತಿಂಗಳವರೆಗಾದರೂ ಚೆನ್ನಾಗಿ ಕೆಲಸ ಮಾಡು. ನಿನಗೆ ಕೆಲಸ ಕೊಟ್ಟವರು ನಿನ್ನನ್ನು ಇಷ್ಟಪಡುವ ಹಾಗೆ, ಇಷ್ಟಪಡುವವರೆಗೆ ಅದೇ ಕೆಲಸ ಮಾಡು. ಅಲ್ಲಿಯೇ ನಿನಗೆ ಭವಿಷ್ಯದ ಬಗ್ಗೆ ಶುಭ ಸೂಚನೆ ಸಿಗುತ್ತದೆ.

23ರಿಂದ 30ರ ವಯಸ್ಸು ಬಹುತೇಕ ಪ್ರತಿ ಗಂಡಸಿಗೂ ಪರೀಕ್ಷೆಯ ಕಾಲ. ಭಯದಿಂದ ನಿರ್ಧಾರ ಮಾಡಬಾರದು. ತಾಳ್ಮೆಯಿಂದ ಸಾವಕಾಶವಾಗಿ ಎಲ್ಲವನ್ನೂ ನಿಭಾಯಿಸಬೇಕು. ಮನಸ್ಸು ಸಮಾಧಾನಗೊಂಡರೆ ಎಲ್ಲವೂ ನಿರಾಳವಾಗುತ್ತದೆ.

ಎಸ್‌ಎಸ್‌ಎಲ್‌ಸಿ ಫೇಲಾಗುವುದು ಬಹಳ ಕಷ್ಟ!

• ಜೆಸ್ಸಿ ಪಿ.ವಿ.

ಸಾಮಾನ್ಯವಾಗಿ ಯಾವುದಾದರೊಂದು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಷ್ಟ ಎನ್ನುತ್ತೇವೆ. ಆದರೆ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಫೇಲಾಗುವುದು ಅಸಾಧ್ಯ ಎಂಬಷ್ಟರ ಮಟ್ಟಿಗೆ ಈ ಪರೀಕ್ಷೆ ವಿದ್ಯಾರ್ಥಿಸ್ನೇಹಿಯಾಗಿ ಮಾರ್ಪಟ್ಟಿದೆ. ಶಿಕ್ಷಣ ಇಲಾಖೆ ಈ ಶೈಕ್ಷಣಿಕ ವರ್ಷದ ಆರಂಭದಲ್ಲೇ ಎಲ್‌ಬಿಎ (ಪಠ್ಯ ಆಧಾರಿತ ಮೌಲ್ಯಮಾಪನ) ಎಂಬ ಪರಿಕಲ್ಪನೆಯನ್ನು ಪರಿಚಯಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ಪ್ರತಿ ವಿಷಯವಾರು ಪ್ರಶ್ನಾಕೋಠಿಯನ್ನು ಬಿಡುಗಡೆ ಮಾಡಿತ್ತು. ಜೊತೆಗೆ ವಿಷಯವಾರು ನೀಲನಕಾಶೆಯನ್ನು ಕೂಡ ಒದಗಿಸಿತ್ತು. ಇದಲ್ಲದೆ ಪ್ರತಿ ವಿಷಯಕ್ಕೆ ತಲಾ ನಾಲ್ಕರಂತೆ ಮಾದರಿ ಪ್ರಶ್ನೆಪತ್ರಿಕೆಗಳನ್ನೂ ಬಿಡುಗಡೆಗೊಳಿಸಿತ್ತು.

ಈ ಬಾರಿ ಕರ್ನಾಟಕ ಶಾಲಾ ಶಿಕ್ಷಣ ಮತ್ತು ಮೌಲ್ಯಮಾಪನ ಮಂಡಳಿಯು ರಾಜ್ಯ ಮಟ್ಟದ ಮೂರು ಪೂರ್ವಸಿದ್ಧತಾ ಪರೀಕ್ಷೆಗಳನ್ನು ನಡೆಸಿದೆ. ಹಾಗಾಗಿ, ವಿದ್ಯಾರ್ಥಿಗಳಿಗೆ ಯಾವ ಪಾಠದಿಂದ, ಯಾವ ರೀತಿ ಹಾಗೂ ಎಷ್ಟು ಅಂಕದ ಪ್ರಶ್ನೆಗಳನ್ನು ಕೇಳಬಹುದು ಎಂಬ ಬಗ್ಗೆ ಖಚಿತತೆ ಇದೆ. ಪ್ರತಿ ವಿಷಯದಲ್ಲಿ ಕೆಲವು ನಿರ್ದಿಷ್ಟ ವಿಷಯಗಳನ್ನು ಕಲಿತರೆ ವಿದ್ಯಾರ್ಥಿಗಳು ಅನಾಯಾಸವಾಗಿ ಉತ್ತೀರ್ಣರಾಗಬಹುದು. ಉದಾಹರಣೆಗೆ, ನಾನು ಬೋಧಿಸುತ್ತಿರುವ ದ್ವಿತೀಯ ಭಾಷೆ ಇಂಗ್ಲಿಷ್ ಅನ್ನು ತೆಗೆದುಕೊಂಡರೆ, ಹಿಂದಿನ ವರ್ಷದವರೆಗೆ ವ್ಯಾಕರಣಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಅಭ್ಯಾಸ ಮಾಡಿಸುವಾಗ, ನಾವು ಒಂದು ಪರಿಕಲ್ಪನೆಗೆ ಸಂಬಂಧಿಸಿದ ಉದಾಹರಣೆಗಳನ್ನಷ್ಟೇ ನೀಡಬಹುದಿತ್ತು. ಆದರೆ ನಿರ್ದಿಷ್ಟ ಪ್ರಶ್ನೆ ಯಾವುದು ಎಂದು ಹೇಳಲು ಸಾಧ್ಯವಿರಲಿಲ್ಲ. ಆದರೆ ಈಗ ಎಲ್‌ಬಿಎ ಕ್ವಶ್ಚನ್ ಬ್ಯಾಂಕ್‌ನಲ್ಲಿ ಕೊಟ್ಟಿರುವ ಎಲ್ಲ ಪ್ರಶ್ನೆಗಳನ್ನೂ ಓದಿಕೊಂಡರೆ, ಅಲ್ಲಿನ ಪ್ರಶ್ನೆಗಳಲ್ಲಿ ಒಂದಾದರೂ ಪರೀಕ್ಷೆಗೆ ಬರುವುದು ಖಚಿತ.

ವ್ಯಾಕರಣ ಅಷ್ಟೇ ಅಲ್ಲ 2, 3 ಹಾಗೂ 4 ಅಂಕಗಳ ಪ್ರಶ್ನೆಗಳು ಕೂಡ ಎಲ್‌ಬಿಎಯಲ್ಲಿ ಇವೆ. ವಿದ್ಯಾರ್ಥಿಗಳು ಕೆಲವು ಪಾಠಗಳಿಂದ ಬರೀ ಎರಡು ಅಂಕದ ಪ್ರಶ್ನೆ, ಕೆಲವು ಪಾಠಗಳಿಂದ ಮೂರು ಅಂಕದ ಪ್ರಶ್ನೆ, ಕೆಲವು ಪಾಠಗಳಿಂದ ಕೇವಲ ನಾಲ್ಕು ಅಂಕದ ಪ್ರಶ್ನೆಗಳಿಗೆ ಉತ್ತರ ಕಲಿತರೆ ಸಾಕು. ಎಲ್ಲವನ್ನೂ ಓದಿ ಮರೆಯುವ ಭೀತಿಯಿಂದ ಪಾರಾಗಲು ಇದು ನೆರವಾಗುತ್ತದೆ. ಬಾಹ್ಯ ಪರೀಕ್ಷೆಯಲ್ಲಿ ಗಳಿಸಬೇಕಾದ ಅಂಕದ ಮಿತಿಯನ್ನು ಇಳಿಸಿರುವುದು ಸಹ ವಿದ್ಯಾರ್ಥಿಗಳ ಉತ್ತೀರ್ಣತೆಯ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

ಕಲಿಕೆಯಲ್ಲಿ ಬಹಳಷ್ಟು ಜಾಣರಾದ ವಿದ್ಯಾರ್ಥಿಗಳಿಗೆ ಇದು ಮಿತಿ ಹೇರಿದಂತೆ ಅನಿಸಿದರೂ ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಪಾಲಿಗೆ ಈ ಬಾರಿಯ ಕ್ರಮಗಳು ವರದಾನ ಆಗುವುದರಲ್ಲಿ ಸಂದೇಹವಿಲ್ಲ. ಉನ್ನತ ಬುದ್ಧಿಮಟ್ಟದ ವಿದ್ಯಾರ್ಥಿಗಳಿಗೆ ಪೂರ್ಣ ಅಂಕ ಗಳಿಸುವ, ಕಲಿಕಾ ನ್ಯೂನತೆಯ ಮಕ್ಕಳಿಗೆ ಪಾಸ್ ಆಗುವ ಕನಸನ್ನು ನನಸಾಗಿಸಿಕೊಳ್ಳುವ ಅವಕಾಶವನ್ನು ಇದು ನೀಡಿದೆ.

ಪ್ರಿಯ ವಿದ್ಯಾರ್ಥಿಗಳೇ, ಭಯ ಬಿಟ್ಟು, ಆತ್ಮವಿಶ್ವಾಸದಿಂದ ತಯಾರಿ ನಡೆಸಿ. ಗೆಲುವು ನಿಮ್ಮದಾಗುವುದು ಖಚಿತ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

55) ಪ್ಲಾಸಿ ಕದನದ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ

ಉತ್ತರ:– (..ಹಿಂದಿನ ಸಂಚಿಕೆಯಿಂದ)

ಮೀರ್ ಜಾಫರನಿಗೆ ನವಾಬನನ್ನಾಗಿ ಮಾಡುವ ಆಮಿಷವೊಡ್ಡಿ ಯುದ್ಧದಲ್ಲಿ ತಟಸ್ಥವಾಗಿರಲು ರಾಜ್ಯವನ್ನು ಒಪ್ಪಿಸಿದನು. ಇದರಿಂದ ಧೈರ್ಯಗೊಂಡ ರಾಬರ್ಟ್ ಕ್ಲೈವನು 1757 ಜೂನ್ 23ರಂದು ಸಿರಾಜ್–ಉದ್–ದೌಲನ ಮೇಲೆ ಕದನ ಸಾರಿದನು. ಪ್ಲಾಸಿ ಎಂಬಲ್ಲಿ ನಡೆದ ಕದನದಲ್ಲಿ ಕ್ಲೈವನು ಯೋಜಿಸಿದಂತೆಯೇ ಎಲ್ಲವೂ ನಡೆಯಿತು. ಯುದ್ಧ ಭೂಮಿಯಿಂದ ತಪ್ಪಿಸಿಕೊಂಡ ಸಿರಾಜ್–ಉದ್–ದೌಲನನ್ನು ಸೆರೆಹಿಡಿದು ಕೊಲ್ಲಲಾಯಿತು

56) ಅರಣ್ಯಗಳ ಸಂರಕ್ಷಣೆಯ ವಿಧಾನಗಳನ್ನು ತಿಳಿಸಿ.

ಉತ್ತರ: ಅರಣ್ಯ ಸಂರಕ್ಷಣಾ ವಿಧಾನಗಳು:
(1) ಕಾಡ್ಗಿಚ್ಚು ಉಂಟು ಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.
(2) ಅರಣ್ಯದ ಮರಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು.
(3) ಅರಣ್ಯಗಳಲ್ಲಿ ಸಾಕು ಪ್ರಾಣಿಗಳ ಮೇಯಿಸುವಿಕೆಯನ್ನು ನಿಯಂತ್ರಿಸುವುದು
(4) ಸಾರ್ವಜನಿಕರನ್ನು ಮರ ನೆಡಲು ಪ್ರೋತ್ಸಾಹಿಸುವುದು ಮತ್ತು ಅವುಗಳ ಪ್ರಾಮುಖ್ಯತೆಯ ಬಗ್ಗೆ ತಿಳುವಳಿಕೆ ನೀಡಿ ರಕ್ಷಣೆಗೆ ಪ್ರೇರೇಪಿಸುವುದು.
(5) ಸಾಮಾಜಿಕ ಅರಣ್ಯ ಯೋಜನೆಯನ್ನು ತ್ವರಿತವಾಗಿ ಯಶಸ್ವಿಯಾಗಿ ಕಾರ್ಯಗತಗೊಳಿಸುವುದು. ಇತ್ಯಾದಿ

57) ಅಸ್ಪೃಶ್ಯತೆ ಆಚರಣೆಯಂತಹ ಸಾಮಾಜಿಕ ಪಿಡುಗನ್ನು ನಿವಾರಿಸಲು ನಿಮ್ಮ ಸಲಹೆಗಳೇನು?

ಉತ್ತರ:. ಅಸ್ಪೃಶ್ಯತೆ ಹಿಂದು ಧರ್ಮಕ್ಕಂಟಿದ ಒಂದು ಶಾಪ ಇದನ್ನು ತೊಲಗಿಸಲು ಪ್ರತಿಯೊಬ್ಬರೂ ಮುಂದಾಗಬೇಕು. ದೇವಾಲಯ, ಅಂಗಡಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕು. ಜಾತ್ರೆ, ಉತ್ಸವ, ರಾಷ್ಟ್ರೀಯ ಹಬ್ಬ, ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಬೇಕು. ಸಹಪಂಕ್ತಿ ಭೋಜನಕ್ಕೆ ಅವಕಾಶ ಮಾಡಿಕೊಡಬೇಕು. ವ್ಯಕ್ತಿಯನ್ನು ಅವನ ಜಾತಿಯಿಂದ ಅಳೆಯಬಾರದು. ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಸಮಾನವಾದ ಅವಕಾಶಗಳನ್ನು ಒದಗಿಸಿಕೊಡಬೇಕು.

58) ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆ ಏನು?

ಉತ್ತರ:– ಇವರ ಕಾಲದಲ್ಲಿ ಅಭಿವೃದ್ಧಿ ಕಾರ್ಯವು ಹೆಚ್ಚಿತು. ಚಿನ್ನದ ಗಣಿ ಸುಧಾರಣೆ, ಕಾಲೇಜು ಸ್ಥಾಪನೆ, ಮಾರಿ ಕಣಿವೆ ಜಲಾಶಯ ನಿರ್ಮಾಣ, ರೈಲು ಮಾರ್ಗ ನಿರ್ಮಾಣ, ಆಸ್ಪತ್ರೆ ಸ್ಥಾಪನೆ ಹಾಗೂ ಕಾವೇರಿ ಜಲಪಾತವನ್ನು ಉಪಯೋಗಿಸಿಕೊಂಡು ಶಿವನ ಸಮುದ್ರದಲ್ಲಿ ಜಲ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಕಾರ್ಯಗಳು ಆರಂಭವಾದವು. ಈ ವಿದ್ಯುತ್ ಕೇಂದ್ರದಿಂದ ಕೋಲಾರದ ಚಿನ್ನದ ಗಣಿಗೂ ನಂತರ ಬೆಂಗಳೂರಿಗೂ ವಿದ್ಯುತ್ ಸರಬರಾಜು ಮಾಡಲಾಯಿತು. ಭಾರತದಲ್ಲಿ ವಿದ್ಯುತ್ ಪಡೆದ ನಗರಗಳಲ್ಲಿ ಬೆಂಗಳೂರೇ ಮೊದಲನೆಯದು.

ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿಯೂ ಶಿಕ್ಷಣ ಶುಲ್ಕವನ್ನು ರದ್ದು ಮಾಡಲಾಯಿತು. ಇದರಿಂದ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು ಸಿಕ್ಕಿತು. ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿಸಲಾಯಿತು. ವಿದೇಶ ವಿದ್ಯಾಭ್ಯಾಸಕ್ಕೆ ಹೋಗುವವರಿಗೆ ವಿದ್ಯಾರ್ಥಿ ವೇತನ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು 1905ರಲ್ಲಿ ಟಾಟಾರವರ ಬೆಂಬಲದಿಂದ ಸ್ಥಾಪಿಸಲಾಯಿತು. ನೀರಾವರಿ ಸೌಲಭ್ಯಗಳನ್ನೊದಗಿಸಲು ವಿಶೇಷ ಗಮನ ಕೊಡಲಾಯಿತು. ಬೆಳಗೊಳದ ಹತ್ತಿರ ಕಾವೇರಿ ನದಿಗೆ ಅಣೆಕಟ್ಟು ಒಂದನ್ನು ಕಟ್ಟಲಾಯಿತು. ಹೊಸ ರೈಲು ಮಾರ್ಗಗಳನ್ನು ನಿರ್ಮಿಸಲಾಯಿತು. ಅನೇಕ ದೊಡ್ಡ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತು. ಅವುಗಳಲ್ಲಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಕಾಗದ ಕಾರ್ಖಾನೆ, ಮಂಡ್ಯದ ಸಕ್ಕರೆ ಕಾರ್ಖಾನೆ, ಮೈಸೂರಿನ ಗಂಧದ ಎಣ್ಣೆ ಕಾರ್ಖಾನೆ, ಬೆಂಗಳೂರಿನ ಸಾಬೂನು ಕಾರ್ಖಾನೆ, ಬೆಳಗೊಳದ ರಾಸಾಯನಿಕ ವಸ್ತುಗಳ ಮತ್ತು ಕೃತಕ ಗೊಬ್ಬರಗಳ ಕಾರ್ಖಾನೆ ಮುಂತಾದವುಗಳು. ನ್ಯಾಯ ವಿಧಾಯಕ ಸಭೆಯನ್ನು ರಚಿಸಲಾಯಿತು. ರಾಜ್ಯಾಂಗದ ಬದಲಾವಣೆಯಲ್ಲಿ ಇದೊಂದು ದೊಡ್ಡ ಹೆಜ್ಜೆಯಾಯಿತು. ಕೃಷ್ಣರಾಜ ಒಡೆಯರು ಸರಳರೂ, ಸಾತ್ವಿಕ ಸ್ವಭಾವದವರೂ, ಸಮರ್ಥ ಆಡಳಿತಗಾರರೂ ಮತ್ತು ವಿದ್ಯಾಪಕ್ಷಪಾತಿಗಳೂ ಆಗಿದ್ದರು. ಅವರಿಗೆ ಲಲಿತ ಕಲೆಗಳಲ್ಲಿ ತುಂಬಾ ಅಭಿರುಚಿ ಇತ್ತು. ಸಂಗೀತ ವಿದ್ವಾಂಸರುಗಳಿಗೆ ಪ್ರೋತ್ಸಾಹ ನೀಡಿದ್ದರು

59) ಕಳ್ಳ ಸಾಗಾಣಿಕೆ ಎಂದರೇನು? ನಿಯಂತ್ರಣಕ್ಕೆ ನಿಮ್ಮ ಸಲಹೆಗಳೇನು?

ಉತ್ತರ : ಸರ್ಕಾರಕ್ಕೆ ಯಾವುದೇ ಆಮದು ಸುಂಕವನ್ನು ನೀಡದೇ ಗುಪ್ತವಾಗಿ ವಿದೇಶಗಳಿಂದ ವಸ್ತುಗಳನ್ನು ತರಿಸಿಕೊಳ್ಳುವುದನ್ನು ಕಳ್ಳ ಸಾಗಾಣಿಕೆ’ ಎಂದು ಕರೆಯುತ್ತಾರೆ.

ನಿಯಂತ್ರಣ ಮಾಡಲು ಕೈಗೊಳ್ಳಬಹುದಾದ ಕ್ರಮಗಳು:
1. ದೇಶದೊಳಗೆಯೇ ಪರ್ಯಾಯ ವಸ್ತುಗಳ ಪೂರೈಕೆಯಿಂದಾಗಿ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಬಹುದು.
2. ರಾಷ್ಟ್ರದ ಆಂತರಿಕ ಮಾರುಕಟ್ಟೆಯಲ್ಲಿ ಬೆಲೆಯನ್ನು ನಿಯಂತ್ರಿಸುವುದು, ಯೋಗ್ಯ ಆಮದು–ರಫ್ತು ಧೋರಣೆ, ಕಟ್ಟುನಿಟ್ಟಿನ ಕರಾವಳಿ ಗಸ್ತು ಪಡೆಯ ಕಾರ್ಯಾಚರಣೆ, ಆರ್ಥಿಕ ಅಪರಾಧಕ್ಕೆ ಕಠಿಣ ಶಿಕ್ಷೆ ವಿಧಿಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಬೇಕು
3. ಅಂತಾರಾಷ್ಟ್ರೀಯ ಹಾಗೂ ಆಂತರಿಕ ರಾಜ್ಯಗಳ ಪರಸ್ಪರ ವ್ಯಾಪಾರ ಒಪ್ಪಂದಗಳ ಮೂಲಕ ಕಳ್ಳ ಸಾಗಾಣಿಕೆಯನ್ನು ನಿಯಂತ್ರಿಸಬಹುದಾಗಿದೆ.
4. ಕಳ್ಳ ಸಾಗಾಣಿಕೆಯ ವಸ್ತುಗಳನ್ನು ಸಾಮಾಜಿಕವಾಗಿ ಬಹಿಷ್ಕರಿಸುವುದರ ಮೂಲಕವೂ ಇದನ್ನು ಸಾಕಷ್ಟು ನಿಯಂತ್ರಿಸಬಹುದು.

60) ಯಾವುದೇ ಉದ್ಯಮ ಪ್ರಾರಂಭಿಸಲು ಹಣಕಾಸಿನ ಅವಶ್ಯಕತೆ ಮುಖ್ಯವಾಗಿದೆ. ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಹಣಕಾಸು ಸಹಾಯ ಮಾಡುವ ಕೆಲವು ಸಂಸ್ಥೆಗಳನ್ನು ಬರೆಯಿರಿ

ಉತ್ತರ:– ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಉದ್ದಿಮೆಗಳ ಸ್ಥಾಪನೆ ಅಭಿವೃದ್ಧಿ ಮತ್ತು ಅವುಗಳನ್ನು ಕಾಲಕ್ಕೆ ತಕ್ಕಂತೆ ಮಾರ್ಪಡಿಸಲು ಅನೇಕ ಹಣಕಾಸಿನ ಸಂಸ್ಥೆಗಳನ್ನು ಸ್ಥಾಪಿಸಿವೆ. ಈ ಸಂಸ್ಥೆಗಳು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೂ ಕೂಡ ಸಾಲರೂಪದಲ್ಲಿ ಹಣ ಸಹಾಯ ಮಾಡುತ್ತದೆ.

ಈ ಸಂಸ್ಥೆಗಳಲ್ಲಿ ಮುಖ್ಯವಾದುವೆಂದರೆ :
1. ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು (IDBI)
2. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು
3. ಆಮದು ಮತ್ತು ರಫ್ತು ಬ್ಯಾಂಕು (EXIM BANK)
4. ಭಾರತೀಯ ಸಣ್ಣಕೈಗಾರಿಕಾ ಅಭಿವೃದ್ಧಿ ಬ್ಯಾಂಕು (SIDBI)
5. ಭಾರತೀಯ ಕೈಗಾರಿಕಾ ಹಣಕಾಸು ನಿಗಮ (IFCI)
6. ಭಾರತೀಯ ಕೈಗಾರಿಕೆಗೆ ಹಣಕಾಸಿನ ಹೂಡಿಕೆ ಮತ್ತು ಸಾಲದ ನಿಗಮ (ICICI)
7. ಭಾರತೀಯ ಕೈಗಾರಿಕಾ ಮರು ನಿರ್ಮಾಣ ಬ್ಯಾಂಕು (IRBI)
8. ಭಾರತೀಯ ವಾಣಿಜ್ಯ ಮತ್ತು ಇತರೆ ಬ್ಯಾಂಕುಗಳು
9. ರಾಜ್ಯ ಹಣಕಾಸು ನಿಗಮಗಳು (SFC)
10. ಭಾರತೀಯ ಜೀವ ವಿಮಾ ನಿಗಮ (LIC)

ಪಿಯುಸಿ/ ಸಿಇಟಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

MULTIPLE CHOICE QUESTIONS

**1. If A = {x : x is an integer and $x^2 - 9 = 0$}
B = {x : x is a natural number and $2 \le x < 5$}
C = {x : x is a prime number ≤ 4}
Then $(B - C) \cup A$ is,**

(A) {-3,3,4} (B) {2,3,4}
(C) {3,4,5} (D) {2,3,5}

Ans. A

Soln.

A = {x : x is an integer and $|x^2| - 9 = 0|$} |

$x^2 = 9 \Rightarrow x = \pm 3 = \{-3, 3\}$

B = {x : x is a natural number and $2 \le x < 5$}
$= \{2,3,4\}$

C = {x : x is a prime number ≤ 4}
$= \{2,3\}$

$(B - C) \cup A = \{4\} \cup \{-3, 3\} = \{-3, 3, 4\}$

2) Two finite sets have m and n elements respectively. The total number of subsets of the first set is 56 more than the total number of subsets of the second set. The values of m and n respectively are:

(A) 7, 6 (B) 5, 1
(C) 6, 3 (D) 8, 7

Ans:- (C) 6, 3

Expl:- The total number of subsets for a set with m elements is 2^m, and for n elements is 2^n. The difference is given as 56, so $2^m - 2^n = 56$. Solving this for m = 6 and n = 3.

3) If f (x) = $\log_{x2}$ (log x), then f’(x) at x = e is

(A) 0 (B) 1 (C) $\frac{1}{e}$ (D) $\frac{1}{2e}$

Ans : (D) $\frac{1}{2e}$

$$\text{Expln}: -f(x) = \log_{x^2}(\log x) = \frac{\log_e(\log x)}{\text{lig}_e\, x^2} = \frac{\log(\log x)}{2\log x}$$

$$f'(x) = \frac{2\log x.\frac{1}{\log x}.\frac{1}{x} - \log(\log x).\frac{2}{x}}{4(\log x)^2}$$

At x = e, log x = 1. ∴ log (log x) = 0.

$$f'(x) = \frac{2.\left(\frac{1}{e}\right)}{4} = \frac{1}{2e}.$$

4) The value of c in Lagrange’s theorem for the function f (x) = log (sin x) in the interval $\left[\frac{\pi}{6}, \frac{5\pi}{6}\right]$ is..............................

(A) $\frac{\pi}{4}$ (B) $\frac{\pi}{2}$
(C) $\frac{2\pi}{3}$ (D) None of these

Ans : (B) $\frac{\pi}{2}$

Expln :– f(x) = log (sin x)

$$\therefore f'(x) = \frac{1}{\sin x}.\cos x = \cot x \therefore f'(c) = \cot c$$

$$\text{Lagrange's theorem is } f'(c) = \frac{f(b) - f(a)}{b - a}$$

Here, $a = \frac{\pi}{6}$, $b = \frac{5\pi}{6}$

$$\therefore f'(c) = \frac{\log\sin\frac{5\pi}{6} - \log\sin\frac{\pi}{6}}{\frac{5\pi}{6} - \frac{\pi}{6}}$$

$$f'(c) = \frac{\log\frac{1}{2} - \log\frac{1}{2}}{\frac{4\pi}{6}} = 0$$

$$\therefore f'(c) = \cot c = 0 \Rightarrow c = \frac{\pi}{2}.$$

5) The product of the degree and other of the D.E. $\left(\frac{d^2y}{dx^2}\right)^2 - \left(\frac{dy}{dx}\right)^3 = y^3$ is

**(A) 4 (B) 6
(C) 2 (D) 3**

Ans: (A) 4

Expln:- The order of a differential equation is that of the highest order derivative. Here it is 2.
The degree of a D.E. is the degree of the highest ordered derivative. Here it is 2. Their product is 4

6) The general solution of the differential equation $\frac{dy}{dx} + \frac{y}{x} = 3x$ is ....

a) $y = x - \frac{c}{x}$ b) $y = x + \frac{c}{x}$
c) $y = x^2 - \frac{c}{y}$ d) $y = x^2 + \frac{c}{x}$

Ans:- d

Expln- The given differential equation is,

$$\frac{dy}{dx} + \frac{y}{x} = 3x \quad \text{..........(1)}$$

It is a linear differential equation.

So, I. F. $= e^{\int \frac{1}{x} dx} = e^{\log x} = x$

∴ Solution of eq. (1) is given by

$x.\,y = \int 3x^2\, dx$

$\Rightarrow xy = 3\left[\frac{x^3}{3}\right] + c$ (or) $xy + c = 3\left[\frac{x^3}{3}\right]$

$\Rightarrow xy = x^3 + c$ (or) $xy + c = x^3$

$\Rightarrow y = x^2 + \frac{c}{x}$ (or) $y = x^2 - \frac{c}{x}$

7) If f(x) = [x] - 5|x| + 6 = 0, where [x] denotes the greatest integer function, then:

**(A) x ∈ [3, 4] (B) x ∈ (2, 4)
(C) x ∈ [2, 3] (D) x ∈ (2, 3]**

Ans:- (B) x ∈ (2, 4)

8) The value of $\cos^2 45° - \sin^2 15°$ is

(a) √3 / 2 (b) √3 / 4
(c) [√3 + 1] / 2 √2 (d) [√3 – 1] / 2 √2

Answer: (b)

$\cos^2 45° - \sin^2 15°$
$\cos(45° + 15°)\cos(45° - 15°)$ {∵ $\cos^2 A - \sin^2 B = \cos(A + B)\cos(A - B)$}
$= \cos 60° \cos 30°$
$= (1/2)(\sqrt{3}/2)$
$= \sqrt{3}/4$

‘ಸ್ಪಷ್ಟನೆ ಕೊಟ್ಟು ನೇಮಕಾತಿ ನಡೆಸಿ’

ಚಿತ್ರದುರ್ಗ: ‘ಒಳಮೀಸಲಾತಿ ವಿಷಯದಲ್ಲಿ ಸಿಎಂ ಸಿದ್ದರಾಮಯ್ಯ ಅವರ ಬದ್ಧತೆ, ದಲಿತರ ಕಾಳಜಿ ಪ್ರಶ್ನಾತೀತ. ಆದರೆ 56,432 ಹುದ್ದೆಗಳ ನೇಮಕಾತಿ ಬಗ್ಗೆ ಅವರು ಸ್ಪಷ್ಟನೆ ನೀಡಿದ ಬಳಿಕವೇ ಪ್ರಕ್ರಿಯೆ ಕೈಗೊಳ್ಳಬೇಕು’ ಎಂದು ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಆಗ್ರಹಿಸಿದರು.

‘ಶೇ 56ರಷ್ಟು ಮೀಸಲಾತಿ ಪ್ರಮಾಣಕ್ಕೆ ಕೋರ್ಟ್ ತಡೆಯಾಜ್ಞೆ ನೀಡಿದೆ. ಆದ್ದರಿಂದ ನೇಮಕಾತಿಯಲ್ಲಿ ಯಾರಿಗೂ ಅನ್ಯಾಯ ಆಗದಂತೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಬೇಕು. ಇಲ್ಲವಾದಲ್ಲಿ ಸಮುದಾಯ ಮತ್ತೆ ಬೀದಿಗಿಳಿದು ಹೋರಾಟ ಮಾಡಲಿದೆ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘30 ವರ್ಷದ ಹೋರಾಟದ ಫಲವಾಗಿ ಒಳಮೀಸಲಾತಿ ಜಾರಿಗೊಂಡಿದೆ. ಆದರೂ ಗೊಂದಲಗಳು ಮುಂದುವರಿದಿವೆ. ನೇಮಕಾತಿ ಪ್ರಕ್ರಿಯೆಯಲ್ಲಿ ಒಳಮೀಸಲಾತಿ ಅನ್ವಯಿಸುತ್ತದೆಯೇ, ಇಲ್ಲವೋ ಎಂಬ ಸ್ಪಷ್ಟತೆ ಇಲ್ಲವಾಗಿದೆ. ಇದರಿಂದ ಮಾದಿಗ ಸಮುದಾಯ ಆತಂಕಕ್ಕೆ ಒಳಗಾಗಿದೆ.’ ಎಂದರು.

ಶಾಸಕರಿಗೆ ಮುತ್ತಿಗೆ ಹಾಕಿ ಆಕ್ರೋಶ

ಮಾದಿಗ ಸಮುದಾಯಕ್ಕೆ ಒಳಮೀಸಲಾತಿ ಕಲ್ಪಿಸದೇ ಹುದ್ದೆಗಳ ಭರ್ತಿಗೆ ವಿರೋಧ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಒಳಮೀಸಲಾತಿ ಪರವಾಗಿ ಧ್ವನಿ ಎತ್ತುತ್ತಿಲ್ಲ ಎಂದು ಆರೋಪಿಸಿ ಮಾದಿಗ ಸಮುದಾಯದ ಮುಖಂಡರು ಜಿಲ್ಲೆಯ ಮಾಯಕೊಂಡ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ಎಸ್. ಬಸವಂತಪ್ಪ ಅವರಿಗೆ ನಗರದಲ್ಲಿ ಭಾನುವಾರ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಇಲ್ಲಿನ ಹಳೆ ಪ್ರವಾಸಿ ಮಂದಿರಕ್ಕೆ ಕೆ.ಎಸ್.ಬಸವಂತಪ್ಪ ಬರುತ್ತಿದ್ದಂತೆ ಪ್ರತಿಭಟನಾಕಾರರು ಕಾರನ್ನು ಸುತ್ತುವರಿದರು. ಅವರು ಕೆಳಗಿಳಿಯದಂತೆ ಮುತ್ತಿಗೆ ಹಾಕಿದರು. ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

‘ಒಳಮೀಸಲಾತಿ ಕಲ್ಪಿಸದೇ 56 ಸಾವಿರ ಹುದ್ದೆಗಳಿಗೆ ನೇಮಕಾತಿ ನಡೆಸಲು ಮುಂದಾಗಿರುವ ರಾಜ್ಯ ಸರ್ಕಾರದ ವಿರುದ್ಧ ಸಮುದಾಯದ ಸಚಿವರು, ಶಾಸಕರು ತುಟಿ ಬಿಚ್ಚುತ್ತಿಲ್ಲ. ಇದರಿಂದ ಸಮುದಾಯದವರಿಗೆ ಅನ್ಯಾಯವಾಗುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಒಳಮೀಸಲಾತಿ ಕಲ್ಪಿಸದೇ 56 ಸಾವಿರ ಹುದ್ದೆಗಳಿಗೆ ನೇಮಕಾತಿ ನಡೆಸುವುದನ್ನು ಸರ್ಕಾರ ತಡೆಹಿಡಿಯಬೇಕು. ಈ ವಿಚಾರದಲ್ಲಿ ಸರ್ಕಾರ ಮೌನ ತಾಳಿದರೆ ಮಾರ್ಚ್ 6ರಂದು ದಾವಣಗೆರೆ ಬಂದ್‌ ನಡೆಸಲಾಗುವುದು’ ಎಂದು ಮುಖಂಡರು ಎಚ್ಚರಿಸಿದರು.

‘ಸಮುದಾಯದ ಮುಖಂಡರು, ಶಾಸಕರು, ಸಚಿವರೊಂದಿಗೆ ಸಿಎಂ ಹಾಗೂ ಡಿಸಿಎಂ ಅವರನ್ನು ಭೇಟಿ ಮಾಡಿ ಒಳಮೀಸಲಾತಿ ಕಲ್ಪಿಸಿಯೇ ಹುದ್ದೆ ಭರ್ತಿಗೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಗುವುದು. ಪ್ರಧಾನ ಮಂತ್ರಿ ಬಳಿಗೆ ಸರ್ವಪಕ್ಷದ ನಿಯೋಗ ಕರೆದೊಯ್ಯುವ ಬಗ್ಗೆಯೂ ಒತ್ತಡ ಹೇರಲಾಗುವುದು’ ಎಂದು ಶಾಸಕ ಬಸವಂತಪ್ಪ ಭರವಸೆ ನೀಡಿದರು.

ದಾವಣಗೆರೆಯಲ್ಲಿ ಮಾದಿಗ ಸಮುದಾಯದ ಮುಖಂಡರು ಶಾಸಕ ಕೆ.ಎಸ್. ಬಸವಂತಪ್ಪ ಅವರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು

ಶಿಕಾರಿಪುರದಲ್ಲಿ ಕಲ್ಲು ತೂರಾಟ: 10 ಜನರ ಬಂಧನ

ಪ್ರಜಾವಾಣಿ ವಾರ್ತೆ

ಶಿಕಾರಿಪುರ: ರಂಜಾನ್ ಹಬ್ಬಕ್ಕೆ ದೇಣಿಗೆ ಸಂಗ್ರಹಿಸುವ ವಿಚಾರವಾಗಿ ಮುಸ್ಲಿಂ ಸಮುದಾಯದ ಎರಡು ಗುಂಪುಗಳ ನಡುವೆ ಭಾನುವಾರ ಪಟ್ಟಣದ ಗ್ರಾಮಾಂತರ ಪ್ರದೇಶದಲ್ಲಿ ಕಲ್ಲು ತೂರಾಟ ನಡೆದಿದ್ದು, ಈ ಸಂಬಂಧ ಪೊಲೀಸರು 10 ಜನರನ್ನು ಬಂಧಿಸಿದ್ದಾರೆ.

‘ರಂಜಾನ್ ಹಬ್ಬಕ್ಕೆ ಪ್ರತಿ ಕುಟುಂಬ ₹1,000 ದೇಣಿಗೆ ನೀಡಬೇಕು ಎಂದು ಮಸೀದಿಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು. ಅದಕ್ಕೆ ಮತ್ತೊಂದು ಗುಂಪು ವಿರೋಧ ವ್ಯಕ್ತಪಡಿಸಿತು. ಈ ವೇಳೆ ಪರಸ್ಪರ ಮಾತಿನ ಚಕಮಕಿ ನಡೆಯಿತು. ಬಳಿಕ ಕಲ್ಲು ತೂರಾಟ ಆರಂಭಗೊಂಡಿತು. ಶಿಕಾರಿಪುರ-ಶಿರಾಳಕೊಪ್ಪ ಮುಖ್ಯ ರಸ್ತೆಯಲ್ಲಿ ಎರಡೂ ಗುಂಪುಗಳ ಕಲ್ಲು, ಕೋಲು ಸೇರಿದಂತೆ ಕೈಗೆ ಸಿಕ್ಕ ವಸ್ತುಗಳನ್ನು ಎಸೆಯುತ್ತಿದ್ದ ಕಾರಣ ಸಂಚಾರ ಕೆಲಕಾಲ ಸ್ಥಗಿತಗೊಂಡಿತು.

ಶಿಕಾರಿಪುರ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಘಟನೆ ಕುರಿತು 10 ಜನರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯಪಾಲಕ ಅಭಿಯಂತರರ ಕಚೇರಿ, ನಂ.1ನೇ ವಿಭಾಗ, ನಂ.55 ನಿಸರ್ಗ ಭವನ, ಶೇಷಾದ್ರಿಪುರಂ, ಬೆಂಗಳೂರು-560020.
E-mail: ksdbeeno.1@gmail.com Ph: 08023564652
No.KSDB/EE/No1.div/S.T/PB/IFT-19/2025-26/ Dated: 25.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ ಪೋರ್ಟಲ್ ಮೂಲಕ)

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ 1ನೇ ವಿಭಾಗ, ಬೆಂಗಳೂರು ವ್ಯಾಪ್ತಿಯಲ್ಲಿ 04 ಕಾಮಗಾರಿಗಳಿಗೆ (ಕೆಟಗರಿ 2&3&4) KPP Portal ಮೂಲಕ ಟೆಂಡರ್ ಆಹ್ವಾನಿಸಲಾಗಿದೆ, ಸದರಿ ಕಾಮಗಾರಿಗಳ ಇಂಡೆಂಟ್ ನಂಬರ್ ಈ ಕೆಳಕಂಡಂತಿರುತ್ತದೆ.

01. KSDB/2025-26/OW/WORK_INDENT436
02. KSDB/2025-26/OW/WORK_INDENT437
03. KSDB/2025-26/OW/WORK_INDENT438
04. KSDB/2025-26/OW/WORK_INDENT439

1). Last date & time for receipt of Tenders: Date: 05.03.2026 upto 4.00 PM, 2). Date & Time for opening of Technical Bid Date:-07.03.2026 at 11.00 AM.

ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತರರು, 1ನೇ ವಿಭಾಗ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ಅಥವಾ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ /-
ಕಾರ್ಯಪಾಲಕ ಅಭಿಯಂತರರು
DIPR/CP/NR/5922/2025-26 ನಂ.1ನೇ ವಿಭಾಗ, ಕಕೊಅಮ, ಬೆಂಗಳೂರು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಟೆಂಡರುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗೊಟ್ಟಿ ಮೊತ್ತ ಇ.ಎಂ.ಡಿ(ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಚೇರಿ(ಕಾವೇರಿ–ಕಾ&ನಿ), 8ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.					
1	(ಕಾವೇರಿ ಕಾ&ನಿ)–2	ಬೆಂಜಮಂ/ಕಾನಿಅ(ಕಾವೇರಿ–ಕಾ&ನಿ)–2/ಐಎಫ್‌ಟಿ/3048/2025–26 ದಿನಾಂಕ: 24.02.2026 (ಕರೆ–4)	ರೂ. 54,59,748/– ರೂ. 1,10,000/–	09.03.2026ರ ಸಂಜೆ 4:00 ಗಂಟೆಯವರೆಗೆ	10.03.2026ರ ಸಂಜೆ 5:00 ಗಂಟೆಯ ನಂತರ
2		ಬೆಂಜಮಂ/ಕಾನಿಅ(ಕಾವೇರಿ–ಕಾ&ನಿ)–2/ಐಎಫ್‌ಟಿ/3049/2025–26 ದಿನಾಂಕ: 24.02.2026 (ಕರೆ–4)	ರೂ. 6,22,543/– ರೂ. 20,000/–		
3		ಬೆಂಜಮಂ/ಕಾನಿಅ(ಕಾವೇರಿ–ಕಾ&ನಿ)–2/ಐಎಫ್‌ಟಿ/3050/2025–26 ದಿನಾಂಕ: 24.02.2026(ಕರೆ–3)	ರೂ. 38,32,367/– ರೂ. 77,000/–		
4		ಬೆಂಜಮಂ/ಕಾನಿಅ(ಕಾವೇರಿ–ಕಾ&ನಿ)–2/ಐಎಫ್‌ಟಿ/3051/2025–26 ದಿನಾಂಕ: 24.02.2026	ರೂ. 13,13,985/– ರೂ. 33,000/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ಕಾವೇರಿ–ಕಾರ್ಯಾಚರಣೆ ಮತ್ತು ನಿರ್ವಹಣೆ)–2.					
ಮುಖ್ಯ ಅಭಿಯಂತರರ ಕಚೇರಿ(ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.					
5	ಪಶ್ಚಿಮ–2	ಬೆಂಜಮಂ/ಕಾನಿಅ(ಪ–2)/ಐಎಫ್‌ಟಿ/5658/2025–26 ದಿನಾಂಕ: 26.02.2026 (ಕರೆ–4)	ರೂ. 72,31,807/– ರೂ. 1,44,700/–	10.03.2026ರ ಮಧ್ಯಾಹ್ನ 3:00 ಗಂಟೆಯವರೆಗೆ	11.03.2026ರ ಮಧ್ಯಾಹ್ನ 3:00 ಗಂಟೆಯ ನಂತರ
6		ಬೆಂಜಮಂ/ಕಾನಿಅ(ಪ–2)/ಐಎಫ್‌ಟಿ/5658/2025–26 ದಿನಾಂಕ: 26.02.2026 (ಕರೆ–2) (ಪೂರ್ಣ 2ನೇ ಕರೆ ಮೀಸಲು)	ರೂ. 65,28,649/– ರೂ. 65,300/–		
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ಪಶ್ಚಿಮ–2).					

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಹೆಚ್ಚಿನ ವಿವರಗಳನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ವಾ.ಸಾ.ಸಂ.ಇ/ವಾ.ಪ್ರ/ರೆ.ಅ/5914/2025–26

ಕೈಗಾ ಅಣು ಸ್ಥಾವರದ 5, 6ನೇ ಘಟಕದ ಕಾಂಕ್ರೀಟೀಕರಣ

‘ಐದು ವರ್ಷದಲ್ಲಿ ವಿದ್ಯುತ್ ಉತ್ಪಾದನೆ’

ಪ್ರಜಾವಾಣಿ ವಾರ್ತೆ

ಕಾರವಾರ: ತಾಲ್ಲೂಕಿನ ಕೈಗಾದಲ್ಲಿರುವ ಅಣು ಸ್ಥಾವರದ 5 ಮತ್ತು 6ನೇ ಘಟಕ ನಿರ್ಮಾಣಕ್ಕಾಗಿ ಕಾಂಕ್ರೀಟೀಕರಣ ಕಾಮಗಾರಿಗೆ ಅಣುಶಕ್ತಿ ಆಯೋಗದ ಅಧ್ಯಕ್ಷ ಅಜಿತ್ ಕುಮಾರ ಮೊಹಂತಿ ಭಾನುವಾರ ಚಾಲನೆ ನೀಡಿದರು.

‘ಅಣು ಸ್ಥಾವರದ ನಿರ್ಮಾಣದ ಅವಧಿಯನ್ನು ಕಾಂಕ್ರೀಟೀಕರಣ ಆರಂಭದಿಂದ ಲೆಕ್ಕ ಹಾಕಲಾಗುತ್ತದೆ. ಮುಂದಿನ ಐದು ವರ್ಷಗಳ ಒಳಗೆ 5ನೇ ಘಟಕದಲ್ಲಿ ವಿದ್ಯುತ್ ಉತ್ಪಾದನೆ ಆರಂಭಿಸಲಿದೆ. ಹೊಸದಾಗಿ ನಿರ್ಮಾಣಗೊಳ್ಳಲಿರುವ ಎರಡು ಘಟಕಗಳು ವಿಶ್ವದ ಅತ್ಯಂತ ಸುರಕ್ಷಿತ ಅಣುಸ್ಥಾವರಗಳಾಗಲಿವೆ’ ಎಂದು ಅಜಿತ್ ಕುಮಾರ ಮೊಹಂತಿ ತಿಳಿಸಿದರು.

‘ತಲಾ 50 ಮೆಗಾ ವಾಟ್ ಸಾಮರ್ಥ್ಯದ ಸಣ್ಣ ಪ್ರಮಾಣದ ರಿಯಾಕ್ಟರ್‌ಗಳನ್ನು ಸ್ಥಾಪಿಸುವ ಬಗ್ಗೆ ಯೋಜಿಸಲಾಗುತ್ತಿದೆ. ಕೇವಲ 100ರಿಂದ 200 ಎಕರೆ ಜಾಗದಲ್ಲಿ ಇವುಗಳನ್ನು ಸ್ಥಾಪಿಸಲು ಅವಕಾಶವಿದೆ. ಬಾಬಾ ಅಟೊಮಿಕ್ ಎನರ್ಜಿ ಸೆಂಟರ್ ಈಗಾಗಲೇ ದೇಶದಲ್ಲಿ ಪ್ರಾಯೋಗಿಕ ಪರಿಶೀಲನೆ ನಡೆಸುತ್ತಿದ್ದು, ಸದ್ಯ ಇದು ಸಂಶೋಧನೆ ಹಂತದಲ್ಲಿದೆ’ ಎಂದರು.

ಕಾಂಕ್ರೀಟೀಕರಣ ಕಾಮಗಾರಿಗೆ ಅಣುಶಕ್ತಿ ನಿಗಮದ ಅಧ್ಯಕ್ಷ ಅಜಿತ್ ಕುಮಾರ ಮೊಹಂತಿ ಚಾಲನೆ ನೀಡಿದರು. ಭಾರತೀಯ ಅಣು ವಿದ್ಯುತ್ ನಿಗಮದ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಭುವನ ಚಂದ್ರ ಪಾಠಕ್ ಕಾರ್ಯನಿರ್ವಾಹಕ ನಿರ್ದೇಶಕ ಪ್ರತೀಕ್ ಅಗರವಾಲ್ ಕೈಗಾ ಸ್ಥಳ ನಿರ್ದೇಶಕ ಬಿ.ವಿನೋದ ಕುಮಾರ್ ಪಾಲ್ಗೊಂಡಿದ್ದರು

‘ಜಾಗ ಸಿಕ್ಕರೆ ರಾಜ್ಯದಲ್ಲಿ ಸ್ಥಾವರ’

‘ರಾಜ್ಯದಲ್ಲಿ ಸೂಕ್ತ ಎನಿಸುವ ಸ್ಥಳ ಸಿಕ್ಕರೆ ಹೊಸ ಅಣು ಸ್ಥಾವರ ಸ್ಥಾಪನೆ ಮಾಡುವ ಬಗ್ಗೆ ಯೋಚಿಸಲಾಗುವುದು’ ಎಂದು ರಾಷ್ಟ್ರೀಯ ಅಣು ವಿದ್ಯುತ್ ನಿಗಮದ (ಎನ್‌ಪಿಸಿಐಎಲ್) ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಭುವನ ಚಂದ್ರ ಪಾಠಕ್ ಹೇಳಿದರು.

‘ವಿಶ್ವದಲ್ಲೇ ಸುರಕ್ಷಿತ, ಕಡಿಮೆ ವೆಚ್ಚದ ರಿಯಾಕ್ಟರ್‌ಗಳು ಕೈಗಾದಲ್ಲಿ ನಿರ್ಮಾಣಗೊಳ್ಳುತ್ತಿವೆ. 2047ರ ವೇಳೆಗೆ 54 ಗಿಗಾ ವಾಟ್ ವಿದ್ಯುತ್ ಉತ್ಪಾದನೆಯ ಗುರಿಯನ್ನು ನಿಗಮವು ಹೊಂದಿದೆ. ದೇಶದಲ್ಲಿ ಸದ್ಯ 24 ಅಣು ಸ್ಥಾವರಗಳಿದ್ದು, 8,890 ಮೆಗಾ ವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿವೆ’ ಎಂದರು.

‘ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ₹15 ಸಾವಿರ ಕೋಟಿ ಮೀಸಲಿಡಿ’

ಬೆಂಗಳೂರು: ಉತ್ತರ ಕರ್ನಾಟಕ ಭಾಗದ (ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ) ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ₹15 ಸಾವಿರ ಕೋಟಿ ವಿಶೇಷ ಅನುದಾನ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಉತ್ತರ ಕರ್ನಾಟಕ ಸಂಘ ಸಂಸ್ಥೆಗಳ ಮಹಾಸಂಘ ಮನವಿ ಮಾಡಿದೆ.

ಮಹಾಸಂಘದ ಅಧ್ಯಕ್ಷ ಶಿವಕುಮಾರ್ ಮೇಟಿ, ಪ್ರಧಾನ ಕಾರ್ಯದರ್ಶಿ ಶಂಕರ ಪಾಟೀಲ ನೇತೃತ್ವದ ನಿಯೋಗವು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದೆ.

‘ಪ್ರೊ. ಗೋವಿಂದರಾವ್ ಸಮಿತಿಯ ಶಿಫಾರಸಿನಂತೆ ಉತ್ತರ ಕರ್ನಾಟಕದ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ಪ್ರತಿ ವರ್ಷ ಕನಿಷ್ಠ ₹15 ಸಾವಿರ ಮೀಸಲಿಡಬೇಕು. ಹಿಂದುಳಿದ ತಾಲ್ಲೂಕುಗಳಲ್ಲಿ ಪ್ರತಿ ವರ್ಷ ಕನಿಷ್ಠ 25 ಪ್ರಾಥಮಿಕ ಶಾಲೆಗಳು ಹಾಗೂ ಕನಿಷ್ಠ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣಕ್ಕೆ ಅನುದಾನ ಮೀಸಲಿಡಬೇಕು. ಉತ್ತರ ಕರ್ನಾಟಕ ಭಾಗದಲ್ಲಿ ವಾಣಿಜ್ಯೋದ್ಯಮ ಚಟುವಟಿಕೆಗೆ ಏರೋ ಸ್ಪೇಸ್ ಘಟಕ ಘೋಷಿಸಬೇಕು’ ಎಂದು ನಿಯೋಗ ಮನವಿ ಮಾಡಿದೆ.

‘ಕಲಬುರಗಿ ವಿಮಾನ ನಿಲ್ದಾಣ ಪುನರ್ ಕಾರ್ಯಾರಂಭ ಮಾಡಲು ಅನುದಾನ ಮೀಸಲಿಡಬೇಕು. ವಾಯವ್ಯ ಕರ್ನಾಟಕ ಸಾರಿಗೆ ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ನಿಗಮಗಳಿಗೆ ಪ್ರತಿ ನಿಗಮಕ್ಕೆ ಕನಿಷ್ಠ 200 ಹೊಸ ಬಸ್ ಖರೀದಿಸಲು ಅನುದಾನ ನೀಡಬೇಕು. ಕಲಬುರಗಿ ಹಾಗೂ ಹಾವೇರಿ ಜಿಲ್ಲೆಯ ರಾಣೇಬೆನ್ನೂರಿನಲ್ಲಿ ಐಟಿ ಪಾರ್ಕ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪಿಸಿ, ವಾರ್ಷಿಕ ಕನಿಷ್ಠ ₹5 ಸಾವಿರ ಕೋಟಿ ಮೀಸಲಿಡಬೇಕು. ಬೆಂಗಳೂರಿನ ದಾಸನಪುರ ಹೋಬಳಿ ಕಮ್ಮಗೊಂಡನಹಳ್ಳಿಯಲ್ಲಿ 3.24 ಎಕರೆ ಜಮೀನಿನಲ್ಲಿ ಹಾಸ್ಟೆಲ್ ನಿರ್ಮಾಣಕ್ಕೆ ₹10 ಕೋಟಿ ನೀಡಬೇಕು. ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತದ ಅನುಷ್ಠಾನಕ್ಕೆ ವಾರ್ಷಿಕ ಕನಿಷ್ಠ ₹10 ಸಾವಿರ ಕೋಟಿ ಒದಗಿಸಬೇಕು’ ಎಂದು ನಿಯೋಗ ಆಗ್ರಹಿಸಿದೆ.

ನಿಯೋಗದಲ್ಲಿ ಸಂಸ್ಥೆಯ ಕಾರ್ಯದರ್ಶಿ ಬಸಯ್ಯ ನಂದಿಕೋಲ್, ನಿರ್ದೇಶಕರಾದ ಶಂಕರ್ ಹಿರೇಮಠ, ರಾಮನಗೌಡ ಬಿರಾದಾರ, ದೇವರಾಜ ಕವಟೇಕರ ಇದ್ದರು.

‘ಶಿಕ್ಷಣವಿದ್ದರೆ ಜಗತ್ತಿನ ಮುಂದೆ ನಿಲ್ಲಬಹುದು’

ಪ್ರಜಾವಾಣಿ ವಾರ್ತೆ

ಉಡುಪಿ: ‘ಶಿಕ್ಷಣ ಪಡೆದರೆ ಎಂತಹ ಕಷ್ಟಕರ ಪರಿಸ್ಥಿತಿಯಲ್ಲೂ ಜಗತ್ತಿನ ಮುಂದೆ ಧೈರ್ಯವಾಗಿ ನಿಲ್ಲಲು ಸಾಧ್ಯವಿದೆ. ಪ್ರತಿಯೊಂದು ಸಮುದಾಯದವರೂ ವಿದ್ಯೆಗೆ ಆದ್ಯತೆ ನೀಡಬೇಕು’ ಎಂದು ಶೃಂಗೇರಿ ಶಾರದಾ ಪೀಠದ ವಿಧುಶೇಖರ ಭಾರತಿ ಸ್ವಾಮೀಜಿ ಹೇಳಿದರು.

ಉಡುಪಿ ಜಿಲ್ಲಾ ಮರಾಟಿ ಸಮಾಜಸೇವಾ ಸಂಘದ ವತಿಯಿಂದ ಬ್ರಹ್ಮಾವರ ತಾಲ್ಲೂಕಿನ ಮುಂಡ್ಕಿನಜೆಡ್ಡು ಆರ್.ಕೆ. ಪಾಟ್ಕರ್ ಶಾಲಾ ಮೈದಾನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮರಾಟಿ ಹೋಳಿ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ವಿದ್ಯೆ ಪಡೆದ ಬಳಿಕ ನ್ಯಾಯಯುತ ಆಗಿ ಧನ ಸಂಪಾದನೆ ಮಾಡಬೇಕು. ಜೊತೆಗೆ ಧರ್ಮಾಚರಣೆ ಮಾಡಿದರೆ ಬದುಕು ಸಾರ್ಥಕವಾಗುತ್ತದೆ. ಆಧುನಿಕ ಸೌಲಭ್ಯಗಳು ಬಂದರೂ ಜನರ ದುಃಖ ಕಡಿಮೆಯಾಗಿಲ್ಲ. ಆಧುನಿಕತೆಗೆ ದುಃಖವನ್ನು ಅಳಿಸುವ ಶಕ್ತಿ ಇಲ್ಲ. ಸುಖದ ಮೂಲವೆಂದರೆ ಧರ್ಮ. ದುಃಖದ ಮೂಲ ಅಧರ್ಮ’ ಎಂದರು.

ಚಲನಚಿತ್ರ ಕೇಂದ್ರದಲ್ಲಿ ಪ್ರದರ್ಶನ ಮಂಡಳಿ ಕಾರ್ಯದರ್ಶಿ ಎಚ್. ರಾಜೇಶ್ ಪ್ರಸಾದ್, ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕರಾದ ಯಶ್‌ಪಾಲ್ ಸುವರ್ಣ, ಗುರ್ಮೆ ಸುರೇಶ್ ಶೆಟ್ಟಿ, ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ, ಉಡುಪಿ ಜಿಲ್ಲಾ ಮರಾಟಿ ಸಮಾಜ ಸಂಘದ ಅಧ್ಯಕ್ಷ ಕೆ.ಟಿ. ನಾಯ್ಕ್ ಚಾಂತಾರು, ಸಂಚಾಲಕ ಉಮೇಶ್ ಎ. ನಾಯ್ಕ್ ಚೇರ್ಕಾಡಿ ಉಪಸ್ಥಿತರಿದ್ದರು.

ಮರಾಟಿ ಸಮಾಜದ 3 ಸಾವಿರಕ್ಕೂ ಹೆಚ್ಚು ಮಂದಿ ಹೋಳಿ ವೇಷಧಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಮರಾಟಿ ಸಮಾಜದ ಹೋಳಿ ವೇಷಧಾರಿಗಳು ಪಾಲ್ಗೊಂಡಿದ್ದರು

ಮಕ್ಕಳ ನಾಪತ್ತೆ ಪ್ರಕರಣ ಹೆಚ್ಚಳಕ್ಕೆ ಕಳವಳ

ಬೆಂಗಳೂರು: ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಮಕ್ಕಳ ನಾಪತ್ತೆ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಅನು ಶಿವರಾಮನ್ ಕಳವಳ ವ್ಯಕ್ತಪಡಿಸಿದರು.

ಕರ್ನಾಟಕ ನ್ಯಾಯಾಂಗ ಅಕಾಡೆಮಿಯಲ್ಲಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯಾಂಗ ಅಕಾಡೆಮಿ, ಹೈಕೋರ್ಟ್‌ನ ಬಾಲ ನ್ಯಾಯ ಸಮಿತಿ ಮತ್ತು ಪೋಕ್ಸೊ ಸಮಿತಿ ಹಾಗೂ ಯುನಿಸೆಫ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ರಕ್ಷಣೆ (ನಾಪತ್ತೆ) ಕುರಿತು ಭಾನುವಾರ ಆಯೋಜಿಸಿದ್ದ ಮಕ್ಕಳ ರಕ್ಷಣೆಗಾಗಿ ರಾಜ್ಯಮಟ್ಟದ ನ್ಯಾಯಾಂಗ ಸಭೆಯಲ್ಲಿ ಅವರು ಮಾತನಾಡಿದರು.

ನಾಪತ್ತೆಯಾದ ಮಕ್ಕಳನ್ನು ಪತ್ತೆಹಚ್ಚುವಲ್ಲಿ ಪೊಲೀಸರು ಯಾಕೆ ವಿಫಲರಾಗುತ್ತಿದ್ದಾರೆ ಎಂಬುದು ಚಿಂತನೆ ಮಾಡಬೇಕಾದ ವಿಚಾರ. ಇದಲ್ಲದೇ ಮಕ್ಕಳ ಮೇಲಿನ ದೌರ್ಜನ್ಯ, ಹಿಂಸೆ, ಲೈಂಗಿಕ ಕಿರುಕುಳಗಳು ಕೂಡ ಜಾಸ್ತಿಯಾಗುತ್ತಿವೆ. ಇದನ್ನು ನಿಯಂತ್ರಿಸಲು ಸರ್ಕಾರ ದಿಟ್ಟ ಕ್ರಮ ಕೈಗೊಳ್ಳಬೇಕು. ಜೊತೆಗೆ ಜನರೂ ಕೈಜೋಡಿಸಬೇಕು ಎಂದು ಹೇಳಿದರು.

ಮಕ್ಕಳ ಮೇಲೆ ದೌರ್ಜನ್ಯ ನಡೆಯುತ್ತಿರುವುದು ಒಂದು ಕಡೆಯಾದರೆ, ಮಕ್ಕಳೇ ಅಪರಾಧ ಚಟುವಟಿಕೆಯಲ್ಲಿ ತೊಡಗಿಕೊಳ್ಳುವಂತ ಪರಿಸ್ಥಿತಿ ಇನ್ನೊಂದು ಕಡೆ ನಿರ್ಮಾಣವಾಗುತ್ತಿದೆ. ಪೋಷಕರು ತಮ್ಮ ಮಕ್ಕಳ ಬಗ್ಗೆ ಕಾಳಜಿ ವಹಿಸುವುದರ ಜೊತೆಗೆ ನಿಗಾ ಇಡಬೇಕು ಎಂದು ಸಲಹೆ ನೀಡಿದರು.

ಮಕ್ಕಳ ರಕ್ಷಣೆ ಎನ್ನುವುದು ಸೂಕ್ಷ್ಮವಾದ ವಿಚಾರ. ರಕ್ಷಣೆಗಾಗಿ ಕಾನೂನು ಇವೆ. ಅವುಗಳು ಪರಿಣಾಮಕಾರಿಯಾಗಿ ಜಾರಿಯಾಗಬೇಕು ಎಂದರು.

ಬಾಲನ್ಯಾಯ ಮತ್ತು ಪೋಕ್ಸೊ ಸಮಿತಿಯ ಅಧ್ಯಕ್ಷರಾದ ಹೈಕೋರ್ಟ್ ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್, ನಡೆದೊಳೆಯ ಮಕ್ಕಳ ಹಕ್ಕುಗಳ ಆಯೋಗದ ಸಂಚಾಲಕರಾದ ರವಿಕಾಂತ್ ಉಪಸ್ಥಿತರಿದ್ದರು.

THE FEDERAL BANK LIMITED
Regd. Office: Aluva, Kerala.
ZONAL OFFICE: 2nd Floor, Halcyon Complex, No.9, St. Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/Q4/2025-26 **NOTICE FOR PRIVATE SALE OF GOLD** 26/02/2026

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-03-2026 as shown below:

Br. Bangalore/St. Marks Road: No. 9, Halcyon Complex, St. Marks Road, Bangalore, Karnataka- 560 001, Ph. No. 080-32994454 :- 11046900054883,11046900054875,11046900054180,11046400014825,11046400014833,11046400014841,11046400014858,11046900053695,11046900055690.

Br. Bangalore/Gandhi Nagar: P B No. 9981, No. 24, 2nd Cross, Gandhi Nagar, Bangalore, Karnataka- 560 009, Ph. No. 080-22385208 :- 11895600005805,11895600005920,11895600005938,11895600005649,11895600005722,11895600005847,11895600005862,11895600005821,11895600005888,11895600005813,11895600005896,11895600005904,11895600005631,11895600005656,

Br. Bangalore/Rajaji Nagar : No. 60/60, Raj Chambers, Dr. Rajkumar Road, 2nd Block, Rajaji Nagar, Bangalore-560 010, Ph. No. 080-23522007:- 13346400287902,13346400249902,13346900016017,13346400279305,13346400287555,13346400290641,13346900026354,13346900024177,13346900024185,13346900014913,13346900016215,13346100683350,13346900016934,13346900017064,13346900023948,13346900023955,13346400290013,13346400290021,13346900014459,13346400290716,13346400292498,13346400292514,13346400292431,13346900026743,13346900016371,13346900017270,13346900017288,13346900018351,13346900025703,13346900016462,13346800082671,13346900015407,13346900016835,13346100681933,13346100681941,13346100681958,13346900015373,13346900021157,13346900014400,13346900015332,13346900026453,13346400292183,13346400292738,13346800083992,13346900028004,13346400292167,13346900016140,13346900016165,13346900016173,13346900023609,13346900023617,13346900028426,13346900028434,13346100693011,13346100694407,13346100696436,13346900014038,13346900018070,13346900018088,13346900021280,13346900024854,13346900027998.

Br. Bangalore/R T Nagar : No.20, 1st Main Road, 108 'B' Bus Station, Ganga Nagar, R T Nagar P O, Bangalore- 560 032, Ph. No. 080-23434258 :- 14726400082214,14726100222250,14726900003116,14726400069963,14726900006077,14726400080853,14726900004650,14726900004957,14726900005830,14726900005988,14726400084293,14726800063145,14726900004197,14726100221088,14726900002308,14725600002089,14726500019058,14726900006713,14726400084830,14726400086090,14726800078176,14726900004304,14726900002753,14726400086462,14726500020064,14726500020585,14726400085555,14726400086223,14726400086231,14726100222664,14726100222672,14726400086884,14726900006911,14726100224538,14726900003108,14726400083592,14726400087775,14726400087783,14726400087791,14726900009139.

Br. Bangalore/Indiranagar: 315/1, 100 Feet Road, Indiranagar, Bangalore, Karnataka-560 038 Ph. No. 080-25212341 :- 15355600004833,15356900003053,15356900003079,15356900003095,15356400038229,15356400053194,15356900006676,15356400063961,15355600004742,15356400059456,15355600004817,15355600004890,15356400061098,15356400053053,15355600004718,15356900003608,15356400062427,15356400063367,15356900004242,15356900004739,15356900005199,15356400062534,15356400061510,15356900000893,15356900001545,15356900004556,15356900005470,15355600004346,15356900006262,15356400058813,15356900002592.

Br. Bangalore/Banaswadi: No 13, Banaswadi Main Road, Bangalore, Karnataka- 560 043 Ph. No. 080-25420700 :- 14716900015814,14716900016093,14716900009585,14716900017919,14716400039736,14716900007282,14716900012480,14716900015731,14716900015749,14716900007647,14716900014825,14716800086675,14716900008207,14716800112364,14716800112570,14716900008744,14716900009791,14716500005827,14716100315642,14716900002473,14716900005658,14716900008496,14716900009999,14716900009007,14716900016028,14716900015681,14716500006593,14716100315931,14716900003281,14716900009189,14716900012902,14716900018529,14716900022034.

Br.Bangalore/Krishnarajapuram: Vsr Complex, Old Madras Road, Krishnarajapuram, Bangalore Urban, Karnataka- 560 036 Ph No. 080-25619070 :- 15615600001687,15615600001745,15615600001752,15615600001760,15615600001786,15615600001794,15615600001810,15615600001836,15616900007556,15616900007564,15616400024655,15616900001807,15616900007747,15615600001869,15616900001393,15616900001815,15616900005055,15616400030405,15616400030660,15615600001885,15616100194337,15616800036986,15615600001919,15615600001877,15616900005469,15616900008158,15615600001893,15616900008554,15616900001443,15616400028763,15616400030512,15616900003399,15616400029522,15616800035863.

Br. Bangalore/Jalahalli: 17/1, Savithri, S M Road, Jalahalli West, Bangalore, Karnataka-560 015, Ph. No. 080-28372201:- 15826900004244,15825600002920,15826400142403,15826400142411,15825600002904,15826400144912,15826900006843,15826900014987,15826900017931,15826900002768,15826400144706,15826400145646,15825600002912,15826400140985,15825600002938,15825600002953,15826100645283,15825600002433,15826900014532,15826100644161,15826100644575,15826100644609,15826100646034,15826400143252,15826900013427,15826100646273,15826900018418,15826900018749,15826900018756,15826900019077,15826900011587,15826900018053,15826900008468,15826100647503,15826400143864,15826400144003,15826400144482,15826400144607,15826900015687,15826100640623,15826900003998,15826900019671,15826900014714,15826900019325,15826500015236,15826400140936,15826900014763,15826900014771,15826900014789,15826900014490,15826900017964,15826900018079,15826900019341,15826500015541,15825600003001,15826100648519,15826100648527,15826900004756,15826500015228,15826900008039,15826900008047,15826400145869,15826900009029,15826900026411,15826400144060,15826400144078,15826400144086,15826400144342,15826400144540,15826900020554.

Br. Bangalore/Vignana Nagar: No. 124, S R Plaza, Vignana Nagara, Main Road, Bangalore, Karnataka- 560 037 Ph. No. 080-25348901 :- 16296900003811,16296900005543,16296900005253,16296400076135,16296900005154,16296900005162,16296900010618,16296900004934,16296400068660,16296400074924,16296900003480,16296900008067,16296900004769,16296900005113,16296400075889,16296900005147,16296400075947,16296900012077,16296400078149,16296400078420.

Br. Tumkur: Amogh Mansion, KR Extension, Tumkur-572101 Ph:0816-2255470 :- 16036900000908,16036900001112,16036900001153,16036900001344,16036400107096,16036900001054,16036100137070,16036400106296,16036400107435,16036400111296,16036400111304,16036900004066,16036400107898,16036400110025,16036900003464,16036400106825,16036400107112,16036400111882,16036400112021,16036400103335,16036400110199,16036400110355,16036900002276,16036900003761,16036100137385,16036400112260,16036900003068.

Br. Bangalore/Vijayanagar: Ground Floor of TRS Arcade, #3, 1st main road, Income Tax Layout, Opposite to AM Hospital, Vijayanagar, Bangalore, Karnataka- 560 040 Ph. No. 080-23159121 :- 16436400119846,16436400100929,16436400121966,16436400129225,16436400118707,16436100363173,16436400122915,16436900002336,16436900004837,16436900002237,16436900000454,16436900002278,16436100366077,16436400120141,16436900000694,16436900001007,16436400125371,16436900002104,16436400128078,16436400118905,16436900005792,16436500013295,16436400129068,16436500011000,16436500013949,16436400128151,16436400128177,16436400128805,16436400124622,16436900001734,16436400124218,16436400124499,16436900001940,16436500010994,16436500011059,16436400128136,16436400125587,16436900004803,16435600001887,16436900005941,16436100366846,16436900001619,16436900007541,16436900007558,16436900007566,16436900007624,16436900007632,16436900008952,16436400124812,16436900001767.

Br. Bangalore/Sadashivanagar: #88, Keerthi, 2nd Main, Palace Guttahalli P O, Bangalore,Karnataka-560 003 Ph. No. 080 23565050 :- 21986400069410,21985600001223,21986400069030,21986400069048,21986400069162,21986900003315.

Br. Bangalore / Thanisandra : GF, No.89/1, Thanisandra, K Narayanapura Road, Dr.S R K Nagar PO, Bangalore- 560 077 :- 23886400011214,23886900001509,23886400011248,23886300002040,23886400003880,23886400006479,23886400003559,23886400005851,23886900001616,23886400009556,23886400009564,23886900000709,23886400007642,23886400011271,23885600000514,23885600000571.

Br. Bangalore / Vidyaranyapura : Ground Floor, No. 1123, Khata No. 1066/2744/1123, 6th Block, HMT Layout, Vidyaranyapura, Bangalore - 560097 Ph. :- 9544597221 :- 23966900002580,23966100000731,23966400005570,23966900000998,23966900001434,23966900001608,23966900001194,23966400005752,23966900000881,23966900002325,23966900003844.

Br. Bangalore / Basaveshwaranagar : #33, 1st main road, 3rd Stage, 4th block, West of Chord Road, Basaveshwaranagar, Bangalore- 560 079 :- 24666400015251,24666900003146,24665600000626,24665600000303,24665600000337,24666900002684,24666400012712,24666400014007,24666900000175,24666900004516,24666400015434,24666400013686,24665600000642,24666900000290,24666400011045,24665600000253,24666900003922,24666400016911,24666400009601,24666400013868,24666400015905,24666400016358,24666900001371,24666900001587,24666400012175,24666900001421,24666900003153,24666900001652,24666900001660,24665600000519,24666400014445,24666400014502,24666400014510.

Br. Hebbal / Kempapura: Elevated ground floor, 319/37/4, Dasarahalli Main Road, Bhuvaneshwari Nagar, Hebbala - Kempapura, Bangalore, Karnataka- 560 024 :- 24926900000702,24926400002026,24926400002042,24926400003396,24925600000228,24926400003131,24925600000160,24926400003149,24926400003156,24926400003560,24926400003602,24925600000111,24926400003016.

Br. Bangalore/Peenya Industrial Area: Plot No. 166, 3rd Main, 4th Cross, Peenya Industrial Area, Laggare Main Road, Bangalore, Karnataka-560 058 :- 26116400000133,

Br. Bangalore/Rama Murthy Nagar: Ground Floor, V Tower, T C Palya Main Road, Rama Murthy Nagar, Bangalore, Karnataka- 560 016 :- 26146100000182.

Br. Chikkaballapur: No. 1153/3, BB Road, Chikkaballapur, Karnataka- 562 101 Ph. No. 08156-274088 :- 20216400060198,20216400065007,20216400059570.

Br. Bangalore/Chikkajala: Sri Byraveshwara Complex, No 82/3, Chikkajala Village, Chikkajala Post, KIAL Road, Bangalore North Taluk, Bangalore, Karnataka- 562 157 :- 20866900001777,20866900001637,20866400058632,20866400061438,20866900004326,20866900002379,20866900003922,20866900002064,20866900001942,20866400058392,20866100060326,20866400060463,20866900003799,

Br. Doddaballapur: D Cross Road, Doddaballapur, Bangalore Rural, Karnataka- 561 203 Ph. No. 080-27622105 :- 16316400104933,16316400117703,16316400126324,16316400123990,16316400131340.

Br. Devanahalli: 135/9, Next To Corporation Bank, D B Cross, Devanahalli , Bangalore Rural, Karnataka- 562 110, Ph. No. 080 27683906 :- 15296400208531,15296400201908,15296400203540,15296400205289,15296400149420,15296900001543,15296400201387,15296400141427,15296400205446,15296100246088,15296400189459,15296900002863,15296900002475,15296900002251,15296400205750,15296400217391,15296400219660,15296400203797,15296900002343,15296900001618,15296400201528,15296400205958,15296400205800,15296900003143,15296400211469,15296400220908,15296400220924,15296400209232,15296400224108.

Br. Dommasandra: Khata No. 13 - Gramathana, Dommasandra, Bidarahalli Hobli, Virgonagar P O, Bangalore- 560 049 :- 21656400031278,21656900001680,21656900005186,21656400016113,21656400016121,21656400021352,21656900001813,21656900000864,21656100049364,21656100047582,21656100048853,21656900001698,21656900001920,21656900003579,21656400031534,21656900001904,21656900003413.

Br. Hirandahalli: Sy. No.81/1, Hirandahalli Main Road, Opp. Aswathakatte, Virgonagar P O, Bangalore- 560 049 Ph No:8867121675 :- 21636400109761,21636900002482,21636900003233,21636400112922,21636400112955,21636400113961,21636900001070,21636900001351,21636900001369,21636900003639,21636900003654,21636900004108,21636900004181,21636400108425,21636400109407,21636400108292,21636900004538,21636400109357,21636900001419,21636100020367,21636400108581,21636400115479,21636100021621,21636100021779,21636900003522,21636900003837,21636900005345,21636400108359,21636400109027,21636400115578,21636400116089.

Br.Hoskote: Gangamma Gudi Road, M V Extension, Hoskote, Bangalore Rural, Karnataka, 562 114 Ph. No. 080-27933430 :- 15856400052419,15856400054225,15856400033716,15856400035448,15856400052732,15856400038012,15856400048441,15856100093812,15856100099744,15856400033146,15856400050892,15856400055370,15856400054498,15855500001466,15856400056865.

Br. Jangamakote Cross: No. 295, Hosapet Village, Jangamakote Cross, Shidlaghtta (Tq), Chikballapur, Karnataka-562 102 Ph. No. 08158252222 :- 21696400060489,21696400034666,21696100037019,21696100037290,21696400054383,21696400061040,21696400066676,21696100035443,21696400055018,21696400053807,21696400049458,21696400058699,21696400055687,21696900000266,21696400053724,21696400055299,21696900000357,21696400053732,21696400059614,21696400063426,21696400036638,21696400051892,21696400055398,21696400055604,21696400056164,21696400056032,21696400054904,21696400049987,21696400053138.

Br. Tiptur: 156 & 157 , Opp Janata Deluxe lodge, Vinayaka Nagara, Off B H Road, Tiptur, TumkurDist.- 572 201:- 19906400041395,19906400031263,19906400040074,19906400042971.

Br. Nelamangala: Paramanna Layout, B H Road, Nelamangala, Bangalore Rural,- 562 123 Ph. 080-27722251 :- 15536400142226,15536400146367,15536400139867,15536400137267,15536400140923,15536400136178,15536400143802,15536400144453,15536400138109,15536400138372,15536400145088,15536400146284,15536400146292,15536400145310,15536400139750,15536400143059,15536400146201,15536400144255,15536400143794,15536400146235.

Br. Bangalore/Tarabanahalli: #22,Tarabanahalli, Hesaraghatta Main Road, Chikkabanavara Post, Bangalore- 560 090 :- 26555600000015.

Br. Kunigal: KRS Agrahara, BM Road, Kunigal, Tumkur- 572 130 Ph. No. 08132221111 :- 20706400126106,20706100010477,20706400125066,20706400137897,20705600000301,20706400072391,20706400070759,20706400143507,20706400143689,20706100018496,20706400146914,20706100013794,20706400131742,20706400134795,20706400135768,20706400135776,20706400135784,20706400138143,20706400146922.

Bangalore 26-02-2026 Vice President & Zonal Head

‘ಕ್ರಿಯೇಟಿವ್ ಕ್ಲಸ್ಟರ್ ನಿರ್ಮಾಣ’

ಮೂರು ದಿನಗಳ ‘ಬೆಂಗಳೂರು ಗ್ರಾಫೆಕ್ಸ್’ 7ನೇ ಆವೃತ್ತಿಯ ಸಮಾವೇಶಕ್ಕೆ ತೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆ್ಯನಿಮೇಷನ್, ವಿಷುಯಲ್ ಎಫೆಕ್ಟ್, ಗೇಮಿಂಗ್ ಕ್ಷೇತ್ರಗಳು ಈಗ ಮನರಂಜನೆಯ ಉದ್ಯಮವಾಗಿ ಉಳಿಯದೆ, ಡಿಜಿಟಲ್, ಸೃಜನಶೀಲತೆ ಹಾಗೂ ಕೃತಕ ಬುದ್ಧಿಮತ್ತೆಯ ಆರ್ಥಿಕತೆಯನ್ನು ಮರು ರೂಪಿಸುತ್ತಿವೆ’ ಎಂದು ಐಟಿ ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಬಣ್ಣಿಸಿದರು.

ಮೂರು ದಿನಗಳಿಂದ ಇಲ್ಲಿ ನಡೆದ ಬೆಂಗಳೂರು ಜಿಎಎಫ್‌ಎಕ್ಸ್ 7ನೇ ಆವೃತ್ತಿಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ‘ಮೂಲ ಬೌದ್ಧಿಕ ಆಸ್ತಿ (ಐಪಿ) ಅಭಿವೃದ್ಧಿಪಡಿಸುವವರಿಗೆ ರಾಜ್ಯ ಸರ್ಕಾರ ₹50 ಲಕ್ಷ ಅನುದಾನ ನೀಡುತ್ತಿದೆ. ರಾಜ್ಯದಾದ್ಯಂತ ಕ್ರಿಯೇಟಿವ್ ಕ್ಲಸ್ಟರ್ ನಿರ್ಮಿಸಲು ಉದ್ದೇಶಿಸಿದೆ. ಇದು ಒಟ್ಟಾರೆ ಸೃಜನಶೀಲತೆಗೆ ಉತ್ತೇಜನ ನೀಡಲಿದೆ’ ಎಂದರು.

‘ಸೃಜನಶೀಲತೆಯ ವಲಯಗಳು ಬೌದ್ಧಿಕ ಆಸ್ತಿ, ನಾವೀನ್ಯತೆಯ ಹೊಸ ‘ಆರೆಂಜ್ ಇಕಾನಮಿ’ಯು (ಕಿತ್ತಳೆ ಆರ್ಥಿಕತೆ) ಬೆಳವಣಿಗೆ ಸಾಧಿಸಲು ಮಹತ್ವದ ಕೊಡುಗೆ ನೀಡುತ್ತಿವೆ. ಈ ಆರ್ಥಿಕತೆಯು ಭಾರಿ ಬದಲಾವಣೆ ತರುತ್ತಿದೆ. ಹೊಸ ಉದ್ಯೋಗ ಅವಕಾಶ ಸೃಷ್ಟಿಸುವ, ಸೃಜನಶೀಲತೆಯ ಹೊಸ ಸಂಸ್ಕೃತಿ ಬೆಳೆಯಲು ನೆರವಾಗುತ್ತಿದೆ’ ಎಂದರು.

‘ಇಡೀ ದೇಶದಲ್ಲಿ ಮೊದಲ ಬಾರಿಗೆ ಎವಿಜಿಸಿ ನೀತಿ ರೂಪಿಸಿದ ಹೆಗ್ಗಳಿಕೆ ಕರ್ನಾಟಕದ್ದಾಗಿದೆ. ಸದ್ಯಕ್ಕೆ ಕೃತಕ ಬುದ್ಧಿಮತ್ತೆಯನ್ನು (ಎ.ಐ) ಪ್ರತಿಯೊಬ್ಬರೂ ಅತ್ಯಂತ ಸುಲಭವಾಗಿ ಅಳವಡಿಸಿಕೊಳ್ಳಬಹುದಾಗಿದೆ. ಮಾಹಿತಿ, ವಿಷಯ ಸೃಷ್ಟಿಸಲು ‘ಎ.ಐ’ಯನ್ನು ಬೆಂಗಳೂರಿನ ಆಚೆಗೂ ಹಿಂದುಳಿದ ಪ್ರದೇಶಗಳಲ್ಲಿಯೂ ವ್ಯಾಪಕವಾಗಿ ಬಳಸಲಾಗುತ್ತಿದೆ. ಇದರಿಂದ ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತಿವೆ’ ಎಂದರು.

ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅವರು ವಿವಿಧ ಕ್ಷೇತ್ರಗಳಲ್ಲಿನ ಸಾಧಕರಿಗೆ ಪ್ರಶಸ್ತಿ ವಿತರಿಸಿದರು. ಏಳು ಸ್ಟುಡಿಯೊಗಳ 10 ಬೌದ್ಧಿಕ ಆಸ್ತಿ (ಐಪಿ)ಗಳನ್ನು ಅನಾವರಣ ಮಾಡಲಾಯಿತು.

ಕರ್ನಾಟಕ ಇನೋವೇಶನ್ ಮತ್ತು ಟೆಕ್ನಾಲಜಿ ಸೊಸೈಟಿ (ಕೆಐಟಿಎಸ್) ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಶರಣಪ್ಪ ಸಂಕನೂರ ಭಾಗವಹಿಸಿದ್ದರು.

ಮುಖ್ಯಾಂಶಗಳು

- ಐಪಿ ಅಭಿವೃದ್ಧಿಪಡಿಸುವವರಿಗೆ ಸರ್ಕಾರದಿಂದ ₹50 ಲಕ್ಷ ಅನುದಾನ
- ದೇಶದಲ್ಲಿ ಎವಿಜಿಸಿ ನೀತಿ ರೂಪಿಸಿದ ಹೆಗ್ಗಳಿಕೆ ಕರ್ನಾಟಕದ್ದು
- ಏಳು ಸ್ಟುಡಿಯೊಗಳ 10 ಬೌದ್ಧಿಕ ಆಸ್ತಿ (ಐಪಿ) ಅನಾವರಣ

ತಂತ್ರಜ್ಞಾನದ ಸಂಗಮದ ಫಲವಾಗಿ ಸ್ಥಳೀಯ ಕತೆ ಹೊಂದಿದ್ದ ‘ಕಾಂತಾರ-ಚಾಪ್ಟರ್ 1’ ಸಿನಿಮಾ ಜಾಗತಿಕ ಮನ್ನಣೆಗೆ ಪಾತ್ರವಾಗಿದೆ

ಪ್ರಿಯಾಂಕ್ ಖರ್ಗೆ, ಐಟಿ- ಬಿಟಿ ಸಚಿವ

‘ಆ್ಯನಿಮೇಷನ್: ಮಹಿಳೆಯರಿಗೆ ಅವಕಾಶ’

ಸಮಾವೇಶದಲ್ಲಿ ಸಂಘಟಿಸಿದ್ದ ‘ಆಕೆಯ ನೋಟ, ಆಕೆಯ ಮುನ್ನೋಟ’ (ಹರ್ ಫ್ರೇಮ್. ಹರ್ ಫ್ಯೂಚರ್) ಗೋಷ್ಠಿಯು, ಆ್ಯನಿಮೇಷನ್, ವಿಎಫ್‌ಎಕ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ (ಎವಿಜಿಸಿ-ಎಕ್ಸ್‌ಆರ್) ಜಗತ್ತಿನಲ್ಲಿ ಭವಿಷ್ಯದಲ್ಲಿ ಮಹಿಳೆಯರು ವಹಿಸಬಹುದಾದ ನಾಯಕತ್ವದ ಬಗ್ಗೆ ಸಮಾಲೋಚಿಸುವ ಮೂಲಕ ಹೊಸ ಆಯಾಮ ನೀಡಿತು.

‘ಆ್ಯನಿಮೇಷನ್ ಕ್ಷೇತ್ರದಲ್ಲಿ ಪ್ರಸ್ತುತ ಶೇ 25ರಷ್ಟು ಮಹಿಳೆಯರಿದ್ದು, ಇದು ಬೇರೆ ಕ್ಷೇತ್ರಗಳಲ್ಲಿ ಇರುವ ಮಹಿಳೆಯರ ಪ್ರಮಾಣಕ್ಕೆ ಹೋಲಿಸಿದರೆ ಬಹಳ ಕಡಿಮೆ. ಆದರೂ ಮಹಿಳೆಯರಲ್ಲಿ ಇರುವ ಕ್ಷಮತೆ ಮತ್ತು ದಕ್ಷತೆಯಿಂದಾಗಿ ಅವರು ಕೂಡ ಈ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಬಲ್ಲರು ಎಂಬ ನಂಬಿಕೆ ನನಗಿದೆ’ ಎಂದು ಎಲೆಕ್ಟ್ರಾನಿಕ್ಸ್, ಐಟಿ ಮತ್ತು ಬಿಟಿ, ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಎನ್. ಮಂಜುಳಾ ಹೇಳಿದರು.

ಚಟಕೆ ಸುದ್ದಿ

ಕುಸಿದು ಬಿದ್ದು ಪಿಎಸ್‌ಐ ಸಾವು

ಉಡುಪಿ: ಜಿಲ್ಲಾ ಪೊಲೀಸ್ ವತಿಯಿಂದ ಉಡುಪಿಯಲ್ಲಿ ಭಾನುವಾರ ಬೆಳಿಗ್ಗೆ ಹಮ್ಮಿಕೊಂಡಿದ್ದ ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿದ್ದ ವೇಳೆ ಕುಂದಾಪುರ ಗ್ರಾಮಾಂತರ ಠಾಣೆಯ ಪಿಎಸ್‌ಐ ನಾಸೀರ್ ಹುಸೇನ್ (58) ಅವರು ಕುಸಿದು ಬಿದ್ದು ಮೃತಪಟ್ಟಿದ್ದಾರೆ.



ನಾಸೀರ್ ಹುಸೇನ್

ಮಾದಕ ವಸ್ತು ವಿರುದ್ಧ ಜಾಗೃತಿಗಾಗಿ ನಗರದ ಅಜ್ಜರಕಾಡು ಮೈದಾನದಲ್ಲಿ 5 ಕಿ.ಮೀ ಮ್ಯಾರಥಾನ್ ಹಮ್ಮಿಕೊಳ್ಳಲಾಗಿತ್ತು. ಮ್ಯಾರಥಾನ್ ಓಡುತ್ತಿದ್ದಾಗ ನಾಸೀರ್ ಕುಸಿದು ಬಿದ್ದು, ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾಸಿರ್ ಅವರು ಅಮಾಸೆಬೈಲು, ಕುಂದಾಪುರ ನಗರ, ಕುಂದಾಪುರ ಸಂಚಾರ ಠಾಣೆ, ಶಂಕರನಾರಾಯಣ, ಕಾರ್ಕಳ ಗ್ರಾಮಾಂತರ ಠಾಣೆ ಸೇರಿದಂತೆ ವಿವಿಧ ಠಾಣೆಯಲ್ಲಿ ಪಿಎಸ್‌ಐ ಆಗಿ ಕಾರ್ಯ ನಿರ್ವಹಿಸಿದ್ದರು.

ಕಾಡಾನೆ ದಾಳಿ: ವಿದ್ಯಾರ್ಥಿನಿ ಸಾವು

ಮಡಿಕೇರಿ: ತಾಲ್ಲೂಕಿನ ಬೆಟ್ಟತ್ತೂರು ಗ್ರಾಮದ ಗಿರೀಶ್ ಚೆಂಗಪ್ಪ ಅವರ ಪುತ್ರಿ ಪೂಜ್ಯ (17) ಶನಿವಾರ ರಾತ್ರಿ ಕಾಡಾನೆ ದಾಳಿಯಲ್ಲಿ ಮೃತಪಟ್ಟರು.

‘ಮಡಿಕೇರಿಯ ಸಂತ ಮೈಕಲರ ಕಾಲೇಜಿನಲ್ಲಿ ಪ್ರಥಮ ಪಿಯು ಓದುತ್ತಿದ್ದ ಪೂಜ್ಯ ಕಾಲೇಜಿಗೆ ರಜೆ ಇದ್ದುದ್ದರಿಂದ ಊರಿಗೆ ತೆರಳಿದ್ದರು. ತಂದೆ, ತಾಯಿ ಜೊತೆ ಬೈಕ್‌ನಲ್ಲಿ ಹೊರ ಹೋಗಿದ್ದರು. ವಾಪಸಾದ ಬಳಿಕ, ಬೈಕ್‌ನಿಂದ ಇಳಿದು ಮನೆಯತ್ತ ತೆರಳುತ್ತಿದ್ದ ಪೂಜ್ಯ ಮೇಲೆ ಆನೆ ದಾಳಿ ನಡೆಸಿದೆ. ತೀವ್ರವಾಗಿ ಗಾಯಗೊಂಡ ಅವರನ್ನು ಆಸ್ಪತ್ರೆಗೆ ದಾಖಲಿಸುವಷ್ಟರಲ್ಲಿ ಮೃತಪಟ್ಟಿದ್ದಾರೆ’ ಎಂದು ಡಿಸಿಎಫ್ ಅಭಿಷೇಕ್ ತಿಳಿಸಿದರು.

ಖಡ್ಗದಿಂದ ಕೇಕ್ ಕಟ್: ಪ್ರಕರಣ ದಾಖಲು

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಜನ್ಮದಿನದ ಪ್ರಯುಕ್ತ ಸಾರ್ವಜನಿಕ ಸ್ಥಳಗಳಲ್ಲಿ ಗೆಳೆಯ ರೊಂದಿಗೆ ಖಡ್ಗದಿಂದ ಕೇಕ್ ಕತ್ತರಿಸಿ, ಆ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕಿದ ಆರೋಪದ ಮೇಲೆ ಆರು ಮಂದಿ ವಿರುದ್ಧ ಇಲ್ಲಿನ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಹಿಂದೆ ಜಾಲತಾಣದಲ್ಲಿ ಹಾಕಿದ್ದ ಚಿತ್ರಗಳನ್ನು ಆಧರಿಸಿ, ಎಂ.ಕೆ.ಹುಬ್ಬಳ್ಳಿಯ ಆನಂದ ಚನಬಸಯ್ಯ ಕಲ್ಮಠ (37), ಜೈದ್ ನೂರ್‌ಅಹಮ್ಮದ ಸನದಿ (19), ತರಬೇಜ್ ಹನೀಫ್ ಖಾದ್ರಿ (18), ರೆಹನ್ ಮುಸ್ತಾಕಅಹಮ್ಮದ್ ಬಡೇಘರ್ (19), ಕಿತ್ತೂರಿನ ಸಾಗರ ಯಲ್ಲಪ್ಪ ಗುಂಜಿ (22), ಚಿಕ್ಕನಂದಿಹಳ್ಳಿಯ ನಾಗರಾಜ ಫಕ್ಕೀರಪ್ಪ ಮೊಕಾಶಿ (25) ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

10 ಸಾವಿರ ವಾಹನಗಳಿಗೆ ತಪಾಸಣೆ ಇಲ್ಲದೇ ಎಫ್‌ಸಿ

ಒಂದನೇ ಪುಟದಿಂದ...

ಲಭ್ಯವಾಗಿರುವ ಮಾಹಿತಿ ಪ್ರಕಾರ 10,210 ವಾಹನಗಳಿಗೂ ನಿಸಾರ್ ಅಹಮದ್ ಅವರೇ ಫಾರಂ 38ಎ ನೀಡಿರುವುದು ಕಂಡು ಬಂದಿದೆ. ಈಗಾಗಲೇ ಗುಜರಾತ್‌ನ 41 ವಾಹನಗಳಿಗೆ ಸಂಬಂಧಿಸಿದಂತೆ ಅಲ್ಲಿನ ಆಯುಕ್ತರ ಕಚೇರಿಯಿಂದ ಬಂದ ಇ–ಮೇಲ್‌ನ ಆಧಾರದಲ್ಲಿ ನಿಸಾರ್ ಅಹಮದ್ ಅವರನ್ನು ಜನವರಿ 20ರಂದು ಅಮಾನತು ಮಾಡಲಾಗಿದೆ ಎಂದು ಜಂಟಿ ಆಯುಕ್ತರು ವರದಿ ಸಲ್ಲಿಸಿದ್ದರು.

ವಾಹನ ಮಾಲೀಕರೊಂದಿಗೆ ಸೇರಿ ಸಾರಿಗೆ ಇಲಾಖೆಗೆ ನಂಬಿಕೆ ದ್ರೋಹ ಬಗೆದ, ಮೋಸ ಮಾಡಿದ ನಿಸಾರ್ ಅಹಮದ್ ವಿರುದ್ಧ ಹಾಗೂ ಸಂಬಂಧಿಸಿದ ವಾಹನ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಶರ್ಮಾ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

‘ರಾಜ್ಯದಲ್ಲಿ ವಿರೋಧ ಪಕ್ಷ ಸತ್ತಿದೆ’

ಹುಬ್ಬಳ್ಳಿ: ‘ರಾಜ್ಯದಲ್ಲಿ ವಿರೋಧ ಪಕ್ಷ ಸತ್ತು ಹೋಗಿದ್ದು, ತಾನು ಅಧಿಕಾರಕ್ಕೆ ಬರಲು ಆಡಳಿತ ಪಕ್ಷ ಹಾಳಾಗುವುದನ್ನು ಕಾಯುತ್ತಿದೆ’ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಆರೋಪಿಸಿದರು.

‘ಲಕ್ಷಾಂತರ ಮಂದಿ ಕಾರ್ಯಕರ್ತರು ನೋವು ಅನುಭವಿಸುತ್ತ ಪಕ್ಷದಲ್ಲಿ ದಿನ ದೂಡುತ್ತಿದ್ದಾರೆ. ಮೊದಲು ಪಕ್ಷ ಶುದ್ಧೀಕರಣವಾಗಬೇಕು. ಮುಂದಿನ ದಿನಗಳಲ್ಲಿ ಎಲ್ಲವೂ ಸರಿಹೋಗುವ ಭರವಸೆಯಿದೆ. ಆ ದಿನಕ್ಕಾಗಿ ಕಾಯುತ್ತಿದ್ದು, ನಂತರ ಒಂದಷ್ಟು ಷರತ್ತುಗಳನ್ನು ಮುಂದಿಟ್ಟು ಪಕ್ಷದ ಕಾರ್ಯದಲ್ಲಿ ಸಕ್ರಿಯನಾಗುತ್ತೇನೆ’ ಎಂದು ಭಾನುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ನನ್ನ ಮಗನಿಗೆ ಟಿಕೆಟ್ ತಪ್ಪಿಸಿದರು ಎಂಬ ಒಂದೇ ಕಾರಣಕ್ಕೆ ನಾನು ಬಿಜೆಪಿಯಿಂದ ದೂರ ಉಳಿದಿಲ್ಲ. ಇನ್ನೂ ಕೆಲವು ಕಾರಣಗಳಿವೆ. ಅವು ಏನು ಎನ್ನುವುದು ವರಿಷ್ಠರಿಗೆ ತಿಳಿದಿದೆ. ಸದ್ಯ ರಾಯಣ್ಣ ಬ್ರಿಗೇಡ್ ಕಾರ್ಯಕ್ರಮ ಮಾಡುತ್ತಿಲ್ಲ. ಹಿಂದುತ್ವ ಮತ್ತು ಧರ್ಮದ ಕಾರ್ಯಕ್ಕೆ ರಾಜ್ಯ ಪ್ರವಾಸ ಮಾಡುತ್ತಿದ್ದೇನೆ’ ಎಂದರು.

‘ರಾಜ್ಯ ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆ ಹೆಚ್ಚಾಗಿದೆ. ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಉದ್ಯೋಗವಿಲ್ಲದೆ ಯುವಶಕ್ತಿಯ ಆಕ್ರೋಶ ಭುಗಿಲೆದ್ದಿದೆ’ ಎಂದು ಹೇಳಿದರು.

ಸಂಕೇತ್ ಕುಟುಂಬಕ್ಕೆ ₹15 ಲಕ್ಷ ಪರಿಹಾರ ವಿತರಣೆ

ಶಿವಮೊಗ್ಗ: ಇಲ್ಲಿನ ಊರಗಡೂರಿನಲ್ಲಿ ಈಚೆಗೆ ಬಾಲಕರು ನಡೆಸಿದ ಗುಂಪು ಹಲ್ಲೆಯಿಂದ ಹತ್ಯೆಗೀಡಾಗಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಸಂಕೇತ್‌ನ ಪಾಲಕರನ್ನು ಭಾನುವಾರ ಇಲ್ಲಿನ ವಿಮಾನ ನಿಲ್ದಾಣಕ್ಕೆ ಕರೆಸಿಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಂತ್ವನ ಹೇಳಿದರು.

ಚಿಕ್ಕಮಗಳೂರು ಜಿಲ್ಲೆ ತರೀಕೆರೆಗೆ ತೆರಳಲು ನಿಲ್ದಾಣಕ್ಕೆ ಬಂದಿದ್ದ ಅವರು, ರಾಜ್ಯ ಸರ್ಕಾರದಿಂದ ₹10 ಲಕ್ಷ ಹಾಗೂ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ವೈಯಕ್ತಿಕವಾಗಿ ಕೊಟ್ಟ ₹ 5 ಲಕ್ಷ ಪರಿಹಾರ ಮೊತ್ತದ ಚೆಕ್ ಅನ್ನು ಸಂಕೇತ್ ತಂದೆ ಶಿವಕುಮಾರ್‌ಗೆ ವಿತರಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಶಾಸಕರಾದ ಎಸ್.ಎನ್. ಚನ್ನಬಸಪ್ಪ, ಡಿ.ಎಸ್. ಅರುಣ್, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಪ್ರಸನ್ನಕುಮಾರ್ ಇದ್ದರು.

ನೀರುನಾಯಿಗಳ ವಿಹಾರ...

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ತುಂಗಭದ್ರಾ ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತಿದ್ದು, ಹಿನ್ನೀರಿನಲ್ಲಿ ಭಾನುವಾರ ವಿಹಾರದಲ್ಲಿ ತೊಡಗಿದ್ದ ಅಳಿವಿನಂಚಿನಲ್ಲಿರುವ ನೀರುನಾಯಿಗಳ (ಓಟ್ಟರ್ಸ್) ಗುಂಪೊಂದು ಕಂಡುಬಂತು

ದಲಿತರು ಉದ್ಯಮಿಗಳಾಗಲು ಮುಂದೆ ಬರಲಿ: ರಾಜಾನಾಯಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಲಿತರು ಉದ್ಯಮಿಗಳಾಗಲು ಇರುವ ದಾರಿಗಳನ್ನು ಶೋಧಿಸಬೇಕು ಎಂದು ದಲಿತ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಡಿಐಸಿಸಿಐ) ಬುಡಕಟ್ಟು ವಿಭಾಗದ ರಾಷ್ಟ್ರೀಯ ಉಪಾಧ್ಯಕ್ಷ ರಾಜಾನಾಯಕ್ ಹೇಳಿದರು.

ಡಿಐಸಿಸಿಐ ಮತ್ತು ಅದರ ಕರ್ನಾಟಕ ಘಟಕದ ನೇತೃತ್ವದಲ್ಲಿ ಭಾನುವಾರ ನಡೆದ ಉದ್ಯಮ ಜಾಗೃತಿ ಮತ್ತು ಮಹಿಳಾ ದಿನಾಚರಣೆಯ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

‘ದಲಿತರು ಉದ್ಯಮಿಗಳಾಗಲು ಶ್ರಮವಹಿಸಿ ಕೆಲಸ ಮಾಡಬೇಕು. ನಾವು ತಯಾರಿಸುವ ವಸ್ತುಗಳು ಹೆಚ್ಚು ಗುಣಮಟ್ಟ ಹೊಂದಿದ್ದಾಗ ಮಾತ್ರ ನಮ್ಮ ಬೆಳವಣಿಗೆ ಸಾಧ್ಯ. ಉದ್ಯಮಿಗಳಾಗಲು ಮುಂದೆ ಬಂದರೆ ಉತ್ತಮ ಮಾರ್ಗದರ್ಶನವನ್ನು ಡಿಐಸಿಸಿಐ ನೀಡಲಿದೆ. ಈ ಅವಕಾಶವನ್ನು ಬಳಸಿಕೊಳ್ಳಬೇಕು’ ಎಂದರು.

ಉದ್ಯಮಿಗಳಾಗುವ ಕನಸು ಕಾಣುವವರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಡಿಯಲ್ಲಿ ಸಾಕಷ್ಟು ಅವಕಾಶಗಳಿವೆ. ಅವುಗಳನ್ನು ಸಕಾರಾತ್ಮಕವಾಗಿ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ಘಟಕದ ಅಧ್ಯಕ್ಷ ಸಿ.ನರಸಿಂಹಮೂರ್ತಿ, ಮಾಜಿ ಅಧ್ಯಕ್ಷ ಬೆಳ್ಳಿ ಗಂಗಾಧರ್, ದಾವಣಗೆರೆ ಜಿಲ್ಲಾ ಘಟಕದ ಅಧ್ಯಕ್ಷ ಮಂಜುನಾಥ್ ಕಬ್ಬೂರು, ಬೆಂಗಳೂರು ನಗರ ಅಧ್ಯಕ್ಷ ಪ್ರಕಾಶ್, ಉದ್ಯಮಿ ರವಿ , ಶ್ರೀಕಾಂತ್ ಕೆ. ಪದಾಧಿಕಾರಿಗಳು ಭಾಗವಹಿಸಿದ್ದರು.

ಮಧು ಬಂಗಾರಪ್ಪ ಜನ್ಮದಿನ: ಪೌರ ಕಾರ್ಮಿಕರು, ವಿದ್ಯಾರ್ಥಿಗಳಿಗೆ ಗೌರವ

156 ಮಂದಿಗೆ ವಿಮಾನಯಾನ ಭಾಗ್ಯ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಸೊರಬ ಪುರಸಭೆಯ 36 ಪೌರಕಾರ್ಮಿಕರು ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಪಡೆದ ಜಿಲ್ಲೆಯ 120 ವಿದ್ಯಾರ್ಥಿಗಳು ಸೇರಿದಂತೆ 156 ಜನರನ್ನು ವಿಮಾನದಲ್ಲಿ ಬೆಂಗಳೂರಿಗೆ ಕರೆದೊಯ್ಯುವ ಮೂಲಕ ಮಾರ್ಚ್ 2ರಂದು ತಮ್ಮ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಿಕೊಳ್ಳಲು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಮುಂದಾಗಿದ್ದಾರೆ.

ಇಲ್ಲಿನ ಸೋಗಾನೆ ವಿಮಾನ ನಿಲ್ದಾಣದಿಂದ ಭಾನುವಾರ ಮೊದಲ ಹಂತದಲ್ಲಿ 36 ಪೌರ ಕಾರ್ಮಿಕರು ಬೆಂಗಳೂರಿಗೆ ಪ್ರಯಾಣ ಬೆಳೆಸಿದರು. ಅವರನ್ನು ಸಚಿವರ ನೇತೃತ್ವದಲ್ಲಿ ಕಾಂಗ್ರೆಸ್ ಜಿಲ್ಲಾ ಘಟಕದ ಪದಾಧಿಕಾರಿಗಳ ಬೀಳ್ಕೊಟ್ಟರು.

‘ಎಲ್ಲರಿಗೂ ಬೆಂಗಳೂರಿನಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳಲ್ಲಿ 60 ಮಂದಿ ಮಂಗಳವಾರ ನಸುಕಿನಲ್ಲಿ ರೈಲಿನಲ್ಲಿ ಬೆಂಗಳೂರಿಗೆ ತೆರಳಿ, ಗುರುವಾರ ಮಧ್ಯಾಹ್ನ ವಿಮಾನದಲ್ಲಿ ಶಿವಮೊಗ್ಗಕ್ಕೆ ಮರಳುವರು. ಉಳಿದ 60 ವಿದ್ಯಾರ್ಥಿಗಳು ಮಂಗಳವಾರ ಮಧ್ಯಾಹ್ನ ಸಚಿವರ ಜೊತೆಗೆ ವಿಮಾನದಲ್ಲಿ ಪ್ರಯಾಣ ಬೆಳೆಸಲಿದ್ದಾರೆ. ಬುಧವಾರ ರೈಲಿನಲ್ಲಿ ಶಿವಮೊಗ್ಗಕ್ಕೆ ವಾಪಸ್ ಬರಲಿದ್ದಾರೆ. ಎಲ್ಲರೂ ಬೆಂಗಳೂರಿನಲ್ಲಿ ಮಧು ಬಂಗಾರಪ್ಪ ಅಭಿಮಾನಿಗಳು ಆಯೋಜಿಸಿರುವ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು’ ಎಂದು ಕಾಂಗ್ರೆಸ್ ಹಿಂದುಳಿದ ವರ್ಗಗಳ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಜಿ.ಡಿ.ಮಂಜುನಾಥ್ ‘ಪ್ರಜಾವಾಣಿ’ಗೆ ತಿಳಿಸಿದರು.

ಶಿವಮೊಗ್ಗದ ಸೋಗಾನೆ ವಿಮಾನ ನಿಲ್ದಾಣದಿಂದ ಬೆಂಗಳೂರಿಗೆ ತೆರಳಿದ ಸೊರಬದ ಪೌರ ಕಾರ್ಮಿಕರಿಗೆ ಸಚಿವ ಮಧು ಬಂಗಾರಪ್ಪ ನೇತೃತ್ವದಲ್ಲಿ ಭಾನುವಾರ ಬೀಳ್ಕೊಡಲಾಯಿತು

ಸಿಎಂ ಮೆಚ್ಚುಗೆ: ತರೀಕೆರೆಗೆ ತೆರಳಲು ಭಾನುವಾರ ಮಧ್ಯಾಹ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಅಲ್ಲಿ ವಿಮಾನ ಹತ್ತಲು ಬಂದ ಪೌರ ಕಾರ್ಮಿಕರ ತಂಡವನ್ನು ಕಂಡು ಸಚಿವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ‘ಶ್ರಮಿಕ ವರ್ಗದವರನ್ನು ಈ ರೀತಿ ಸನ್ಮಾನಿಸಿರುವುದು ಅಪರೂಪದ ಹಾಗೂ ಶ್ಲಾಘನೀಯ ಕಾರ್ಯ’ ಎಂದರು.

ಮೊದಲ ಬಾರಿಗೆ ಲೋಹದ ಹಕ್ಕಿಯ ಬೆನ್ನೇರುವ ತವಕದಲ್ಲಿ ನಿಲ್ದಾಣದ ಲಾಂಜ್ ಒಳಗೆ ತೆರಳಿದ ಪೌರ ಕಾರ್ಮಿಕರಲ್ಲಿ ಸಂಭ್ರಮ ಮನೆ ಮಾಡಿತ್ತು.

ಏಪ್ರಿಲ್ ವೇಳೆಗೆ ಕೆಪಿಎಸ್ ಶಾಲೆ ಆರಂಭ

ಶಿರಸಿ: ‘ಏಪ್ರಿಲ್ ಕೊನೆಯ ವಾರದೊಳಗೆ ಗುರುತಿಸಲಾದ ಎಲ್ಲ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು (ಕೆಪಿಎಸ್) ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

‘ರಾಜ್ಯದಲ್ಲಿ ಶಿಕ್ಷಣ ವ್ಯವಸ್ಥೆ ಸುಧಾರಿಸಲು ಸರ್ಕಾರ ಬದ್ಧವಾಗಿದ್ದು, ₹3,500 ಕೋಟಿ ವೆಚ್ಚದಲ್ಲಿ 900 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದು ನಗರದಲ್ಲಿ ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

‘ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸುವ ಕಾರ್ಯ ಕಡ್ಡಾಯವಾಗಿ ಆಗಬೇಕು. ಇದು ಕೇವಲ ಶಿಕ್ಷಣದ ಪ್ರಗತಿಯಷ್ಟೇ ಅಲ್ಲದೆ, ಶಿಕ್ಷಕರ ಬಡ್ತಿಗೂ ಪೂರಕವಾಗಲಿದೆ. ಶೈಕ್ಷಣಿಕ ಚಟುವಟಿಕೆಗಳಿಗೆ ಯಾವುದೇ ತೊಂದರೆಯಾಗದಂತೆ ಅತಿಥಿ ಶಿಕ್ಷಕರನ್ನು ಒದಗಿಸಲಾಗಿದೆ. ಕಾನೂನು ತೊಡಕಿನಿಂದಾಗಿ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ವಿಳಂಬವಾಗಿದ್ದು, ಶೀಘ್ರ ಅದನ್ನು ಬಗೆಹರಿಸಲಾಗುವುದು’ ಎಂದು ಭರವಸೆ ನೀಡಿದರು.

ವಿದ್ಯಾರ್ಥಿಗಳು, ಪೌರ ಕಾರ್ಮಿಕರಿಗೆ ಸನ್ಮಾನ

ಬೆಂಗಳೂರು: ಸೊರಬ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಸರ್ಕಾರಿ ಶಾಲೆಗಳಲ್ಲಿ ಓದಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ 95ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳು ಹಾಗೂ ಅವರ ತಂದೆ–ತಾಯಿಯರನ್ನು ಸೋಮವಾರ ಇಲ್ಲಿ ಸನ್ಮಾನಿಸಲಾಗುತ್ತದೆ.

ಸೊರಬ ಕ್ಷೇತ್ರದ ಶಾಸಕರೂ ಆದ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರ ಹುಟ್ಟುಹಬ್ಬದ ಪ್ರಯುಕ್ತ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಇದೇ ವೇಳೆ ಸೊರಬ ಪುರಸಭೆ ಮತ್ತು ಆನವಟ್ಟಿ ಪಟ್ಟಣ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 36 ಪೌರ ಕಾರ್ಮಿಕರನ್ನು ಸನ್ಮಾನಿಸಲಾಗುತ್ತದೆ.

ನಗರದ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಕೇಂದ್ರ ಕಚೇರಿಯ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಸೋಮವಾರ ಸಂಜೆ 5.50ಕ್ಕೆ ಕಾರ್ಯಕ್ರಮ ನಡೆಯಲಿದೆ.

ಇವರೆಲ್ಲ ಸೋಮವಾರ ಬೆಂಗಳೂರಿನಲ್ಲಿಯೇ ಉಳಿದುಕೊಳ್ಳಲಿದ್ದಾರೆ. ಮಂಗಳವಾರ ಪ್ರಮುಖ ಸ್ಥಳಗಳಾದ ವಿಧಾನ ಸೌಧ, ವಿಶ್ವೇಶ್ವರಯ್ಯ ತಾಂತ್ರಿಕ ವಸ್ತು ಸಂಗ್ರಹಾಲಯ, ನೆಹರೂ ತಾರಾಲಯ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ.

ಕೆಎಂಎಫ್ ಅಧ್ಯಕ್ಷ ಚುನಾವಣೆ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಲದ (ಕೆಎಂಎಫ್) ಅಧ್ಯಕ್ಷ ಸ್ಥಾನದ ಚುನಾವಣೆ ಎರಡು ವಾರ ವಿಳಂಬವಾಗುವ ಸಾಧ್ಯತೆಯಿದೆ.

ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ ಚುನಾವಣೆ ಪ್ರಕ್ರಿಯೆ ಮುಗಿದಿದ್ದರಿಂದ ಮಾರ್ಚ್ 6 ರಂದು ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಬಹುದು ಎಂದು ಹಾಲು ಮಹಾಮಂಡಲದಿಂದ ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗಕ್ಕೆ ಪ್ರಸ್ತಾವವನ್ನು ಸಲ್ಲಿಸಲಾಗಿತ್ತು.

ಆದರೆ, ಮಾರ್ಚ್ 6 ರಿಂದ ಕರ್ನಾಟಕ ಬಜೆಟ್ ಅಧಿವೇಶನ ಆರಂಭವಾಗುತ್ತಿದ್ದು, ಅದೇ ದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸುತ್ತಿದ್ದಾರೆ. ಮಹಾಮಂಡಲದ ನಿರ್ದೇಶಕರಾಗಿ ಐವರು ವಿಧಾನಸಭಾ ಸದಸ್ಯರು ಇರುವ ಕಾರಣದಿಂದ ಚುನಾವಣೆಯನ್ನು ಎರಡು ವಾರ ಮುಂದೆ ಹಾಕುವ ಸೂಚನೆ ನೀಡಲಾಗಿತ್ತು. ಇದರಿಂದ ಮಾರ್ಚ್ 3ನೇ ವಾರ ಚುನಾವಣಾ ದಿನಾಂಕ ನಿಗದಿಯಾಗಬಹುದು ಎಂದು ಮೂಲಗಳು ತಿಳಿಸಿವೆ.

ಶಾಸಕರಾದ ಎಚ್.ಡಿ.ರೇವಣ್ಣ (ಹಾಸನ ಒಕ್ಕೂಟ), ಬಾಲಚಂದ್ರ ಜಾರಕಿಹೊಳಿ (ಬೆಳಗಾವಿ ಒಕ್ಕೂಟ), ಕೆ.ವೈ.ನಂಜೇಗೌಡ (ಕೋಲಾರ ಒಕ್ಕೂಟ), ರಾಘವೇಂದ್ರ ಹಿಟ್ನಾಳ್ (ಬಳ್ಳಾರಿ, ರಾಯಚೂರು, ಕೊಪ್ಪಳ ಒಕ್ಕೂಟ), ಎಚ್.ವಿ.ವೆಂಕಟೇಶ್ (ತುಮಕೂರು ಒಕ್ಕೂಟ) ಅವರು ಕೆಎಂಎಫ್ ನಿರ್ದೇಶಕರು. ಇವರಲ್ಲದೇ ಇನ್ನೂ 11 ಒಕ್ಕೂಟದ ನಿರ್ದೇಶಕರು ಹಾಗೂ ಸರ್ಕಾರದ ಪ್ರತಿನಿಧಿ, ವಿವಿಧ ಸಂಸ್ಥೆಗಳ ಪ್ರತಿನಿಧಿಗಳು ಚುನಾವಣೆ ಪ್ರಕ್ರಿಯೆಯಲ್ಲಿ ಭಾಗಿಯಾಗಲಿದ್ದಾರೆ.

ಕೆಎಂಎಫ್‌ನ ಹಿಂದಿನ ಆಡಳಿತ ಮಂಡಳಿಯ ಅವಧಿ 2024ರ ಜುಲೈ 7ಕ್ಕೆ ಮುಕ್ತಾಯಗೊಂಡಿತ್ತು. ಆಗ, ಲೋಕಸಭಾ ಚುನಾವಣೆ ಎದುರಾಗಿದ್ದರಿಂದಾಗಿ, ಆಡಳಿತಾಧಿಕಾರಿ ನೇಮಕ ಮಾಡದೆ ಹಾಲಿ ಆಡಳಿತ ಮಂಡಳಿಯನ್ನೇ ಮುಂದುವರಿಸಲಾಗಿತ್ತು.

ಆಡಳಿತ ಮಂಡಳಿಯ ಅಧಿಕಾರಾವಧಿ ಮುಗಿದ ನಂತರ, ಸಹಕಾರ ಸಂಘಗಳ ನಿಬಂಧಕ ಟಿ.ಎಚ್.ಎಂ. ಕುಮಾರ ಅವರನ್ನು ಆರು ತಿಂಗಳ ಅವಧಿಗೆ ಆನಂತರ 2025ರ ಜೂನ್ 4ರಂದು ಆಡಳಿತಾಧಿಕಾರಿಯಾಗಿ ನೇಮಿಸಲಾಗಿತ್ತು.

ಗ್ರಾಮೀಣರಿಗಿಲ್ಲ ವಿದ್ಯುತ್ ಭಾಗ್ಯ

ಒಂದನೇ ಪುಟದಿಂದ...

‘ಸಾಮಾನ್ಯವಾಗಿ ಗ್ರಾಮೀಣ ಭಾಗದಲ್ಲಿ 30X40 ಅಡಿಗಿಂತ ಹೆಚ್ಚಿನ ವಿಸ್ತೀರ್ಣದಲ್ಲಿ ಮನೆಗಳನ್ನು ನಿರ್ಮಿಸಲಾಗಿದೆ. ಮಲೆನಾಡು, ಕರಾವಳಿ ಹಾಗೂ ಗ್ರಾಮೀಣ ಭಾಗದ ಜನರ ಸಂಸ್ಕೃತಿ ಬಗ್ಗೆ ಗೊತ್ತಿಲ್ಲದ ಅಧಿಕಾರಿಗಳು ಮಾಡಿರುವ ಆದೇಶದಿಂದ ಯಾವುದೇ ಉಪಯೋಗ ಆಗುತ್ತಿಲ್ಲ. ವಿದ್ಯುತ್ ಸಂಪರ್ಕಕ್ಕಾಗಿ ಕಾದು ಕಾದು ಬೇಸತ್ತಿದ್ದೇವೆ’ ಎಂದು ಉಡುಪಿ ಜಿಲ್ಲೆಯ ರಾಮಕೃಷ್ಣ ಅವರು ಅಳಲು ತೋಡಿಕೊಂಡರು.

‘ನಮ್ಮ ಅನುಕೂಲಕ್ಕೆ ತಕ್ಕಂತೆ ತೋಟದಲ್ಲಿ ಮನೆ ನಿರ್ಮಿಸಿಕೊಂಡಿದ್ದೇವೆ. ನಿರ್ಮಾಣ ಮಾಡುವ ಸಂದರ್ಭದಲ್ಲಿ 30X40 ಅಡಿ ಎಂದು ನಾವು ಲೆಕ್ಕಾಚಾರ ಮಾಡಿರಲಿಲ್ಲ. ಇದಕ್ಕಿಂತ ಹೆಚ್ಚಿನ ವಿಸ್ತೀರ್ಣದಲ್ಲಿ ನಮ್ಮ ಮನೆ ಇರುವುದರಿಂದ ವಿದ್ಯುತ್ ನೀಡಲು ಸಾಧ್ಯವಿಲ್ಲ ಎಂದು ಅಧಿಕಾರಿಗಳು ಈಗ ಹೇಳುತ್ತಿದ್ದಾರೆ. ಇದರಿಂದಾಗಿ ನಮಗೆ ದಿಕ್ಕು ತೋಚದಂತಾಗಿದೆ’ ಎಂದು ಬ್ರಹ್ಮಾವರದ ಸುನಿಲ್ ಕುಮಾರ್ ತಿಳಿಸಿದರು.

ಮಹಾನಗರ ಪಾಲಿಕೆಯಿಂದ ಹಿಡಿದು ಗ್ರಾಮ ಪಂಚಾಯಿತಿವರೆಗೆ 1,200 ಚದರ ಅಡಿ ವಿಸ್ತೀರ್ಣದ ಒಳಗಿನ ನಿವೇಶನಗಳಲ್ಲಿ ನಿರ್ಮಿಸಿರುವ ನೆಲ +2 ಅಂತಸ್ತು ಅಥವಾ ಸ್ಟಿಲ್ಟ್ + 3 ಅಂತಸ್ತಿನವರೆಗಿನ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ) ಇಲ್ಲದೆ ಇದ್ದರೂ ವಿದ್ಯುತ್ ಸಂಪರ್ಕ ನೀಡಬಹುದು ಎಂದು ಸರ್ಕಾರ ಮೂರು ಪ್ರತ್ಯೇಕ ಆದೇಶಗಳನ್ನು ಹೊರಡಿಸಿದೆ. ಆದರೆ, ಇದರಲ್ಲಿ ಇರುವ ಲೋಪಗಳಿಂದಾಗಿ ಉಪಯೋಗ ಆಗುತ್ತಿಲ್ಲ ಎಂಬುದು ವಿದ್ಯುತ್ ಸಂಪರ್ಕಕ್ಕಾಗಿ ಕಾಯುತ್ತಿರುವ ಗ್ರಾಹಕರ ಆಕ್ರೋಶ.

ವಿದ್ಯುತ್ ಹಾಗೂ ನೀರಿನ ಸಂಪರ್ಕಕ್ಕೆ ಸುಪ್ರೀಂ ಕೋರ್ಟ್ ಒ.ಸಿ ಕಡ್ಡಾಯಗೊಳಿಸಿದ ಬಳಿಕ, 2025ರ ಏಪ್ರಿಲ್‌ನಿಂದ ಹೊಸದಾಗಿ ವಿದ್ಯುತ್ ಸಂಪರ್ಕಗಳನ್ನು ನೀಡಿರಲಿಲ್ಲ. ಸಮಸ್ಯೆಯ ತೀವ್ರತೆಯನ್ನು ಅರಿತ ಬಳಿಕ ಸರ್ಕಾರವು 1,200 ಚದರ ಅಡಿ ವಿಸ್ತೀರ್ಣದ ಒಳಗಿನ ನಿವೇಶನಗಳಲ್ಲಿ ನಿರ್ಮಿಸಿರುವ ವಸತಿ ಕಟ್ಟಡಗಳಿಗೆ ಒ.ಸಿಯಿಂದ ವಿನಾಯಿತಿ ನೀಡಿದೆ. ಇದರಿಂದ ನಗರ ಪ್ರದೇಶದ ಕೆಲವರಿಗಷ್ಟೇ ಉಪಯೋಗ ಆಗಿದೆ. ಈಗಲೂ ಲಕ್ಷಾಂತರ ಅರ್ಜಿಗಳು ಇತ್ಯರ್ಥಕ್ಕಾಗಿ ಕಾಯುತ್ತಿವೆ ಎಂದು ಗುತ್ತಿಗೆದಾರರೊಬ್ಬರು ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯೆಗಾಗಿ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತ ಅವರಿಗೆ ಕರೆ ಮಾಡಿದರೂ, ಸ್ವೀಕರಿಸಲಿಲ್ಲ.

ರೇಣುಕಾಚಾರ್ಯ ಜಯಂತಿ: ಸಚಿವ ತಂಗಡಗಿ ಅಭಿಮತ

‘ಜಾತಿ ಭೇದವಿಲ್ಲದೆ ಲಿಂಗ ದೀಕ್ಷೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗದ್ಗುರು ರೇಣುಕಾಚಾರ್ಯರು ಜಾತಿ ಭೇದವಿಲ್ಲದೇ ಎಲ್ಲರಿಗೂ ಲಿಂಗ ದೀಕ್ಷೆಯನ್ನು ನೀಡುವ ಮೂಲಕ ವೀರಶೈವ ತತ್ವವನ್ನು ಬೋಧಿಸಿದ್ದರು’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಭಾನುವಾರ ಆಯೋಜಿಸಿದ್ದ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗ ಮಾನೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಸತ್ಯ ಮತ್ತು ಶಾಂತಿಯ ತಳಹದಿಯ ಮೇಲೆ ಸುಸಂಸ್ಕೃತ ಸಮಾಜ ನಿರ್ಮಿಸಲು ಜಗದ್ಗುರು ರೇಣುಕಾಚಾರ್ಯರು ಶ್ರಮಿಸಿದ್ದಾರೆ. ತೆಲಂಗಾಣಕ್ಕೆ ಸೇರಿದ ಕೊಲ್ಲಿಪಾಕಿ ಎಂಬ ಗ್ರಾಮದಲ್ಲಿ ವಿವಿಧ ಸಮುದಾಯಕ್ಕೆ ಸೇರಿದ 18 ಮಠಗಳನ್ನು ಸ್ಥಾಪಿಸುವ ಮೂಲಕ ಸಾಮಾಜಿಕ ಕ್ರಾಂತಿಯನ್ನು ಮಾಡಿದ್ದರು. ಧಾರ್ಮಿಕ ಸಿದ್ಧಾಂತದ ಜೊತೆಗೆ ಸೈದ್ಧಾಂತಿಕ, ಸಾಮಾಜಿಕ ಮತ್ತು ಶೈಕ್ಷಣಿಕ, ಮಹಿಳೆಯರ ಕಲ್ಯಾಣಕ್ಕೂ ಒತ್ತು ನೀಡಿದ್ದರು’ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ (ಎಡದಿಂದ) ಮಾಜಿ ಮೇಯರ್ ಬಿ.ಎಸ್. ಪುಟ್ಟರಾಜು, ಈಶ್ವರ ಖಂಡ್ರೆ, ರೇವಣ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ಮತ್ತು ಶಿವರಾಜ ಎಸ್. ತಂಗಡಗಿ ಅವರು ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಅರಣ್ಯ ಸಚಿವ ಈಶ್ವರ ಖಂಡ್ರೆ ಮಾತನಾಡಿ, ‘ವೀರಶೈವ ಲಿಂಗಾಯತ ಮಠಮಾನ್ಯಗಳು ಸರ್ವ ಧರ್ಮ, ಜಾತಿ, ಜನಾಂಗದವರಿಗೂ ಆಶ್ರಯ, ಅನ್ನ ಮತ್ತು ಶಿಕ್ಷಣ ನೀಡುವ ಮೂಲಕ ದೇಶದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿವೆ’ ಎಂದರು.

ಗುಬ್ಬಿಯ ದೊಡ್ಡಗುಣಿ ರಂಭಾಪುರಿ ಶಾಖಾ ಮಠದ ರೇವಣ ಸಿದ್ಧೇಶ್ವರ ಸ್ವಾಮೀಜಿ, ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಘಟಕದ ಮಹಿಳಾ ಅಧ್ಯಕ್ಷೆ ವೀಣಾ ಕಾಶಪ್ಪನವರ್, ಪತ್ರಕರ್ತ ಪ್ರಶಾಂತ್ ರಿಪ್ಪನ್‌ಪೇಟೆ, ರೇಣುಕಾಚಾರ್ಯ ವಿದ್ಯಾ ಸಂಸ್ಥೆಯ ಉಪಾಧ್ಯಕ್ಷ ಎಸ್.ವಿ. ರಾಜೇಂದ್ರ ಪ್ರಸಾದ್ ಉಪಸ್ಥಿತರಿದ್ದರು.

ಕಿಸಾನ್ ಸ್ವರಾಜ್ ಸಮ್ಮೇಳನ ಸಮಾರೋಪ: ಶ್ರೀಧರ್ ರಾಧಾಕೃಷ್ಣನ್ ಆಗ್ರಹ

‘ಬೀಜ ಉತ್ಪಾದನೆ ಹಕ್ಕನ್ನು ರೈತರಿಗೇ ಉಳಿಸಿ’

ಪ್ರಜಾವಾಣಿ ವಾರ್ತೆ

ಮೈಸೂರು: ‘ರೈತರ ಜ್ಞಾನ, ಸಾರ್ವಭೌಮತೆಯನ್ನು ವಾಣಿಜ್ಯ ಒಪ್ಪಂದಗಳ ಮೂಲಕ ಮತ್ತೊಂದು ದೇಶಕ್ಕೆ ಒತ್ತೆ ಇಡಬೇಡಿ. ಸುಳ್ಳು ಹೇಳಬೇಡಿ. ಬೀಜ ಮಸೂದೆಯಲ್ಲಿ ಬಿತ್ತನೆ ಬೀಜ ಉತ್ಪಾದಿಸುವ ಹಕ್ಕನ್ನು ರೈತರಿಗೇ ಉಳಿಸಿ’ ಎಂದು ‘ಆಶಾ–ಕಿಸಾನ್ ಸ್ವರಾಜ್’ ಸಂಸ್ಥೆಯ ಸದಸ್ಯ ಶ್ರೀಧರ್ ರಾಧಾಕೃಷ್ಣನ್ ಆಗ್ರಹಿಸಿದರು.

ಇಲ್ಲಿನ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ಭಾನುವಾರ ಮುಕ್ತಾಯವಾದ ‘ಕಿಸಾನ್ ಸ್ವರಾಜ್ ಸಮ್ಮೇಳನ’ದ ಸಮಾರೋಪ ಭಾಷಣ ಮಾಡಿದರು.

‘ಭಾರತವು, ಅಮೆರಿಕ, ಐರೋಪ್ಯ ಒಕ್ಕೂಟದೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳು ರೈತ ವಿರೋಧಿಯಾಗಿವೆ. ದೇಶದ ಕೃಷಿ ನೀತಿಗಳನ್ನೇ ಬದಲಿಸಲಿವೆ. ಬಿತ್ತನೆ ಬೀಜ– ಕೃಷಿ ಮಾರುಕಟ್ಟೆಯ ನಿಯಂತ್ರಣ, ಜೀವವೈವಿಧ್ಯ ನಾಶ, ಜೀನ್ ಎಡಿಟಿಂಗ್, ಹೈಬ್ರಿಡ್ ಬೆಳೆಗೆ ಪ್ರೋತ್ಸಾಹ ನೀಡುವ ಅವು ರೈತರಿಗೆ ಸವಾಲು ಒಡ್ಡಲಿವೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ರೈತರ ಜೀವನ ಪ್ರಶ್ನೆಯಷ್ಟೇ ಅಲ್ಲ ದೇಶದ ಜನರು, ಭೂಮಿಯ ಉಳಿವಿನ ಪ್ರಶ್ನೆಯೂ ಆಗಿದೆ. ಸಾವಯವ, ಸುಸ್ಥಿರ ಕೃಷಿ ಬಗ್ಗೆ ಮಾತನಾಡುತ್ತಲೇ ಇಡೀ ಕೃಷಿ ವ್ಯವಸ್ಥೆಯನ್ನೂ ಅಸ್ಥಿರತೆಗೆ ಸಾಗಿಸುವ ನೀತಿಗಳನ್ನು ಕೇಂದ್ರ ಸರ್ಕಾರವು ಸರ್ವಾಧಿಕಾರಿ ಧೋರಣೆಯೊಂದಿಗೆ ರೂಪಿಸುತ್ತಿದೆ’ ಆರೋಪಿಸಿದರು.

ಲೇಖಕ ಪಾಮಯನ್, ತಮಿಳುನಾಡು ಸಾವಯವ ರೈತರ ಒಕ್ಕೂಟದ ಸೆಲ್ವಂ ರಾಮಸ್ವಾಮಿ, ‘ಆಶಾ’ (ಅಲಯನ್ಸ್ ಫಾರ್ ಸಸ್ಟೈನಬಲ್ ಆ್ಯಂಡ್ ಹೋಲಿಸ್ಟಿಕ್ ಅಗ್ರಿಕಲ್ಚರ್) ಕಾರ್ಯಕರ್ತ ನಚಿಕೇತ ಉಡುಪ ಪಾಲ್ಗೊಂಡಿದ್ದರು.

ಮುಖ್ಯಾಂಶಗಳು

- ಅಂತರರಾಷ್ಟ್ರೀಯ ಒಪ್ಪಂದದಿಂದ ರೈತರಿಗೆ ಸಂಕಷ್ಟ
- ಕೇಂದ್ರ ಸರ್ಕಾರ ನೀತಿ ವಿರುದ್ಧ ಪ್ರತಿರೋಧ ಅಗತ್ಯ
- ಕೃಷಿ ಸಾರ್ವಭೌಮತ್ವ ಉಳಿಸಲು ಹೋರಾಟ

ಭಾರತ– ಅಮೆರಿಕ ವಾಣಿಜ್ಯ ಒಪ್ಪಂದವು ರೈತರಿಗೆ ಮರಣ ಶಾಸನವಾಗಿದೆ. ಹತ್ತಿ, ಮೆಕ್ಕೆಜೋಳ, ಸೋಯಾ ಬೆಳೆಗಾರರು ತೀವ್ರ ಸಂಕಷ್ಟ ಎದುರಿಸಲಿದ್ದಾರೆ

ರವಿ ಕನ್ನೆಗಂಟಿ, ರೈತ ಹಕ್ಕುಗಳ ಕಾರ್ಯಕರ್ತ



ಮೈಸೂರಿನ ಕೆಎಸ್‌ಒಯುನಲ್ಲಿ ಭಾನುವಾರ ನಡೆದ ಕಿಸಾನ್ ಸ್ವರಾಜ್ ಸಮ್ಮೇಳನದ ಸಮಾರೋಪದಲ್ಲಿ ಐಎಎಸ್ ಅಧಿಕಾರಿ ದೈವಸೇನಾಪತಿ ಮಾತನಾಡಿದರು. ಸೆಲ್ವಂ ರಾಮಸ್ವಾಮಿ, ಜೂಲಿ ಕಾರಿಯಪ್ಪ, ರವಿ ಕನ್ನೆಗಂಟಿ, ಶ್ರೀಧರ್ ರಾಧಾಕೃಷ್ಣನ್, ಪಾಮಯನ್, ನಚಿಕೇತ ಉಡುಪ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ದುಬಾರಿ ಉಡುಪು, ವಸ್ತು ಕೊಳ್ಳುವವರು ರೈತರ ತರಕಾರಿ, ಸೊಪ್ಪಿಗೆ ಚಿಲ್ಲರೆ ಚೌಕಾಸಿ ಮಾಡುತ್ತಾರೆ. ಕೃಷಿಕರ ಸಂಕಷ್ಟಗಳು ಗ್ರಾಹಕರಿಗೆ ತಿಳಿಯುತ್ತಿಲ್ಲ

ದೈವಸೇನಾಪತಿ, ಐಎಎಸ್ ಅಧಿಕಾರಿ

ಬೆಳೆಗೆ ಉತ್ತಮ ದರ ಸಿಗಲು ರೈತರು ಸಹಕಾರ ತತ್ವದಲ್ಲಿ ಸಾವಯವ ಕೃಷಿ ಮಾಡಬೇಕು. ಮಾರುಕಟ್ಟೆಯನ್ನು ರೈತ ಸ್ವಾಮ್ಯವಾಗಿಸಬೇಕು

ಜೂಲಿ ಕಾರಿಯಪ್ಪ, ಸಾವಯವ ಕೃಷಿ ತಜ್ಞೆ

ಸಿಐಎ ನೀಡಿದ್ದ ಮಾಹಿತಿ ಆಧರಿಸಿ ದಾಳಿ

ಖಮೇನಿ ಮೇಲೆ ಹಲವು ತಿಂಗಳಿಂದ ಕಣ್ಣಿಟ್ಟಿದ್ದ ಗುಪ್ತಚರ ಸಂಸ್ಥೆ

• ದೀರ್ಘ ವ್ಯಾಪ್ತಿಯ ಕ್ಷಿಪಣಿಗಳಿಂದ ದಾಳಿ

ವಾಷಿಂಗ್ಟನ್ (ಎಎಫ್‌ಪಿ): ಅಮೆರಿಕದ ಸಿಐಎ ಗುಪ್ತಚರ ಇಲಾಖೆಯು, ಅಯಾತೊಲ್ಲಾ ಖಮೇನಿ ಅವರ ಚಲನವಲನ ಕುರಿತು ನೀಡಿದ ಸುಳಿವು, ನಿಖರವಾದ ದಾಳಿ ನಡೆಸಿ, ಅವರನ್ನು ಹತ್ಯೆ ಮಾಡುವುದಕ್ಕೆ ಅಮೆರಿಕ ಹಾಗೂ ಇಸ್ರೇಲ್‌ಗೆ ನೆರವಾಯಿತು ಎಂದು ನ್ಯೂಯಾರ್ಕ್ ಟೈಮ್ಸ್ ಭಾನುವಾರ ವರದಿ ಮಾಡಿದೆ.

'ಕಳೆದ ಹಲವು ತಿಂಗಳಿನಿಂದ ಖಮೇನಿ ಅವರ ಮೇಲೆ ಸಿಐಎ ಕಣ್ಣಿಟ್ಟಿತ್ತು. ಟೆಹರಾನ್ ಹೃದಯಭಾಗದಲ್ಲಿರುವ ತಮ್ಮ ನಿವಾಸದಲ್ಲಿ ಖಮೇನಿ, ಇರಾನ್‌ನ ಉನ್ನತ ಅಧಿಕಾರಿಗಳೊಂದಿಗೆ ಶನಿವಾರ ಬೆಳಿಗ್ಗೆ ಸಭೆ ನಡೆಸುವ ಬಗ್ಗೆ ಸಿಐಎ ಮಾಹಿತಿ ಸಂಗ್ರಹಿಸಿ, ರವಾನಿಸಿತ್ತು. ಇದರ ಆಧಾರದಲ್ಲಿಯೇ ಅಮೆರಿಕ ಹಾಗೂ ಇಸ್ರೇಲ್ ನಿಖರ ದಾಳಿ ನಡೆಸಿದವು' ಎಂದು ಮೂಲಗಳನ್ನು ಉಲ್ಲೇಖಿಸಿ ನ್ಯೂಯಾರ್ಕ್‌ ಟೈಮ್ಸ್ ವರದಿ ಮಾಡಿದೆ.

'ರಾತ್ರಿ ಹೊತ್ತಿನಲ್ಲಿ ಇರಾನ್ ಮೇಲೆ ದಾಳಿ ನಡೆಸುವುದಕ್ಕೆ ಅಮೆರಿಕ ಹಾಗೂ ಇಸ್ರೇಲ್ ಯೋಜಿಸಿದ್ದವು. ಆದರೆ, ಸಿಐಎ ಗುಪ್ತಚರ ಸಂಸ್ಥೆ ನೀಡಿದ ಮಾಹಿತಿ ಪರಿಗಣಿಸಿ, ಅವು ತಮ್ಮ ಯೋಜನೆ ಬದಲಿಸಿದವು' ಎಂದೂ ಪತ್ರಿಕೆ ವರದಿ ಮಾಡಿದೆ.

'ಸಿಐಎ ಹಂಚಿಕೊಂಡಿದ್ದ ಮಾಹಿತಿಯನ್ನು ಅಮೆರಿಕವು ಇಸ್ರೇಲ್‌ಗೆ ನೀಡಿತು. ಇದನ್ನು ಆಧರಿಸಿ, ಶನಿವಾರ ಬೆಳಿಗ್ಗೆ 6ಕ್ಕೆ (ಸ್ಥಳೀಯ ಕಾಲಮಾನ 4 ಗಂಟೆ) ಇಸ್ರೇಲ್ ಪಡೆಗಳು ಕಾರ್ಯಾಚರಣೆ ಆರಂಭಿಸಿದವು. ಬೆಳಿಗ್ಗೆ 9.40ರ ಹೊತ್ತಿಗೆ ದೀರ್ಘ ವ್ಯಾಪ್ತಿಯ ಕ್ಷಿಪಣಿಗಳಿಂದ ದಾಳಿ ನಡೆಸಿ, ಖಮೇನಿ ಹತ್ಯೆ ಮಾಡಿದವು' ಎಂದೂ ವರದಿ ಮಾಡಿದೆ.

'ಇಸ್ಲಾಮಿಕ್ ರಿಪಬ್ಲಿಕ್' ಅಂತ್ಯ: ಪಹ್ಲವಿ

ಅಯಾತೊಲ್ಲಾ ಖಮೇನಿ ಹತ್ಯೆಯನ್ನು ಇರಾನ್ (ಈ ಹಿಂದಿನ ಪರ್ಷಿಯಾ) ರಾಜರಾಗಿದ್ದ ಮೊಹಮ್ಮದ್ ರೆಝಾ ಪಹ್ಲವಿ ಪುತ್ರ ರೆಜಾ ಪಹ್ಲವಿ ಸ್ವಾಗತಿಸಿದ್ದಾರೆ.

'ಖಮೇನಿ ಹತ್ಯೆಯೊಂದಿಗೆ ಇಸ್ಲಾಮಿಕ್ ರಿಪಬ್ಲಿಕ್ ಅಂತ್ಯವಾದಂತಾಗಿದೆ. ಖಮೇನಿ ಆಳ್ವಿಕೆಯ ದಿನಗಳು ಶೀಘ್ರವೇ ಇತಿಹಾಸ ಸೇರಲಿವೆ' ಎಂದಿದ್ದಾರೆ.

ದೇಶಭ್ರಷ್ಟರಾಗಿ ಅಮೆರಿಕದಲ್ಲಿ ವಾಸಿಸುತ್ತಿರುವ ರೆಝಾ, 'ಅಲ್ಲಿನ ಪ್ರಸ್ತುತ ವ್ಯವಸ್ಥೆಯ ಭಾಗವಾಗಿರುವ ವ್ಯಕ್ತಿಯನ್ನೇ ಖಮೇನಿ ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡಿದಲ್ಲಿ ಅದು ಕಾನೂನುಬಾಹಿರ ಆಗಲಿದೆ' ಎಂದು ಪ್ರತಿಪಾದಿಸಿದ್ದಾರೆ.

ಖಮೇನಿ ಹತ್ಯೆ: ಪ್ರತೀಕಾರದ ಶಪಥ

ಒಂದನೇ ಪುಟದಿಂದ...

'ಇಸ್ರೇಲ್ ಅನ್ನು ನಾಶಪಡಿಸುವುದು ಖಮೇನಿ ಗುರಿಯಾಗಿತ್ತು. ಇದಕ್ಕಾಗಿ ಪಶ್ಚಿಮ ಏಷ್ಯಾದೆಲ್ಲೆಡೆ ತನ್ನ ಕಾರ್ಯಾಚರಣೆ ವಿಸ್ತರಿಸಿದ್ದ. ಲೆಬನಾನ್‌ನ ಶಿಯಾ ಗುಂಪು ಹಿಜ್ಬುಲ್ಲಾ ಮುಂಚೂಣಿಯಲ್ಲಿತ್ತು. ಇಸ್ರೇಲ್ ಮೇಲೆ ನಡೆದ ಉಗ್ರರ ದಾಳಿಗೆ ಖಮೇನಿಯೇ ನೇರ ಕಾರಣವಾಗಿದ್ದ. ಹೀಗಾಗಿ ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಹತರಾದ ಜನರ ರಕ್ತ ಆತನ ಕೈಗಳಿಗೆ ಮೆತ್ತಿಕೊಂಡಿತ್ತು' ಎಂದು ಐಡಿಎಫ್ ಪ್ರಕಟಣೆಯಲ್ಲಿ ತಿಳಿಸಿದೆ.

ಅಯಾತೊಲ್ಲಾ ಖಮೇನಿ ಅವರ ಸಾವಿನ ಸುದ್ದಿ ತಿಳಿದ ಬಳಿಕ ಸರ್ಕಾರದ ಬೆಂಬಲಿಗರು ಟೆಹರಾನ್‌ನಲ್ಲಿ ಜಮಾವಣೆಗೊಂಡು ಶೋಕ ವ್ಯಕ್ತಪಡಿಸಿದರು — ಎಪಿ/ಪಿಟಿಐ ಚಿತ್ರ

ಟೆಹರಾನ್ ಮೇಲೆ ಅಮೆರಿಕ ಹಾಗೂ ಇಸ್ರೇಲ್ ಪಡೆಗಳು ನಡೆಸಿದ ದಾಳಿಯಿಂದಾಗಿ ಭಾನುವಾರ ದಟ್ಟ ಹೊಗೆ ಕಾಣಿಸಿಕೊಂಡಿತು — ಎಪಿ/ಪಿಟಿಐ ಚಿತ್ರ

ಕಚ್ಚಾ ತೈಲ ಬೆಲೆ ಏರಿಕೆ ಭೀತಿ

ಒಂದನೇ ಪುಟದಿಂದ...

ಪಶ್ಚಿಮದ ದೇಶಗಳು ವಿಧಿಸಿದ ವಿವಿಧ ನಿರ್ಬಂಧಗಳ ಕಾರಣದಿಂದಾಗಿ ಭಾರತ ಮತ್ತು ಇರಾನ್ ನಡುವಿನ ವ್ಯಾಪಾರವು ಈಚಿನ ವರ್ಷಗಳಲ್ಲಿ ಕಡಿಮೆ ಆಗಿದೆ. ಆದರೆ ಬಹರೇನ್, ಕುವೈತ್, ಒಮಾನ್, ಕತಾರ್, ಸೌದಿ ಅರೇಬಿಯಾ ಮತ್ತು ಯುಎಇ ಜೊತೆಗಿನ ವ್ಯಾಪಾರ ವಹಿವಾಟು ಹೆಚ್ಚಳವಾಗಿದೆ.

ಸಮರವು ದೀರ್ಘ ಅವಧಿಗೆ ಮುಂದುವರಿದರೆ ಭಾರತದ ವ್ಯಾಪಾರ ವಹಿವಾಟುಗಳಿಗೆ ಧಕ್ಕೆ ಆಗಬಹುದು ಎಂದು ತಜ್ಞರು ಹೇಳಿದ್ದಾರೆ.

ಹೊರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿದೆ ಎಂದು ವರದಿಗಳು ಹೇಳುತ್ತಿವೆ. 'ಇಲ್ಲಿ ಉಂಟಾಗುವ ಯಾವುದೇ ಅಡಚಣೆಯು ಸರಕು ಸಾಗಣೆ ಮತ್ತು ವಿಮಾ ವೆಚ್ಚ ಹೆಚ್ಚಳಕ್ಕೆ ಕಾರಣವಾಗುತ್ತದೆ. ಅದರಿಂದಾಗಿ ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆಯು ಹೆಚ್ಚಳ ಕಾಣುತ್ತದೆ. ಇದರ ಪರಿಣಾಮವು ಭಾರತದ ಆಮದು ವೆಚ್ಚಗಳಲ್ಲಿ ನೇರವಾಗಿ ಕಾಣಿಸಿಕೊಳ್ಳುತ್ತದೆ' ಎಂದು ಜಿಟಿಆರ್‌ಐ (ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್) ಹೇಳಿದೆ.

ಈ ಯುದ್ಧದ ಕಾರಣದಿಂದಾಗಿ ಜಲಮಾರ್ಗಗಳಿಗೆ ಧಕ್ಕೆ ಆಗಿದೆ. ಇದು ಭಾರತದ ರಫ್ತುದಾರರ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 130 ಡಾಲರ್‌ವರೆಗೂ ಹೆಚ್ಚಳ ಆಗಬಹುದು. ಈ ರೀತಿ ಆದಲ್ಲಿ ಹಣದುಬ್ಬರ ಹೆಚ್ಚಬಹುದು ಎಂದು ವ್ಯಾಪಾರ ತಜ್ಞ ಬಿಸ್ವಜಿತ್ ಧರ್ ಅಂದಾಜಿಸಿದ್ದಾರೆ.

ಯುದ್ಧದ ಕಾರಣದಿಂದಾಗಿ ಹಳೆಯ ಸರಕು ಸಾಗಣೆ ಮಾರ್ಗಗಳಲ್ಲಿ ಅಡಚಣೆ ಈಗಾಗಲೇ ಕಾಣುತ್ತಿದೆ ಎಂದು ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟದ (ಎಫ್‌ಐಇಒ) ಅಧ್ಯಕ್ಷ ಎಸ್.ಸಿ. ರಲ್ಹಾನ್ ತಿಳಿಸಿದ್ದಾರೆ.

'ವಿಮಾನ ಮಾರ್ಗಗಳಲ್ಲಿ ಬದಲಾಣೆ ತರಲಾಗುತ್ತಿದೆ. ಕೆಂಪು ಸಮುದ್ರ ಮತ್ತು ಕೊಲ್ಲಿ ರಾಷ್ಟ್ರಗಳ ಸನಿಹದ ಪ್ರಮುಖ ಜಲಸಂಧಿಗಳ ಮೂಲಕ ಸಾಗುವ ಸಮುದ್ರ ಮಾರ್ಗಗಳಲ್ಲಿ ಅನಿಶ್ಚಿತ ಸ್ಥಿತಿ ಹೆಚ್ಚಾಗಿದೆ' ಎಂದು ರಲ್ಹಾನ್ ಹೇಳಿದ್ದಾರೆ.

ಕನ್ನಡಿಗರು ಸುರಕ್ಷಿತ: ಸಿ.ಎಂ

ಒಂದನೇಪುಟದಿಂದ...

'ಯಾವುದೇ ಚಿಂತೆ ಮಾಡಬೇಡಿ. ನಿಮ್ಮನ್ನು ಸ್ವದೇಶಕ್ಕೆ ಮರಳಿ ತರಲು ಎಲ್ಲ ರೀತಿಯ ವ್ಯವಸ್ಥೆ ಮಾಡಲಾಗುವುದು. ಈ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ನಡೆಸಲಾಗಿದೆ' ಎಂದು ಅವರು ಹೇಳಿದರು.

'ಇಸ್ರೇಲ್ - ಇರಾನ್ ನಡುವಿನ ಉದ್ವಿಗ್ನ ಪರಿಸ್ಥಿತಿಯಿಂದಾಗಿ ದುಬೈ ಸೇರಿದಂತೆ ಯುದ್ಧಪೀಡಿತ ಪ್ರದೇಶಗಳಲ್ಲಿ ಸಿಲುಕಿರುವ ಕನ್ನಡಿಗರ ಸದ್ಯದ ಪರಿಸ್ಥಿತಿಯ ಕುರಿತು ಮಾಹಿತಿ ಪಡೆದು, ಅವರನ್ನು ತವರಿಗೆ ವಾಪಸ್ ಕರೆ ತರುವ ಕುರಿತು ವಿದೇಶಾಂಗ ಇಲಾಖೆ ಅಧಿಕಾರಿಗಳ ಜೊತೆ ಸಂಪರ್ಕದಲ್ಲಿರುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದ್ದೇನೆ' ಎಂದೂ ಅವರು ತಿಳಿಸಿದರು.

'ಪ್ರತಿರೋಧ' ದಮನ...ದಾಳಿಗೇ ಬಲಿ

ದುಬೈ (ಎಪಿ): ಕೆಲ ದಶಕಗಳ ಹಿಂದೆ ಇರಾನ್ ಆಳುತ್ತಿದ್ದ ರಾಜ ಮೊಹಮ್ಮದ್ ರೆಝಾ ಪಹ್ಲವಿ ಅವರನ್ನು ಅಧಿಕಾರದಿಂದ ಕಿತ್ತೊಗೆದಿದ್ದ ಅಯಾತೊಲ್ಲಾ ರುಹೊಲ್ಲಾ ಖಮೇನಿ, ತೈಲ ಸಮೃದ್ಧ ರಾಷ್ಟ್ರದ ಆಡಳಿತವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡಿದ್ದರು.

ಹರಿತವಾದ ಮಾತುಗಾರಿಕೆ ಹಾಗೂ ಆ ಭಾಗದ ವರ್ಚಸ್ವಿ ನಾಯಕರಾಗಿದ್ದ ಖಮೇನಿ 1989ರಲ್ಲಿ ಮರಣ ಹೊಂದಿದ ಬಳಿಕ, ಅಯಾತೊಲ್ಲಾ ಖಮೇನಿ ಇರಾನ್‌ನ ಅಧಿಕಾರ ಚುಕ್ಕಾಣಿ ಹಿಡಿದಿದ್ದರು. ಇರಾನ್‌ಅನ್ನು ಕೊಲ್ಲಿಯಲ್ಲಿಯೇ 'ಶಕ್ತಿಕೇಂದ್ರ'ವನ್ನಾಗಿ ರೂಪಿಸಿದ್ದರು.

ಖಮೇನಿ ಅವರಿಗಿಂತ ಹೆಚ್ಚು ಅವಧಿಗೆ ಇರಾನ್ ಆಳಿದ್ದ ಖಮೇನಿ, ತಮ್ಮ ಅಧಿಕಾರಾವಧಿಯಲ್ಲಿ ಇಸ್ರೇಲ್ ಹಾಗೂ ಅಮೆರಿಕದೊಂದಿಗೆ ವೈರತ್ವ ಕಟ್ಟಿಕೊಂಡಿದ್ದರು. ಈ ದೇಶಗಳು ನಡೆಸಿದ ದಾಳಿಯಲ್ಲಿ ಹತರಾಗಿದ್ದಾರೆ. ಅವರ ಗೌರವಾರ್ಥ ಸರ್ಕಾರವು 40 ದಿನಗಳ ಶೋಕಾಚರಣೆ,7 ದಿನ ರಜೆ ಘೋಷಿಸಿದೆ.

ಖಮೇನಿ ಸ್ಥಾಪಿಸಿದ್ದ ಅರೆಸೇನಾ ಪಡೆ 'ಇರಾನ್ ರೆವಲ್ಯೂಷನರಿ ಗಾರ್ಡ್ಸ್'(ಐಆರ್‌ಜಿಸಿ) ಅವರ ಆಡಳಿತಕ್ಕೆ ಬಲ ತುಂಬಿತ್ತು.

ಇಸ್ಲಾಮಿಕ್ ಆಡಳಿತ ಜಾರಿಗೆ ಖಮೇನಿ ಒತ್ತು ನೀಡಿದ್ದರು. ಇದಕ್ಕೆ ಭಾರಿ ಪ್ರತಿರೋಧವೂ ವ್ಯಕ್ತವಾಗಿತ್ತು. ಅದರಲ್ಲೂ, ಹೆಡ್‌ಸ್ಕಾರ್ಫ್‌ಅನ್ನು ಸರಿಯಾಗಿ ಧರಿಸಿಲ್ಲ ಎಂಬ ಕಾರಣಕ್ಕೆ 2022ರಲ್ಲಿ ಮಹ್ಸಾ ಅಮಿನಿ ಎಂಬ ಯುವತಿಯನ್ನು ಪೊಲೀಸರು ಬಂಧಿಸಿದ್ದರು. ಕಸ್ಟಡಿಯಲ್ಲಿದ್ದಾಗಲೇ ಆಕೆ ಮೃತಪಟ್ಟಿದ್ದಳು. ಈ ಸಾವು ದೇಶದಾದ್ಯಂತ ಸರ್ಕಾರದ ವಿರುದ್ಧ ಆಕ್ರೋಶ ಭುಗಿಲೇಳುವಂತೆ ಮಾಡಿತ್ತು. ಸಾವಿರಾರು ಜನರು ಖಮೇನಿ ವಿರುದ್ಧ ಪ್ರತಿಭಟಿಸಿದ್ದರು.

ಪ್ರತಿಭಟನಕಾರರ ಮೇಲೆ ಭದ್ರತಾ ಪಡೆಗಳು ಗುಂಡು ಹಾರಿಸಿದ್ದರಿಂದ ನೂರಾರು ಜನರು ಮೃತಪಟ್ಟಿದ್ದು ಈಗ ಇತಿಹಾಸ.

ಈಗ ಖಮೇನಿ ಹತ್ಯೆಯಾಗಿದ್ದು ಅವರ ಉತ್ತರಾಧಿಕಾರಿ ಯಾರು ಎಂಬ ಚರ್ಚೆ ನಡೆದಿದೆ. 88 ಸದಸ್ಯ ಬಲದ 'ಅಸೆಂಬ್ಲಿ ಆಫ್ ಎಕ್ಸ್‌ಪರ್ಟ್ಸ್' ಹೊಸ ನಾಯಕನ ಆಯ್ಕೆ ಮಾಡಲಿದೆ.

'ಶತ್ರು' ಮೇಲೆ ದಾಳಿ: ಇರಾನ್

ಟೆಹರಾನ್/ಜೆರುಸಲೇಮ್/ದುಬೈ (ಎಎಫ್‌ಪಿ): ಅಮೆರಿಕ ಹಾಗೂ ಇಸ್ರೇಲ್ ತನ್ನ ಮೇಲೆ ನಡೆಸುತ್ತಿರುವ ದಾಳಿಗೆ ಪ್ರತಿಯಾಗಿ ಇರಾನ್ ಕೂಡ ಭಾನುವಾರ ದಾಳಿ ನಡೆಸಿದೆ.

ಇಸ್ರೇಲ್ ಕೇಂದ್ರ ಭಾಗದ ನಗರ ಬೆಟ್ ಶೆಮೆಷ್ ಮೇಲೆ ಇರಾನ್ ನಡೆಸಿದ ಕ್ಷಿಪಣಿಗಳ ದಾಳಿಯಲ್ಲಿ ಕನಿಷ್ಠ ಎಂಟು ಮಂದಿ ಮೃತಪಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

'ಇರಾನ್ ಉಡಾಯಿಸಿದ ಕ್ಷಿಪಣಿಯೊಂದು ನಗರದ ಕಟ್ಟಡಕ್ಕೆ ಅಪ್ಪಳಿಸಿತು. ಈ ದಾಳಿಯಲ್ಲಿ, ಎಂಟು ಜನರು ಸಾವಿಗೀಡಾದರು ಹಾಗೂ 23 ಮಂದಿ ಗಾಯಗೊಂಡಿದ್ದಾರೆ' ಎಂದು ತುರ್ತು ಸೇವೆ ಒದಗಿಸುವ ಸಂಸ್ಥೆ ಎಂಡಿಎ ಹೇಳಿದೆ.

ಇರಾಕ್ ಗಡಿಗೆ ಹೊಂದಿಕೊಂಡ, ಇರಾನ್‌ನ ಮೆಹ್ರಾನ್ ನಗರದಲ್ಲಿರುವ ಗಡಿ ಭದ್ರತಾ ಪಡೆಯ ಕೇಂದ್ರ ಕಚೇರಿ ಮೇಲೆ ಅಮೆರಿಕ ಹಾಗೂ ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ 43 ಸೈನಿಕರು ಮೃತಪಟ್ಟಿದ್ದಾರೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ.

ದಾಳಿ: ಕೊಲ್ಲಿ ರಾಷ್ಟ್ರಗಳ ವಿವಿಧ ನಗರಗಳನ್ನು ಗುರಿಯಾಗಿಸಿ ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ ಭಾರಿ ಪ್ರಮಾಣದಲ್ಲಿ ದಾಳಿ ನಡೆಸಿದೆ.

ರಿಯಾದ್, ದುಬೈ, ಅಬುಧಾಬಿ, ದೋಹಾ, ಮನಾಮ, ಇಸ್ರೇಲ್‌ನ ಟೆಲ್ ಅವೀವ್ ಹಾಗೂ ಜೆರುಸಲೇಮ್ ನಗರಗಳ ಮೇಲೆ ಕ್ಷಿಪಣಿಗಳಿಂದ ದಾಳಿ ನಡೆಸಿದೆ.

ಕೊಲ್ಲಿ ಹಾಗೂ ಇರಾಕ್‌ನ ಕುರ್ದಿಸ್ತಾನ್‌ನಲ್ಲಿರುವ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿ ದಾಳಿ ಮಾಡಿದ್ದಾಗಿ ಇರಾನ್ ಸೇನೆ ಹೇಳಿದೆ.

ಅಣ್ವಸ್ತ್ರ ಕಾರ್ಯಕ್ರಮ ವಿವಾದಕ್ಕೆ ಸಂಬಂಧಿಸಿ ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆಗೆ ಒಮಾನ್ ಮಧ್ಯಸ್ಥಿಕೆ ವಹಿಸಿತ್ತು. ಆದರೆ, ಶನಿವಾರ ಆರಂಭಿಸಿದ್ದ ಪ್ರತಿದಾಳಿ ವೇಳೆ ಒಮಾನ್‌ಅನ್ನು ಕೂಡ ಇರಾನ್ ಪಡೆಗಳು ಗುರಿಯಾಗಿಸಿದ್ದವು. ಭಾನುವಾರ ನಡೆಸಿದ ದಾಳಿಯಲ್ಲಿ ಒಮಾನ್‌ನ ದುಕಮ್ ಬಂದರು ಗುರಿಯಾಗಿಸಿ ಎರಡು ಡ್ರೋನ್‌ಗಳಿಂದ ದಾಳಿ ನಡೆಸಿತು. ಈ ಘಟನೆಯಲ್ಲಿ ಒಬ್ಬ ವಿದೇಶಿ ಕಾರ್ಮಿಕ ಮೃತಪಟ್ಟಿದ್ದಾಗಿ ಒಮಾನ್ ಸುದ್ದಿಸಂಸ್ಥೆ ವರದಿ ಮಾಡಿದೆ.

ಶೋಕ–ಸಂಭ್ರಮ: ಖಮೇನಿ ಅವರ ಹತ್ಯೆಗೆ ಇರಾನ್‌ನಲ್ಲಿ ಜನರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಅವರ ಹತ್ಯೆ ಸುದ್ದಿ ತಿಳಿಯುತ್ತಲೇ, ಟೆಹರಾನ್‌ನಲ್ಲಿ ಕೆಲವೆಡೆ ಜನರು ಗುಂಪಾಗಿ ಜಮಾಯಿಸಿ, ಶೋಕ ವ್ಯಕ್ತ ಪಡಿಸಿದರು. ತಮ್ಮ ನಾಯಕನ ಹತ್ಯೆಗೆ ರೋದಿಸಿದರು. ಟೆಹರಾನ್‌ನ ಕೆಲವಡೆ ಜನರು ಬೀದಿಗಳಿದು ಸಂಭ್ರಮಿಸಿದ್ದಾರೆ.

ಯುದ್ಧ:ದುಬೈನಲ್ಲಿ ಸಿಲುಕಿದ ಕನ್ನಡಿಗರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇರಾನ್–ಇಸ್ರೇಲ್ ನಡುವೆ ಯುದ್ಧ ಹಿನ್ನೆಲೆ ವಿಮಾನ ಸೇವೆಗಳು ರದ್ದಾದ ಕಾರಣ ಪ್ರವಾಸ ಸೇರಿದಂತೆ ವಿವಿಧ ಕಾರ್ಯಗಳಿಗಾಗಿ ಅರಬ್ ರಾಷ್ಟ್ರಗಳಿಗೆ ತೆರಳಿದ್ದ ರಾಜ್ಯದ ವಿವಿಧ ಜಿಲ್ಲೆಗಳ ಜನರು ದುಬೈ ವಿಮಾನ ನಿಲ್ದಾಣದಲ್ಲಿ ಸಿಲುಕಿದ್ದಾರೆ.

ಸಿಂಧನೂರು (ರಾಯಚೂರು ಜಿಲ್ಲೆ) ವರದಿ: ಪ್ರಶಸ್ತಿ ಸ್ವೀಕರಿಸುವ ಕಾರಣಕ್ಕಾಗಿ ದುಬೈಗೆ ತೆರಳಿದ್ದ ಸಿಂಧನೂರಿನ ಸಹನಾ ಆಸ್ಪತ್ರೆಯ ಮಕ್ಕಳ ತಜ್ಞ ಡಾ.ಕೆ. ಶಿವರಾಜ ಮತ್ತು ಅವರ ಪತ್ನಿ ಜ್ಯೋತಿ ಅವರು ದುಬೈ ವಿಮಾನ ನಿಲ್ದಾಣದಲ್ಲಿ ಸಿಲುಕಿದ್ದಾರೆ.

ಫೆ.24ರಂದು ಅವರು ಬಳ್ಳಾರಿಯಿಂದ ತೆರಳಿದ್ದರು. ಫೆ.28ಕ್ಕೆ ವಾಪಸ್‌ ಆಗಬೇಕಿತ್ತು.

ದೂರವಾಣಿ ಮೂಲಕ 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಡಾ. ಶಿವರಾಜ ಅವರು 'ರಾಜ್ಯದ 70 ಮಂದಿ ಸದ್ಯ ದುಬೈನ ಖಾಸಗಿ ಹೋಟೆಲ್ ಒಂದರಲ್ಲಿ ಸುರಕ್ಷಿತವಾಗಿದ್ದೇವೆ. ಶೀಘ್ರ ಭಾರತಕ್ಕೆ ಕರೆದೊಯ್ಯುವಂತೆ ಮನವಿ ಮಾಡಿದ್ದಾರೆ.

ಬಳ್ಳಾರಿ ವರದಿ: ಪ್ರವಾಸಕ್ಕೆಂದು ದುಬೈಗೆ ತೆರಳಿದ್ದ ಬಳ್ಳಾರಿ ನಗರ ಶಾಸಕ ಭರತ್ ರೆಡ್ಡಿ ಸೇರಿ 32 ಮಂದಿ ಅಲ್ಲಿ ಸಿಲುಕಿಕೊಂಡಿದ್ದಾರೆ.

ಪ್ರವಾಸಕ್ಕೆಂದು ದುಬೈಗೆ ಹೋಗಿ ಸಿಲುಕಿರುವ ಬಳ್ಳಾರಿಯ ಮಹಿಳೆಯರು

ಭರತ್ ರೆಡ್ಡಿ ತಮ್ಮ ಕುಟುಂಬದ ಐವರೊಂದಿಗೆ ದುಬೈಗೆ ತೆರಳಿದ್ದರೆ, ಇನ್ನುಳಿದ 27 ಮಂದಿ ಖಾಸಗಿ ಏಜೆನ್ಸಿ ಮೂಲಕ ಪ್ರವಾಸಕ್ಕೆಂದು ಹೋಗಿದ್ದರು. ಅವರಲ್ಲಿ 16 ಜನ ಮಹಿಳೆಯರು, ಒಂದು ಹೆಣ್ಣುಮಗು ಇದೆ.

'ನಾವೆಲ್ಲರೂ ಸುರಕ್ಷಿತವಾಗಿದ್ದೇವೆ. ದುಬೈನಲ್ಲಿ ಸಿಲುಕಿರುವ ಬಳ್ಳಾರಿಗರನ್ನು ಸಂಪರ್ಕಿಸಿದ್ದೇನೆ. ಶನಿವಾರ ರಾತ್ರಿ ನಾವಿದ್ದ ಜಾಗದ ಬಳಿಯೇ ಶೆಲ್ ದಾಳಿ ನಡೆಯಿತು. ಆದರೆ ನಮಗೇನೂ ಆಗಿಲ್ಲ' ಎಂದು ದುಬೈನಲ್ಲಿರುವ ಶಾಸಕ ನಾರಾ ಭರತ್‌ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ದುಬೈನಲ್ಲಿ ಸಿಲುಕಿರುವ ಬಳ್ಳಾರಿಯವರು 'ಇಲ್ಲಿ ಉಳಿದುಕೊಳ್ಳಲು ಕಷ್ಟವಾಗುತ್ತಿದೆ. ಹೋಟೆಲ್‌ಗಳಲ್ಲಿ ದರ ದುಬಾರಿಯಾಗಿದೆ. ನಮ್ಮ ಬಳಿ ಹಣವೂ ಇಲ್ಲ. ಶಾಸಕರಾದ ಭರತ್ ರೆಡ್ಡಿ ಮತ್ತು ಬಿ.ನಾಗೇಂದ್ರ ನಮ್ಮ ನೆರವಿಗೆ ಬರಬೇಕು' ಎಂದು ವಿಡಿಯೊ ಸಂದೇಶದ ಮೂಲಕ ತಿಳಿಸಿದ್ದಾರೆ.

ತುಮಕೂರು ವರದಿ: ಜಿಲ್ಲೆಯ ಒಂದೇ ಕುಟುಂಬದ ಮೂವರು ಸೇರಿ ನಾಲ್ವರು ಇರಾನ್ ಮತ್ತು ದುಬೈನಲ್ಲಿ ಸಿಲುಕಿದ್ದಾರೆ.

ಗುಬ್ಬಿ ತಾಲ್ಲೂಕಿನ ಡಿ.ರಾಂಪುರದ ಆರ್.ಎಸ್.ಮನೋಜ್ ಇರಾನ್‌ನ ನಗರವೊಂದರಲ್ಲಿ ಸಿಲುಕಿದ್ದಾರೆ. ತುಮಕೂರಿನ ಯೋಗೇಶ್ವರ್, ಪತ್ನಿ ಎಚ್.ಎಸ್.ಶಿವಪ್ರತಿ, ಪುತ್ರ ವೈ.ಉದಿತ್ ಶ್ರೀ ದುಬೈನಲ್ಲಿ ಉಳಿದುಕೊಂಡಿದ್ದಾರೆ. ಮೂವರು ಖಾಸಗಿ ಕಾರ್ಯಕ್ರಮದ ನಿಮಿತ್ತ ಬುಧವಾರ ದುಬೈಗೆ ತೆರಳಿದ್ದರು.

ಮನೋಜ್ ಎಂಟು ತಿಂಗಳಿನಿಂದ ಇರಾನ್ ನಗರವೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. 'ಶುಕ್ರವಾರ ರಾತ್ರಿ ಕೊನೆಯದಾಗಿ ಮಗನ ಜತೆ ಮಾತನಾಡಿದ್ದೆ. ಈಗ ನಂಬರ್ ಸಂಪರ್ಕಕ್ಕೆ ಸಿಗುತ್ತಿಲ್ಲ' ಎಂದು ತಾಯಿ ಲೀಲಾವತಿ ಪ್ರತಿಕ್ರಿಯಿಸಿದ್ದಾರೆ.

'ಸುರಕ್ಷಿತವಾಗಿದ್ದೇವೆ'

ಪುಷ್ಪಾ ಅಮರ್‌ನಾಥ್

ಮೈಸೂರು ವರದಿ: ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಮೈಸೂರಿನ ಪುಷ್ಪಾ ಅಮರನಾಥ್ ದುಬೈನಲ್ಲಿ ಸಿಲುಕಿದ್ದಾರೆ. 'ಪ್ರಶಸ್ತಿ ಪ್ರದಾನ ಸಮಾರಂಭವೊಂದರಲ್ಲಿ ಪಾಲ್ಗೊಳ್ಳಲೆಂದು ದುಬೈಗೆ ಬಂದಿದ್ದೆ. ದುಬೈನಲ್ಲಿ ವಿಮಾನಗಳ ಹಾರಾಟ ಸ್ಥಗಿತಗೊಂಡಿದೆ. ಹೀಗಾಗಿ, ಇಲ್ಲೇ ಹೋಟೆಲ್‌ವೊಂದರಲ್ಲಿ ತಂಗಿದ್ದೇವೆ. ನಾವೆಲ್ಲರೂ ಸುರಕ್ಷಿತವಾಗಿದ್ದೇವೆ' ಎಂದು ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.

ಸಂತ್ರಸ್ತರಿಗೆ ಸಂಪರ್ಕಿಸಲು ಸಂಖ್ಯೆ

ಬೆಂಗಳೂರು: ಪಶ್ಚಿಮ ಏಷ್ಯಾ ಮತ್ತು ಕೊಲ್ಲಿ ದೇಶಗಳ ಯುದ್ಧಪೀಡಿತ ಪ್ರದೇಶಗಳಲ್ಲಿ ಸಿಲುಕಿಕೊಂಡಿರುವವರು ಆಯಾ ದೇಶಗಳ ನಿಯಂತ್ರಣ ಕೊಠಡಿಯನ್ನು ಸಂಪರ್ಕಿಸಬಹುದು ಎಂದು ರಾಜ್ಯ ಸರ್ಕಾರದ ಪ್ರಕಟಣೆ ತಿಳಿಸಿದೆ.

ಯಾರಾದರೂ ಕನ್ನಡಿಗರು ಸಿಲುಕಿಕೊಂಡಿದ್ದರೆ ಅಥವಾ ಅಂಥವರ ಮಾಹಿತಿ ಲಭ್ಯವಿದ್ದರೆ, ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರ (080-22340676) ಅಥವಾ ಆಯಾ ಜಿಲ್ಲೆಗಳ ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರಕ್ಕೆ ಮಾಹಿತಿ ನೀಡಬೇಕು ಎಂದೂ ತಿಳಿಸಲಾಗಿದೆ.

ವಿವಿಧ ದೇಶಗಳ ನಿಯಂತ್ರಣ ಕೊಠಡಿ ಸಂಖ್ಯೆ:

- ಕತಾರ್: 00974-55647502,
- ಬಹ್ರೇನ್: 00973-39418071,
- ಜೋರ್ಡಾನ್: 00962-770 422 276,
- ಒಮಾನ್ (ಟೋಲ್ ಫ್ರೀ) 8007 1234 (ವಾಟ್ಸಾಪ್ ಸಂಖ್ಯೆ- +968 9828 2270)
- ಇರಾಕ್: +964 771 651 1185 (ಇಂಗ್ಲಿಷ್ ಮತ್ತು ಹಿಂದಿ), +964 770 444 4899 (ಅರೇಬಿಕ್),
- ಕುವೈತ್: +965 65501946,
- ಪ್ಯಾಲೆಸ್ಟೀನ್: +970 592916418

'ಸುರಕ್ಷಿತವಾಗಿ ಕರೆತರಲು ಕ್ರಮ'

ಖಮೇನಿ ಹತ್ಯೆ; ಮುಖ್ಯಮಂತ್ರಿ ಸಿದ್ದರಾಮಯ್ಯ ಖಂಡನೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ದುಬೈನಲ್ಲಿ ಸಿಲುಕಿರುವ ಕನ್ನಡಿಗರನ್ನು ಸುರಕ್ಷಿತವಾಗಿ ಕರೆತರುವ ವಿಚಾರವಾಗಿ ಮುಖ್ಯಕಾರ್ಯದರ್ಶಿ ಜೊತೆ ಮಾತನಾಡಿದ್ದೇನೆ. ವಿದೇಶಾಂಗ ಸಚಿವಾಲಯದೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ. ದುಬೈ ವಿಮಾನ ನಿಲ್ದಾಣ ಸದ್ಯ ಮುಚ್ಚಿದೆ. ಅದು ತೆರವು ಆಗುತ್ತಿದ್ದಂತೆಯೇ ಯಾರಿಗೂ ತೊಂದರೆ ಆಗದಂತೆ ಅಲ್ಲಿದ್ದವರನ್ನು ವಾಪಾಸ್ ಕರೆತರುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಅವರ ಜೊತೆ ಮಾತನಾಡಿದ್ದೇನೆ. ಅವರು ಹೋಟೆಲ್‌ನಲ್ಲಿ ಆರಾಮವಾಗಿ ಇದ್ದಾರಂತೆ. ಭೋಜೇಗೌಡ, ಪುಷ್ಪಾ ಅಮರನಾಥ್ ಸೇರಿ ಅಲ್ಲಿರುವ ಎಲ್ಲ ಭಾರತೀಯರು ಸುರಕ್ಷಿತವಾಗಿದ್ದಾರೆ' ಎಂದು ಭಾನುವಾರ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಒಂದು ಕಡೆ ಶಾಂತಿಮಂತ್ರ ಹೇಳುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇನ್ನೊಂದು ಕಡೆ ಯುದ್ಧ ಮಾಡುತ್ತಾರೆ. ಈ ರೀತಿಯ ತದ್ವಿರುದ್ಧ ನಿಲುವನ್ನು ತೀವ್ರವಾಗಿ ಖಂಡಿಸುತ್ತೇನೆ' ಎಂದರು.

'ಇರಾನ್‌ನ ನಾಯಕ ಅಯಾತೊಲ್ಲಾ ಅಲಿ ಖಮೇನಿ ಅವರನ್ನು ಹತ್ಯೆ ಮಾಡಿರುವುದು ಖಂಡನೀಯ. ಅವರ ಆತ್ಮಕ್ಕೆ ಚಿರಶಾಂತಿ ಕೋರುತ್ತೇನೆ' ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಶಾಸಕರಾದ ಎಸ್.ಎನ್. ಚನ್ನಬಸಪ್ಪ, ಡಿ.ಎಸ್. ಅರುಣ್, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಆರ್. ಪ್ರಸನ್ನಕುಮಾರ್ ಇದ್ದರು.

'ಕೇಂದ್ರ ಸರ್ಕಾರ ರಕ್ಷಣೆ ಮಾಡಬೇಕು'

ಬೆಂಗಳೂರು: 'ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ಈಗ ನಡೆಯುತ್ತಿರುವ ಯುದ್ಧ ಸರಿಯಲ್ಲ. ಸೌದಿ, ದುಬೈ ಮುಂತಾದ ಕಡೆ ಸಿಲುಕಿರುವ ಭಾರತೀಯ ನಾಗರಿಕರನ್ನು ಕೇಂದ್ರ ಸರ್ಕಾರ ರಕ್ಷಣೆ ಮಾಡಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಯುದ್ಧಪೀಡಿತ ಪ್ರದೇಶಗಳಲ್ಲಿ ಸಿಲುಕಿರುವ ಭಾರತೀಯರು, ಕನ್ನಡಿಗರಿಗೆ ಧೈರ್ಯ ತುಂಬುವ ಕೆಲಸ ನಾವು ಮಾಡುತ್ತೇವೆ. ನಾಗರಿಕರ ರಕ್ಷಣೆಗೆ ಯಾವ ರೀತಿಯಲ್ಲಿ ಒತ್ತಡ ಹೇರಬೇಕೊ, ಆ ಕೆಲಸವನ್ನೂ ಮಾಡುತ್ತೇವೆ. ಅಲ್ಲಿರುವ ಕನ್ನಡ ಸಂಘಟನೆಗಳು ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಬೇಕು' ಎಂದರು.

'ಪಕ್ಷದ ಶಾಸಕರಾದ ಎ.ಸಿ. ಶ್ರೀನಿವಾಸ್, ಭರತ್ ರೆಡ್ಡಿ ಅವರ ಕುಟುಂಬ, ವಿಧಾನ ಪರಿಷತ್ ಜೆಡಿಎಸ್ ಸದಸ್ಯ ಭೋಜೇಗೌಡ ಸೇರಿದಂತೆ ಅನೇಕರು ದುಬೈನಲ್ಲಿ ಸಿಲುಕಿಕೊಂಡಿದ್ದಾರೆ. ಅನೇಕ ಪರಿಚಿತರಿಂದ ವ್ಯಾಪಕವಾಗಿ ಕರೆಗಳು ಬರುತ್ತಿವೆ. ನಮ್ಮ ಜೊತೆ ವ್ಯವಹಾರ ನಡೆಸುವವರು, ಪರಿಚಿತರು ಗಾಬರಿಯಾಗಿದ್ದಾರೆ. ಆತಂಕ ಪಡುವುದು ಬೇಡವೆಂದು ಹೇಳಿದ್ದೇನೆ' ಎಂದರು.

'ಅಮೆರಿಕ ಯುದ್ಧವನ್ನು ನಿಲ್ಲಿಸಬೇಕಿದೆ. ಈ ಯುದ್ಧದಿಂದ ಭಾರತಕ್ಕೂ ಗಂಡಾಂತರವಾಗಲಿದೆ' ಎಂದೂ ಹೇಳಿದರು.

'ಯುಎಇ ಜೊತೆಗೆ ಭಾರತ ನಿಲ್ಲಲಿದೆ'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ರಾತ್ರಿ ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಝಾಯೇದ್ ಅಲ್ ನಹ್ಯಾನ್ ಅವರ ಜೊತೆಗೆ ದೂರವಾಣಿ ಮಾತುಕತೆ ನಡೆಸಿದರು.

ಕೊಲ್ಲಿ ರಾಷ್ಟ್ರಗಳ ಮೇಲಿನ ದಾಳಿಯನ್ನು ತೀವ್ರವಾಗಿ ಖಂಡಿಸಿದ ಪ್ರಧಾನಿ ನರೇಂದ್ರ ಮೋದಿ, ಸಂಕಷ್ಟದ ಸಮಯದಲ್ಲಿ ಯುಎಇ ಜೊತೆ ಭಾರತವು ಗಟ್ಟಿಯಾಗಿ ನಿಲ್ಲಲಿದೆ ಎಂದು ಈ ವೇಳೆ ಭರವಸೆ ನೀಡಿದ್ದಾರೆ.

'ಕೊಲ್ಲಿ ರಾಷ್ಟ್ರಗಳಲ್ಲಿ ನೆಲಸಿರುವ ಭಾರತೀಯರನ್ನು ನೋಡಿಕೊಂಡಿದ್ದಕ್ಕಾಗಿ ಧನ್ಯವಾದ ತಿಳಿಸಿರುವ ಅವರು, ಸಂಘರ್ಷ ಕೊನೆಗೊಳಿಸಿ, ಪ್ರಾದೇಶಿಕ ಶಾಂತಿ, ಭದ್ರತೆ ಹಾಗೂ ಸ್ಥಿರತೆ ಸ್ಥಾಪಿಸುವ ಪ್ರಯತ್ನಕ್ಕೆ ಭಾರತವು ಸಹಕಾರ ನೀಡಲಿದೆ' ಎಂದು ಭರವಸೆ ನೀಡಿದ್ದಾರೆ.

ನವದೆಹಲಿಯಲ್ಲಿ ಭಾನುವಾರ ರಾತ್ರಿ ನಡೆದ ಭದ್ರತೆ ಕುರಿತ ಸಂಪುಟ ಸಮಿತಿ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ ಸಿಂಗ್, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್, ರಕ್ಷಣಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್, ವಿದೇಶಾಂಗ ಇಲಾಖೆ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಸೇರಿದಂತೆ ಇತರೆ ಅಧಿಕಾರಿಗಳು ಭಾಗಿಯಾಗಿದ್ದರು—ಪಿಟಿಐ ಚಿತ್ರ

ಇರಾನ್‌ನ 9 ನೌಕೆಗಳು ನಾಶ: ಟ್ರಂಪ್

ದುಬೈ (ಎಪಿ): ಇರಾನ್ ನೌಕಾಪಡೆಯ 9 ಹಡಗುಗಳ ಮೇಲೆ ದಾಳಿ ನಡೆಸಿ ನಾಶಪಡಿಸಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಹೇಳಿದ್ದಾರೆ.

ಇರಾನ್ ನೌಕಾಪಡೆಯ ಉಳಿದ ಹಡಗುಗಳು ಶೀಘ್ರದಲ್ಲಿಯೇ ಸಮುದ್ರದ ತಳ ತಲುಪಲಿವೆ. ಇದಲ್ಲದೆ, ನಡೆಸಿದ ಮತ್ತೊಂದು ದಾಳಿಯಲ್ಲಿ ಇರಾನ್ ನೌಕಾಪಡೆಯ ಪ್ರಧಾನ ಕಚೇರಿಗೆ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಹೇಳಿದ್ದಾರೆ.

'ಮಾತುಕತೆ ಬಯಸುತ್ತಿರುವ ಇರಾನ್': ಇರಾನ್‌ನ ಹೊಸ ಸಂಭಾವ್ಯ ನಾಯಕತ್ವವು ಅಮೆರಿಕದ ಜತೆ ಮಾತುಕತೆ ಬಯಸಿದೆ ಎಂದು ಶ್ವೇತಭವನದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೊಲ್ಲಿ ರಾಷ್ಟ್ರಗಳಲ್ಲಿ, ಇಸ್ರೇಲ್‌ನಲ್ಲಿ ನೆಲಸಿದ್ದಾರೆ ಕರಾವಳಿ ಜಿಲ್ಲೆಗಳ ಸಾವಿರಾರು ಮಂದಿ

ಕರಾವಳಿಯಿಂದ ತೆರಳಿದವರಲ್ಲಿ ತಳಮಳ

ಪ್ರಜಾವಾಣಿ ವಾರ್ತೆ

ಮಂಗಳೂರು: ರಾಜ್ಯದ ಕರಾವಳಿ ಜಿಲ್ಲೆಗಳ ಸಾವಿರಾರು ಮಂದಿ ಉದ್ಯೋಗದ ಸಲುವಾಗಿ ಕೊಲ್ಲಿ ರಾಷ್ಟ್ರಗಳಲ್ಲಿ ನೆಲೆಸಿದ್ದಾರೆ. ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕ ದಾಳಿಯಿಂದಾಗಿ ಉಂಟಾದ ಉದ್ವಿಗ್ನ ಸ್ಥಿತಿಯಿಂದ ಕಳವಳಗೊಂಡಿದ್ದಾರೆ. ಅಲ್ಲಿನ ಪರಿಸ್ಥಿತಿ ಕುರಿತು ಕೆಲವರು 'ಪ್ರಜಾವಾಣಿ' ಜೊತೆ ಹಂಚಿಕೊಂಡರು.

'ನಾವಿರುವ ಪ್ರದೇಶದಿಂದ ಸುಮಾರು 35 ಕಿ.ಮೀ ದೂರದ ಉದೇದ್‌ನಲ್ಲಿ ಅಮೆರಿಕದ ಸೇನಾ ನೆಲೆ ಇದೆ. ಅದನ್ನು ಗುರಿಯಾಗಿಸಿ ಹೆಚ್ಚು ಕ್ಷಿಪಣಿ ಹಾಗೂ ಡ್ರೋನ್ ದಾಳಿಗಳು ನಡೆದಿವೆ. ಆ ಸೇನಾ ನೆಲೆಯಲ್ಲಿ ಅತ್ಯಾಧುನಿಕ ಕ್ಷಿಪಣಿ ನಿರೋಧಕ ವ್ಯವಸ್ಥೆ ಇದೆ. ಕ್ಷಿಪಣಿ ಹಾಗೂ ಡ್ರೋನ್‌ಗಳನ್ನು ಹೊಡೆದುರುಳಿಸುವ ದೃಶ್ಯಗಳನ್ನು ಎರಡು ದಿನಗಳಿಂದ ನೋಡುತ್ತಿದ್ದೇವೆ. ಅಲ್ಲಲ್ಲಿ ಹೊಗೆಯಾವರಿಸಿದ ದೃಶ್ಯಗಳು ಕಾಣಿಸುತ್ತಿವೆ. ಅರ್ಜೆಂಟೀನಾದವರ ಶಿಬಿರವೊಂದರ ಬಳಿ ಕ್ಷಿಪಣಿಯ ಅವಶೇಷ ಬಿದ್ದು 16 ಮಂದಿ ಗಾಯಗೊಂಡಿದ್ದಾರೆ. ನಾವಿರುವ ಪ್ರದೇಶದಲ್ಲಿ ಯಾವುದೇ ಸಾವು ನೋವಾಗಿಲ್ಲ' ಎಂದು ಕತಾರ್‌ನ ದೋಹಾ ಸಮೀಪದ ವುಕೈರ್ ಎಝ್ದಾನ್‌ನಲ್ಲಿ ನೆಲೆಸಿರುವ ಉಜಿರೆಯ ಯಾಹ್ಯಾ ಅಬ್ಬಾಸ್ ತಿಳಿಸಿದರು.

'ಸಾಧ್ಯವಾದಷ್ಟು ಮನೆಯ ಒಳಗಡೆಯೇ ಇರಬೇಕು. ಹೊರಗಡೆ ಸುಖಾಸುಮ್ಮನೆ ಅಡ್ಡಾಡಬಾರದು. ಕಿಟಕಿ, ಬಾಗಿಲುಗಳಿಂದ ದೂರವೇ ಇರಿ ಎಂದು ಇಲ್ಲಿನ ಸರ್ಕಾರ ಸೂಚನೆ ನೀಡಿದೆ. ಅಪಾಯದ ಮುನ್ಸೂಚನೆ ಸಿಕ್ಕಾಗ ಸಮೀಪದ ಸುರಕ್ಷಿತ ನೆಲೆಗಳಲ್ಲಿ ಆಶ್ರಯಪಡೆಯಿರಿ ಎಂದು ನಿರ್ದೇಶನ ನೀಡಿದೆ' ಎಂದರು.

'ಇಲ್ಲಿ ಕಚೇರಿಗಳು ಮುಚ್ಚಿದ್ದು, ಕಾರ್ಮಿಕರಿಗೆ ರಜೆ ನೀಡಲಾಗಿದೆ. ಆದರೆ, ಆಸ್ಪತ್ರೆಗಳು, ಸೂಪರ್ ಮಾರುಕಟ್ಟೆಗಳು ದಿನದ 24 ಗಂಟೆಯೂ ಕಾರ್ಯ ನಿರ್ವಹಿಸುತ್ತಿವೆ. ಸೂಪರ್ ಮಾರುಕಟ್ಟೆಗಳಲ್ಲಿ ಅಗತ್ಯ ಆಹಾರ ಪದಾರ್ಥಗಳನ್ನು ದಾಸ್ತಾನು ಮಾಡಿಕೊಳ್ಳಲಾಗಿದೆ. ಶಾಲಾ ಕಾಲೇಜುಗಳು ಮುಚ್ಚಿದ್ದು, ಪರೀಕ್ಷೆ ಮುಂದೂಡಲಾಗಿದೆ. ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿ ನಡೆಸುವುದಾಗಿ ತಿಳಿಸಲಾಗಿದೆ' ಎಂದರು.

ಕೊಲ್ಲಿ ರಾಷ್ಟ್ರಗಳ ವಿಮಾನ ನಿಲ್ದಾಣಗಳೂ ಎರಡು ದಿನಗಳಿಂದ ಮುಚ್ಚಿವೆ. ಈ ವಿಮಾನ ನಿಲ್ದಾಣಗಳ ಉದ್ಯೋಗಿಗಳಿಗೆ ರಜೆ ನೀಡಲಾಗಿದೆ.

'ನನ್ನ ಪತಿ (ಸುಜಿತ್) ದುಬೈ ಇಂಟರ್ ನ್ಯಾಷನಲ್ ವಿಮಾನ ನಿಲ್ದಾಣದಲ್ಲಿ ಉದ್ಯೋಗಿ. ಈ ವಿಮಾನ ನಿಲ್ದಾಣದ ಕಾರ್ಯಾಚರಣೆ ಸಂಪೂರ್ಣ ಸ್ಥಗಿತವಾಗಿದೆ. ಇದು ಎಷ್ಟು ದಿನ ಮುಂದುವರಿ ಯಲಿದೆಯೋ ಗೊತ್ತಿಲ್ಲ' ಎಂದು ದುಬೈನ ಬರ್ ದುಬೈ ಪ್ರದೇಶದಲ್ಲಿರುವ ಮಮತಾ ತಿಳಿಸಿದರು.

ಇಸ್ರೇಲ್ ಮೇಲೂ ಇರಾನ್ ಪ್ರತಿದಾಳಿ ನಡೆಸುತ್ತಿದ್ದು, ಅಲ್ಲಿ ನೆಲೆಸಿರುವ ರಾಜ್ಯದ ಕರಾವಳಿಯ ಜನರೂ ಕಳವಳಕ್ಕೊಳಗಾಗಿದ್ದಾರೆ.

'ಸದ್ಯಕ್ಕೆ ಸುರಕ್ಷಿತವಾಗಿವಾಗಿದ್ದೇವೆ. ಸಾರ್ವಜನಿಕ ಸಾರಿಗೆ ಬಹಳ ಕಡಿಮೆ ಇದೆ. ಕ್ಷಿಪಣಿ ದಾಳಿಗಳು ನಿರಂತರವಾಗಿ ನಡೆಯುತ್ತಿವೆ. ಅವುಗಳನ್ನು ಇಲ್ಲಿನ ಸೇನೆ ಹಿಮ್ಮೆಟ್ಟಿಸುತ್ತಿದೆ. ದಾಳಿಯ ಸುಳಿವು ಸಿಗುತ್ತಿದ್ದಂತೆಯೇ ಸೈರನ್ ಮೊಳಗಿಸಿ ಇಲ್ಲಿನ ಸರ್ಕಾರ ಮುನ್ನೆಚ್ಚರಿಕೆ ನೀಡುತ್ತಿದೆ. ಆಗ ನಾವು ಬಂಕರ್‌ಗಳಿಗೆ ತೆರಳಿ ಆಶ್ರಯ ಪಡೆಯುತ್ತಿದ್ದೇವೆ' ಎಂದು ಇಸ್ರೇಲ್ ಟೆಲ್ ಅವಿವ್ ನಗರದ ಬಳಿಯ ಹರ್ಜ್ಲಿಯಾದಲ್ಲಿ ನೆಲಸಿರುವ ಬೆಳ್ತಂಗಡಿ ಮೇಲಂತಬೆಟ್ಟುವಿನ ಪ್ರವೀಣ್ ಪಿರೇರಾ ತಿಳಿಸಿದರು.

'ವೀಸಾ ಮುಗಿದರೂ ಉಳಿಯಲು ಅವಕಾಶ'

'ವೀಸಾ ಅವಧಿ ಮುಗಿದ ಬಳಿಕವೂ ಈ ದೇಶದಲ್ಲಿ ನೆಲೆಸಿದ್ದವರು, ಪ್ರವಾಸಿ ವೀಸಾ ಅವಧಿ ಮುಗಿದವರು ಇನ್ನಷ್ಟು ದಿನ ಉಳಿದುಕೊಳ್ಳಲು ಇಲ್ಲಿನ ಸರ್ಕಾರ ಅವಕಾಶ ಕಲ್ಪಿಸಿದೆ. ವಿಮಾನ ಹಾರಾಟ ರದ್ದಾಗಿ, ವಿಮಾನ ನಿಲ್ದಾಣದಲ್ಲಿ ಸಿಲುಕಿದವರ ವಾಸ್ತವ್ಯಕ್ಕೆ ಇಲ್ಲಿನ ಸರ್ಕಾರವೇ ವ್ಯವಸ್ಥೆ ಮಾಡಿಕೊಟ್ಟಿದೆ' ಎಂದು ದುಬೈನ ಕ್ಯುಸೈಸ್ ಪ್ರದೇಶದ ನಿವಾಸಿಯಾಗಿರುವ ಕಾಸರಗೋಡು ಜಿಲ್ಲೆಯ ಅಗಲ್ಪಾಡಿಯ ವಿಜಯಕುಮಾರ್ ತಿಳಿಸಿದರು.

'ದಿನಗೂಲಿ ಕೆಲಸಗಾರರಿಗೆ ಸಮಸ್ಯೆ'

'ಇಲ್ಲಿ ಕಂಪನಿಗಳಲ್ಲಿ ಉದ್ಯೋಗದಲ್ಲಿರುವವರು ಸುರಕ್ಷಿತ. ದಾಳಿ ಆರಂಭವಾಗುವ ಮೂರು ನಾಲ್ಕು ದಿನ ಮೊದಲೇ ಅವರನ್ನು ಸುರಕ್ಷಿತ ಸ್ಥಳಗಳಿಗೆ ತಲುಪಿಸಿದ್ದಾರೆ. ಆದರೆ, ದಿನಗೂಲಿ ಕೆಲಸ ನಿರ್ವಹಿಸುವವರು, ಉಬರ್ ನಂತಹ ಸಂಸ್ಥೆಗಳಲ್ಲಿ ಚಾಲಕರು, ತಾತ್ಕಾಲಿಕ ನೆಲೆಯಲ್ಲಿ ದುಡಿಯುವ ಕಾರ್ಮಿಕರ ಸ್ಥಿತಿ ಚಿಂತಾಜನಕವಾಗಿದೆ. ಅವರಿಗೆ ಕೆಲಸವೂ ಇಲ್ಲ; ಸುರಕ್ಷತೆಯೂ ಇಲ್ಲ' ಎಂದು ಕತಾರ್‌ನಲ್ಲಿರುವ ಯಾಹ್ಯಾ ಅಬ್ಬಾಸ್ ತಿಳಿಸಿದರು.

'ಇಲ್ಲಿನ ವಿಮಾನ ನಿಲ್ದಾಣಗಳಲ್ಲಿ ಸಿಲುಕಿರುವ ಕನ್ನಡಿಗರು ವಾಸ್ತವ್ಯಕ್ಕೆ ಸಮಸ್ಯೆ ಎದುರಿಸುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ನೆರವು ಯಾಚಿಸುತ್ತಿದ್ದಾರೆ' ಎಂದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಕೆಟ್ಟದ್ದರಿಂದ ಕೆಲವರು ಮುಂದೆ ಬರುತ್ತಾರೆ. ಒಳ್ಳೆಯದರಿಂದ ಕೆಲವರು ಹಿಂದೆ ಬೀಳುತ್ತಾರೆ.

–ವಿಲಿಯಂ ಷೇಕ್ಸ್‌ಪಿಯರ್

ಸಂಪಾದಕೀಯ

ಇರಾನ್: ಅಮೆರಿಕ–ಇಸ್ರೇಲ್ ದಾಳಿ ಸಾಮ್ರಾಜ್ಯಶಾಹಿ ಭಯೋತ್ಪಾದನೆ

ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿರುವ ಭೀಕರ ದಾಳಿಯು ಉಭಯ ದೇಶಗಳು ತಮ್ಮ ಸ್ವಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ನಡೆಸಿರುವ ಸೈನಿಕ ಹಾಗೂ ಸಾಮ್ರಾಜ್ಯಶಾಹಿ ಕಾರ್ಯಾಚರಣೆಯಾಗಿದೆ. 2025ರಲ್ಲಿ ನಡೆದ ದಾಳಿಯ ಎಂಟು ತಿಂಗಳ ತರುವಾಯ ಮತ್ತೆ ನಡೆದಿರುವ ದಾಳಿಯು, ಇರಾನ್‌ನ ರಾಜಕೀಯ, ಧಾರ್ಮಿಕ ಹಾಗೂ ಸೇನಾ ನಾಯಕತ್ವ ಮತ್ತು ಅವರ ಕುಟುಂಬಗಳನ್ನು ಗುರಿಯಾಗಿಸಿಕೊಂಡಿದೆ. ಇರಾನ್‌ನ ಅತ್ಯುಚ್ಚ ನಾಯಕ ಅಯಾತೊಲ್ಲಾ ಖಮೇನಿ ಅವರನ್ನು ಹತ್ಯೆ ಮಾಡಲಾಗಿದೆ. ಗಾಜಾದಲ್ಲಿ ನಡೆದಿರುವ ಜನಾಂಗೀಯ ಹತ್ಯೆಗಳಿಗೆ ಜಡವಾಗಿರುವ ಜಗತ್ತು, ವಿಶೇಷವಾಗಿ ಪಶ್ಚಿಮ ದೇಶಗಳು, ಪ್ರಸಕ್ತ ಅಂತರರಾಷ್ಟ್ರೀಯ ಕಾನೂನುಗಳನ್ನು ಮತ್ತೆ ಉಲ್ಲಂಘಿಸಿರುವ ಅಮೆರಿಕ ಮತ್ತು ಇಸ್ರೇಲ್‌ನ ರಾಕ್ಷಸೀಯ ಕೃತ್ಯಗಳಿಂದ ಉಂಟಾಗುವ ಪರಿಣಾಮಗಳ ಬಗ್ಗೆ ವಿಚಲಿತಗೊಳ್ಳುವ ಸಾಧ್ಯತೆ ಕಡಿಮೆ. ಹಿಂದೆ ಬಳಸಿದ ತಂತ್ರಗಳನ್ನೇ ಪ್ರಸಕ್ತ ಪ್ರಹಸನದಲ್ಲೂ ಬಳಸಲಾಗುತ್ತಿದೆ. ಮೊದಲಿಗೆ ರಾಜತಾಂತ್ರಿಕ ಸಂವಾದವನ್ನು ಆರಂಭಿಸುವುದು ಹಾಗೂ ಮಾತುಕತೆಯ ಮುಖವಾಡದಡಿಯೇ ಎದುರಾಳಿಗಳನ್ನು ನಾಶಗೊಳಿಸುವ ತಂತ್ರವಿದು. ಈ ಬಾರಿ ರಾಜತಾಂತ್ರಿಕ ಮಧ್ಯವರ್ತಿಯಾಗಿ ಒಮನ್ ಭಾಗವಹಿಸಿತ್ತು ಹಾಗೂ ಮಾತುಕತೆಗಳು ಫಲಪ್ರದವಾಗುವ ಸಾಧ್ಯತೆಯೂ ಇತ್ತು. ಅಮೆರಿಕದೊಂದಿಗಿನ ಮಾತುಕತೆಯಲ್ಲಿ ಇರಾನ್ ಸಾಕಷ್ಟು ಒಪ್ಪಂದಗಳಿಗೆ ಬಂದಿತ್ತು. ಆದರೆ, ಈಗಿನ ದಾಳಿಯು ಅಮೆರಿಕ–ಒಮನ್ ಹಾಗೂ ಇರಾನ್ ನಡುವಣ ಸಂವಾದವು ಒಪ್ಪಂದದ ಸ್ವರೂಪಕ್ಕೆ ಬರುವುದನ್ನು ಹಾಳು ಮಾಡಿದೆ.

ಅಮೆರಿಕ ಮತ್ತು ಇರಾನ್ ನಡುವೆ ಮಧ್ಯವರ್ತಿಯಾಗಿ ಕಾರ್ಯ ನಿರ್ವಹಿಸಿದ್ದ ಒಮನ್‌ನ ವಿದೇಶಾಂಗ ಸಚಿವ ಬದ್ರ್–ಅಲ್–ಬುಸೈದಿ ಅವರ ಪ್ರತಿಕ್ರಿಯೆಯು, ತ್ವರಿತ ದಾಳಿಯ ಹಿಂದಿನ ಉದ್ದೇಶವನ್ನು ಬಹಿರಂಗಪಡಿಸುವಂತಿದೆ. ಅಮೆರಿಕ ಮತ್ತು ಇರಾನ್ ನಡುವಣ ಸಾಮರಸ್ಯವನ್ನು ಇಸ್ರೇಲ್ ಬಯಸುವುದಿಲ್ಲ ಹಾಗೂ ಆ ಸಂಭಾವ್ಯ ಸೌಹಾರ್ದವನ್ನು ತಡೆಯಲು ಇಸ್ರೇಲ್ ಪ್ರಯತ್ನಿಸುತ್ತದೆ ಎಂದು ಭಾವಿಸಲಾಗಿದೆ. ರಾಜತಾಂತ್ರಿಕ ಮಾತುಕತೆಗಳಿಂದ ಸಾಧ್ಯವಾಗಬಹುದಾದ ಫಲಿತಾಂಶವು, 'ಗ್ರೇಟರ್ ಇಸ್ರೇಲ್' ಗುರಿ ಸಾಧನೆಯ ಕಡೆಗಿನ 'ಜಿಯೊನಿಸ್ಟ್'ಗಳ ಸೈನಿಕ ಕಾರ್ಯಾಚರಣೆಗೆ ಅಡಚಣೆ ಉಂಟು ಮಾಡುವಂತಹದ್ದಾಗಿದೆ. ಇಸ್ರೇಲ್‌ನ ಸೈನಿಕ ಕಾರ್ಯಾಚರಣೆಯನ್ನು ವಿಫಲಗೊಳಿಸುವ ಉದ್ದೇಶದಿಂದ ನಡೆದ ಮಾತುಕತೆಗಳನ್ನು ಪ್ರಸಕ್ತ ದಾಳಿ ಹಾಳುಗೆಡವಿದೆ. ಈ ಯುದ್ಧವು ಅರಬ್ ರಾಷ್ಟ್ರಗಳೊಂದಿಗೆ ಇರಾನ್‌ಗೆ ಹಗೆತನ ಸೃಷ್ಟಿಸುವುದರೊಂದಿಗೆ, ಆ ಪ್ರದೇಶದಲ್ಲಿ ತೀವ್ರ ಅಸ್ಥಿರತೆ ಉಂಟಾಗಲು ಕಾರಣವಾಗಿದೆ. ಅಮೆರಿಕಕ್ಕೆ ಇರಾನ್ 'ಸನ್ನಿಹಿತ ಬೆದರಿಕೆ'ಯಾಗಿದೆ ಎನ್ನುವ ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ಹೇಳಿಕೆ ಈಗಾಗಲೇ ಬಳಕೆಯಾಗಿರುವ ಸವಕಲು ಚಿತ್ರಕಥೆಯಾಗಿದೆ. ವಿಶ್ವಾಸಾರ್ಹ ಪುರಾವೆಗಳಿಲ್ಲದ ಪರಮಾಣು ಶಸ್ತ್ರಾಸ್ತ್ರಗಳ ಯೋಜನೆಗಳು ಹಾಗೂ ಆಡಳಿತ ಬದಲಾವಣೆಯ ಮೂಲಕ ಇರಾನ್ ನಾಗರಿಕರಿಗೆ 'ಸ್ವಾತಂತ್ರ್ಯ' ದೊರಕಿಸಿಕೊಡುವ ಮಾತುಗಳ ಹಿಂದಿನ ಹುನ್ನಾರ ಅರ್ಥವಾಗದೆ ಇರುವಂತಹದ್ದೇನೂ ಅಲ್ಲ. ಆರ್ಥಿಕ ಸಂಕಷ್ಟ ಹಾಗೂ ನಾಗರಿಕ ಕ್ಷೋಭೆಯಲ್ಲಿ ಇರಾನ್ ಸಿಲುಕಿರುವ ಸೂಕ್ಷ್ಮ ಸಂದರ್ಭವನ್ನು ಆಕ್ರಮಣಕಾರರು ತಮ್ಮ ದಾಳಿಗೆ ಎಚ್ಚರಿಕೆಯಿಂದ ಆರಿಸಿಕೊಂಡಿದ್ದಾರೆ.

ಇರಾಕ್, ಲಿಬಿಯಾ, ಗಾಜಾ, ವೆನೆಜುವೆಲಾ ಸಾಲಿಗೆ ಈಗ ಇರಾನ್ ಸೇರಿಕೊಂಡಿದೆ. ಸಾಮ್ರಾಜ್ಯಶಾಹಿ ಕಾರ್ಯಾಚರಣೆಗೆ ದಾಳಿಕೋರರು ನೀಡುವ ಯಾವುದೇ ಕಾರಣ ಸಮರ್ಥನೀಯವಲ್ಲ.

ಅರಬ್ ಒಕ್ಕೂಟದ ಪಶ್ಚಿಮದ ಮಿತ್ರರು ಇರಾನ್ ಪರವಾಗಿ ಧ್ವನಿ ಎತ್ತದೆ ಇದ್ದರೂ, ಅವರು ಪರಿಸ್ಥಿತಿಯ ಲಾಭ ಪಡೆಯುವವರಾಗಿರುವ ಸಾಧ್ಯತೆ ಕಡಿಮೆಯಾಗಿದೆ. ಸೈನಿಕ ಕಾರ್ಯಾಚರಣೆಯಿಂದ ಆಡಳಿತದ ಬದಲಾವಣೆ ಸರಳವಾಗಿ ಸಂಭವಿಸಿರುವುದೂ ವಿರಳ. ಮತ್ತೊಂದು ಗಾಜಾ ಆಗದಂತಿರಲು ಹಾಗೂ ಪ್ಯಾಲೆಸ್ಟೀನಿಯರ ದುರ್ಗತಿ ಪಡೆಯದಿರಲು, ಪ್ರತಿ ಹೋರಾಟ ನಡೆಸುವುದು ಇರಾನ್‌ಗೆ ಅನಿವಾರ್ಯ ಎನ್ನುವಂತಾಗಿದೆ. ಖಮೇನಿ ಹತ್ಯೆಯ ನಂತರ ಇರಾನ್‌ನಲ್ಲಿ ಉಳಿದಿರುವ ನಾಯಕತ್ವ ಹಾಗೂ 'ರೆವಲ್ಯೂಷನರಿ ಗಾರ್ಡ್ಸ್' ಈಗಿನ ಸವಾಲುಗಳಿಗೆ ಹೇಗೆ ಪ್ರತಿಕ್ರಿಯಿಸಲಿದೆ ಎನ್ನುವುದು ಇರಾನ್‌ನ ಭವಿಷ್ಯವನ್ನು ನಿರ್ಧರಿಸಲಿದೆ. ಖಮೇನಿ ಅವಧಿಯಲ್ಲಿ ಇರಾನ್‌ನಲ್ಲಿ ಒಂದಷ್ಟು ಅತಿರೇಕಗಳಿದ್ದವು ಎನ್ನುವುದು ನಿಜ. ಆದರೆ, ಯಾವುದೇ ಕಾರಣವು ಅಮೆರಿಕ–ಇಸ್ರೇಲ್ ದಾಳಿಗೆ ಮತ್ತು ಹತ್ಯೆಗಳಿಗೆ ಸಮರ್ಥನೆ ಆಗಲಾರದು. ಇರಾಕ್, ಲಿಬಿಯಾ, ಸಿರಿಯಾ, ಗಾಜಾ, ಲೆಬನಾನ್ ಸೇರಿದಂತೆ ಎಲ್ಲೆಲ್ಲಿ ಅಮೆರಿಕದ ಸೇನಾಪಡೆಗಳು ಹಸ್ತಕ್ಷೇಪ ನಡೆಸಿ ಆಕ್ರಮಿಸಿಕೊಂಡಿವೆಯೋ ಆ ಪ್ರದೇಶಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಪಾಠವೊಂದಿದೆ: ಸ್ವಯಂ ನಿಯೋಜಿತ ವಿದೇಶಿ ರಕ್ಷಕರು ಸಂಘರ್ಷದ ನೆಲದಲ್ಲಿ ಸ್ಥಿರ, ಶಾಂತಿಯುತ ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ರೂಪಿಸುವುದು ಅಪರೂಪಕ್ಕಷ್ಟೇ ಸಾಧ್ಯವಾಗಿದೆ.

ಜಾಲಡಿ

ದೊಡ್ಡವರ 'ಬಟ್ಟೆ'ಗಳು!

ಈ ಅವಸರದ ಯುದ್ಧ, ಭಯ, ಎದೆ ನಡುಗಿಸುವ ವಾರ್ತೆಗಳೆಲ್ಲವೂ ದೊಡ್ಡವರ ಮಾನ ಮುಚ್ಚುವ ಬಟ್ಟೆಗಳು. ಜನ ಇಲ್ಲಿಗೆ ಎಪ್‌ಸ್ಟೈನ್ ಮತ್ತು ಆತನ ಅಜ್ಞಾತ ದ್ವೀಪವನ್ನು ಮರೆಯಲಿದ್ದಾರೆ.

ಮುನವ್ವರ್ ಜೋಗಿಬೆಟ್ಟು, ಕಥೆಗಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ

ರಾಜ್ಯದಲ್ಲಿ ಬಿಜೆಪಿಗೆ ಎಂದಿಗೂ ಬಹುಮತ ಬಂದಿಲ್ಲ. ಈ ಹಿಂದೆ ದಾರಿ ತಪ್ಪಿ ನಾವು ಅಧಿಕಾರಕ್ಕೆ ಬಂದಿದ್ದು. ಪಕ್ಷದಲ್ಲಿ ಒಂದಷ್ಟು ಶುದ್ಧೀಕರಣವಾಗಬೇಕಿದೆ.

ಕೆ.ಎಸ್. ಈಶ್ವರಪ್ಪ, ಮಾಜಿ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 2-3-2001

• ಪ್ರಾದೇಶಿಕ ಅಸಮಾನತೆ: ಉತ್ತರ ಕರ್ನಾಟಕಕ್ಕೆ ಮಾತ್ರ ಸೀಮಿತವಲ್ಲ

ನವದೆಹಲಿ, ಮಾ. 1– ಪ್ರಾದೇಶಿಕ ಅಸಮಾನತೆ ಎನ್ನುವುದು ಕೇವಲ ಉತ್ತರ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ ಎಂದು ಪ್ರಾದೇಶಿಕ ಅಸಮಾನತೆ ಅಧ್ಯಯನಕ್ಕೆ ರಚಿಸಲಾಗಿದ್ದ ಆಯೋಗದ ಅಧ್ಯಕ್ಷ ಮತ್ತು ಆರ್ಥಿಕ ತಜ್ಞ ಡಾ. ಡಿ.ಎಂ. ನಂಜುಂಡಪ್ಪ ಅವರು ಹೇಳಿದ್ದಾರೆ.

ಆಯೋಗ ನಿನ್ನೆ ಮಧ್ಯಂತರ ವರದಿಯನ್ನು ಮುಖ್ಯಮಂತ್ರಿ ಅವರಿಗೆ ನೀಡಿದೆ. ಬಜೆಟ್ ಮಂಡನೆಗೆ ಒಂದು ತಿಂಗಳು ಇರುವಾಗಲೇ ಈ ವರದಿ ನೀಡಿರುವುದರಿಂದ ರಾಜ್ಯ ಸರ್ಕಾರ ಬಜೆಟ್ ಮಂಡಿಸುವಾಗ ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಕ್ರಮಕೈಗೊಳ್ಳಬಹುದಾಗಿದೆ ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

• ವಿದ್ಯುತ್ ಕಾಯ್ದೆಗೆ ಶೀಘ್ರ ತಿದ್ದುಪಡಿ

ಬೆಂಗಳೂರು, ಮಾ. 1– ವಿದ್ಯುತ್ ಕಳ್ಳತನವನ್ನು ಶಿಕ್ಷಾರ್ಹ ಅಪರಾಧವಾಗಿ ಪರಿಗಣಿಸಲು ನಿರ್ಧರಿಸಿರುವ ಸರ್ಕಾರ, ಕರ್ನಾಟಕ ವಿದ್ಯುತ್ ಕಾಯ್ದೆಗೆ ಸದ್ಯದಲ್ಲೇ ಸೂಕ್ತ ತಿದ್ದುಪಡಿ ತರಲಿದೆ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು, ಇಂದು ವಿಧಾನ ಪರಿಷತ್ತಿಗೆ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಬಿ.ಎಸ್. ಯಡಿಯೂರಪ್ಪ ಅವರ ಪ್ರಶ್ನೆಯ ಮೇಲೆ ನಡೆದ ಚರ್ಚೆಗೆ ಅವರು ಉತ್ತರಿಸಿದರು. ವಿದ್ಯುತ್ ಕಳವು ಮತ್ತು ನಟ ಸಂಜಯ್‌ಖಾನ್ ಅವರಿಂದ ಆಗಿರುವ ವಿದ್ಯುತ್ ದುರುಪಯೋಗದ ಬಗ್ಗೆ ಸದಸ್ಯರು ಪ್ರಶ್ನೆ ಕಳುಹಿಸಿದ್ದರು. ಯಡಿಯೂರಪ್ಪ ಅವರ ಅನುಪಸ್ಥಿತಿಯಲ್ಲಿ 'ಮುಖ್ಯಮಂತ್ರಿ' ಚಂದ್ರು ಪ್ರಶ್ನೆ ಕೇಳಿದರು.

75 ವರ್ಷಗಳ ಹಿಂದೆ

ಶುಕ್ರವಾರ, 2-3-1951

• ರೈಲ್ವೆ ಪಾಸುಗಳ ದರ ಏರಿಸುವುದಿಲ್ಲವೆಂಬ ಭರವಸೆ

ನವದೆಹಲಿ, ಮಾ. 1– ರಿಯಾಯಿತಿ ದರದ ರೈಲ್ವೆ ಪಾಸುಗಳಿಗೆ ದರ ಏರಿಕೆಯನ್ನು ಅನ್ವಯಿಸಕೂಡದೆಂಬ ಸೂಚನೆಯನ್ನು ಅಂಗೀಕರಿಸುವ ಮೂಲಕ ರೈಲ್ವೆ ಸಚಿವ ಎ. ಗೋಪಾಲಸ್ವಾಮಿ ಅಯ್ಯಂಗಾರ್ಯರು ಈ ದಿನ ಪಾರ್ಲಿಮೆಂಟಿನಲ್ಲಿ ವಿಸ್ಮಯ ಪ್ರಸಂಗಕ್ಕೆ ಕಾರಣರಾದರು.

ಬೆಳಗ್ಗೆ ಪ್ರಶ್ನೋತ್ತರ ಕಾಲದಲ್ಲಿ ಸಚಿವ ಅಯ್ಯಂಗಾರ್ ಮತ್ತು ಸಹ ಸಚಿವ ಕೆ. ಸಂತಾನಂರವರು ಉತ್ತರ ಕೊಡುತ್ತ ಕಲ್ಕತ್ತ, ಮದರಾಸ್, ಮುಂಬೈ ಸಬ್ ಅರ್ಬನ್ ರೈಲ್ವೆಗಳ ಸೀಜನ್ ಪಾಸುಗಳಿಗೆ ಈ ದರ ಏರಿಕೆ ಅನ್ವಯಿಸುವುದಿಲ್ಲ ಎಂದು ತಿಳಿಸಿದರು.

ರತ್ನಪ್ಪ ಕುಂಬಾರ (ಮುಂಬೈ) ಅವರು ಮಾತನಾಡಿ, 'ವಿದ್ಯಾರ್ಥಿಗಳೂ ಅದೇ ಪರಿಸ್ಥಿತಿಯಲ್ಲಿ ಇರುವರೆಂದೂ ಅವರಿಗೆ ಅನುಕೂಲ ಮಾಡಿಕೊಡಬೇಕು' ಎಂದು ಕೋರಿದರು.

ಕಥೆ ಅದೇ, ನಟರಷ್ಟೇ ಬೇರೆ

ವಿಶ್ಲೇಷಣೆ

ವೈ.ಎಸ್.ವಿ. ದತ್ತ

> ಅಧಿಕಾರಕ್ಕಾಗಿ ಕಿತ್ತಾಟ ಕಾಂಗ್ರೆಸ್‌ಗೆ ಹೊಸತಲ್ಲ. ಸ್ವಾತಂತ್ರ್ಯ ಬಂದ ದಿನದಿಂದಲೂ ಅದು ಮುಗಿಯದ ನಾಟಕ. ಕೆ.ಸಿ. ರೆಡ್ಡಿ ಹಾಗೂ ಕೆಂಗಲ್ ಹನುಮಂತಯ್ಯ ಅವರೂ ಭಿನ್ನಮತದ ಭಾಗವಾಗಿದ್ದರು ಹಾಗೂ ಭಿನ್ನಮತದಿಂದ ಅಧಿಕಾರ ಕಳೆದುಕೊಂಡಿದ್ದರು! ಆ ಬೃಹನ್ನಾಟಕದ ಹೊಸ ಅಧ್ಯಾಯ ಈಗ ಚಾಲ್ತಿಯಲ್ಲಿದೆ!

ಈಚೆಗೆ, 60 ವರ್ಷಗಳ ಹಿಂದೆ ಪ್ರಕಟಗೊಂಡ ಜಗಳೂರು ಮಹಮ್ಮದ್ ಇಮಾಂ ಅವರ 'ಮೈಸೂರು ಆಗ, ಈಗ' ಎಂಬ ಪುಸ್ತಕ (ಪ್ರಕಟಣೆ: 1966) ಓದಿದೆ. ಇಂದಿನ ಪೀಳಿಗೆಯವರಿಗೆ ಜಗಳೂರು ಮಹಮ್ಮದ್ ಇಮಾಂ ಗೊತ್ತಿಲ್ಲ. ಆದರೆ, ಚಿತ್ರದುರ್ಗ ಮತ್ತು ದಾವಣಗೆರೆಯ ಜಿಲ್ಲೆಯ ಹಿರಿಯರಿಗೆ 'ಮೆಚ್ಚಿನ ರಾಜಕಾರಣಿ ಇಮ್ಮಣ್ಣ' ಎಂದೇ ಪ್ರಿಯರಾಗಿದ್ದವರು. 40ರ ದಶಕದ ರಾಜಪ್ರಭುತ್ವದಲ್ಲಿಯೇ ಅಂದಿನ ಮೈಸೂರು ದಿವಾನರ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದವರು. ಸ್ವಾತಂತ್ರ್ಯಾನಂತರ ಸಮಾಜವಾದಿಯಾಗಿ ಕಾಂಗ್ರೆಸ್ ವಿರೋಧಿ ರಾಜಕಾರಣದಲ್ಲಿ ಗುರುತಿಸಿಕೊಂಡವರು. ಕೆ.ಸಿ. ರೆಡ್ಡಿ ಮತ್ತು ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿ ಆಗಿದ್ದಾಗ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿದ್ದವರು. 1957 ಮತ್ತು 1967ರಲ್ಲಿ ಚಿತ್ರದುರ್ಗ ಲೋಕಸಭಾ ಕ್ಷೇತ್ರದಿಂದ ಪಿ.ಎಸ್.ಪಿ.ಯಿಂದ ಸಂಸತ್ತಿಗೆ ಆಯ್ಕೆಯಾದವರು. ಅವರು ನಮ್ಮ ಮಧ್ಯೆ ಇಲ್ಲ. ಆದರೆ, ಅಂದಿನ ರಾಜ್ಯ ರಾಜಕಾರಣದ ಸಾಕ್ಷಿಪ್ರಜ್ಞೆಯಾಗಿ, ಕೆಲವೊಮ್ಮೆ ಸೂತ್ರಧಾರರಾಗಿ, ಪಾತ್ರಧಾರಿಯಾಗಿ ತಾವು ಕಂಡ ರಾಜಕಾರಣದ ಒಳಹೊರಗುಗಳನ್ನು ತಮ್ಮ ಪುಸ್ತಕದಲ್ಲಿ, ಆಪ್ತಶೈಲಿಯಲ್ಲಿ ತೆರೆದಿಟ್ಟಿದ್ದಾರೆ. ಟಿ.ಎಸ್. ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಪ್ರಕಟಿಸಿರುವ ಈ ಅಮೂಲ್ಯ ಪುಸ್ತಕದಲ್ಲಿ ಇಮಾಂ ಬರೆದಿರುವ ನೈಜ ಘಟನೆಗಳ ಸಾರಾಂಶವನ್ನು ನಾನಿಲ್ಲಿ ಹೇಳುತ್ತಿದ್ದೇನೆ.

ಸ್ವಾತಂತ್ರ್ಯಾನಂತರ ಅಂದಿನ ಮೈಸೂರು ಸಂಸ್ಥಾನದಲ್ಲಿ 1881ರಿಂದಲೇ ಅಸ್ತಿತ್ವದಲ್ಲಿದ್ದ ಪ್ರಜಾ ಪ್ರತಿನಿಧಿಗಳ ಸಭೆ ಅಧಿಕೃತವಾಗಿ ಶಾಸನಸಭೆಯಾಗಿ ಪರಿವರ್ತಿತವಾಯಿತು. 1952ರ ಸಾರ್ವತ್ರಿಕ ಚುನಾವಣೆ ನಡೆಯುವವರೆಗೆ ತಾತ್ಪೂರ್ತಿಕ ಮಂತ್ರಿ ಮಂಡಲ ರಚನೆಯಾಯಿತು. ಸಹಜವಾಗಿ ಕಾಂಗ್ರೆಸ್ಸಿಗರೇ ಅದರ ನೇತಾರರು. ಕೆ.ಸಿ. ರೆಡ್ಡಿಯವರು ಮುಖ್ಯಮಂತ್ರಿಯಾದರು. ಅವರ ಮಂತ್ರಿಮಂಡಲದಲ್ಲಿ ಎಚ್.ಸಿ.ದಾಸಪ್ಪ, ಟಿ.ಮರಿಯಪ್ಪ, ಕೆ.ಟಿ.ಭಾಷ್ಯಂ, ಚೆನ್ನಿಗರಾಮಯ್ಯ, ಎಚ್. ಸಿದ್ದಯ್ಯ ಮುಂತಾದ ಕಾಂಗ್ರೆಸ್ ನಾಯಕರು ಮಂತ್ರಿಗಳಾದರು. ಕೆಂಗಲ್ ಹನುಮಂತಯ್ಯನವರು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. ಕೆಲವೇ ದಿನಗಳಲ್ಲಿ ಕಾಂಗ್ರೆಸ್‌ನಲ್ಲಿ ಅತೃಪ್ತಿ ಮತ್ತು ಒಳಜಗಳ ಪ್ರಾರಂಭವಾದವು. ಕೆಂಗಲ್ ಹನುಮಂತಯ್ಯನವರು ಮತ್ತು ಟಿ. ಸಿದ್ದಲಿಂಗಯ್ಯನವರು ತಮ್ಮದೇ ಕಾಂಗ್ರೆಸ್ ಆಡಳಿತದಲ್ಲಿ ಅಸಮಾಧಾನವನ್ನು ಹೊರಹಾಕಿದರು. ಕೆ.ಸಿ. ರೆಡ್ಡಿಯವರು ಸಚಿವ ಸಂಪುಟ ಪುನರ್ ರಚನೆ ಮಾಡಬೇಕೆಂದು ಹನುಮಂತಯ್ಯನವರು ಪಟ್ಟು ಹಿಡಿದರು. ಕೆ.ಸಿ. ರೆಡ್ಡಿಯವರು, 'ತಮಗೆ ಬಹುಮತವಿದೆ. ಶಾಸಕಾಂಗ ಪಕ್ಷದ ಸಭೆ ಕರೆದು ತೋರಿಸುತ್ತೇನೆ. ಸಂಪುಟ ಪುನರ್‌ರಚನೆ ಮಾಡೋಲ್ಲ' ಎಂದರು. ದೆಹಲಿ ವರಿಷ್ಠರ ಮಧ್ಯಪ್ರವೇಶದಿಂದ ಮಂತ್ರಿಮಂಡಲ ಮುಂದುವರಿಯಿತು. ಒಳಜಗಳ ನಿಲ್ಲಲಿಲ್ಲ.

ಅಷ್ಟು ಹೊತ್ತಿಗೆ ಸಾರ್ವತ್ರಿಕ ಚುನಾವಣೆ ಬಂತು. 1952ರ ಆ ಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳುಗಳನ್ನು ಆಯ್ಕೆ ಮಾಡುವ ಕೆಲಸ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಕೆಂಗಲ್ ಅವರದಾಗಿತ್ತು. ಆಗ ಮೈಸೂರು ರಾಜ್ಯದಲ್ಲಿ ಇದ್ದುದು 9 ಜಿಲ್ಲೆಗಳು ಮಾತ್ರ. (ಬೆಂಗಳೂರು, ಕೋಲಾರ, ತುಮಕೂರು, ಮಂಡ್ಯ, ಮೈಸೂರು, ಚಿತ್ರದುರ್ಗ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು). ತಮಗೆ ಬೆಂಬಲ ಕೊಡುವವರನ್ನೇ ಕಾಂಗ್ರೆಸ್ ಅಭ್ಯರ್ಥಿಗಳನ್ನಾಗಿ ಮಾಡಿದರು.

1952ರ ಫೆಬ್ರುವರಿಯಲ್ಲಿ ಚುನಾವಣೆ ಮುಗಿದು ಫಲಿತಾಂಶವೂ ಬಂತು. ಅಂದಿನ 100 ವಿಧಾನಸಭಾ ಸ್ಥಾನಗಳ ಪೈಕಿ, ಕಾಂಗ್ರೆಸ್‌ನ 80 ಅಭ್ಯರ್ಥಿಗಳು ಗೆದ್ದರು. 20 ಜನ ವಿಪಕ್ಷದವರು, ಪಿ.ಎಸ್.ಪಿ.ಯವರು. ವಿಪಕ್ಷದ ನಾಯಕ ಕೃತಿ ಕರ್ತೃ ಜೆ.ಎಂ. ಇಮಾಂ.

ಮುಖ್ಯಮಂತ್ರಿ ಯಾರಾಗಬೇಕು ಎಂಬ ಪ್ರಶ್ನೆ ಉದ್ಭವವಾಯಿತು. 'ರೆಡ್ಡಿ ಬಣ' ಮತ್ತು 'ಕೆಂಗಲ್ ಬಣ' ಎಂಬ ಬಣಗಳಾದವು. ರೆಡ್ಡಿಯವರು ದೆಹಲಿಗೆ ಹೊರಟರು. ಆದರೆ, ಕೆಂಗಲ್ ಅವರಿಗೆ ಬಹುಮತ ವಿದೆ ಎಂದು ತಿಳಿದ ದೆಹಲಿ ವರಿಷ್ಠರು ಕೆ.ಸಿ. ರೆಡ್ಡಿಯವರಿಗೆ ಏನು ಹೇಳಿದರೋ ಏನೋ! ದೆಹಲಿಯಿಂದ ಹಿಂದಿರುಗಿದ ರೆಡ್ಡಿಯವರು ತಾವು ಮುಖ್ಯಮಂತ್ರಿ ಸ್ಪರ್ಧಿ ಅಲ್ಲ ಎಂದುಬಿಟ್ಟರು. ಕೆಂಗಲ್ ಹನುಮಂತಯ್ಯ ಮುಖ್ಯಮಂತ್ರಿಯಾದರು. ಕೆ.ಸಿ. ರೆಡ್ಡಿ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿದ್ದವರನ್ನೆಲ್ಲಾ ಬಿಟ್ಟು, ತಮ್ಮ ಬಣದ ಟಿ. ಸಿದ್ದಲಿಂಗಯ್ಯ, ಎ.ಜಿ. ರಾಮಚಂದ್ರರಾವ್, ಕಡಿದಾಳ್ ಮಂಜಪ್ಪ, ಟಿ. ಚೆನ್ನಯ್ಯ, ಹೆಚ್. ಸಿದ್ದವೀರಪ್ಪ ಅವರನ್ನು ಮಂತ್ರಿಗಳನ್ನಾಗಿ ಮಾಡಿದರು.

ಕೆಂಗಲ್ ಮುಖ್ಯಮಂತ್ರಿಯಾದ ಸ್ವಲ್ಪದಿನಗಳಲ್ಲಿಯೇ ಕಾಂಗ್ರೆಸ್ ಮುಖಂಡರಿಂದಲೇ ಸರ್ಕಾರದ ವಿರುದ್ಧ ಒಂದಲ್ಲಾ ಒಂದು ಆಪಾದನೆ ಕೇಳಿಬರತೊಡಗಿತು. ಆ ಪೈಕಿ, 'ಮಟ್ಟಿದೊಡ್ಡಿ ಪ್ರಕರಣ' ಎಂಬುದು ಅಂದಿನ ವಿಧಾನಭೆಯಲ್ಲಿ ವ್ಯಾಪಕ ಬಿಸಿಯೇರಿದ ಚರ್ಚೆಯಾಗಿತ್ತು. ಹನುಮಂತಯ್ಯನವರ ತಮ್ಮನಾದ ನಂಜಪ್ಪ ಎಂಬುವರು ಬಹಳ ವರ್ಷಗಳಿಂದ ಹಂಗಾಮಿಯಾಗಿ ಸಾಗುವಳಿ ಮಾಡುತ್ತಿದ್ದ ರೈತರನ್ನು ದೌರ್ಜನ್ಯದಿಂದ ಒಕ್ಕಲೆಬ್ಬಿಸಿ ದರಖಾಸ್ತು ಮೂಲಕ ಕಿಮ್ಮತ್ತು ಕಟ್ಟಿ ತಮ್ಮ ಹೆಸರಿಗೆ ಕಾಯಂ ಸಾಗುವಳಿ ಚೀಟಿ ಪಡೆದುಕೊಂಡಿದ್ದಾರೆ ಎಂಬುದು ಪ್ರಕರಣ. ಕೆಂಗಲ್ ಅವರನ್ನು ಪೇಚಿಗೆ ಗುರಿಪಡಿಸಿದ ಪ್ರಸಂಗ ಅದು. ಅದು ತಣ್ಣಗಾಗುವಷ್ಟರಲ್ಲಿ ಕೆಂಗಲ್ ಅವರ ಪರಮಾಪ್ತರಾದ ಇಂಧನ ಸಚಿವ ಟಿ. ಸಿದ್ದಲಿಂಗಯ್ಯನವರ ಮೇಲೆ ಆಪಾದನೆ ಬಂತು. ತಾಮ್ರದ ತಂತಿ ಖರೀದಿಗೆಂದು ಕರೆಯಲಾದ ಟೆಂಡರ್‌ನಲ್ಲಿ, ಮಂತ್ರಿಗಳು ತಮ್ಮ ಸಂಬಂಧಿಕರಿಗೇ ವರ್ಕ್ ಆರ್ಡರ್ ಕೊಡಿಸಿದ್ದಾರೆ ಎಂಬ ಆಪಾದನೆಯನ್ನು ಕಾಂಗ್ರೆಸ್ಸಿಗರೇ ವಿಪಕ್ಷಕ್ಕೆ ರವಾನಿಸಿದರು. ಕೆಂಗಲ್ ಅವರು ಸಿದ್ದಲಿಂಗಯ್ಯನವರ ರಾಜೀನಾಮೆ ಪಡೆಯಲೇಬೇಕಾಯ್ತು.

ಕರ್ನಾಟಕ ಏಕೀಕರಣದ ಒಲವು ವ್ಯಕ್ತಪಡಿಸಿದ ಕೆಂಗಲ್ ಅವರು ಬಳ್ಳಾರಿಯನ್ನು ನಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳುವಲ್ಲಿ ಯಶಸ್ವಿಯೂ ಆದರು. ವಿಧಾನಸೌಧ ಕಟ್ಟಡ ನಿರ್ಮಾಣಕ್ಕೆ ಕೈ ಹಾಕಿ ತಾವೇ ಖುದ್ದು ನಿಂತು ನಾಲ್ಕೇ ವರ್ಷಗಳಲ್ಲಿ ಪೂರ್ಣಗೊಳಿಸಿಯೂಬಿಟ್ಟರು. ವಿಧಾನಸೌಧ ನಿರ್ಮಾಣ ವೆಚ್ಚ ಆರಂಭದಲ್ಲಿ 50 ಲಕ್ಷ ರೂಪಾಯಿ ಇದ್ದದ್ದು, ಮುಗಿಯುವ ಹೊತ್ತಿಗೆ 2 ಕೋಟಿ ರೂಪಾಯಿ ಆಗಿತ್ತು. ಇವೆರಡೂ ಕಾಂಗ್ರೆಸ್ ಭಿನ್ನಮತೀಯರಿಗೆ ಅಸ್ತ್ರವಾದವು. ಕೆಂಗಲ್ ವಿಚಲಿತರಾಗಲಿಲ್ಲ. ಅವರಿಗೆ ವಿರೋಧ ಪಕ್ಷದ ನಾಯಕ ಇಮಾಂ ಅವರ ಬೆಂಬಲ ಈ ವಿಷಯದಲ್ಲಿತ್ತು. ಹೀಗಾಗಿ, ವಿರೋಧ ಪಕ್ಷದ ನಾಯಕರನ್ನೂ ತಮ್ಮ ಜತೆಯಲ್ಲಿ ಕರೆದುಕೊಂಡು ರಾಜ್ಯಕ್ಕೆ ಸೇರಬೇಕೆಂದಿದ್ದ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಪ್ರವಾಸ ಹೊರಟರು. ಆ ಪ್ರವಾಸದ ಅದ್ಭುತವನ್ನು ಇಮಾಂ ಅವರ ಬಾಯಲ್ಲೇ ಕೇಳಿ:

'ಹಳ್ಳಿ ಹಳ್ಳಿಗೂ ಚಪ್ಪರ. ಬಿನ್ನವತ್ತಳೆ. ಅದ್ಭುತ ಸ್ವಾಗತ ಸಮಾರಂಭ. ಜನರು ತಂಡೋಪತಂಡವಾಗಿ ಅಖಿಲ ಕರ್ನಾಟಕದ ನಿರ್ಮಾಪಕರು ಬಂದಿದ್ದಾರೆ ಎಂದೂ, ಅಖಿಲ ಕರ್ನಾಟಕ ಭಾವಿ ಮುಖ್ಯಮಂತ್ರಿಗಳು ದಯಮಾಡಿಸಿದ್ದರೆಂದು ಘೋಷಿಸುತ್ತಿದ್ದರು. ಎಲ್ಲಾ ಬಿನ್ನವತ್ತಳೆಗಳಲ್ಲಿ, 'ನೀವು ಕರ್ನಾಟಕದ ಕಣ್ಮಣಿ. ಕರ್ನಾಟಕದ ಉದ್ಧಾರಕ, ಕರ್ನಾಟಕದ ನಿರ್ಮಾಪಕ, ಕರ್ನಾಟಕದ ಭಾವಿ ಮುಖ್ಯಮಂತ್ರಿ ಹನುಮಂತಯ್ಯನವರು' ಎಂಬ ಗುಣಗಾನ. ಗದಗಿನಲ್ಲಿ ಆನೆಯಿಂದ ಹನುಮಂತಯ್ಯನವರಿಗೆ ಪುಷ್ಪಮಾಲೆ.' ಇದರಿಂದ ಪುಳಕಿತರಾದ ಕೆಂಗಲ್‌ರವರು ಗುಳೇದಗುಡ್ಡದಲ್ಲಿ, 'ನಾನು ಕರ್ನಾಟಕ ದಾಸ' ಎಂದೂ, ಬಿಜಾಪುರದಲ್ಲಿ 'ಕರ್ನಾಟಕ ಏಕೀಕರಣಕ್ಕೆ ನನ್ನ ಪ್ರಾಣ ಮುಡಿಪು' ಎಂದೂ, ಹುಬ್ಬಳ್ಳಿಯ ಕಾಂಗ್ರೆಸ್ ಸಭೆಯಲ್ಲಿ, 'ಮದುವೆ ನಿಶ್ಚಯವಾಗಿದೆ. ಆಹ್ವಾನಗಳು ಕಳಿಸಲ್ಪಟ್ಟಿವೆ. ಇನ್ನು ಲಗ್ನವು ತಡವಾಗದು' ಎಂದೂ ಉದ್ಗರಿಸಿದರು.

ಉತ್ತರ ಕರ್ನಾಟಕದ ಪ್ರವಾಸ ಮುಗಿಸಿಕೊಂಡು ಬಂದವರೇ ಕರ್ನಾಟಕದ ಏಕೀಕರಣ ಪ್ರಕ್ರಿಯೆಗೆ ವೇಗ ತುಂಬಿದರು. ನವೆಂಬರ್ 1, 1956 ಎಂದು ದಿನಾಂಕವೂ ನಿರ್ಧಾರವಾಯಿತು. ಆಗ ಕೆಂಗಲ್ ಅವರು ಇಮಾಂರವರ ಬಳಿ ಮಾತನಾಡುತ್ತ, '1956 ನವೆಂಬರ್ 1ರಂದು ಏಕೀಕೃತ ಕರ್ನಾಟಕದ ಪ್ರಥಮ ಮುಖ್ಯಮಂತ್ರಿಯಾಗಿ ನಾನೇ ಕಟ್ಟಿಸಿರುವ ವಿಧಾನಸೌಧವನ್ನು ಪ್ರವೇಶ ಮಾಡಬೇಕೆಂಬುದು ನನ್ನ ಬಯಕೆ' ಎಂದು ತಮ್ಮ ಮನದಾಳದ ಮಾತನ್ನು ತೋಡಿಕೊಂಡಿದ್ದರು.

ಆದರೆ ನಡೆದದ್ದೇ ಬೇರೆ. ಮೊದಲಿನಿಂದಲೂ ಚನ್ನಯ್ಯನವರು, ನಿಜಲಿಂಗಪ್ಪನವರು, ನಾಗಯ್ಯರೆಡ್ಡಿ ಅವರು ಕೆಂಗಲ್ ಅವರಿಗೆ ವಿರೋಧವಾಗಿದ್ದರು. ಆ ಗುಂಪಿಗೆ ಕೆಂಗಲ್ ಅವರ ನಂಬಿಕೆಯ ಸಚಿವರಾಗಿದ್ದ ಕಡಿದಾಳರೂ, ರಾಮಚಂದ್ರರಾಯರೂ ಸೇರಿಬಿಟ್ಟರು. ಹನುಮಂತಯ್ಯನವರು ಪದವಿಯನ್ನು ತ್ಯಜಿಸಬೇಕಾಯಿತು. 1956ರ ಆಗಸ್ಟ್‌ನಲ್ಲಿ ಕಡಿದಾಳ್ ಮಂಜಪ್ಪನವರು ಮುಖ್ಯಮಂತ್ರಿಗಳಾದರು.

ಹನುಮಂತಯ್ಯನವರು ಪದಚ್ಯುತರಾದ ಮೇಲೆ ಕಡಿದಾಳ್ ಅವರು ಎರಡು ತಿಂಗಳು ಮುಖ್ಯಮಂತ್ರಿಯಾಗಿದ್ದರು. 1956ರ ನವೆಂಬರ್ 1ರಂದು ವಿಶಾಲ ಮೈಸೂರಿನ ಉದ್ಘಾಟನೆಯನ್ನು ರಾಷ್ಟ್ರಪತಿ ಬಾಬು ರಾಜೇಂದ್ರಪ್ರಸಾದ್ ನೆರವೇರಿಸುವವರಿದ್ದರು. ಆ ವಿಶಾಲ ಮೈಸೂರಿನ ಪ್ರಥಮ ಮುಖ್ಯಮಂತ್ರಿ ಯಾರಾಗಬೇಕು? ಕಡಿದಾಳ್ ಮಂಜಪ್ಪನವರನ್ನೇ ಮುಂದುವರಿಸಬೇಕೇ ಅಥವಾ ಬೇರೆಯವರನ್ನು ಆಯ್ಕೆ ಮಾಡಬೇಕೇ? ವಿಶಾಲ ಮೈಸೂರಿನ ಎಲ್ಲ ಭಾಗಗಳಿಂದ ಸದಸ್ಯರು ಆಗಮಿಸಿದರು. ಉತ್ತರ ಕರ್ನಾಟಕದ ತಮ್ಮ ಪ್ರವಾಸ ಕಾಲದಲ್ಲಿ ಜನರೆಲ್ಲಾ 'ನೀವೇ ಅಖಿಲ ಕರ್ನಾಟಕದ ಮುಖ್ಯಮಂತ್ರಿ' ಎಂದು ಹಾಡಿ ಹೊಗಳಿದ್ದು ಕೆಂಗಲ್ ಕಿವಿಗಳಲ್ಲಿ ಗುಂಯ್ ಗುಡುತ್ತಿತ್ತು. 'ಆದರೆ, ಹಿಂದೆ ನಡೆದುದೆಲ್ಲಾ ಮರೆತೇ ಹೋಯ್ತು, ಉತ್ತರ ಕರ್ನಾಟಕದ ಮಹನೀಯರ ಪ್ರಭಾವು ಹೆಚ್ಚಾಯಿತು. ಶ್ರೀ ನಿಜಲಿಂಗಪ್ಪ ಅವರನ್ನು ವಿಶಾಲ ಮೈಸೂರಿನ ಪ್ರಥಮ ಮುಖ್ಯಮಂತ್ರಿಗಳನ್ನಾಗಿ ಚುನಾಯಿಸಿದರು... ಅಷ್ಟೇ ಅಲ್ಲ, ಅವರ ಮಹದಾಸೆಗಳಾದ ವಿಧಾನಸೌಧದ ಆರಂಭೋತ್ಸವವೂ, ಅಖಿಲ ಕರ್ನಾಟಕದ ಪ್ರಥಮ ಮುಖ್ಯಮಂತ್ರಿಯಾಗುವುದೂ ಕನಸಾಗಿಯೇ ಉಳಿಯಿತು' ಎನ್ನುತ್ತಾರೆ ಇಮಾಂ ಅವರು.

ಇದಿಷ್ಟು 70 ವರ್ಷಗಳ ಹಿಂದಿನ 'ಕಾಂಗ್ರೆಸ್ ಮುಖ್ಯಮಂತ್ರಿ' ನಾಟಕದ ನೈಜ ಕಥೆಯ ಒಂದು ಅಧ್ಯಾಯ. ಹೋಗಲಿ, ನಿಜಲಿಂಗಪ್ಪನವರಾದರೋ ನೆಮ್ಮದಿಯಿಂದ ಆಡಳಿತ ನಡೆಸುವಂತಾಯ್ತೇ? ಅದೂ ಆಗಲಿಲ್ಲ ಎನ್ನುತ್ತಾರೆ ಇಮಾಂ. ಏಕೆ? ಅದು ನಾಟಕದ ಇನ್ನೊಂದು ಅಧ್ಯಾಯ.

ವಾಚಕರ ವಾಣಿ

ಯೋಧನ ಸಾವಿನಲ್ಲೂ ಜಾತಿಯ ಕ್ರೌರ್ಯ

ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಸಿಂಗಟಾಲೂರಿನಲ್ಲಿ ದಲಿತರಿಗೆ ಕ್ಷೌರ ಮಾಡಲು ನಿರಾಕರಿಸಿದ್ದಕ್ಕೆ ಸರ್ಕಾರದಿಂದಲೇ ಕ್ಷೌರದಂಗಡಿ ತೆರೆಯಲಾಗಿದೆ. ಮತ್ತೊಂದೆಡೆ ಬಾಗಲಕೋಟೆ ಜಿಲ್ಲೆ ಇಳಕಲ್ ಸಮೀಪದ ಚಿನ್ನಾಪುರ ಎಸ್.ಟಿ. ಗ್ರಾಮದಲ್ಲಿ ದಲಿತ ಸಮುದಾಯಕ್ಕೆ ಸೇರಿದ ಮಾಜಿ ಸೈನಿಕರೊಬ್ಬರು ನಿಧನರಾಗಿದ್ದಾರೆ. ಯೋಧನ ಅಂತ್ಯಕ್ರಿಯೆಗೆ ಬರುವ ಬಂಧುಗಳು, ಹಿತೈಷಿಗಳು ಹೋಟೆಲ್, ಅಂಗಡಿಗೆ ಬಂದರೆ ಮೈಲಿಗೆಯಾಗುತ್ತದೆಂದು ಅವುಗಳನ್ನು ಬಂದ್ ಮಾಡಿ ಅಸ್ಪೃಶ್ಯತೆ ಆಚರಿಸಲಾಗಿದೆ. ಮತೀಯವಾದಿಗಳು ಮೃತ ಸೈನಿಕನನ್ನು ಅವಮಾನಿಸಿರುವುದು ದೇಶದ್ರೋಹವಲ್ಲವೆ? ಮುಂದುವರಿದ ರಾಷ್ಟ್ರಗಳು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಯಶಸ್ಸು ಗಳಿಸಿ ಮಂಗಳ ಗ್ರಹದತ್ತ ದಾಪುಗಾಲು ಇಡುತ್ತಿವೆ. ನಾವು ಅಸ್ಪೃಶ್ಯತೆ ಆಚರಿಸುತ್ತ ಕೂಪಮಂಡೂಕಗಳಾಗಿದ್ದೇವೆ!

ಸುರೇಶ ಅರಳಿಮರ, ಬಾದಾಮಿ

ಹಾಲಿಗೆ ಪ್ರೋತ್ಸಾಹಧನ ಜಾರಿಯಾಗಲಿ

ಹಾಲು ಉತ್ಪಾದಕರಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನು ಪ್ರತಿ ಲೀಟರ್‌ಗೆ ₹5ರಿಂದ ₹7ಕ್ಕೆ ಹೆಚ್ಚಿಸುವಂತೆ ಕೆಎಂಎಫ್, ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ. ಇದು ರೈತರ ಪಾಲಿಗೆ ಸಂತಸದ ಸಂಗತಿ. ಸರ್ಕಾರವು ಪ್ರಸ್ತಾವಕ್ಕೆ ಒಪ್ಪಿಗೆ ನೀಡಿ ಬಜೆಟ್‌ನಲ್ಲಿ ಘೋಷಿಸಬೇಕಿದೆ. ಇದರಿಂದ ಸಂಕಷ್ಟದಲ್ಲಿರುವ ರೈತರಿಗೆ ಅನುಕೂಲವಾಗಲಿದೆ. ರಾಜ್ಯದ ಲಕ್ಷಾಂತರ ಕುಟುಂಬಗಳು ಹೈನುಗಾರಿಕೆಯಿಂದ ಬದುಕು ಕಟ್ಟಿಕೊಂಡಿವೆ. ಬೆಳಗಾವಿಯಲ್ಲಿ ಮೆಗಾ ಡೇರಿ ಸ್ಥಾಪಿಸಬೇಕೆಂಬುದು ಈ ಭಾಗದ ರೈತರ ಬಹು ದಿನಗಳ ಬೇಡಿಕೆ. ಬಜೆಟ್‌ನಲ್ಲಿ ಇದರ ಘೋಷಣೆಯಾಗಲಿ.

ಬಸವರಾಜ ನರಗಟ್ಟಿ, ಬೆಳಗಾವಿ

ಬಡ್ತಿ ಬೋಧಕರಿಗೆ ವೇತನ ತಾರತಮ್ಯ

ಪ್ರೌಢಶಾಲಾ ಶಿಕ್ಷಕರಾಗಿ ಸೇವೆಗೆ ಸೇರಿದವರು ಸ್ನಾತಕೋತ್ತರ ಪದವಿ ಪಡೆದಿದ್ದರೆ ಪಿಯು ಉಪನ್ಯಾಸಕರಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಈ ವೇಳೆ ಒಂದು ವಿಶೇಷ ವೇತನ ಮುಂಬಡ್ತಿ ನೀಡಲಾಗುತ್ತದೆ. ಆದರೆ, ಅವರು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಿಯು ಇಲಾಖೆಗೆ ಸೇರುವ ಕಾರಣಕ್ಕೆ ಹೈಸ್ಕೂಲ್ ಮಟ್ಟದಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸುವುದಿಲ್ಲ. ಅವರಿಗೆ ಮುಂಬಡ್ತಿಯು ತಾತ್ಕಾಲಿಕವಾಗಿ ಲಾಭದಾಯಕ ಎನಿಸಿದರೂ ಮುಂದೆ ಭಾರಿ ಆರ್ಥಿಕ ನಷ್ಟ ತರಲಿದೆ. ಆದರೆ, ಸರ್ಕಾರಕ್ಕೆ ಮಾತ್ರ ಲಾಭ. ಜೊತೆಗೆ, ಶಿಕ್ಷಕರಿಗೆ ಸಿಗಬೇಕಾದ 10, 15, 20, 25, 30 ವರ್ಷಗಳ ಹಲವಾರು ಸ್ವಯಂಚಾಲಿತ ಮುಂಬಡ್ತಿಗಳಿಗೆ ತಡೆ ಬೀಳಲಿದೆ. ಮುಖ್ಯ ಶಿಕ್ಷಕರಿಗೆ ಸಿಗಬಹುದಾದ ಗಳಿಕೆ ರಜೆ ಸೌಲಭ್ಯವೂ ಸಿಗುವುದಿಲ್ಲ. ಸರ್ಕಾರ ಈ ಬಗ್ಗೆ ಗಮನಹರಿಸಿ ವೇತನ ತಾರತಮ್ಯವನ್ನು ಸರಿಪಡಿಸಬೇಕಿದೆ.

ಶಿವಶರಣಗೌಡ ಬಿರಾದಾರ, ಇಂಡಿ

ಸಹಕಾರ ಸಂಘ ಅಭ್ಯುದಯಕ್ಕೆ ಸಹಕಾರಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು 'ಗೃಹಲಕ್ಷ್ಮಿ' ಯೋಜನೆ ಫಲಾನುಭವಿಗಳ ಸಹಕಾರ ಸಂಘದ ಸ್ಥಾಪನೆಗೆ ಮುಂದಾಗಿರುವುದು ಶ್ಲಾಘನೀಯ. ಹಿಂದೆ ಮನಮೋಹನ್ ಸಿಂಗ್ ಸರ್ಕಾರವು ಭಾರತೀಯ ಮಹಿಳಾ ಬ್ಯಾಂಕ್ ಸ್ಥಾಪಿಸಿತ್ತು. ಅದು ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿಯಲ್ಲಿ ಸ್ಥಾಪಿಸಿದ್ದ ಗ್ರಾಮೀಣ ಬ್ಯಾಂಕ್‌ಗಳಂತೆ ದೇಶದಲ್ಲಿ ಹೊಸ ಆರ್ಥಿಕ ಸಂಚಲನ ಸೃಷ್ಟಿಸುವ ಸಾಧ್ಯತೆಯಿತ್ತು. ಆದರೆ, ಆ ನಂತರ ಅಧಿಕಾರಕ್ಕೆ ಬಂದ ಸರ್ಕಾರವು ಅದನ್ನು ಎಸ್‌ಬಿಐನೊಂದಿಗೆ ವಿಲೀನಗೊಳಿಸಿತು. ಪ್ರಸ್ತಾವಿತ ಸಹಕಾರ ಸಂಘದಲ್ಲಿ ಶೇ 8ರ ಬಡ್ಡಿದರದಲ್ಲಿ ಹಿರಿಯ ನಾಗರಿಕರಿಂದ ಠೇವಣಿ ಸಂಗ್ರಹಿಸಬಹುದು. ಅವರು ಹೆಚ್ಚಿನ ಬಡ್ಡಿ ಆಸೆಯಿಂದ ಅಸುರಕ್ಷಿತ ವಲಯಗಳಲ್ಲಿ ಠೇವಣಿ ಮಾಡುವುದು ತಪ್ಪುತ್ತದೆ.

ರವಿ ಯಲಿಗಾರ, ಮುನವಳ್ಳಿ

ಅಡಕತ್ತರಿಯಲ್ಲಿ ಅಂಡಮಾನ್ ವನರಾಶಿ

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಅಭಿವೃದ್ಧಿ ಹೆಸರಿನಡಿ ನಡೆಯುತ್ತಿರುವ ಅಪಸವ್ಯಗಳು ಒಂದೆರಡಲ್ಲ. ತಾಳೆಗಿಡಗಳನ್ನು ಬೆಳೆಸಲು ಅಲ್ಲಿನ ವೃಕ್ಷಗಳನ್ನು ಕಡಿಯುತ್ತಿರುವುದು ಅಕ್ಷಮ್ಯ. ಇನ್ನೊಂದು ಮಾತು; ಅಲ್ಲಿ ಕಡಿಯಲಾಗುತ್ತಿರುವ ಲಕ್ಷಾಂತರ ವೃಕ್ಷಗಳ ಬದಲಿಗೆ ಪರಿಹಾರಾತ್ಮಕವಾಗಿ ಹರಿಯಾಣ, ಗುಜರಾತಿನಲ್ಲಿ ಗಿಡ ನೆಡಲಾಗುವುದೆಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಈ ಕುರಿತಂತೆ ರಾಷ್ಟ್ರೀಯ ಹಸಿರು ಮಂಡಳಿ (ಎನ್‌ಜಿಟಿ) ಮೌನವು ಪ್ರಶ್ನಾರ್ಹ.

ಭೂಮಿತಾಯಿಗೆ ಎಲ್ಲೋ ಗಾಯ ಉಂಟು ಮಾಡಿ ಇನ್ನೆಲ್ಲೋ ಮುಲಾಮು ಹಚ್ಚುವುದು ಸರಿಯೇ? ಇದರಲ್ಲಿ ಏನಾದರೂ ನ್ಯಾಯವಿದೆಯೇ? ಇದು ಸರ್ಕಾರದ ಪಲಾಯನ ನೀತಿಯೇ ವಿನಾ ಕಾನೂನಾತ್ಮಕವಾಗಿ ಸರಿಯಾದ ಉಪಕ್ರಮವಲ್ಲ. ಎಲ್ಲಿ ಮರಗಳನ್ನು ಕಡಿಯಲಾಗುವುದೋ ಅದೇ ಪರಿಸರದಲ್ಲಿ ಗಿಡಗಳನ್ನು ನೆಡುವುದು, ಅರಣ್ಯ ಸೃಷ್ಟಿಸುವುದು ಸರಿಯಾದ ಕ್ರಮ. ಸರ್ಕಾರದ ನಿರ್ಧಾರವನ್ನು ಎಲ್ಲರೂ ಖಂಡಿಸಬೇಕಿದೆ.

ಅ.ನ. ಯಲ್ಲಪ್ಪ ರೆಡ್ಡಿ, ಬೆಂಗಳೂರು

ಖಾದಿ ಮಂಡಳಿ: ವೇತನ ವ್ಯತ್ಯಾಸ ಬೇಡ

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯಮ ಮಂಡಳಿಯು ರಾಜ್ಯ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ. ಇಲ್ಲಿ ಕಾರ್ಯ ನಿರ್ವಹಿಸುವವರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಗಳು ಒಳಪಡುತ್ತವೆ. ಪ್ರಸ್ತುತ ಮಂಡಳಿಯ ನೌಕರರು ಮತ್ತು ನಿವೃತ್ತರಿಗೆ ಆರನೇ ವೇತನ ಆಯೋಗದ ಅನುಸಾರ ಸಂಬಳ, ತುಟ್ಟಿಭತ್ಯೆ, ಪಿಂಚಣಿ ಸೌಲಭ್ಯ ದೊರೆಯುತ್ತಿದೆ. ಆದರೆ, ಏಳನೇ ವೇತನ ಆಯೋಗದ ಸೌಲಭ್ಯ ನೀಡದೆ ಆರ್ಥಿಕ ಸಲಹೆಗಾರರು ಮತ್ತು ಮುಖ್ಯ ಲೆಕ್ಕಪತ್ರಾಧಿಕಾರಿಗಳು ತಡೆಹಿಡಿದಿದ್ದಾರೆ. ಅವರು ಮಾತ್ರ ಎಲ್ಲಾ ರೀತಿಯ ಸೌಲಭ್ಯ ಪಡೆದು ನೌಕರರಿಗೆ ಅಡ್ಡಗಾಲು ಹಾಕುವುದು ಸರಿಯಲ್ಲ. ನಿವೃತ್ತ ನೌಕರರಿಗೆ ಅನ್ಯಾಯವಾಗುತ್ತಿದೆ. ಸರ್ಕಾರ ತ್ವರಿತವಾಗಿ ಬಾಕಿ ವೇತನ ಬಿಡುಗಡೆಗೆ ಕ್ರಮವಹಿಸಬೇಕಿದೆ.

ನರಸಿಂಹಮೂರ್ತಿ, ಆನೇಕಲ್

ಚುರುಮುರಿ

ಈ ಸಲ ಕಪ್ ಯಾರದ್ದು?

• ಸುಮಂಗಲಾ

'ನೋಡ್ತಿರು... ಈ ಸಲ ಕಪ್ ಟ್ರಂಪಣ್ಣಂದೇ!' ಎಂದು ಬೆಕ್ಕಣ್ಣ ಉದ್ಗರಿಸಿತು.

'ಅಲ್ಲಲೇ... ಇಸ್ರೇಲ್ ಜೊತಿ ಸೇರಿ ಅಂವಾ ಇರಾನ್ ಮ್ಯಾಲೆ ಆಕ್ರಮಣ ಮಾಡ್ಯಾನೆ. ಅಂವನಿಗೆಂಥ ಕಪ್ ಕೊಡ್ತಾರಲೇ?' ಎಂದೆ.

'ಈಗ ಅಂವಾ ಇರಾನಿನ ಮೇಲೆ ಯುದ್ಧ ಮಾಡಿ, ದುಷ್ಟ ಮಂದಿಯ ಕೊಂದು, ಅಲ್ಲಿ ನಾಗರಿಕರ ರಕ್ಷಣೆ ಮಾಡ್ಯಾನಲ್ಲ... ಹಿಂಗಾಗಿ ಈ ಸಲ ನೊಬೆಲ್ ಕಪ್ ಅಂವಂದೇ!' ಎಂದು ಬೆಕ್ಕಣ್ಣ ವದರಿತು.

'ಯುದ್ಧದ ನಿರ್ಣಯವನ್ನ ಸರ್ವಾಧಿಕಾರಿ ಹಂಗೆ ಅಂವನೇ ಖುದ್ದು ತಗಂಡಾನೆ. ಅಲ್ಲೀ ಕಾಂಗ್ರೆಸ್ ಒಪ್ಪಿಗೆ ಸೈತ ತಗಂಡಿಲ್ಲ. ಎಷ್ಟ್ ಮಂದಿ ಅಮಾಯಕರು ಪ್ರಾಣ ಕಳಕೊಂಡಾರೆ... ಅಂವನೆಂಥ ಶಾಂತಿದೂತ ಅಂತ ಅಂವಂಗೆ ನೊಬೆಲ್ ಶಾಂತಿ ಕಪ್ ಕೊಡ್ತಾರಲೇ?' ಎಂದೆ ಸಿಟ್ಟಿನಿಂದ.

'ಅಂವ ಒಂಥರಾ ದೇವದೂತನ ಹಂಗೆ! ವಿಶ್ವದ ಎಲ್ಲಾ ದೇಶಗಳ ಮೇಲೆ ಯುದ್ಧ ಸಾರಿ, ಆ ಯುದ್ಧವನ್ನ ಕೊನಿಗಿ ತಾನೆ ನಿಲ್ಲಿಸಿದೆ ಅಂತ ಘೋಷಣೆ ಮಾಡೂ ಹಕ್ಕು ಅಂವನಿಗದ!' ಎಂದು ಬೆಕ್ಕಣ್ಣ ವಾದಿಸಿತು.

'ಅಲ್ಲಿ ಅಂವಾ ಶಾಂತಿ ಕಪ್‌ಗಾಗಿ ಥರೇವಾರಿ ಯುದ್ಧ ನಡೆಸ್ಯಾನೆ... ಇಲ್ಲಿ ಡಿಕೇಶಣ್ಣನೂ ಸಿಎಂ ಕುರ್ಚಿಗಾಗಿ ಹೋರಾಟ ನಡೆಸ್ಯಾನೆ' ಎಂದು ನಾನು ತಲೆ ಚಚ್ಚಿಕೊಂಡೆ.

'ಎಲ್ಲಾ ಥರದ ಪ್ರಯತ್ನ ಮುಗಿದು ಈಗ ಅದೇನೋ ಶಾಸಕರಿಂದ ಲವ್‌ಲೆಟ್ರೂ ಬರಸಾಕೆ ಹತ್ಯಾರೆ. ಸ್ವತಃ ಖರ್ಗೆ ಅಜ್ಜಾರಿಂದ ಹಿಡಿದು ಎಷ್ಟ್ ಮಂದಿ ಕ್ಯೂವಳಗೆ ನಿಂತಾರೆ!' ಬೆಕ್ಕಣ್ಣ ಉದ್ಗರಿಸಿತು.

'ಈ ಕ್ಯೂಗೆ ಹೊಸ ಸೇರ್ಪಡೆ ಕುಮಾರಣ್ಣ! ಕುಮಾರಣ್ಣನ್ನ (ಮುಂದೆಂದಾದರೂ!) ಸಿಎಂ ಮಾಡೂದು ಮೋದಿಮಾಮಾ–ಶಾ ಅಂಕಲ್ಲಿನ ಕೈವಳಗೆ ಐತೆ ಅಂತ ದೇಗೌ ಅಜ್ಜಾರು ಕಣ್ಣೀರು ಹಾಕ್ಯಾರಂತೆ!' ಎಂದೆ ನಾನು.

'ಹೈಕಮಾಂಡು ಬಿಡು, ಕರುನಾಡಿನ ಸಿಎಂ ಕುರ್ಚಿ ಯುದ್ಧವನ್ನು ಸ್ವತಃ ದೇವರಿಗೂ ಬಗೆಹರಿಸಕ್ಕೆ ಆಗಂಗಿಲ್ಲ!' ಎಂದು ಬೆಕ್ಕಣ್ಣ ಮುಸಿಮುಸಿ ನಕ್ಕಿತು.

ಸಂಗತ

ಮೊಬೈಲ್ ಬಳಕೆ: ದೊಡ್ಡವರಿಗೆ ಅಂಕೆ ಬೇಡವೆ?

ಮಕ್ಕಳು ಮೊಬೈಲ್ ಬಳಸುವುದನ್ನು ನಿರ್ಬಂಧಿಸುವ ಚಿಂತನೆಯು ಚರ್ಚೆಯಲ್ಲಿದೆ. ಆದರೆ, 'ಮೊಬೈಲ್ ನೀತಿಸಂಹಿತೆ'ಯ ಹೆಚ್ಚಿನ ಅಗತ್ಯ ಇರುವುದು ಹಿರಿಯರಿಗೆ.

• ನಡಹಳ್ಳಿ ವಸಂತ್

ಪ್ರೌಢಶಾಲೆ ಹಂತದವರೆಗಿನ ಮಕ್ಕಳು ಮೊಬೈಲ್ ಬಳಸುವುದನ್ನು ನಿರ್ಬಂಧಿಸಲು ರಾಜ್ಯ ಸರ್ಕಾರ ಚಿಂತಿಸುತ್ತಿದೆ. ಈ ಕುರಿತು ಅಧ್ಯಯನ ಮಾಡಲು ತಜ್ಞರ ಸಮಿತಿಯೊಂದನ್ನು ರಚಿಸಲು ಮುಂದಾಗಿದೆ. ಆದರೆ, ಇಂಥ ಪ್ರಯತ್ನವು ವೈಫಲ್ಯವನ್ನು ತನ್ನೊಳಗೇ ಇಟ್ಟುಕೊಂಡು ಹುಟ್ಟುವ ಕೂಸಾಗಿರುತ್ತದೆ ಎನ್ನುವ ಅರಿವು ನಮಗಿರಬೇಕು.

ಮೊಬೈಲ್ ವ್ಯಸನ ಬರೀ ಮಕ್ಕಳ ಸಮಸ್ಯೆಯಲ್ಲ. ಇದು ವಯಸ್ಕರು, ವೃದ್ಧರನ್ನು ಒಳಗೊಂಡು ಇಡೀ ಸಮಾಜಕ್ಕೆ ಅಂಟಿಕೊಂಡಿರುವ ಗೀಳು. ಮಕ್ಕಳ ಮೊಬೈಲ್ ವ್ಯಸನದ ಕುರಿತು ಸಹಾಯ ಕೇಳಿಕೊಂಡು ಆತಂಕದಿಂದ ನನ್ನ ಬಳಿಗೆ ಬರುವ ಪೋಷಕರಿಗೆ ನಾನು ಕೇಳುವ ಕೆಲವು ಪ್ರಾಥಮಿಕ ಪ್ರಶ್ನೆಗಳು ಹೀಗಿರುತ್ತವೆ: ಮನೆಯಲ್ಲಿ ವಯಸ್ಕರ ಮೊಬೈಲ್–ಟಿ.ವಿ ಬಳಕೆ ಎಷ್ಟಿದೆ? ದೊಡ್ಡವರು ಪಾಲಿಸದ ನಿಯಮಗಳನ್ನು ಮಕ್ಕಳ ಮೇಲೆ ಮಾತ್ರ ಹೇಗೆ ಹೇರುತ್ತೀರಿ? ಕುಟುಂಬದ ಎಲ್ಲಾ ಸದಸ್ಯ ರಿಗೆ ಅನ್ವಯವಾಗುವ 'ನೀತಿಸಂಹಿತೆ' ರೂಪಿಸಿಕೊಳ್ಳಲು ಸಿದ್ಧರಿದ್ದೀರಾ?

ಮಕ್ಕಳ ಮೊಬೈಲ್ ಬಳಕೆಗೆ ಸಂಬಂಧಿಸಿದಂತೆ ಎರಡು ಪ್ರಮುಖ ವಿಚಾರಗಳನ್ನು ಗಮನದಲ್ಲಿ ಇರಿಸಿಕೊಳ್ಳಬೇಕು. ಮೊದಲನೆಯದು, ಮಕ್ಕಳು ಕಲಿಯುವುದು ನಾವು ಹೇರುವ ಶಿಸ್ತು ನಿರ್ಬಂಧಗಳಿಂದಲ್ಲ. ಅಥವಾ ನಮ್ಮ ಉಪದೇಶ, ಬುದ್ಧಿವಾದ ಗಳಿಂದಲೂ ಅಲ್ಲ. ಮಕ್ಕಳು ನಾವು ಕೊಡುವ ಮಾದರಿಗಳನ್ನು ಅನುಸರಿಸುತ್ತಾರೆ. ಬೆಳವಣಿಗೆಯ ಹಂತದಲ್ಲಿರುವ ಮಕ್ಕಳ ಮಿದುಳು ಸುತ್ತಲಿನ ವಾತಾವರಣದ ಅಂಶಗಳನ್ನು ಗ್ರಹಿಸುತ್ತಾ ಹೊಸ ಹೊಸ ಸಂಪರ್ಕ ಜಾಲಗಳನ್ನು ರೂಪಿಸಿಕೊಳ್ಳುತ್ತದೆ. ಈ ಸಂಪರ್ಕ ಜಾಲಗಳೇ ಮುಂದೆ ನಮ್ಮೆಲ್ಲರ ವ್ಯಕ್ತಿತ್ವವಾಗಿ ಗೋಚರಿಸುತ್ತದೆ.

ಕೌಟುಂಬಿಕ ಮತ್ತು ಸಾಮಾಜಿಕ ಪರಿಸರ ವ್ಯಕ್ತಿಯನ್ನು ಹೇಗೆ ರೂಪಿಸುತ್ತದೆ ಎನ್ನುವುದರ ಕುರಿತು ನರವಿಜ್ಞಾನಿಗಳು ಸಾಕಷ್ಟು ಸಂಶೋಧನೆ ಮಾಡಿದ್ದಾರೆ. ಒಟ್ಟಾರೆ ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಇಲ್ಲದ ನೈತಿಕತೆ, ನಿರ್ಬಂಧಗಳನ್ನು ಮಕ್ಕಳ ಮೇಲಷ್ಟೇ ಹೇರಿದರೆ ಅದು ಗಾಳಿಗೆ ಗುದ್ದುವುದರಷ್ಟೇ ಪರಿಣಾಮಕಾರಿಯಾಗಿರುತ್ತದೆ!

ಎರಡನೆಯದು, ಮೊಬೈಲ್ ವ್ಯಸನವನ್ನು ಸಂಪೂರ್ಣ ಜನಸಮುದಾಯಕ್ಕೆ ಅಂಟಿಸಿ ಹಣ ಮಾಡುವ ದೊಡ್ಡದೊಂದು ದಂಧೆಯೇ ಚಾಲ್ತಿಯಲ್ಲಿದೆ. ಸಾಮಾಜಿಕ ಮಾಧ್ಯಮಗಳು, ಗೇಮಿಂಗ್ ಆ್ಯಪ್‌ಗಳು ಮುಂತಾದವುಗಳು ನಮಗರಿವಿಲ್ಲದಂತೆಯೇ ನಮ್ಮ ಮಿದುಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತವೆ. ಸಾಕಷ್ಟು ವಿಜ್ಞಾನಿಗಳು ಈ ಕುರಿತು ಪದೇ ಪದೇ ಎಚ್ಚರಿಕೆ ನೀಡುತ್ತಿದ್ದರೂ ಹೆಚ್ಚಿನ ಬದಲಾವಣೆಗಳಾಗಿಲ್ಲ. ಟೆಕ್ ಕಂಪನಿಗಳ ಬಳಿ ಪ್ರಪಂಚದ ಎಲ್ಲಾ ದೇಶದ ಸರ್ಕಾರಗಳ ಮೇಲೆ ಪ್ರಭಾವ ಬೀರಲು ಸಾಧ್ಯವಾಗುವಷ್ಟು ಹಣದ ಖಜಾನೆಯಿದೆ. ಹಾಗಾಗಿಯೇ ಇವತ್ತಿನ ಆರ್ಥಿಕ ವ್ಯವಸ್ಥೆಯನ್ನು ಗ್ರೀಸ್‌ನ ಅರ್ಥಶಾಸ್ತ್ರಜ್ಞ ಯಾನಿಸ್ ವೆರೂಫೆಕಿಸ್ 'ಟೆಕ್ನೋಫ್ಯೂಡಲಿಸಂ' ಎಂದು ಕರೆಯುತ್ತಾನೆ. ಡಿಜಿಟಲ್ ಜಮೀನುಗಳನ್ನು ಹಿಡಿತದಲ್ಲಿಟ್ಟುಕೊಂಡು ಇವರು ರಾಜಕೀಯ ವ್ಯವಸ್ಥೆಯನ್ನು ನಿಯಂತ್ರಿಸುತ್ತಿದ್ದಾರೆ.

ನಮ್ಮ ಸರ್ಕಾರಗಳು 'ನಿರ್ಬಂಧ ಕಾನೂನು'ಗಳ ಕುರಿತು ಮಾತ್ರ ಯೋಚಿಸುತ್ತವೆ. ಆದರೆ, ಇಡೀ ಜನಸಮೂಹದಲ್ಲಿ ಎಚ್ಚರಿಕೆ ಮೂಡಿಸುವ ಅಗತ್ಯವಿದೆ. ಸರ್ಕಾರ ಶಾಲಾ ಪರಿಸರದಲ್ಲಿ ಮಾತ್ರ ಮೊಬೈಲ್ ಬಳಕೆಯ ಮೇಲೆ ನಿರ್ಬಂಧ ಹೇರಲು ಸಾಧ್ಯವಿದೆ. ಆದರೆ, ಒಮ್ಮೆ ಮೊಬೈಲ್ ಗೀಳು ಅಂಟಿಕೊಂಡರೆ ಮಕ್ಕಳು ಎಲ್ಲಾ ನಿರ್ಬಂಧಗಳನ್ನು ಮೀರುವ ಕಳ್ಳದಾರಿಗಳನ್ನು ಹುಡುಕಿಕೊಳ್ಳುತ್ತಾರೆ. ಮಕ್ಕಳಿಗೆ ಸಾಮಾಜಿಕ ಮಾಧ್ಯಮಗಳ ಬಳಕೆಯ ನಿಷೇಧವನ್ನು ಜಾರಿಗೊಳಿಸುವುದು ಅಸಾಧ್ಯ. ಮೊಬೈಲ್ ಕೈಯಲ್ಲಿ ಇಲ್ಲದಿದ್ದರೂ ಮಿದುಳಿಗೆ ಅಂಟಿಕೊಂಡಿರುವ ಗೀಳು ಅವರ ಏಕಾಗ್ರತೆ, ಅಧ್ಯಯನಶೀಲತೆ, ಭಾವನಾತ್ಮಕ ಸಮತೋಲನ ಎಲ್ಲವನ್ನೂ ಕುಂಠಿತಗೊಳಿಸುತ್ತದೆ. ಅಪ್ರಾಪ್ತ ವಯಸ್ಕರ ಲೈಂಗಿಕ ಚಟುವಟಿಕೆಗಳು, ಹಿಂಸೆಯ ಪ್ರಚೋದನೆಗಳಿಗೆ ಕೂಡ ಮೊಬೈಲ್ ಕಾರಣವಾಗಿದೆ.

ನನ್ನ ಬಳಿ ಸಹಾಯ ಕೇಳುವ ಕುಟುಂಬಗಳಿಗೆ ಹೀಗೊಂದು ಮಾದರಿ ನೀತಿಸಂಹಿತೆಯನ್ನು ಜಾರಿಗೊಳಿಸಲು ಪ್ರೋತ್ಸಾಹಿಸುತ್ತೇನೆ. ಅದು ಹೀಗಿರುತ್ತದೆ:

ಮನೆಯಲ್ಲಿ ಎಲ್ಲರೂ ಮೊಬೈಲ್‌ಗಳನ್ನು ಒಂದು ಸಾಮಾನ್ಯ ಸ್ಥಳದಲ್ಲಿಡಬೇಕು. ತಮ್ಮ ಕೋಣೆಗಳಲ್ಲಿ ಹಾಸಿಗೆಯ ಬಳಿ ಇಟ್ಟುಕೊಳ್ಳುವಂತಿಲ್ಲ. ಅಗತ್ಯವಿದ್ದಾಗ ಉಪಯೋಗಿಸಿ ಮತ್ತೆ ಅಲ್ಲೇ ಇಡಬೇಕು. ಹೀಗೆ ಎಲ್ಲರೂ ತಾವು ಮೊಬೈಲ್ ಉಪಯೋಗಿಸುವ ಒಟ್ಟು ಸಮಯದ ಬಗೆಗೆ ಮುಕ್ತವಾಗಿರಲೇಬೇಕು. ಅಂತರ್ಜಾಲವನ್ನು ಉಪಯೋಗಿಸುವಾಗ ತಮ್ಮ ಕೋಣೆಗಳಲ್ಲಿ ಕೂರುವಂತಿಲ್ಲ. ಎಲ್ಲರಿಗೂ ಕಾಣುವಂತಹ ಸ್ಥಳದಲ್ಲಿರಬೇಕು.

ಸ್ನಾನ, ಊಟ, ತಿಂಡಿ ಮೊದಲಾದ ಸಮಯಗಳಲ್ಲಿ ಹಾಗೂ ಕುಟುಂಬದವರು ಒಟ್ಟಾಗಿ ಹೊರಗೆ ಅಥವಾ ಪ್ರವಾಸಕ್ಕೆ ಹೋದಾಗ ಮೊಬೈಲ್ ಅನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ತುರ್ತು ಕರೆಗಳಿದ್ದಾಗ ಒಂದೆರಡು ವಾಕ್ಯಗಳಲ್ಲಿ ಅದನ್ನು ಮುಗಿಸಬೇಕು.

ವಿದ್ಯಾಭ್ಯಾಸದ ಅಥವಾ ವೃತ್ತಿಯ ಕರೆಗಳನ್ನು ಹೊರತುಪಡಿಸಿದರೆ ದಿನಕ್ಕೆ ಮಾಡಬಹುದಾದ ಅಥವಾ ಸ್ವೀಕರಿಸಬಹುದಾದ ಹರಟೆ ಕರೆ ಮತ್ತು ಸಂದೇಶಗಳಿಗೆ ಸಮಯದ ಮಿತಿಯನ್ನು ಇಟ್ಟುಕೊಳ್ಳಬೇಕು.

ಯಾರಾದರೂ ನಿಯಮಗಳನ್ನು ಪಾಲಿಸದಿದ್ದಲ್ಲಿ ಇತರರು ಅದನ್ನು ಹೇಳುವ ಮೊದಲು ಅವರೇ ಸ್ವಯಂಪ್ರೇರಿತರಾಗಿ ತಪ್ಪೊಪ್ಪಿಕೊಂಡು ಕ್ಷಮೆ ಯಾಚಿಸಬೇಕು. ಎಲ್ಲರಿಗೂ ಎಲ್ಲರ ಮೊಬೈಲ್‌ನ್ನು ಪರೀಕ್ಷಿಸಲು ಅವಕಾಶವಿರಬೇಕು. ವೃತ್ತಿಯ ಅಥವಾ ವಿದ್ಯಾಭ್ಯಾಸದ ಅಗತ್ಯಗಳನ್ನು ಹೊರತುಪಡಿಸಿದರೆ (ದುಡಿಯುವವರನ್ನೂ ಸೇರಿಸಿ) ಎಲ್ಲರ ಮೊಬೈಲ್ ಬಿಲ್‌ಗಳಿಗೆ ಮಿತಿ ಇರಬೇಕು.

ಎಷ್ಟು ಕುಟುಂಬಗಳು ಇಂತಹ ನೀತಿಸಂಹಿತೆಯನ್ನು ರೂಪಿಸಿಕೊಂಡು ಪ್ರಾಮಾಣಿಕವಾಗಿ ಜಾರಿಗೆ ತರಲು ಸಿದ್ಧರಿರಬಹುದು? ಪೋಷಕರು ಆತ್ಮಶೋಧನೆ ಮಾಡಿಕೊಳ್ಳದಿದ್ದರೆ ಮಕ್ಕಳನ್ನು ದೂರುವುದು ವ್ಯರ್ಥ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಮೆರಿಕ-ಇಸ್ರೇಲ್ ಜಂಟಿ ಸೇನಾ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯಾತೊಲ್ಲಾ ಇಮಾಮ್ ಖಮೇನಿ ಅವರು ಹತ್ಯೆಯಾಗಿದ್ದಾರೆ. ಇರಾನ್‌ನಲ್ಲಿ ಸರ್ಕಾರವನ್ನು ಬದಲಾಯಿಸುವುದು ತಮ್ಮ ಗುರಿ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಇದೇ ಪ್ರತಿಪಾದನೆಯೊಂದಿಗೆ ಕೆಲವೇ ತಿಂಗಳ ಹಿಂದೆ ಟ್ರಂಪ್ ಅವರು ವೆನೆಜುವೆಲಾ ಮೇಲೂ ದಾಳಿ ನಡೆಸಿ, ಅಲ್ಲಿನ ಅಧ್ಯಕ್ಷರನ್ನು ಹೊತ್ತೊಯ್ದು ತಮ್ಮ ದೇಶದಲ್ಲಿ ಬಂಧಿಯಾಗಿ ಜೈಲಿನಲ್ಲಿಟ್ಟಿದ್ದಾರೆ. ಅಮೆರಿಕವು ತನ್ನ ರಾಜಕೀಯ ಮತ್ತು ಆರ್ಥಿಕ ಹಿತಾಸಕ್ತಿ ಕಾಪಾಡಿಕೊಳ್ಳಲು ಆಯ್ದ ದೇಶಗಳ ಮೇಲೆ ದಾಳಿ ನಡೆಸುವ ಮೂಲಕ ಅಂತರರಾಷ್ಟ್ರೀಯ ರಾಜತಾಂತ್ರಿಕ ನಿಯಮಾವಳಿಗಳ ಉಲ್ಲಂಘನೆ ಮಾಡುತ್ತಿದೆ ಎನ್ನುವ ಆರೋಪ ಮೊದಲಿನಿಂದಲೂ ಇದೆ

ಕಲೆ: ಸಂತೋಷ್ ಸಸಿಹಿತ್ಲು

ಅಮೆರಿಕ

ಹೊರದೇಶಗಳ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ

ಇಸ್ರೇಲ್ ಜತೆಗೂಡಿ ಇರಾನ್ ಮೇಲೆ ದಾಳಿ; ರಾಜಕೀಯ, ಆರ್ಥಿಕ ಹಿತಾಸಕ್ತಿಯೇ ಮೂಲ ಕಾರಣ

ಪ್ರಜಾವಾಣಿ ವಾರ್ತೆ

2025ರ ಜೂನ್‌ನಲ್ಲಿ ಇಸ್ರೇಲ್ ಮತ್ತು ಇರಾನ್ ನಡುವೆ 12 ದಿನಗಳ ಯುದ್ಧ ನಡೆದಿತ್ತು. ಇರಾನ್ ಸರ್ವೋಚ್ಚ ನಾಯಕರಾಗಿದ್ದ ಅಯಾತೊಲ್ಲಾ ಇಮಾಮ್ ಖಮೇನಿಯ ಆಪ್ತ ವಲಯದ ಹಲವರನ್ನು ಇಸ್ರೇಲ್ ಕೊಂದು ಹಾಕಿತು. ಆಗಲೇ ಇಸ್ರೇಲ್ ಜತೆಗೆ ಅಮೆರಿಕ ಕೈಜೋಡಿಸಬಹುದು ಎನ್ನುವ ಅನುಮಾನವಿತ್ತು. ಆ ಅನುಮಾನ ಈಗ ನಿಜವಾಗಿದೆ. ಈಗ ಅಮೆರಿಕ–ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಯುದ್ಧ ಸಾರಿವೆ. ಇರಾನ್‌ಗೆ ಅಣ್ವಸ್ತ್ರ ಪರೀಕ್ಷೆ ವಿರುದ್ಧ ಎಚ್ಚರಿಕೆ ನೀಡುತ್ತಾ, ಸೇನಾ ಕಾರ್ಯಾಚರಣೆಗೆ ಭೂಮಿಕೆ ಹದಗೊಳಿಸಿಕೊಂಡು ಬಂದಿದ್ದ ಅಮೆರಿಕವು ಇಸ್ರೇಲ್ ಜತೆಗೂಡಿ ಇರಾನ್ ಮೇಲೆ ಭಾರಿ ದಾಳಿ ನಡೆಸಿದೆ. ದಾಳಿಯಲ್ಲಿ ಇರಾನ್‌ನ ಖಮೇನಿ ಅಸುನೀಗಿದ್ದಾರೆ.

ಅಮೆರಿಕದ 'ಆಪರೇಷನ್ ಎಪಿಕ್ ಫ್ಯೂರಿ'ಯ ಭಾಗವಾಗಿ ಇರಾನ್‌ನ 31 ಪ್ರಾಂತ್ಯಗಳ ಪೈಕಿ 24ರ ಮೇಲೆ ದಾಳಿ ನಡೆದಿದೆ. ಸುಮಾರು 200 ಯುದ್ಧ ವಿಮಾನಗಳು ಇಸ್ಲಾಮಿಕ್ ರೆವಲ್ಯೂಷನ್ ಗಾರ್ಡ್ ಕೋರ್, ವಾಯುನೆಲೆಗಳು, ಡ್ರೋನ್ ಮತ್ತು ಕ್ಷಿಪಣಿ ಉಡಾವಣಾ ನೆಲೆಗಳು, ಸೇನಾ ನೆಲೆಗಳು ಸೇರಿದಂತೆ 500 ನೆಲೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿವೆ. 200ಕ್ಕೂ ಹೆಚ್ಚು ಮಂದಿ ಸತ್ತಿದ್ದು, 700ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇದಕ್ಕೆ ಪ್ರತಿಯಾಗಿ ಇರಾನ್ ಕೂಡ ಇಸ್ರೇಲ್, ಅಮೆರಿಕವನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದೆ.

ಅಮೆರಿಕ, ಬ್ರಿಟನ್, ಸ್ಪೇನ್ ಮುಂತಾದೆಡೆ ಸಂಭ್ರಮಾಚರಣೆಗಳು ನಡೆದಿವೆ. ಭಾರತ, ಪಾಕ್ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಪಶ್ಚಿಮ ಏಷ್ಯಾದಲ್ಲಿ ಬಿಕ್ಕಟ್ಟಿನ ಪರಿಸ್ಥಿತಿ ತಲೆದೋರಿದೆ.

'ಚರಿತ್ರೆಯ ಅತ್ಯಂತ ದುಷ್ಟ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದ ಖಮೇನಿ ಕಥೆ ಮುಗಿದಿದೆ. ನಮ್ಮ ಕೆಲಸ ಮುಗಿದ ಮೇಲೆ ಆಡಳಿತವನ್ನು ಕೈಗೆತ್ತಿಕೊಳ್ಳಿ. ಪ್ರಾಯಶಃ ತಲೆಮಾರುಗಳ ಕಾಲದಲ್ಲಿ ಇದು ನಿಮಗೆ ಸಿಕ್ಕಿರುವ ಏಕೈಕ ಅವಕಾಶ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ನ ಜನರನ್ನು ಉದ್ದೇಶಿಸಿ ಹೇಳಿದ್ದಾರೆ.

ಯಾವುದೇ ಒಂದು ದೇಶದ ಸರ್ಕಾರ ಬದಲಾಯಿಸುವುದು, ದುರಾಡಳಿತ ಕೊನೆಗೊಳಿಸುವುದು ಆ ದೇಶದ ಆಂತರಿಕ ವಿಚಾರ. ಬೇರೊಂದು ದೇಶ ಅದನ್ನು ಮಾಡಬೇಕೆಂದರೆ, ವಿಶ್ವಸಂಸ್ಥೆಯಂಥ ಜಾಗತಿಕ ಸಂಸ್ಥೆಗಳ ಮೂಲಕ ಮಾಡಬಹುದು. ಅಂತರರಾಷ್ಟ್ರೀಯ ಮಟ್ಟದಲ್ಲಿ ಇಂಥ ಹಲವು ದಾರಿಗಳಿವೆ. ಅಮೆರಿಕದಂಥ ಬಲಿಷ್ಠ ದೇಶಕ್ಕೆ ಅವು ಅಸಾಧ್ಯವೂ ಅಲ್ಲ. ಆದರೆ, ಅಮೆರಿಕವು ಇರಾನ್‌ನ ಪರಿಸ್ಥಿತಿಯನ್ನು ತನ್ನ ನೆಲೆಯಿಂದ ವಿಶ್ಲೇಷಿಸಿ, ಎಲ್ಲ ನಿಯಮಗಳನ್ನೂ ಗಾಳಿಗೆ ತೂರಿ ಏಕಾಏಕಿ ದಾಳಿ ಮಾಡಿರುವುದನ್ನು 'ದೊಡ್ಡಣ್ಣ'ನ ದರ್ಪ, ದೌರ್ಜನ್ಯ ಎಂದು ವಿಶ್ಲೇಷಿಸಲಾಗುತ್ತಿದೆ.

ಅಮೆರಿಕವು ಅಂತರರಾಷ್ಟ್ರೀಯ ರಾಜತಾಂತ್ರಿಕ ನಿಯಮಗಳನ್ನು ಮೀರಿ ವಿದೇಶಗಳ ಮೇಲೆ ದಾಳಿ ಮಾಡುವುದಾಗಲಿ, ಬಿಕ್ಕಟ್ಟಿನ ಪರಿಸ್ಥಿತಿ ಸೃಷ್ಟಿಸುವುದಾಗಲಿ ಹೊಸದೇನಲ್ಲ. ಅದಕ್ಕೆ ಒಂದು ಚರಿತ್ರೆಯೇ ಇದೆ. ಸರ್ವಾಧಿಕಾರವನ್ನು ಕಿತ್ತೊಗೆಯುವುದು, ಪ್ರಜಾಪ್ರಭುತ್ವ ಸ್ಥಾಪನೆ ಮಾಡುವುದು, ಉಗ್ರವಾದಿಗಳನ್ನು ನಿಗ್ರಹಿಸುವುದು, ಜಾಗತಿಕ ಶಾಂತಿಗೆ ಧಕ್ಕೆ ತರುವವರನ್ನು ನಿಯಂತ್ರಿಸುವುದು, ಅಮೆರಿಕದ ರಕ್ಷಣೆಗೆ ಭಂಗ ಉಂಟುಮಾಡುವವರನ್ನು ತಡೆಯುವುದು, ಡ್ರಗ್ ದಂಧೆಗೆ ಅಂಕುಶ ಹಾಕುವುದು– ಇಂಥ ಹಲವು ನೆಪಗಳನ್ನು ಹೇಳುತ್ತಲೇ ದಶಕಗಳಿಂದಲೂ ಅಮೆರಿಕ ಹಲವು ದೇಶಗಳ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿದೆ. ಹಲವು ಸರ್ಕಾರಗಳನ್ನು ಉರುಳಿಸಿದೆ. ಹಲವು ಅಧಿಕಾರಸ್ಥರನ್ನು ಕೊಂದಿದೆ. ಹೀಗೆ ಅಮೆರಿಕವು ತನ್ನ ಮೂಗಿನ ನೇರಕ್ಕೆ ಇವೆಲ್ಲವನ್ನೂ ಮಾಡಿದೆ ಮತ್ತು ಇವೆಲ್ಲದರ ಹಿಂದಿರುವುದು ಅದರ ರಾಜಕೀಯ, ಆರ್ಥಿಕ ಹಿತಾಸಕ್ತಿಗಳು ಎನ್ನುವುದನ್ನು ಹಲವರು ದಾಖಲಿಸಿದ್ದಾರೆ. ಜಾಗತಿಕ ಮಟ್ಟದಲ್ಲಿ ಪ್ರಭಾವ ಹೆಚ್ಚಿಸಿಕೊಳ್ಳುವುದೂ ಅದರ ಮತ್ತೊಂದು ಉದ್ದೇಶವಾಗಿದೆ.

ಕೆಲವೇ ವಾರಗಳ ಹಿಂದೆ ಅಮೆರಿಕವು ಎಲ್ಲ ನಿಯಮಗಳನ್ನೂ ಮೀರಿ ವೆನೆಜುವೆಲಾ ದೇಶದ ಒಳಗೆ ನುಗ್ಗಿ ಅಧ್ಯಕ್ಷ ನಿಕೊಲಸ್ ಮಡೂರೊ ಮತ್ತು ಅವರ ಪತ್ನಿಯನ್ನು ಹೊತ್ತೊಯ್ದು ತನ್ನ ದೇಶದ ಜೈಲಿನಲ್ಲಿ ಇಟ್ಟಿತು. ಆಗಲೂ ಟ್ರಂಪ್ ಜಪಿಸಿದ್ದು ಪ್ರಜಾಪ್ರಭುತ್ವ ಸ್ಥಾಪನೆಯ ಜಪ. ಇಂದಿಗೂ ಮಡೂರೊ ಅಮೆರಿಕದ ಜೈಲಿನಲ್ಲಿದ್ದಾರೆ. ನಂತರ ತಾನೇ ಅಲ್ಲಿ ಸರ್ಕಾರ ನಡೆಸುವುದಾಗಿ ಅಮೆರಿಕ ಹೇಳಿತು. ವೆನೆಜುವೆಲಾದ ಹೊಸ ಅಧ್ಯಕ್ಷೆಯಾಗಿರುವ ಡೆಲ್ಸಿ ರಾಡ್ರಿಗಸ್ ಅವರನ್ನು ಕೈಗೊಂಬೆ ಮಾಡಿಕೊಂಡಿರುವ ಟ್ರಂಪ್ ಅವರು, ಈ ಮೂಲಕ ಅಲ್ಲಿನ ತೈಲ ನಿಕ್ಷೇಪಗಳ ಮೇಲೆ ಹಿಡಿತ ಸಾಧಿಸಿದ್ದಾರೆ ಎನ್ನಲಾಗುತ್ತಿದೆ. ಭಾರತವು ರಷ್ಯಾ ಬದಲಿಗೆ ವೆನೆಜುವೆಲಾದಿಂದ ತೈಲ ಖರೀದಿ ಮಾಡಬೇಕು ಎಂದು ಟ್ರಂಪ್ ಅವರು ಇತ್ತೀಚೆಗೆ ಒತ್ತಾಯಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಟ್ರಂಪ್ ಅವರು ಅಧ್ಯಕ್ಷರಾದ ನಂತರ ಅಮೆರಿಕ ಇತರೆ ದೇಶಗಳ ವಿಚಾರದಲ್ಲಿ ಮೂಗು ತೂರಿಸುವ ಪ್ರವೃತ್ತಿ ಹೆಚ್ಚಾಗಿದ್ದು, ಇಲ್ಲಿ ಯಾವ ದೇಶವೂ ಸುರಕ್ಷಿತವಲ್ಲ ಎನ್ನುವ ವಿಶ್ಲೇಷಣೆ ಇದೆ.

ಆಧಾರ: ರಾಯಿಟರ್ಸ್, ಬಿಬಿಸಿ, ಅಮೆರಿಕ ಕಾಂಗ್ರೆಸ್ ವೆಬ್‌ಸೈಟ್, ಸಿಎಸ್‌ಎಸ್.ಸಿಯುಎ.ಎಡು

ಅಮೆರಿಕದ ಚಾಳಿಗೆ ದೊಡ್ಡ ಚರಿತ್ರೆ

ಅಮೆರಿಕದಲ್ಲಿ ರಿಪಬ್ಲಿಕನ್ ಪಕ್ಷವೇ ಅಧಿಕಾರದಲ್ಲಿರಲಿ ಅಥವಾ ಡೆಮಾಕ್ರಟಿಕ್ ಪಕ್ಷದ ಸರ್ಕಾರವೇ ಇರಲಿ, ಬೇರೆ ದೇಶದ ಆಡಳಿತದಲ್ಲಿ ಮೂಗು ತೂರಿಸುವುದು, ಅಲ್ಲಿ ಸೇನೆ ಕಾರ್ಯಾಚರಣೆ ನಡೆಸುವುದು, ಅಲ್ಲಿನ ಸರ್ಕಾರವನ್ನು ಉರುಳಿಸಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುವಂತೆ ಮಾಡುವುದು ಅದರ ಹಳೆಯ ಚಾಳಿ. 18ನೇ ಶತಮಾನದ (1790ರ ದಶಕ) ಅಂತ್ಯದಿಂದ ಇಲ್ಲಿಯವರೆಗೆ ಅದು ನಡೆದುಕೊಂಡು ಬಂದ ಹಾದಿಯನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ.

'ಕ್ಯಾಥೋಲಿಕ್ ಯೂನಿವರ್ಸಿಟಿ ಆಫ್ ಅಮೆರಿಕ'ದ ಸೆಂಟರ್ ಫಾರ್ ಸ್ಟಡಿ ಆಫ್ ಸ್ಟೇಟ್‌ಮನ್‌ಶಿಪ್ ನಡೆಸಿರುವ ಅಧ್ಯಯನದ ಪ್ರಕಾರ, 1800ರಿಂದ 2017ರವರೆಗೆ ಅಮೆರಿಕದ ಆಡಳಿತವು ವಿದೇಶಿ ನೆಲದಲ್ಲಿ 392 ಬಾರಿ ಸೇನಾ ಕಾರ್ಯಾಚರಣೆ ನಡೆಸಿ, ಆ ದೇಶಗಳ ಆಂತರಿಕ ವಿಚಾರದಲ್ಲಿ ಮಧ್ಯಪ್ರವೇಶಿಸಿದೆ. 2026ರವರೆಗಿನ ಅಂಕಿ ಅಂಶಗಳನ್ನು ಪರಿಗಣಿಸಿದರೆ, ಈ ಸಂಖ್ಯೆ 400 ದಾಟುತ್ತದೆ. ವಿಶ್ವ ಮಹಾಯುದ್ಧಗಳು, ಶೀತಲ ಸಮರದ ಅವಧಿಯಲ್ಲಿ ಅಮೆರಿಕದ ಸೇನಾ ಮಧ್ಯಪ್ರವೇಶ ಹೆಚ್ಚಾಗಿತ್ತು. 2000ದಿಂದೀಚೆಗೆ ಬೇರೆ ದೇಶಗಳಲ್ಲಿ ಅಮೆರಿಕದ ಸೇನಾ ಕಾರ್ಯಾಚರಣೆ ಗಣನೀಯವಾಗಿ ಹೆಚ್ಚಿದೆ. 2017ರವರೆಗಿನ 17 ವರ್ಷಗಳಲ್ಲಿ 126 ಬಾರಿ ಅಮೆರಿಕದ ಸೇನೆ ಹೊರದೇಶಗಳ ಆಡಳಿತದಲ್ಲಿ ಮೂಗು ತೂರಿಸಿದೆ ಎಂದು ಹೇಳುತ್ತದೆ ವಿ.ವಿಯ ವರದಿ.

ಹೆಚ್ಚಿನ ಸಂದರ್ಭಗಳಲ್ಲಿ ಈ ಮಧ್ಯಪ್ರವೇಶ ಸೇನಾ ತುಕಡಿಗಳ ನಿಯೋಜನೆಗೆ ಸೀಮಿತವಾಗಿದ್ದರೆ, ಇನ್ನೂ ಕೆಲವೆಡೆ ವಾಯು ದಾಳಿಗೆ ಸೀಮಿತಗೊಂಡಿದೆ. ಮತ್ತೂ ಕೆಲವು ರಾಷ್ಟ್ರಗಳಲ್ಲಿ ಅಮೆರಿಕದ ಸೇನೆ ಯುದ್ಧ (ಕೊರಿಯಾ, ವಿಯೆಟ್ನಾಂ, ಇರಾಕ್, ಅಫ್ಗಾನಿಸ್ತಾನ ಇತ್ಯಾದಿ) ನಡೆಸಿದೆ. ಎರಡನೇ ವಿಶ್ವ ಯುದ್ಧ ಮುಗಿದ ನಂತರ ಅಮೆರಿಕವು 50ಕ್ಕೂ ಹೆಚ್ಚು ರಾಷ್ಟ್ರಗಳ ಆಂತರಿಕ, ರಾಜಕೀಯ ವಿಚಾರಗಳಲ್ಲಿ ಮಧ್ಯಪ್ರವೇಶಿಸಿ, ಅಲ್ಲಿನ ಆಡಳಿತ ಮೇಲೆ ಪ್ರಭಾವ ಬೀರಲು ಯತ್ನಿಸಿದೆ. ಕಳೆದ 25 ವರ್ಷಗಳಿಂದ ಅಮೆರಿಕದ ಈ ಪ್ರವೃತ್ತಿ ಸ್ವಲ್ಪ ಜಾಸ್ತಿಯೇ ಆಗಿದೆ. ಅದಕ್ಕೆ ಹಲವು ಉದಾಹರಣೆಗಳೂ ಸಿಗುತ್ತವೆ.

ಈಡೇರದ ಉದ್ದೇಶ

ಹೊರದೇಶದ ಮೇಲೆ ದಾಳಿ ನಡೆಸುವುದಕ್ಕೂ ಮುನ್ನ ಅಮೆರಿಕ ನೀಡುವ ಪ್ರಮುಖ ಕಾರಣಗಳು ಇವು:

ಭಯೋತ್ಪಾದನೆಯ ವಿರುದ್ಧ ಹೋರಾಟ, ಜಾಗತಿಕ ಮಟ್ಟದಲ್ಲಿ ಶಾಂತಿ ಕಾಪಾಡುವುದು, ಅಮೆರಿಕದ ಪ್ರಜೆಗಳ ರಕ್ಷಣೆ, ಅಮೆರಿಕದ ಹಿತಾಸಕ್ತಿಗಳ ರಕ್ಷಣೆ, ದೇಶದ ಭದ್ರತೆಗೆ ಆತಂಕ, ಮಾನವ ಹಕ್ಕುಗಳ ರಕ್ಷಣೆ, ಹಿಂಸಾಚಾರ ತಡೆಯುವುದು, ಸರ್ವಾಧಿಕಾರಿ ಆಡಳಿತವನ್ನು ಬದಲಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೊಸ ಸರ್ಕಾರ ಸ್ಥಾಪಿಸುವುದು...

ಇರಾನ್ ಮೇಲೆ ದಾಳಿ ಆರಂಭಕ್ಕೂ ಮೊದಲು ಟ್ರಂಪ್ ನೀಡಿದ್ದು ಕೂಡ ಬಹುತೇಕ ಇವೇ ಕಾರಣಗಳು.

ಆದರೆ, ಎರಡೂವರೆ ದಶಕಗಳಲ್ಲಿ ಇದೇ ಉದ್ದೇಶಗಳನ್ನು ಇಟ್ಟುಕೊಂಡು ಅಮೆರಿಕವು ಅಫ್ಗಾನಿಸ್ತಾನ ಹಾಗೂ ಪಶ್ಚಿಮ ಏಷ್ಯಾದ ಕೆಲವು ರಾಷ್ಟ್ರಗಳ ಮೇಲೆ ಯುದ್ಧ, ಸೇನಾ ದಾಳಿ ನಡೆಸಿದೆ. ಆದರೆ, ಉದ್ದೇಶ ಈಡೇರಿಲ್ಲ. ಈ ರಾಷ್ಟ್ರಗಳಲ್ಲಿ ಮೇಲ್ನೋಟಕ್ಕೆ ಸರ್ಕಾರ ಬದಲಾದರೂ ಶಾಂತಿ ನೆಲಸಿಲ್ಲ. ಅಶಾಂತಿ, ಹಿಂಸಾಚಾರ ಇನ್ನಷ್ಟು ಜಾಸ್ತಿಯಾಗಿದೆ. ಅರಾಜಕತೆ ಸೃಷ್ಟಿಯಾಗಿದೆ.

ಉದಾಹರಣೆಗಳನ್ನು ಉಲ್ಲೇಖಿಸುವುದಾದರೆ:

ಅಫ್ಗಾನಿಸ್ತಾನ: ಇಸ್ಲಾಂ ಮೂಲಭೂತವಾದವನ್ನು ಪ್ರತಿಪಾದಿಸುವ ತಾಲಿಬಾನ್ ಸಂಘಟನೆಯ ಹಿಡಿತದಲ್ಲಿದ್ದ ಅಫ್ಗಾನಿಸ್ತಾನದ ಮೇಲೆ 2001ರಲ್ಲಿ ಅಮೆರಿಕ ಬೆಂಬಲಿತ ನ್ಯಾಟೊ ಪಡೆಗಳು ರಾಜಧಾನಿ ಕಾಬೂಲ್‌ಗೆ ನುಗ್ಗಿ ನಿರಂತರ ಕಾರ್ಯಾಚರಣೆ ನಡೆಸಿ ತಾಲಿಬಾನ್ ಅನ್ನು ಅಧಿಕಾರದಿಂದ ಕೆಳಗಿಸಿದವು. ಹಮೀದ್ ಕರ್ಜೈ ನೇತೃತ್ವದಲ್ಲಿ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರ ಅಲ್ಲಿ ಅಸ್ತಿತ್ವಕ್ಕೆ ಬಂತು. ಆದರೆ, ಸರ್ಕಾರ ಎರಡು ದಶಕ ಬಾಳಲಿಲ್ಲ. ಅಲ್ಲೀಗ ಮತ್ತೆ ತಾಲಿಬಾನ್ ಅಧಿಕಾರ ಚುಕ್ಕಾಣಿ ಹಿಡಿದಿದೆ. ಜನರು, ವಿಶೇಷವಾಗಿ ಮಹಿಳೆಯರ ಸ್ವಾತಂತ್ರ್ಯಗಳನ್ನೆಲ್ಲ ಅದು ಕಸಿದುಕೊಳ್ಳುತ್ತಿದೆ.

ಇರಾಕ್: ಸದ್ದಾಂ ಹುಸೇನ್ ಅವರ ಸರ್ವಾಧಿಕಾರಿ ಆಡಳಿತವಿದ್ದ ಇರಾಕ್ ಮೇಲೆಯೂ ಅಮೆರಿಕ ನೇತೃತ್ವದ ನ್ಯಾಟೊ ಪಡೆಗಳು ಯುದ್ಧ ಸಾರಿದ್ದವು. ಸದ್ದಾಂ ಹುಸೇನ್ ಅವರನ್ನು ಬಂಧಿಸಿದ್ದವು. ಕೊನೆಗೆ ನ್ಯಾಯಾಲಯ ಅವರಿಗೆ ಮರಣದಂಡನೆ ವಿಧಿಸಿತ್ತು. ಅಲ್ಲಿ ಪ್ರಜಾಪ್ರಭುತ್ವ ಸರ್ಕಾರವನ್ನು ಸ್ಥಾಪಿಸುವ ಭರವಸೆಯನ್ನು ಅಮೆರಿಕ ನೀಡಿತ್ತು. ಆದರೆ, ನಾಗರಿಕ ಯುದ್ಧ, ರಾಜಕೀಯ ಅಸ್ಥಿರತೆಯಿಂದ ಇರಾಕ್ ತತ್ತರಿಸಿದೆ. ಐಎಸ್ ಉಗ್ರ ಸಂಘಟನೆಯೂ ಅಲ್ಲಿ ಸಕ್ರಿಯವಾಗಿದೆ.

ಲಿಬಿಯಾ: ಸರ್ವಾಧಿಕಾರಿ ಮುಅಮ್ಮರ್ ಗಡಾಫಿ ಆಡಳಿತವಿದ್ದ ಲಿಬಿಯಾವು ನಾಗರಿಕ ಯುದ್ಧದಿಂದ ಬಸವಳಿದಿತ್ತು. 2011ರಲ್ಲಿ ಅಮೆರಿಕ ಬೆಂಬಲಿತ ನ್ಯಾಟೊ ಪಡೆಗಳು ಲಿಬಿಯಾದಲ್ಲಿ ಸೇನಾ ಕಾರ್ಯಾಚರಣೆ ನಡೆಸಿ ಗಡಾಫಿ ಆಡಳಿತ ಪತನಗೊಳ್ಳುವಂತೆ ಮಾಡಿದ್ದವು. ಕಾರ್ಯಾಚರಣೆಯಲ್ಲಿ ಗಡಾಫಿ ಪ್ರಾಣ ಕಳೆದುಕೊಂಡಿದ್ದರು. ಲಿಬಿಯಾದಲ್ಲಿ ರಾಜಕೀಯ ಅಸ್ಥಿರತೆ ಈಗಲೂ ಮುಂದುವರಿದಿದೆ.

ವೆನೆಜುವೆಲಾ: ತನ್ನ ವಿರುದ್ಧ ತೊಡೆತಟ್ಟಿ ನಿಂತಿದ್ದ ವೆನೆಜುವೆಲಾದ ಮೇಲೆ ಈ ವರ್ಷಾರಂಭದಲ್ಲಿ ದಿಢೀರ್ ಸೇನಾ ಕಾರ್ಯಾಚರಣೆ ನಡೆಸಿ ರಾತ್ರೋರಾತ್ರಿ ಅಲ್ಲಿನ ಅಧ್ಯಕ್ಷ ನಿಕೋಲಸ್ ಮಡೂರೊ ಅವರನ್ನು ಸೆರೆ ಹಿಡಿದು ಕರೆದುಕೊಂಡು ಬಂದು, ಅಮೆರಿಕ ಜೈಲಿನಲ್ಲಿಟ್ಟಿದೆ. ವೆನೆಜುವೆಲಾ ಅಮೆರಿಕಕ್ಕೆ ಮಾದಕ ವಸ್ತು ಕಳ್ಳಸಾಗಣೆ ಮಾಡುತ್ತಿದೆ ಎಂದು ಹೇಳಿದ್ದ ಟ್ರಂಪ್, ಅಲ್ಲಿಯೂ ಬಲವಂತವಾಗಿ ಸರ್ಕಾರ ಬದಲಿಸಲು ಯತ್ನಿಸಿದ್ದರು. ಆದರೆ, ಹೊಸ ಅಧ್ಯಕ್ಷೆ ಅಮೆರಿಕದ ಷರತ್ತುಗಳಿಗೆ ಒಪ್ಪಿಕೊಂಡಿರುವುದರಿಂದ ಟ್ರಂಪ್ ಸದ್ಯ ತಣ್ಣಗಾಗಿದ್ದಾರೆ.

ಬಡತನ, ಅಸಮಾನತೆ, ನಿರುದ್ಯೋಗ

ಇರಾನ್‌ನಲ್ಲಿ 1979ರಲ್ಲಿ ಇಸ್ಲಾಂ ಕ್ರಾಂತಿ ನಡೆದು, 'ಧರ್ಮಾಧಾರಿತ ಆಳ್ವಿಕೆ' (ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್) ಸ್ಥಾಪನೆಯಾಗಿತ್ತು. ರಾಜಪ್ರಭುತ್ವ ಕೊನೆಗೊಂಡು, ಖಮೇನಿ ಮನೆತನದ ಧರ್ಮಗುರುಗಳು ಪರಮೋಚ್ಚ ಪದವಿ ಅಲಂಕರಿಸತೊಡಗಿದರು. ಅಂದಿನಿಂದ ಇಸ್ಲಾಮಿಕ್ ಧಾರ್ಮಿಕ ನಿಯಮಗಳು ಕಟ್ಟುನಿಟ್ಟಾಗಿ ಜಾರಿಯಾದವು. ಮಹಿಳೆಯರು ಹಿಜಾಬ್ ಧರಿಸುವುದು ಕಡ್ಡಾಯವಾಯಿತು. ಆಗಿನಿಂದಲೂ ಹಲವು ಬಾರಿ ಧರ್ಮಾಧಾರಿತ ಆಡಳಿತದ ವಿರುದ್ಧ ಪ್ರತಿಭಟನೆಗಳು ನಡೆದಿವೆ. 2022ರಲ್ಲಿ ಹಿಜಾಬ್ ಧರಿಸದ ಕಾರಣಕ್ಕೆ ಪೊಲೀಸರು ವಶಕ್ಕೆ ಪಡೆದಿದ್ದ ಯುವತಿ ಸಾವಿಗೀಡಾಗಿದ್ದರು. ಅದರ ವಿರುದ್ಧ ದೇಶದಾದ್ಯಂತ ಭಾರಿ ಪ್ರತಿಭಟನೆಗಳು ನಡೆದಿದ್ದವು.

ದೇಶದ ಶೇ 30ಕ್ಕೂ ಹೆಚ್ಚು ಜನ ಬಡತನದ ರೇಖೆಗಿಂತ ಕೆಳಗಿದ್ದು, ಊಟ, ವಸತಿಯಂಥ ಮೂಲಭೂತ ಅಗತ್ಯಗಳಿಗೂ ಪರದಾಡುತ್ತಿದ್ದಾರೆ. ಈ ಸಂಖ್ಯೆ ಇನ್ನೂ ಹೆಚ್ಚಾಗಿರುವ ಸಾಧ್ಯತೆ ಇದೆ, ನಿರುದ್ಯೋಗ ತೀವ್ರವಾಗಿದೆ ಎಂದು ಅಧ್ಯಯನ ವರದಿಯೊಂದು ಉಲ್ಲೇಖಿಸಿದೆ. 'ಇರಾನ್ ಹ್ಯೂಮನ್ ರೈಟ್ಸ್ ವಾಚ್' ಪ್ರಕಾರ, ದೇಶದಲ್ಲಿ ಭಾರಿ ಪ್ರಮಾಣದ ಅಸಮಾನತೆ ಇದ್ದು, ಶ್ರೀಮಂತರ ಮತ್ತು ಬಡವರ ನಡುವಿನ ಅಂತರ ಹೆಚ್ಚಾಗಿದೆ. ಹೆಚ್ಚಿದ ಹಣದುಬ್ಬರ, ಆಹಾರದ ಭದ್ರತೆ ಇಲ್ಲದಿರುವುದು, ಭ್ರಷ್ಟಾಚಾರ, ದುರಾಡಳಿತ ವ್ಯಾಪಕವಾಗಿದೆ ಎಂದು ಹೇಳಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕ ನಡೆಸುತ್ತಿರುವ ವೈಮಾನಿಕ ದಾಳಿಗೆ ಪ್ರತಿಯಾಗಿ ಇರಾನ್, ಕೊಲ್ಲಿ ರಾಷ್ಟ್ರಗಳಲ್ಲಿರುವ ಅಮೆರಿಕದ ಸೇನಾ ನೆಲೆಗಳ ಮೇಲೆ ಪ್ರತಿ ದಾಳಿ ನಡೆಸಿದೆ. ಈ ದಾಳಿಗೆ ಸಂಬಂಧಿಸಿದ ಹಲವು ವಿಡಿಯೊಗಳು ಜಾಲತಾಣಗಳಲ್ಲಿ ಹರಿದಾಡುತ್ತಿವೆ. 'ಎಕ್ಸ್' ಬಳಕೆದಾರರೊಬ್ಬರು 'ಇಡೀ ಸೌದಿ ಅರೇಬಿಯಾ ಹೊತ್ತಿ ಉರಿಯುತ್ತಿದೆ. ನಾವು ಯಾವುದೇ ತಪ್ಪು ಮಾಡಿಲ್ಲ. ಆದರೆ, ಅವರವರೇ ತಪ್ಪು ಮಾಡುತ್ತಿದ್ದಾರೆ. ಇರಾಕಿನ ಡ್ರೋನ್‌ಗಳು ಕೊಲ್ಲಿಯಲ್ಲಿರುವ ಅಮೆರಿಕದ ನೆಲೆಗಳ ಮೇಲೆ ದಾಳಿ ಮಾಡುತ್ತಿವೆ' ಎಂದು ಪ್ರತಿಪಾದಿಸುತ್ತಾ ಭಾರಿ ಪ್ರಮಾಣದಲ್ಲಿ ಬೆಂಕಿ ಉರಿಯುತ್ತಿರುವ ವಿಡಿಯೊವೊಂದನ್ನು ಪೋಸ್ಟ್ ಮಾಡಿದ್ದಾರೆ. ಆದರೆ, ಇದು ಸುಳ್ಳು ಮಾಹಿತಿ.

ವಿಡಿಯೊ ತುಣುಕಿನ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ಹಲವರು ಇದೇ ಪೋಸ್ಟ್ ಹಂಚಿಕೊಂಡಿರುವುದು ಕಂಡು ಬಂತು. ಇನ್ನಷ್ಟು ಹುಡುಕಿದಾಗ 'ಯುನೈಟೆಡ್ ಯೆಮನಿ ಕಮ್ಯುನಿಟಿ ಇನ್ ಸ್ಕಾಟ್ಲೆಂಡ್' ಎಂಬ 'ಎಕ್ಸ್' ಖಾತೆಯಲ್ಲಿ 2024ರ ಜುಲೈ 20ರಂದು ಪೋಸ್ಟ್ ಮಾಡಿದ ಇದೇ ವಿಡಿಯೊ ಸಿಕ್ಕಿತು. ಯೆಮನ್‌ನ ಹುದಾಯ್ದಾಹ್ ಬಂದರಿನ ಮೇಲೆ ನಡೆದ ದಾಳಿಯ ವಿಡಿಯೊ ಎಂದು ಅದರಲ್ಲಿ ಹೇಳಲಾಗಿತ್ತು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ, ಸ್ವತಂತ್ರವಾದ ಆ್ಯಡೆನ್ ಚಾನೆಲ್, ಎಐಸಿ ಟಿವಿಯ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲೂ 2024ರ ಜುಲೈ 20ರಂದು ಇದೇ ವಿಡಿಯೊ ಅಪ್‌ಲೋಡ್ ಮಾಡಿರುವುದು ಸಿಕ್ಕಿತು. 'ಹೊಡೈಡಾ ಬಂದರಿನ ಮೇಲೆ ಇಸ್ರೇಲ್ ದಾಳಿ ನಡೆಸಿರುವ ಹೊಸ ವಿಡಿಯೊ' ಎಂದು ಅದರಲ್ಲಿ ಹೇಳಲಾಗಿತ್ತು. ಹಳೆಯ ವಿಡಿಯೊವನ್ನು ಸೌದಿ ಅರೇಬಿಯಾದ ಮೇಲೆ ಈಗ ನಡೆದಿರುವ ದಾಳಿಯ ವಿಡಿಯೊ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಯಜಮಾನಿಕೆಯ ದರ್ಪ, ದುರಂತ

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್

ಕಾರು ಕೊಂಡವರೆಲ್ಲ ಬಡವರ ಶೋಷಕರು ಎಂದು ಭಾವಿಸಿದ್ದ ಹಸಿಹಸಿ ಚಿಂತನೆಗಳ ವ್ಯಕ್ತಿಯೊಬ್ಬ ದಿನ ಬೆಳಗಾದರೆ ದೀನದಲಿತರ ಪರವಾಗಿ ಕಂಡಕಂಡವರ ಜೊತೆಗೆ ವಾಗ್ವಾದ ನಡೆಸುತ್ತಿದ್ದ. ಇವನ ಬಡವರ ಪರ ಕಾಳಜಿಯನ್ನು ಅನೇಕರು ಇಷ್ಟಪಡುತ್ತಿದ್ದರು. ಇನ್ನು ಕೆಲವರು ಇದೆಲ್ಲ ಎಷ್ಟು ದಿನ ನಡೆಯುತ್ತೆ ನೋಡೋಣ ಅಂತ ಆಡಿಕೊಳ್ಳುತ್ತಿದ್ದರು. ಒಂದಿಷ್ಟು ಅದೂ ಇದೂ ಓದಿಕೊಂಡಿದ್ದ ಈ ಮನುಷ್ಯನಿಗೆ ಪಿತ್ರಾರ್ಜಿತವಾಗಿ ಬಂದಿದ್ದ ಇಪ್ಪತ್ತು ಎಕರೆ ಅಡಿಕೆ ತೋಟವಿತ್ತು. ಅಲ್ಲಿ ಕೂಲಿ ಕೆಲಸ ಮಾಡುತ್ತಿದ್ದವರನ್ನು ಯಾವ ಭೇದವೂ ಇಲ್ಲದಂತೆ ಮುಟ್ಟಿ, ಹೆಗಲ ಮೇಲೆ ಕೈಯಿಟ್ಟು ತಿನ್ನಿಸಿ ಕುಡಿಸಿ ಚೆನ್ನಾಗಿ ನೋಡಿಕೊಂಡಿದ್ದ.

ಕ್ರಮೇಣ ಅಡಿಕೆಗೆ ವಿಪರೀತ ಬೆಲೆ ಬಂದು ತಾನೂ ಒಂದು ಕಾರನ್ನು ಕೊಂಡುಕೊಂಡ. ಬರುಬರುತ್ತಾ ದೊಡ್ಡ ನಗರಗಳ ಜೀವನ ಶೈಲಿಯನ್ನು ಕಂಡು ತಾನೂ ಹಾಗೆ ಬದುಕುವ ಕನಸು ಕಂಡ. ನಗರದ ಸುಖಜೀವನಕ್ಕೆ ಆಡಂಬರದ ಖಯಾಲಿಗಳಿಗೆ ಬೇಕಾದ ದುಡ್ಡು ಕಾಸಿಗೆ ಯಾವ ಕೊರತೆಯೂ ಇರಲಿಲ್ಲ. ಬರುಬರುತ್ತಾ ಒಬ್ಬ ಡ್ರೈವರನನ್ನು ನೇಮಿಸಿಕೊಂಡ. ತಾನು ಉಡುವ ಬಟ್ಟೆ, ತೊಡುವ ಚಪ್ಪಲಿ–ಶೂ, ತಿನ್ನಲು ಬಾದಾಮಿ, ಪಿಸ್ತಾ, ಗೋಡಂಬಿ ಮುಂತಾದವನ್ನೆಲ್ಲ ಮುತುವರ್ಜಿಯಿಂದ ಕಾರಿನಲ್ಲಿ ಇಟ್ಟಿರುವಂತೆ ನಿಗಾವಹಿಸುತ್ತಿದ್ದ. ಮೊದಲೆಲ್ಲ ಹಳ್ಳಿ ಮನೆಯ ನೀರನ್ನೇ ಕುಡಿಯುತ್ತಿದ್ದವನಿಗೆ ನಗರದಲ್ಲಿ ದೊರೆಯುವ ಮಿನರಲ್ ವಾಟರ್ ಬೇಕಾಯ್ತು. ಮನೆಗೆ ದೊಡ್ಡವನೆಂದು ಹೆದರುತ್ತಿದ್ದ ತಮ್ಮ ತಂಗಿಯರನ್ನು ಕೆಲಸದವರಂತೆ ಭಾವಿಸಿದ. ಕೂಲಿಯವರನ್ನು ಮೊದಲಿನ ಸಲುಗೆಯಿಂದ ಮಾತಾಡಿಸದೆ ಅಂತರ ಕಾಯ್ದುಕೊಳ್ಳತೊಡಗಿದ. ಅವರು ತಮ್ಮ ಸಾಹುಕಾರರಲ್ಲಿ ಏನೋ ಬದಲಾವಣೆ ಆಗುತ್ತಿರುವುದನ್ನು ಗಮನಿಸಿ ಕೆಲವರು ಬಿಟ್ಟುಹೋದರು. ಐಷಾರಾಮದ ಶೋಕಿಯ ಜೀವನಶೈಲಿ ಇಷ್ಟವಾದಂತೆ ಅವನನ್ನು ಹೊಗಳುವವರು ಸ್ನೇಹಿತರಾದರು. ಅವರಲ್ಲಿ ಕೆಲವರು ಭಟ್ಟಂಗಿಗಳೇ ಆದರು. ಆಟವಾಡಲು ಸುಂದರವಾದ ಬೆಕ್ಕೊಂದನ್ನು ಕೇಳಿದರೆ ಇವರು ತರುಣಿಯನ್ನು ತಂದು ನಿಲ್ಲಿಸಿದರು. ಅವನಿಗೆ ಒಂದೊಂದೇ ಮದ ಹೆಚ್ಚಾಗಿ ತನ್ನ ಸಿರಿವಂತಿಕೆಯ ಕಾಲಿಗೆ ಬಿದ್ದವರು ಗುಲಾಮರಂತೆ ಕಾಣತೊಡಗಿದ. ಸ್ನೇಹ ಸಲುಗೆಯು ಸತ್ತು ದರ್ಪ ಮತ್ತು ತೇಂಕಾರದ ದನಿ ಚಿಗುರಿತು. ತಾನು ಇವರಿಗೆಲ್ಲ ಬಾಸ್ ಎಂಬ ಅಹಂಕಾರದ ಜೊತೆಗೆ ಬರಬಾರದ ರೋಗಗಳೆಲ್ಲ ತಗುಲಿಕೊಂಡು ತೀರಿಹೋದ.

ಯಜಮಾನಿಕೆ ಅನ್ನುವುದೊಂದು ದಾಳಿಕೋರನ ಅಸಹನೆ. ತಾನು ಬಯಸಿದ್ದು ಸಲೀಸಾಗಿ ದೊರೆಯದೇ ಇದ್ದರೆ ದಾಳಿಮಾಡಿ ದಕ್ಕಿಸಿಕೊಳ್ಳುವ ದರ್ಪಿಷ್ಟನ ದೌರ್ಬಲ್ಯ. ಅದು ವೈಭೋಗದಲ್ಲಿ ಹುಟ್ಟುವುದಿಲ್ಲ. ದರ್ಪ ತೋರುವುದು ಯಜಮಾನನ ಲಕ್ಷಣವೂ ಅಲ್ಲ.

ವಂದಿಮಾಗಧರ ಭಜನೆಯಿಂದ ಯಜಮಾನನಾಗಲು ಸಾಧ್ಯವಿಲ್ಲ. ಸಂಕಟದಲ್ಲಿರುವ ಸಮಾಜಕ್ಕೆ ಬೇಕಾಗಿರುವುದು ದೂರದ ನಂಟನಲ್ಲ, ಹತ್ತಿರದ ಜೊತೆಗಾರ. ಅವನು ಸುಖದುಃಖಗಳ ಸಮಾನ ಪಾಲುದಾರನಾಗಬೇಕು. ಆಗಲೇ ಅವನ ಇರುವಿಕೆಗೊಂದು ಘನತೆ. ಅವನು ಯಾವಾಗಲೋ ಬಂದು ಯಾರದೋ ಬೆವರಿನ ಬೆಳೆಯನ್ನು ಒಕ್ಕಲು ಮಾಡಿಕೊಂಡು ಮೆರೆದರೆ ಅದು ಕೇವಲ ಸ್ವಾರ್ಥ.

ದಯೆಯಿಲ್ಲದ ಯಜಮಾನಿಕೆ ದುಡಿಯುವವರನ್ನೂ ದೇವರನ್ನೂ ದೂರವಿಡುತ್ತ ಒಂಟಿಯಾಗುತ್ತದೆ. ಕ್ರೂರ ದಾಳಿಯಿಂದ ಬಂದ ಸಂಪತ್ತನ್ನು ಅನುಭವಿಸಲೂ ಆಗದಂತಹ ದುರಂತ ಎದುರಾಗುತ್ತದೆ. ಎಲ್ಲರ ಚರಿತ್ರೆ ತೆರೆದುಕೊಂಡು ಯಾವುದೂ ಸ್ಥಿರವಲ್ಲ ಅನಿಸುತ್ತದೆ. ನಿರಂತರ ಏಳುಬೀಳುಗಳ ಅಲೆಯಲ್ಲಿ ಮೇಲಿದ್ದವನು ಮುಳುಗುವುದಿಲ್ಲ ಎಂಬ ಭರವಸೆಗೆ ಆಧಾರವಿಲ್ಲ. ಹೆಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ. ಅಲ್ಲರ ಅರ್ಧರಾತ್ರಿಯಲ್ಲಿ ಯಾರ ದಾರಿ ಹೇಗೆ ಸಾಗುವುದೋ ನೋಡಬೇಕು. ಯಜಮಾನಿಕೆ ಅಳಿದು ಸ್ನೇಹ ಸಲುಗೆ ಸಹನೆಗಳು ಉಳಿಯಬೇಕು.

ಪದಬಂಧ 6331

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ದೇವರಿಗೆ ಮಾಡಿಸುವ ಮಂಗಳಸ್ನಾನ (4)
3.ಭಾರವಿರುವ ತಳಹದಿ (4)
5.ದಿನದೊಳಗೇ ಮಂತ್ರಿ ಬಂದಿರುವನಲ್ಲಾ! (3)
8.ಕಾಡಿಗೊಂದು ಪರ್ಯಾಯ ಪದ (3)
9.ಮರದಲ್ಲಿರುವ ನವಿಲು ಕಾಣುತ್ತಿದೆಯೇ? (3)
10.ಆತುರ ಈ ರೀತಿ ಬಂದಿದೆ (3)
11.ಆತಂಕ ಹುಟ್ಟಿಸಿದ ಯಮ (3)
15.ತಗ್ಗುದಿಣ್ಣೆಗಳಿಲ್ಲದ್ದು (4)
16.ಕೊನೆಗೆ ವಿಕ್ರಯಿಸಿದಾಗಿನ ಅಸಂಬದ್ಧತೆ! (4)

ಮೇಲಿಂದ ಕೆಳಕ್ಕೆ

1.ಆದಿಯಿಲ್ಲದದು ಇದು (3)
2.ಧಾನ್ಯ ಒಕ್ಕುವ ಸ್ಥಳದಲ್ಲಿರುವ ರವಿಕೆ ಬಟ್ಟೆ (2)
3.ಸಹಕಾರದ ವಿರುದ್ಧ ಪದ (5)
4.ಪುಸ್ತಕದ ಮೇಲು ಹೊದಿಕೆ (2)
6.ಸಂಗೀತ ಕೃತಿಗಳನ್ನು ರಚಿಸುವವನು (5)
7.ಜನರಲ್ಲಿ ಹಬ್ಬಿರುವ ವಿಷಯ (5)
9.ಸಾಯುವ ಸಮಯವಿದು (5)
12.ಕಾರನ್ನೇರಲು ಹಾಕಿದ ಷರತ್ತು! (3)
13.ಆವರಣ ಚಿಹ್ನೆಯಿದು (2)
14.ಕೊಡು ಕೊಡು ಎನ್ನುತ್ತಿದ್ದಾಗ ಕಾಣಿಸಿದ ಅಜ್ಜ (2)



6330ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪಮಾನ 3.ಅವಸಾನ
5.ಗಗನ 6.ತಲೆ
7.ಒಣಹರಟೆ 10.ಶಾಪ
12.ನುಣುಪು 14.ನತದೃಷ್ಟ
15.ವರ್ಧಮಾನ

ಮೇಲಿಂದ ಕೆಳಕ್ಕೆ:
1.ಉಪವೀತ 2.ನವೀಕರಣ
3.ಅಣ್ಣ 4.ನವನಟಿ
5.ಗಲಾಟೆ 7.ಒನಪು
8.ರಜತೋತ್ಸವ 9.ಅನುಮಾನ
11.ಪರಿಜ್ಞಾನ 13.ಕಷ್ಟ

ಸುಡೊಕು 6715

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9		1			7		3	8
			2	3		1		
5		2		1				7
2		5					7	
				5	3	8		9
	9						5	
4		3			2			
	5			4		7		2
7		9	6		5		1	

6714 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

02 ಮಾರ್ಚ್ 2026 ಸೋಮವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಚತುರ್ದಶಿ **ಗಂ.** 17-56 **ನಕ್ಷತ್ರ:** ಆಶ್ಲೇಷ ಗಂ. 7-52 **ಯೋಗ:** ಅತಿಗಂಡ ಗಂ. 12-19 **ಕರಣ:** ಗರ ಗಂ 6-30 ಕುಂಭ ಮಾಸದ 17 ನೇ ದಿನ. **ಮಳೆ ನಕ್ಷತ್ರ :** ಶತಭಿಷ 4 ನೇ ಪಾದ. **ರಾಹುಕಾಲ :** ಬೆಳಿಗ್ಗೆ 07-30 - 09-00 **ಸೂರ್ಯೋದಯ :** 06-49 **ಸೂರ್ಯಾಸ್ತ :** 06-36 **ಮುಸ್ಲಿಂ ದಿನಾಂಕ :** 12 ರಂಜಾನ್ **ಅದೃಷ್ಟ ಸಂಖ್ಯೆ :** 4, 6

ಮೇಷ: ಕೌಟುಂಬಿಕ ನೆಮ್ಮದಿ ಸಮೃದ್ಧಿಯಾಗಿರಲಿದ್ದು, ಅಣ್ಣತಮ್ಮಂದಿರ ನಡುವೆ ಸಣ್ಣ-ಪುಟ್ಟ ಮಾನಸಿಕ ಕಿರಿಕಿರಿಗಳೂ ತಪ್ಪುತ್ತವೆ. ನಿಮ್ಮ ಮನಸ್ಸಿನಲ್ಲಿ ಕೊರೆಯುತ್ತಿರುವ ಹಲವು ಚಿಂತೆಗಳಿಗೆ ಈ ದಿನ ಉತ್ತರ ಸಿಗುವುದು.

ವೃಷಭ: ನಿಮ್ಮ ಸ್ನೇಹಿತರೊಂದಿಗೆ ಜಂಟಿಯಾಗಿ ವ್ಯವಹರಿಸಿದಲ್ಲಿ ಆದಾಯವನ್ನು ದ್ವಿಗುಣಗೊಳಿಸಿಕೊಳ್ಳುವುದಕ್ಕೆ ಸಹಾಯವಾಗುವುದು. ಹೊಸ ಜನರನ್ನು ಭೇಟಿಯಾಗುವ ಮೂಲಕ ಉದ್ಯೋಗದಲ್ಲಿ ಹೊಸ ಹುರುಪು ಮೂಡಲಿದೆ

ಮಿಥುನ: ಉದ್ಯೋಗದಲ್ಲಿ ಬದಲಾವಣೆಯ ಯೋಚನೆ ಮಾಡುವವರು ಸದ್ಯದ ಪರಿಸ್ಥಿತಿಯಲ್ಲಿ ಸಿಕ್ಕಿರುವ ಕೆಲಸದಲ್ಲೇ ತೃಪ್ತಿಪಡುವುದು ಒಳ್ಳೆಯದು. ಸರಕಾರಿ ಕಚೇರಿಗಳಿಗೆ ಅಲೆದಾಟವು ಹೆಚ್ಚಾಗಿ, ಹಣದ ಖರ್ಚಿಗೆ ಕಾರಣವಾದೀತು

ಕರ್ಕಾಟಕ: ತಾಂತ್ರಿಕ ವಿದ್ಯಾಭ್ಯಾಸದ ಅಂತಿಮ ಹಂತ ತಲುಪಿದವರಿಗೆ ಹೆಸರುವಾಸಿ ಕಂಪನಿಯಲ್ಲಿ ಉದ್ಯೋಗ ದೊರಕುವುದು. ಕಂಟ್ರಾಕ್ಟರ್‌ಗಳು ಹಾಗು ಬಿಲ್ಡರ್‌ಗಳಿಗೆ ಈ ದಿನವು ಅನುಕೂಲಕರ ದಿನವಾಗುವುದು.

ಸಿಂಹ: ಮಹಿಳೆಯರಿಗೆ ಉಪಯೋಗಕ್ಕೆ ಬಾರದ ವಿಚಾರದ ಬಗೆಗಿನ ಚಿಂತನೆಯು ಆರೋಗ್ಯವನ್ನು ಹಾಳು ಮಾಡುತ್ತದೆ. ಪ್ರಾಮಾಣಿಕವಾಗಿ ನಡೆಯುವ ನಿಮಗೆ ವ್ಯವಹಾರದಲ್ಲಿ ಲಾಭ ಕಡಿಮೆ ಇದ್ದರೂ ನೆಮ್ಮದಿ ಇರಲಿದೆ.

ಕನ್ಯಾ: ನೂತನವಾದ ಸ್ವತ್ತು ಖರೀದಿಯ ವ್ಯವಹಾರಗಳಲ್ಲಿ ಸಮರ್ಥನೀಯ ತೀರ್ಮಾನ ಕೈಗೊಳ್ಳುವುದು ಈ ದಿನದ ಅತೀ ಮುಖ್ಯ ಕೆಲಸವಾಗಿರುತ್ತದೆ. ವೃತ್ತಿ ಪರವಾಗಿ ಇರುವ ಸ್ಪರ್ಧೆಗಳಲ್ಲಿ ಹೆಚ್ಚಿನ ಮುನ್ನಡೆ ನಿಮ್ಮ ಪಾಲಿಗೆ ಇರುವುದು.

ತುಲಾ: ಗೃಹಾಲಂಕಾರ ವಸ್ತುಗಳು, ಪೀಠೋಪಕರಣಗಳ ವ್ಯಾಪಾರದಿಂದ ಅಧಿಕ ಲಾಭ ಹೊಂದುವಿರಿ. ಮಗನ ಮೇಲಿನ ನಂಬಿಕೆಯು ಕಡಿಮೆಯಾಗುವ ಪ್ರಸಂಗ ನಡೆಯಬಹುದು. ತಂದೆ ತಾಯಿ ಆರೋಗ್ಯ ಉತ್ತಮವಾಗಿರುವುದು.

ವೃಶ್ಚಿಕ: ಕುಟುಂಬದ ಸತ್ಕಾರ್ಯಗಳಲ್ಲಿ ಬಂಧುಗಳ ಸಕ್ರಿಯ ಪಾತ್ರವು ನಿಮ್ಮ ಜವಾಬ್ದಾರಿ ಕಡಿಮೆ ಮಾಡಲಿದೆ. ದುಬಾರಿ ಜೀವನ ಶೈಲಿಯನ್ನು ಇಷ್ಟ ಪಡುವ ನಿಮಗೆ ಅದಕ್ಕೆ ತಕ್ಕಂತಹ ಸರ್ವ ವಿಧದ ಸೌಕರ್ಯ ಸಿಗುವುದು.

ಧನು: ಪಾಲುಗಾರರಲ್ಲಿ ಮುಖಾಮುಖಿ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುವುದು ಒಳ್ಳೆಯದು. ದಕ್ಷರಾಗಿಯೂ ದಾಕ್ಷಿಣ್ಯ ಸ್ವಭಾವದವರಾದ ನಿಮಗೆ ಅಗೌರವ, ನಷ್ಟದಂತಹ ಪರಿಸ್ಥಿತಿಯು ಎದುರಾಗಬಹುದು.

ಮಕರ: ವೈದ್ಯರ ಸಲಹೆಯಂತೆ ಮನಸ್ಸಿನ ಸಂಯಮಕ್ಕಾಗಿ ಯೋಗ, ಧ್ಯಾನದತ್ತ ಗಮನ ಹರಿಸಿ. ಆರೋಗ್ಯ ವೃದ್ಧಿಗಾಗಿ ದೈನಂದಿನ ಚಟುವಟಿಕೆಯಲ್ಲಿ ಸರಿಯಾದ ನಿಯಮ ಪಾಲಿಸುವುದು ಒಳ್ಳೆಯದು. ದ್ವಿ ಚಕ್ರ ವಾಹನ ಖರೀದಿ ಯೋಗವಿದೆ.

ಕುಂಭ: ನಿಮ್ಮ ದ್ವಿಸ್ವಭಾವದ ನಡವಳಿಕೆಯನ್ನು ಹಿಡಿತದಲ್ಲಿಟ್ಟುಕೊಂಡರೆ ಸಂದಿಗ್ಧ ಪರಿಸ್ಥಿತಿಗೆ ಸಿಲುಕುವುದು ತಪ್ಪುವುದು. ಗುಪ್ತಚರ ಇಲಾಖೆ ಉದ್ಯೋಗಿಗಳಿಗೆ ಸರ್ಕಾರದಿಂದ ಪ್ರಶಸ್ತಿ ಮತ್ತು ಬಹುಮಾನ ದೊರೆಯಲಿದೆ

ಮೀನ: ಸಮಸ್ಯೆಯಿಂದ ಹೊರಬರಲು ಯಾವುದೇ ರೀತಿಯ ಮುಚ್ಚುಮರೆ ಇಲ್ಲದೇ ಇರುವುದು ಒಂದೇ ದಾರಿ. ಯಂತ್ರೋಪಕರಣಗಳ ಖರೀದಿಯಿಂದಾಗಿ ಅಧಿಕ ಖರ್ಚು ಸಂಭವಿಸುವುದು. ಕಾಸ್ಮೆಟಿಕ್ ವ್ಯಾಪಾರಿಗಳಿಗೆ ಒಳ್ಳೆಯ ಲಾಭ.

ಗುಂಡಣ್ಣ

ಜಿಎಸ್‌ಟಿ: ₹1.83 ಲಕ್ಷ ಕೋಟಿ ಸಂಗ್ರಹ

ಏಪ್ರಿಲ್‌ನಿಂದ ಫೆಬ್ರುವರಿವರೆಗೆ ₹20.27 ಲಕ್ಷ ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಫೆಬ್ರುವರಿ ತಿಂಗಳಿನಲ್ಲಿ ₹1.83 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. ಕಳೆದ ವರ್ಷದ ಫೆಬ್ರುವರಿಗೆ ಹೋಲಿಸಿದರೆ ವರಮಾನ ಸಂಗ್ರಹವು ಶೇ 8.1ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಸರ್ಕಾರ ಭಾನುವಾರ ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಫೆಬ್ರುವರಿವರೆಗೆ ಒಟ್ಟು ₹20.27 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಈ ಬಾರಿ ಇದು ಶೇ 8.3ರಷ್ಟು ಏರಿಕೆಯಾಗಿದೆ.

ಆಮದು ಮಾಡಿಕೊಂಡ ಸರಕುಗಳಿಂದ ಬಂದ ವರಮಾನದಲ್ಲಿನ ಹೆಚ್ಚಳ ಮತ್ತು ದೇಶಿ ಮಾರುಕಟ್ಟೆಯಲ್ಲಿ ಮಾರಾಟ ಹೆಚ್ಚಳ ಆಗಿರುವುದು ಫೆಬ್ರುವರಿ ತಿಂಗಳ ಜಿಎಸ್‌ಟಿ ಸಂಗ್ರಹ ಜಾಸ್ತಿ ಆಗಿರುವುದಕ್ಕೆ ಕಾರಣ ಎಂದು ತಿಳಿಸಿದೆ.

ಆಂತರಿಕ ವಹಿವಾಟುಗಳಿಂದ ಬರುವ ಜಿಎಸ್‌ಟಿ ವರಮಾನವು ಶೇ 5.3ರಷ್ಟು ಹೆಚ್ಚಳವಾಗಿ, ₹1.36 ಲಕ್ಷ ಕೋಟಿ ಆಗಿದೆ. ಆಮದು ಸರಕುಗಳಿಂದ ಬಂದ ವರಮಾನದಲ್ಲಿ ಶೇ 17.2ರಷ್ಟು ಏರಿಕೆಯಾಗಿದ್ದು, ₹47,837 ಕೋಟಿ ಆಗಿದೆ. ಒಟ್ಟು ಮರುಪಾವತಿಯು ₹22,595 ಕೋಟಿಯಾಗಿದ್ದು, ಶೇ 10.2ರಷ್ಟು ಹೆಚ್ಚಳವಾಗಿದೆ.

ಸೆಪ್ಟೆಂಬರ್ ತಿಂಗಳಿನಲ್ಲಿ ಜಿಎಸ್‌ಟಿ ದರ ಪರಿಷ್ಕರಣೆ ಆಯಿತು. ನವೆಂಬರ್‌ನಲ್ಲಿ ಜಿಎಸ್‌ಟಿ ಸಂಗ್ರಹವು ಮಂದಗೊಂಡು ₹1.70 ಲಕ್ಷ ಕೋಟಿ ಆಗಿತ್ತು. ಡಿಸೆಂಬರ್‌ನಲ್ಲಿ ₹1.74 ಲಕ್ಷ ಕೋಟಿ ಮತ್ತು ಜನವರಿಯಲ್ಲಿ ₹1.93 ಲಕ್ಷ ಕೋಟಿ ಸಂಗ್ರಹವಾಗಿದೆ.

ಫೆಬ್ರುವರಿ: ವಾಹನ ಮಾರಾಟ ಏರಿಕೆ

ನವದೆಹಲಿ (ಪಿಟಿಐ): ಫೆಬ್ರುವರಿ ತಿಂಗಳಿನಲ್ಲಿ ವಾಹನಗಳ ಮಾರಾಟವು ಏರಿಕೆ ಕಂಡಿದೆ. ಗ್ರಾಹಕರಿಂದ ವಾಹನಗಳಿಗೆ ಬೇಡಿಕೆ ಹೆಚ್ಚಾಗಿರುವುದು, ಹೊಸ ಮಾದರಿಯ ವಾಹನಗಳ ಬಿಡುಗಡೆ, ವಾಹನಗಳಲ್ಲಿನ ಸುಧಾರಿತ ತಂತ್ರಜ್ಞಾನ ಸೇರಿದಂತೆ ವಿವಿಧ ಅಂಶಗಳು ಮಾರಾಟ ಹೆಚ್ಚಳಕ್ಕೆ ಕಾರಣವಾಗಿವೆ ಎಂದು ಕಂಪನಿಗಳು ತಿಳಿಸಿವೆ.

‘ಹಿಂಗಾರು ಅವಧಿಯಲ್ಲಿ ಬಿತ್ತನೆ ಹೆಚ್ಚಳವಾಗಿದೆ. ಜಲಾಶಯಗಳಲ್ಲಿ ನೀರಿನ ಮಟ್ಟ ಉತ್ತಮವಾಗಿದೆ. ಮುಂಗಾರು ಹಂಗಾಮಿನಲ್ಲಿ ಬೆಳೆಯು ಹೆಚ್ಚಿದ್ದರಿಂದ ಗ್ರಾಮೀಣ ಪ್ರದೇಶದಲ್ಲಿನ ಜನರ ಕೈಯಲ್ಲಿ ಹಣದ ಹರಿವು ಹೆಚ್ಚಿದೆ. ಇದು ಕೂಡ ವಾಹನಗಳ ಮಾರಾಟಕ್ಕೆ ಕಾರಣವಾಗಿವೆ’ ಎಂದು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಕೃಷಿ ಉಪಕರಣಗಳ ವ್ಯವಹಾರ ವಿಭಾಗದ ಅಧ್ಯಕ್ಷ ವಿಜಯ್ ನಕ್ರಾ ಹೇಳಿದ್ದಾರೆ.



ಬಣ್ಣದ ಸಂಭ್ರಮ

ಪಿಟಿಐ ಚಿತ್ರ

ಪಂಜಾಬ್‌ನ ಅಮೃತಸರದ ಇಸ್ಕಾನ್ ದೇವಸ್ಥಾನದಲ್ಲಿ ಹೋಳಿ ಹಬ್ಬಕ್ಕೂ ಮುನ್ನ ಬಾಲಕನೊಬ್ಬ ಬಣ್ಣ ಎರಚಿಕೊಂಡು ಸಂಭ್ರಮಿಸಿದ ಕ್ಷಣ

ದೇಶಿ ವಾಯುಮಾರ್ಗ: 1.52 ಕೋಟಿ ಜನರ ಸಂಚಾರ

ಮುಂಬೈ (ಪಿಟಿಐ): ದೇಶಿ ವಾಯು ಮಾರ್ಗಗಳಲ್ಲಿ ಜನವರಿ ತಿಂಗಳಿನಲ್ಲಿ 1.52 ಕೋಟಿ ಪ್ರಯಾಣಿಕರು ಸಂಚರಿಸಿದ್ದಾರೆ ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ತಿಳಿಸಿದೆ.

2025ರ ಜನವರಿಯಲ್ಲಿ 1.46 ಕೋಟಿ ಪ್ರಯಾಣಿಕರು ಸಂಚಾರ ಮಾಡಿದ್ದರು. ಇದಕ್ಕೆ ಹೋಲಿಸಿದರೆ ಈ ಬಾರಿ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ 4.36ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಡಿಸೆಂಬರ್ ತಿಂಗಳಿನಲ್ಲಿ ದೇಶಿ ವಿಮಾನಯಾನ ಕಂಪನಿ ಇಂಡಿಗೊದಲ್ಲಿ ಪೈಲಟ್‌ಗಳ ಕೆಲಸ ಮತ್ತು ವಿಶ್ರಾಂತಿ ಅವಧಿಗೆ ಸಂಬಂಧಿಸಿದಂತೆ ಉಂಟಾದ ಅಡಚಣೆಯಿಂದ ಕಂಪನಿಯ ಮಾರುಕಟ್ಟೆ ಪಾಲು ಶೇ 4ರಷ್ಟು ಇಳಿದಿತ್ತು. ಆದರೆ, ಜನವರಿಯಲ್ಲಿ ಕಂಪನಿಯ ಪಾಲು ಏರಿಕೆ ಕಂಡಿದ್ದು, ಶೇ 63.6ರಷ್ಟಾಗಿದೆ. ಈ ಕಂಪನಿಯ ವಿಮಾನಗಳಲ್ಲಿ 97.04 ಲಕ್ಷ ಪ್ರಯಾಣಿಕರು ಸಂಚರಿಸಿದ್ದಾರೆ.

ಏರ್ ಇಂಡಿಯಾ ಸಮೂಹ ಶೇ 26.5ರಷ್ಟು ಮಾರುಕಟ್ಟೆ ಪಾಲು ಹೊಂದಿದ್ದು, 40 ಲಕ್ಷ ಪ್ರಯಾಣಿಕರು ಸಂಚರಿಸಿದ್ದಾರೆ.

ಜನವರಿಯಲ್ಲಿ ವಿಮಾನ ಟಿಕೆಟ್ ರದ್ದು ಮಾಡಿಕೊಳ್ಳುವ ಪ್ರಮಾಣ ಶೇ 1.44ರಷ್ಟಿತ್ತು. ದೆಹಲಿ, ಮುಂಬೈ, ಚೆನ್ನೈ, ಕೋಲ್ಕತ್ತ, ಬೆಂಗಳೂರು ಮತ್ತು ಹೈದರಾಬಾದ್‌ನ ವಿಮಾನ ನಿಲ್ದಾಣಗಳಿಂದ ಎಲ್ಲ ದೇಶಿ ವಿಮಾನಯಾನ ಕಂಪನಿಗಳ ಪೈಕಿ ಇಂಡಿಗೊ ಶೇ 70.9ರಷ್ಟು ಸಮಯ ಪಾಲನೆಯೊಂದಿಗೆ ಅತ್ಯುತ್ತಮ ಕಾರ್ಯಕ್ಷಮತೆ ನೀಡಿದೆ ಎಂದು ತಿಳಿಸಿದೆ.

ಗೃಹಸಾಲ: ಈ 5 ಸತ್ಯ ತಿಳಿದಿರಲಿ

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ಸ್ವಂತ ಮನೆಯ ಕನಸು ನನಸಾಗುವ ಸಂಭ್ರಮದಲ್ಲಿ ಗೃಹಸಾಲದ ಒಪ್ಪಂದಕ್ಕೆ ಸಹಿ ಹಾಕುವಾಗ ನಾವು ಮಾಡುವ ಸಣ್ಣ ತಪ್ಪುಗಳು ಮುಂದಿನ ಹಲವು ವರ್ಷಗಳವರೆಗೆ ನಮ್ಮ ಜೇಬಿಗೆ ಕತ್ತರಿ ಹಾಕಬಹುದು. ಸಾಲ ಕೇಳಿದಾಗ ಬ್ಯಾಂಕ್ ವ್ಯವಸ್ಥಾಪಕರು ಕೊಡುವ ಆಶ್ವಾಸನೆಗಳೇ ಅಂತಿಮವಲ್ಲ. ಗೃಹಸಾಲದ ಒಪ್ಪಂದಕ್ಕೆ ಸಹಿ ಹಾಕುವ ಮುನ್ನ ನೀವು ಕೇಳಲೇಬೇಕಾದ ಐದು ಪ್ರಶ್ನೆಗಳು ಮತ್ತು ಲಕ್ಷಾಂತರ ರೂಪಾಯಿ ಬಡ್ಡಿ ಉಳಿಸುವ ಜಾಣ ದಾರಿಗಳು ಇಲ್ಲಿವೆ.

1. ವಿಮೆ ಕಡ್ಡಾಯವಲ್ಲ

ಅನೇಕ ಬ್ಯಾಂಕುಗಳು ಗೃಹಸಾಲ ನೀಡುವಾಗ ವಿಮೆ ಮಾಡಿಸುವುದು ಕಡ್ಡಾಯ ಎಂದು ಒತ್ತಾಯಿಸುತ್ತವೆ. ಆದರೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಥವಾ ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಐಆರ್‌ಡಿಎಐ) ನಿಯಮಗಳ ಪ್ರಕಾರ ಬ್ಯಾಂಕಿನಿಂದಲೇ ವಿಮೆ ಖರೀದಿಸಬೇಕು ಎಂಬ ನಿಯಮವಿಲ್ಲ. ಈ ಬಗ್ಗೆ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಆರ್‌ಬಿಐ ಕಚೇರಿಯಲ್ಲಿ ಇತ್ತೀಚೆಗಷ್ಟೇ ಮಾತನಾಡಿದ್ದಾರೆ. ಗೃಹ ಸಾಲ ಪಡೆದವರಿಗೆ ವಿಮೆ ಮಾಡಿಸಲು ಒತ್ತಾಯಿಸುವುದು ಮೋಸದ ಮಾರಾಟವಾಗುತ್ತದೆ ಎಂದು ಬ್ಯಾಂಕ್‌ಗಳಿಗೆ ಎಚ್ಚರಿಸಿದ್ದಾರೆ.

ಸಾಮಾನ್ಯವಾಗಿ ಬ್ಯಾಂಕ್‌ನಿಂದ ವಿಮೆ ಪಡೆದಾಗ ಅದರ ಕಂತು (ಪ್ರೀಮಿಯಂ) ಮೊತ್ತವನ್ನು (ಉದಾಹರಣೆಗೆ ₹2 ಲಕ್ಷ) ನಿಮ್ಮ ಸಾಲಕ್ಕೆ ಸೇರಿಸಲಾಗುತ್ತದೆ. ಇದರಿಂದ ನೀವು ಕೇವಲ ₹2 ಲಕ್ಷಕ್ಕೆ ಮಾತ್ರವಲ್ಲದೆ, ಅದರ ಮೇಲಿನ ಬಡ್ಡಿಯನ್ನೂ ಸೇರಿಸಿ ಒಟ್ಟು ₹5 ಲಕ್ಷದವರೆಗೆ ಹೆಚ್ಚುವರಿ ಹಣ ಪಾವತಿಸಬೇಕಾಗುತ್ತದೆ. ಹೀಗೆ ಗೃಹ ಸಾಲಕ್ಕೆ ಸಂಬಂಧಿಸಿದ ವಿಮೆ ಪಡೆಯುವ ಬದಲು ಹೊರಗಡೆ ಅವಧಿ ವಿಮೆ ಖರೀದಿಸುವುದು ಉತ್ತಮ ಆಯ್ಕೆ. ಏಕೆಂದರೆ ಮನೆಯ ಸಾಲ ತೀರಿಸಿದ ನಂತರವೂ ಅವಧಿ ವಿಮೆ ನಿಮ್ಮ ಕುಟುಂಬಕ್ಕೆ ಹಣಕಾಸಿನ ಭದ್ರತೆ ಒದಗಿಸುತ್ತದೆ.

2. ಬಡ್ಡಿ ದರ ನಿಮ್ಮ ಕೈಯಲ್ಲಿದೆ

ಹೆಚ್ಚಿನವರು ಗೃಹಸಾಲದ ಬಡ್ಡಿ ದರವನ್ನು ಬ್ಯಾಂಕ್ ಮಾತ್ರವೇ ನಿರ್ಧರಿಸುತ್ತದೆ ಎಂದು ಭಾವಿಸುತ್ತಾರೆ. ಆದರೆ, ನಿಮ್ಮ ಆರ್ಥಿಕ ಶಿಸ್ತು ಕೂಡ ನಿಮ್ಮ ಸಾಲದ ಬಡ್ಡಿ ದರ ನಿರ್ಧರಿಸುತ್ತದೆ. ಗೃಹಸಾಲದ ಬಡ್ಡಿ ದರವು ಎರಡು ಭಾಗಗಳನ್ನು ಹೊಂದಿರುತ್ತದೆ. ಒಂದನೆಯದ್ದು ರೆಪೊ ದರ, ಎರಡನೆಯದ್ದು ಸ್ಪ್ರೆಡ್. ರೆಪೊ ದರ ಅಂದರೆ ಆರ್‌ಬಿಐ ಬ್ಯಾಂಕ್‌ಗಳಿಗೆ ನೀಡುವ ಸಾಲದ ಮೇಲಿನ ಬಡ್ಡಿ ದರ. ಇದು ಎಲ್ಲರಿಗೂ ಸಮನಾಗಿರುತ್ತದೆ. ಸ್ಪ್ರೆಡ್ ಅಂದರೆ, ಬ್ಯಾಂಕ್‌ಗಳು ತಮ್ಮ ನಿರ್ವಹಣಾ ವೆಚ್ಚ ಮತ್ತು ಲಾಭಕ್ಕಾಗಿ ರೆಪೊ ದರದ ಮೇಲೆ ಸೇರಿಸುವ ಹೆಚ್ಚುವರಿ ಮೊತ್ತ. ನಿಮ್ಮ ಕ್ರೆಡಿಟ್ ಅಂಕ ಚೆನ್ನಾಗಿದ್ದರೆ ಸ್ಪ್ರೆಡ್ ಕಡಿಮೆ ಇರುತ್ತದೆ. ನಿಮ್ಮ ಕ್ರೆಡಿಟ್ ಅಂಕ 750 ಅಥವಾ ಅದಕ್ಕಿಂತ ಹೆಚ್ಚಿದ್ದರೆ, ನಿಮ್ಮನ್ನು ‘ಸುರಕ್ಷಿತ ಗ್ರಾಹಕ’ ಎಂದು ಪರಿಗಣಿಸಲಾಗುತ್ತದೆ. ಆಗ ಬ್ಯಾಂಕ್‌ಗಳು ನಿಮಗೆ ಅತ್ಯಂತ ಕಡಿಮೆ ಸ್ಪ್ರೆಡ್ ವಿಧಿಸುತ್ತವೆ. ಉದಾಹರಣೆಗೆ, ಒಬ್ಬರಿಗೆ ಶೇ 8.5ರಷ್ಟು ಬಡ್ಡಿ ಇದ್ದರೆ, ಉತ್ತಮ ಕ್ರೆಡಿಟ್ ಅಂಕ ಇರುವ ನಿಮಗೆ ಅದು ಶೇ 8.3ರಷ್ಟು ಇರಬಹುದು. ಈ ಶೇ 0.2 ವ್ಯತ್ಯಾಸವೂ ಲಕ್ಷಾಂತರ ರೂಪಾಯಿ ಉಳಿಸುತ್ತದೆ. ಸಾಲ ಪಡೆದ ನಂತರ ನೀವು ಕ್ರೆಡಿಟ್ ಕಾರ್ಡ್ ಬಿಲ್ ಕಟ್ಟದಿದ್ದರೆ ಅಥವಾ ಬೇರೆ ಸಾಲಗಳ ಇಎಂಐ ತಪ್ಪಿಸಿದರೆ ನಿಮ್ಮ ಕ್ರೆಡಿಟ್ ಅಂಕ ಕುಸಿಯುತ್ತದೆ. ಆಗ ಬ್ಯಾಂಕ್ ನಿಮ್ಮನ್ನು ‘ರಿಸ್ಕ್’ ಎಂದು ಪರಿಗಣಿಸಿ, ತನ್ನ ಸ್ಪ್ರೆಡ್ ಹೆಚ್ಚಿಸಬಹುದು. ಅಂದರೆ, ಮಾರುಕಟ್ಟೆಯಲ್ಲಿ ಬಡ್ಡಿ ದರ ಏರದಿದ್ದರೂ, ನಿಮಗೆ ಅನ್ವಯವಾಗುವ ಬಡ್ಡಿ ಏರಬಹುದು. ವರ್ಷಕ್ಕೊಮ್ಮೆ ನಿಮ್ಮ ಬಡ್ಡಿ ದರವನ್ನು ಮಾರುಕಟ್ಟೆಯ ದರದೊಂದಿಗೆ ಹೋಲಿಸಿ ನೋಡಿ. ಒಂದು ವೇಳೆ ನಿಮ್ಮ ಸ್ಕೋರ್ ಉತ್ತಮವಾಗಿದ್ದು, ಬ್ಯಾಂಕಿನವರು ಬಡ್ಡಿ ಕಡಿಮೆ ಮಾಡದಿದ್ದರೆ, ಮ್ಯಾನೇಜರ್ ಬಳಿ ಮಾತನಾಡಿ ಸ್ಪ್ರೆಡ್ ಕಡಿಮೆ ಮಾಡಿಸಿಕೊಳ್ಳುವ ಅವಕಾಶ ಇರುತ್ತದೆ. ರೆಪೊ ದರ ಕಡಿಮೆ ಆದ 3 ತಿಂಗಳ ಒಳಗಾಗಿ ಅದರ ಲಾಭ ನಿಮಗೆ ದಕ್ಕಬೇಕು. ಈ ಅನುಕೂಲ ನಿಮಗೆ ಸಿಗುತ್ತಿದೆಯೇ ನೋಡಿಕೊಳ್ಳಿ.

3. ಇಎಂಐ ಮೊತ್ತ ಹೆಚ್ಚಳ

ಬಡ್ಡಿ ದರ ಏರಿಕೆಯಾದಾಗ ಬ್ಯಾಂಕ್‌ಗಳು ಸಾಲದ ಅವಧಿಯನ್ನು ಹೆಚ್ಚಿಸುತ್ತವೆ. ಇದು ಮೇಲ್ನೋಟಕ್ಕೆ ಸುಲಭ ಎನಿಸಿದರೂ, ದೀರ್ಘಾವಧಿಯಲ್ಲಿ ನೀವು ಕಟ್ಟುವ ಒಟ್ಟು ಬಡ್ಡಿ ಮೊತ್ತವು ಸಾಲದ ಅಸಲಿಗಿಂತಲೂ ಹೆಚ್ಚಾಗುತ್ತದೆ. ಸಾಲದ ಅವಧಿಯನ್ನು ಹೆಚ್ಚಿಸುವ ಬದಲು ಸಾಧ್ಯವಾದಷ್ಟು ಮಟ್ಟಿಗೆ ನಿಮ್ಮ ತಿಂಗಳ ಸಾಲದ ಇಎಂಐ ಮೊತ್ತವನ್ನು ಹೆಚ್ಚಿಸಲು ಬ್ಯಾಂಕಿಗೆ ವಿನಂತಿಸಿ. ಇದರಿಂದ ಸಾಲ ಬೇಗ ತೀರುತ್ತದೆ ಮತ್ತು ಬಡ್ಡಿ ಉಳಿಯುತ್ತದೆ.

4. ಮುಂಚಿತ ಪಾವತಿ

ಬದಲಾಗುವ ಬಡ್ಡಿ ದರ, ಅಂದರೆ ಫ್ಲೋಟಿಂಗ್ ರೇಟ್‌ನಲ್ಲಿ, ಗೃಹಸಾಲ ಪಡೆದಿದ್ದರೆ ಯಾವುದೇ ದಂಡವಿಲ್ಲದೆ ನೀವು ಸಾಲವನ್ನು ಮುಂಚಿತವಾಗಿ ತೀರಿಸಬಹುದು. ವರ್ಷಕ್ಕೊಮ್ಮೆ ಕನಿಷ್ಠ ಒಂದು ಹೆಚ್ಚುವರಿ ಸಾಲದ ಕಂತು ಪಾವತಿಸಿದರೂ ನಿಮ್ಮ 20 ವರ್ಷದ ಸಾಲವನ್ನು 15 ವರ್ಷಗಳಲ್ಲೇ ಮುಗಿಸಬಹುದು. ಬೋನಸ್ ಅಥವಾ ವೇತನ ಹೆಚ್ಚಳದ ಹಣ ಬಂದಾಗ ಅದನ್ನು ಸಾಲದ ಅಸಲಿಗೆ ಜಮಾ ಮಾಡಿ. ಸಾಲದ ಮೊದಲ 5 ವರ್ಷಗಳಲ್ಲಿ ನೀವು ಮಾಡುವ ಮುಂಗಡ ಪಾವತಿಯು ಅತಿ ಹೆಚ್ಚು ಉಳಿತಾಯ ತಂದುಕೊಡುತ್ತದೆ.

ನೆನಪಿಡಿ

ಗೃಹ ಸಾಲವು ಕೇವಲ ಒಂದು ಕಾಗದದ ಮೇಲಿನ ಸಹಿಯಲ್ಲ. ಅದು ನಿಮ್ಮ ಮುಂದಿನ 20 ವರ್ಷಗಳ ಆರ್ಥಿಕ ಶಿಸ್ತು. ಸಹಿ ಹಾಕುವ ಮುನ್ನ ಪ್ರತಿ ಸಾಲನ್ನೂ ಓದಿ, ಬ್ಯಾಂಕಿನೊಂದಿಗೆ ಚೌಕಾಸಿ ಮಾಡಿ ಉತ್ತಮ ಬಡ್ಡಿ ದರಕ್ಕೆ ಸಾಲ ಪಡೆದುಕೊಳ್ಳಿ.

5. ಗೃಹಸಾಲ ವರ್ಗಾವಣೆ

ಕ್ರೆಡಿಟ್ ಅಂಕ ಉತ್ತಮವಿದ್ದರೂ ನೀವು ಪಡೆದಿರುವ ಸಾಲಕ್ಕೆ ನಿಮ್ಮ ಬ್ಯಾಂಕ್ ಅತಿ ಹೆಚ್ಚಿನ ಬಡ್ಡಿ ದರ ವಿಧಿಸುತ್ತಿದ್ದರೆ, ಅದನ್ನು ಕಡಿಮೆ ಬಡ್ಡಿ ನೀಡುವ ಬೇರೆ ಬ್ಯಾಂಕಿಗೆ ವರ್ಗಾಯಿಸಬಹುದು. ಒಂದು ದೂರಸಂಪರ್ಕ ಸೇವಾ ಕಂಪನಿ ಸರಿಯಾಗಿ ಸೇವೆ ಒದಗಿಸದಿದ್ದರೆ ಮತ್ತೊಂದು ಕಂಪನಿಗೆ ಪೋರ್ಟ್ ಆಗುತ್ತೇವೆಯೋ ಅದೇ ರೀತಿಯಲ್ಲಿ ಸಾಲವನ್ನು ವರ್ಗಾಯಿಸಿಕೊಳ್ಳಬಹುದು. ಆದರೆ ಸಾಲ ವರ್ಗಾವಣೆ ಮಾಡುವ ಮುನ್ನ ಮುದ್ರಾಂಕ ಶುಲ್ಕ ಮತ್ತು ಇತರ ಶುಲ್ಕಗಳನ್ನು ಲೆಕ್ಕ ಹಾಕಿ. ಶುಲ್ಕಗಳಿಗಿಂತ ಸಾಲದ ಅವಧಿಯಲ್ಲಿ ಆಗುವ ಉಳಿತಾಯ ಹೆಚ್ಚಾಗಿದ್ದರೆ ವರ್ಗಾವಣೆಗೆ ಮುಂದಾಗಿ. ಎಲ್ಲ ಸಂದರ್ಭಗಳಲ್ಲೂ ಸಾಲ ವರ್ಗಾವಣೆಯಿಂದ ಲಾಭವಾಗುವುದಿಲ್ಲ ಎನ್ನುವುದು ತಿಳಿದಿರಲಿ.

ತೈಲ: ತಕ್ಷಣಕ್ಕೆ ಎದುರಾಗದು ಸಮಸ್ಯೆ

ಬಿಕ್ಕಟ್ಟು ಮುಂದುವರಿದರೆ ರಷ್ಯಾ ಸೇರಿದಂತೆ ಬೇರೆ ದೇಶಗಳಿಂದ ಆಮದು

ನವದೆಹಲಿ (ಪಿಟಿಐ): ಭಾರತದಲ್ಲಿನ ತೈಲ ಸಂಗ್ರಹವು ಇನ್ನೂ 15ರಿಂದ 17 ದಿನ ಬಳಕೆಗೆ ಬರುವಷ್ಟಿದೆ, ಹೊರ್ಮುಜ್ ಜಲಸಂಧಿಯನ್ನು ಮುಚ್ಚಲಾಗಿದ್ದರೂ ಭಾರತಕ್ಕೆ ತಕ್ಷಣಕ್ಕೆ ತೊಂದರೆ ಆಗುವುದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ತೀವ್ರಗೊಂಡರೆ ಕೇಂದ್ರ ಸರ್ಕಾರವು ಇಂಧನ ಆಮದಿಗೆ ಪರ್ಯಾಯ ಮಾರ್ಗಗಳನ್ನು ಇರಿಸಿಕೊಂಡಿದೆ ಎಂದು ಅಧಿಕಾರಿಗಳು ಮತ್ತು ತಜ್ಞರು ತಿಳಿಸಿದ್ದಾರೆ.

ಹೊರ್ಮುಜ್ ಜಲಸಂಧಿಯನ್ನು ಇರಾನ್‌ನ ಮುಚ್ಚಿದೆ ಎಂದು ಅಲ್ಲಿನ ಸರ್ಕಾರಿ ಸ್ವಾಮ್ಯದ ಮಾಧ್ಯಮವು ವರದಿ ಮಾಡಿದೆ. ವಿಶ್ವದ ಕಚ್ಚಾ ತೈಲ ಹಾಗೂ ಅನಿಲ ರಫ್ತಿನಲ್ಲಿ ಶೇಕಡ 20ರಷ್ಟು ಈ ಜಲಸಂಧಿಯ ಮೂಲಕ ಆಗುತ್ತದೆ.

ಜಲಸಂಧಿಯು ಅಲ್ಪ ಅವಧಿಗೆ ಮುಚ್ಚಿದರೆ ಅದರಿಂದ ಭಾರತದ ಮೇಲೆ ಹೆಚ್ಚಿನ ಪರಿಣಾಮವೇನೂ ಆಗದು. ಜಲಸಂಧಿಯ ಮೂಲಕ ಕಚ್ಚಾ ತೈಲ, ಇಂಧನ ಸಾಗಣೆಗೆ ದೀರ್ಘ ಅವಧಿಗೆ ಅವಕಾಶ ನೀಡದೆ ಇದ್ದರೆ ಭಾರತವು ಬೇರೆ ಕಡೆಗಳಿಂದ ಅವುಗಳನ್ನು ತರಿಸಿಕೊಳ್ಳಲು ಸಾಧ್ಯವಿದೆ. ರಷ್ಯಾದಿಂದ ಖರೀದಿ ಹೆಚ್ಚು ಮಾಡುವ ಅವಕಾಶವೂ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಭಾರತದ ತೈಲ ಸಂಸ್ಕರಣಾಗಾರಗಳು ತಮ್ಮ ಬಳಿ ಹೊಂದಿರುವ ಹಾಗೂ ತರಿಸಿಕೊಳ್ಳುತ್ತಿರುವ ಕಚ್ಚಾ ತೈಲವು

10ರಿಂದ 15 ದಿನಗಳಿಗೆ ಆಗುವಷ್ಟು ಇದೆ. ಅಲ್ಲದೆ, ಈ ಸಂಸ್ಕರಣಾಗಾರಗಳಲ್ಲಿ ಇಂಧನ ಟ್ಯಾಂಕ್‌ಗಳಲ್ಲಿ ಕೂಡ ಭರ್ತಿ ಸಂಗ್ರಹ ಇದೆ. ಇದನ್ನು ಬಳಸಿ ಏಳರಿಂದ 10 ದಿನಗಳವರೆಗೆ ದೇಶದ ಇಂಧನ ಅಗತ್ಯವನ್ನು ಪೂರೈಸಿಕೊಳ್ಳಬಹುದು ಎಂದು ಅಧಿಕಾರಿಗಳು ವಿವರಿಸಿದ್ದಾರೆ. ‘ಹೊರ್ಮುಜ್ ಜಲಸಂಧಿಯು ಹೆಚ್ಚು ಕಾಲ ಮುಚ್ಚಿರುವ ಸಾಧ್ಯತೆ ಇಲ್ಲ ಎಂಬುದು ಈ ಹಂತದಲ್ಲಿ ನಮಗೆ ಅನ್ನಿಸುತ್ತಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಲಸಂಧಿಯ ಮೂಲಕ ಸಾಗಲು ಹಡಗುಗಳಿಗೆ ಅವಕಾಶ ನೀಡುವುದಿಲ್ಲ ಎಂದು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್ (ಐಆರ್‌ಜಿಸಿ) ಎಚ್ಚರಿಕೆ ನೀಡಿದೆ. ಆದರೆ ಇದುವರೆಗೆ ಯಾವುದೇ ಹಡಗಿನ ಮೇಲೆ ದಾಳಿ ಆಗಿಲ್ಲ.

ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ಪೂರೈಕೆ ಚೆನ್ನಾಗಿಯೇ ಇದೆ, ಭಾರತವು ವೆನೆಜುವೆಲಾ, ಬ್ರೆಜಿಲ್‌ನಿಂದಲೂ ಕಚ್ಚಾ ತೈಲ ತರಿಸಿಕೊಳ್ಳುವ ಅವಕಾಶ ಹೊಂದಿದೆ ಎಂದು ಇನ್ನೊಬ್ಬರು ಅಧಿಕಾರಿ ಹೇಳಿದರು. ‘ಭಾರತವು ಅಮೆರಿಕದ ಒತ್ತಡಕ್ಕೆ ಪ್ರತಿಯಾಗಿ ರಷ್ಯಾದಿಂದ ಕಚ್ಚಾ ತೈಲ ಖರೀದಿಯನ್ನು ಕಡಿಮೆ ಮಾಡಿತ್ತು. ಆದರೆ ಪಶ್ಚಿಮ ಏಷ್ಯಾದಲ್ಲಿ ಅಡಚಣೆ ಉಂಟಾದರೆ ನಾವು ರಷ್ಯಾ ಕಡೆ ಮತ್ತೆ ಮುಖ ಮಾಡಬಹುದು’ ಎಂದು ಅವರು ವಿವರಿಸಿದರು.

‘ಇಲ್ಲಿರುವುದು ಸಾಗಣೆ ಅವಧಿಯ ಪ್ರಶ್ನೆ ಮಾತ್ರ. ಪಶ್ಚಿಮ ಏಷ್ಯಾದಿಂದ ಹಡಗುಗಳಿಗೆ ಭಾರತ ತಲುಪಲು ಐದು ದಿನಗಳು ಸಾಕು. ಆದರೆ ರಷ್ಯಾದಿಂದ ಹಡಗುಗಳು ಭಾರತಕ್ಕೆ ಬರಲು ಒಂದು ತಿಂಗಳು ಬೇಕಾಗುತ್ತದೆ. ಹೀಗಾಗಿ ಸರಿಯಾದ ಸಮಯಕ್ಕೆ ಕಚ್ಚಾ ತೈಲ ಕಳುಹಿಸಲು ಕೋರಿಕೆ ಸಲ್ಲಿಸಬೇಕಾಗುತ್ತದೆ’ ಎಂದು ಅವರು ಹೇಳಿದರು.

ದೇಶದ ತೈಲ ಸಂಗ್ರಹಾಗಾರಗಳಲ್ಲಿ ಒಂದು ವಾರಕ್ಕೆ ಸಾಕಾಗುವಷ್ಟು ತೈಲ ಇದೆ.

ಭಾರತದ ಪಾಲಿಗೆ ಮಹತ್ವದ್ದು...

ಭಾರತವು ಆಮದು ಮಾಡಿಕೊಳ್ಳುವ ಕಚ್ಚಾ ತೈಲದಲ್ಲಿ ಸರಿಸುಮಾರು ಶೇ 50ರಷ್ಟು ಹೊರ್ಮುಜ್ ಜಲಸಂಧಿಯ ಮೂಲಕ ಬರುತ್ತದೆ. ಇದರಲ್ಲಿ ಹೆಚ್ಚಿನ ಪಾಲು ಇರಾಕ್, ಸೌದಿ ಅರೇಬಿಯಾ, ಯುಎಇ ಮತ್ತು ಕುವೈತ್‌ನಿಂದ ಬರುತ್ತದೆ ಎಂದು ಕೆಪ್ಲರ್ ಸಂಸ್ಥೆಯ ಬಳಿ ಇರುವ ಮಾಹಿತಿಯಲ್ಲಿ ಹೇಳಲಾಗಿದೆ.

ಭಾರತವು ಆಮದು ಮಾಡಿಕೊಳ್ಳುವ ದ್ರವೀಕೃತ ನೈಸರ್ಗಿಕ ಅನಿಲದಲ್ಲಿ (ಎಲ್‌ಎನ್‌ಜಿ) ಶೇ 60ರಷ್ಟು ಈ ಮಾರ್ಗವಾಗಿ ಬರುತ್ತದೆ. ಅದಕ್ಕಿಂತ ಮುಖ್ಯವಾಗಿ ಭಾರತವು ಆಮದು ಮಾಡಿಕೊಳ್ಳುವ ದ್ರವೀಕೃತಕ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಸಂಪೂರ್ಣವಾಗಿ ಈ ಮಾರ್ಗವಾಗಿ ಬರುತ್ತದೆ. ಹೀಗಾಗಿ, ಈ ಮಾರ್ಗದಲ್ಲಿ ಸೃಷ್ಟಿಯಾಗುವ ಯಾವುದೇ ಸಮಸ್ಯೆಯು ಎಲ್‌ಪಿಜಿ ಪೂರೈಕೆಯ ಮೇಲೆ ತಕ್ಷಣವೇ ಪರಿಣಾಮ ಉಂಟುಮಾಡುತ್ತದೆ.

ಪರ್ಯಾಯ ಯೋಜನೆ

10 ದಿನಗಳ ಅಗತ್ಯವನ್ನು ಪೂರೈಸುವಷ್ಟು ಕಚ್ಚಾ ತೈಲದ ಸಂಗ್ರಹವು ತೈಲ ಸಂಸ್ಕರಣಾ ಕಂಪನಿಗಳ ಬಳಿ ಇದೆ. ಇಷ್ಟೇ ಅಲ್ಲದೆ, ಇಂಧನದ ಸಂಗ್ರಹವು ಐದರಿಂದ ಏಳು ದಿನಗಳಿಗೆ ಆಗುವಷ್ಟಿದೆ.

ಪಶ್ಚಿಮ ಏಷ್ಯಾದಲ್ಲಿನ ಪರಿಸ್ಥಿತಿಯು ತೀರಾ ಅನಿಶ್ಚಿತವಾದರೆ ಅಮೆರಿಕ, ಪಶ್ಚಿಮ ಆಫ್ರಿಕಾ, ಲ್ಯಾಟಿನ್ ಅಮೆರಿಕ ಮತ್ತು ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವ ಯೋಜನೆಗಳು ಇವೆ ಎಂದು ಮೂಲಗಳು ಹೇಳಿವೆ.

ಎಲ್‌ಪಿಜಿ, ಎಲ್‌ಎನ್‌ಜಿ ಪೂರೈಕೆಗೆ ಸಮಸ್ಯೆ

ಜಲಸಂಧಿಯಲ್ಲಿ ಅಡಚಣೆಯು ಹೆಚ್ಚಿನ ಅವಧಿಗೆ ಮುಂದುವರಿದರೆ ಎಲ್‌ಎನ್‌ಜಿ ಪೂರೈಕೆಯಲ್ಲಿ ಸಮಸ್ಯೆ ಉಂಟಾಗಬಹುದು ಎನ್ನಲಾಗಿದೆ.

ಅಲ್ಪಾವಧಿಗೆ ಎಲ್‌ಎನ್‌ಜಿ ಪೂರೈಕೆಯಲ್ಲಿ ಸಮಸ್ಯೆ ಆಗುವುದಿಲ್ಲ. ಆದರೆ ಜಲಸಂಧಿಯು ಹೆಚ್ಚಿನ ಅವಧಿಗೆ ಮುಚ್ಚಿದ್ದರೆ, ಭಾರತಕ್ಕೆ ಎಲ್‌ಎನ್‌ಜಿ ತರಿಸಿಕೊಳ್ಳಲು ಹೆಚ್ಚಿನ ಆಯ್ಕೆಗಳು ಇರುವುದಿಲ್ಲ. ಏಕೆಂದರೆ ಎಲ್‌ಎನ್‌ಜಿ ಪೂರೈಕೆಯ ವಿಚಾರವಾಗಿ ದೀರ್ಘಾವಧಿಗೆ ಒಪ್ಪಂದ ಆಗಿರುತ್ತದೆ. ತಕ್ಷಣಕ್ಕೆ ಬೇಕು ಎಂದರೆ ಅದು ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗುವುದಿಲ್ಲ ಎಂದು ಮೂಲವೊಂದು ಹೇಳಿದೆ.

ಎಲ್‌ಎನ್‌ಜಿ ತರಿಸಿಕೊಳ್ಳಲು ಭಾರತ ಅಥವಾ ಚೀನಾ ಪರ್ಯಾಯ ಆಯ್ಕೆಗಳ ಕಡೆ ಮುಖ ಮಾಡಿದರೆ ಅದರ ಬೆಲೆ ಹೆಚ್ಚಳವಾಗಬಹುದು ಎನ್ನಲಾಗಿದೆ. ಇದೇ ಬಗೆಯ ಪರಿಸ್ಥಿತಿಯು ಎಲ್‌ಪಿಜಿ ವಿಚಾರದಲ್ಲಿಯೂ ಇದೆ.

ಕೇಂದ್ರ ಸರ್ಕಾರವು ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದು, ಪರ್ಯಾಯ ಮಾರ್ಗ ಅರಸುತ್ತಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕೊಲ್ಲಿ ರಾಷ್ಟ್ರಗಳಲ್ಲಿ ಭಾರತೀಯರ ಪರದಾಟ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನತೆಯಿಂದಾಗಿ ವಿಮಾನ ಸಂಚಾರದಲ್ಲಿ ಭಾರಿ ವ್ಯತ್ಯಯವಾಗಿದ್ದು, ದುಬೈ ಮತ್ತು ಇತರ ರಾಷ್ಟ್ರಗಳ ವಿಮಾನ ನಿಲ್ದಾಣಗಳಲ್ಲಿ ನೂರಾರು ಭಾರತೀಯರು ಸಿಲುಕಿದ್ದಾರೆ. ಸಹಾಯ ಮಾಡುವಂತೆ ಸಾಮಾಜಿಕ ಜಾಲತಾಣದ ಮೂಲಕ ಭಾರತ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಒಲಿಂಪಿಕ್ ಪದಕ ವಿಜೇತೆ ಪಿ.ವಿ ಸಿಂಧು, ಕರ್ನಾಟಕದ ವಿಧಾನ ಪರಿಷತ್ ಸದಸ್ಯ ಎಸ್.ಎಲ್ ಭೋಜೆಗೌಡ ಮತ್ತು ಅವರ ಕುಟುಂಬ, ಬಂಗಾಳದ ನಟಿ ಸುಭಾಶ್ರೀ ಗಂಗೂಲಿ ಮತ್ತು ಅವರ ಪುತ್ರ, ಹಲವರು ಪ್ರವಾಸಿಗರು ಮತ್ತು ವಿದ್ಯಾರ್ಥಿಗಳು ದುಬೈನಲ್ಲಿ ಸಿಲುಕಿದ್ದಾರೆ.

ವಿಮಾನ ರದ್ದುಗೊಂಡಿದ್ದರಿಂದ ಮಧ್ಯಪ್ರದೇಶದ 700ಕ್ಕೂ ಅಧಿಕ ಜನ ಯುಎಇನಲ್ಲಿ ಸಿಲುಕಿದ್ದಾರೆ.

ಅಧ್ಯಯನ ಪ್ರವಾಸಕ್ಕಾಗಿ ದುಬೈಗೆ ತೆರಳಿದ್ದ ಪುಣೆಯ ಕಾಲೇಜೊಂದರ 84 ವಿದ್ಯಾರ್ಥಿಗಳು ಮರಳಿ ಬರಲಾಗದೇ ಅಲ್ಲೇ ಸಿಲುಕಿದ್ದಾರೆ.

- ದೆಹಲಿ ವಿಮಾನನಿಲ್ದಾಣದಲ್ಲಿ 100 ಅಂತರರಾಷ್ಟ್ರೀಯ ವಿಮಾನಗಳ ಸಂಚಾರ ರದ್ದುಗೊಂಡಿದೆ
- ಮುಂಬೈನಿಂದ ತೆರಳಬೇಕಿದ್ದ 125 ವಿಮಾನಗಳ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ
- ಇಂಡಿಗೊ ಮತ್ತು ಏರ್ ಇಂಡಿಯಾ ಸಂಸ್ಥೆಗಳು ಪಶ್ಚಿಮ ಏಷ್ಯಾಕ್ಕೆ ಹೋಗಬೇಕಿದ್ದ ಎಲ್ಲ ವಿಮಾನಗಳ ಸಂಚಾರವನ್ನು ರದ್ದುಗೊಳಿಸಿದ್ದಾವೆ
- ಜಾಗತಿಕವಾಗಿ ಭಾನುವಾರ 6700ಕ್ಕೂ ಅಧಿಕ ವಿಮಾನಗಳ ಸಂಚಾರ ವಿಳಂಬಗೊಂಡಿದೆ ಮತ್ತು 1900 ವಿಮಾನಗಳ ಸಂಚಾರ ರದ್ದುಗೊಂಡಿದೆ
- ಪಾಕಿಸ್ತಾನವು 184 ಅಂತರರಾಷ್ಟ್ರೀಯ ವಿಮಾನಗಳ ಸಂಚಾರ ರದ್ದುಗೊಳಿಸಿದೆ
- ಕೊಲ್ಲಿ ರಾಷ್ಟ್ರದ ವಿಮಾನಯಾನ ಸಂಸ್ಥೆಗಳಾದ ಎಮಿರೆಟ್ಸ್ ಶೇ 38 ಮತ್ತು ಎಥಿಹಡ್ ಶೇ 30ರಷ್ಟು ವಿಮಾನಗಳ ಸಂಚಾರವನ್ನು ರದ್ದುಗೊಳಿಸಿದೆ

ನಾಗ್ಪುರ: ಕಾರ್ಖಾನೆಯಲ್ಲಿ ಸ್ಫೋಟ– 18 ಮಂದಿ ಸಾವು

ಒಂದನೇ ಪುಟದಿಂದ...

ಪ್ಯಾಕಿಂಗ್ ಘಟಕದಲ್ಲಿ ಸ್ಫೋಟ: ‘ಕಾರ್ಖಾನೆಯ ಪ್ಯಾಕಿಂಗ್ ಘಟಕದಲ್ಲಿ ಬೆಳಿಗ್ಗೆ 7ರಿಂದ 7.15ರ ಸುಮಾರಿಗೆ ದುರಂತ ಸಂಭವಿಸಿದೆ. ಸ್ಫೋಟಕ್ಕೆ ಕಾರಣವೇನು ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ತನಿಖೆಗೆ ನಾವು ಸಂಪೂರ್ಣವಾಗಿ ಸಹಕರಿಸುತ್ತೇವೆ’ ಎಂದು ಎಸ್‌ಬಿಎಲ್ ಎನರ್ಜಿ ಲಿಮಿಟೆಡ್ ಹೇಳಿಕೆಯಲ್ಲಿ ತಿಳಿಸಿದೆ.

‘ಘಟನೆ ಬಗ್ಗೆ ಆಂತರಿಕ ತನಿಖೆಯೂ ನಡೆಯುತ್ತಿದೆ. ತನಿಖೆಯ ಅಂಶಗಳ ಆಧಾರದಲ್ಲಿ ಸೂಕ್ತ ಕ್ರಮಕೈಗೊಳ್ಳುತ್ತೇವೆ. ಸಂತ್ರಸ್ತ ಉದ್ಯೋಗಿಗಳು ಮತ್ತು ಅವರ ಕುಟುಂಬಸ್ಥರಿಗೆ ಎಲ್ಲ ರೀತಿಯ ನೆರವು ನೀಡುವುದು ನಮ್ಮ ತಕ್ಷಣದ ಆದ್ಯತೆ. ಸ್ಥಳೀಯ ಅಧಿಕಾರಿಗಳ ಸಹಕಾರದೊಂದಿಗೆ ಆರ್ಥಿಕ ನೆರವು ನೀಡುತ್ತಿದ್ದೇವೆ. ಗಾಯಾಳುಗಳ ಚಿಕಿತ್ಸೆಗೆ ತಗಲುವ ವೆಚ್ಚವನ್ನೂ ಭರಿಸುತ್ತೇವೆ’ ಎಂದು ತಿಳಿಸಿದೆ.

ಹಗಲು ಸಾಮಾನ್ಯ, ರಾತ್ರಿಯ ವೇಳೆ ದಾಳಿ

ದುಬೈ ಮೇಲೆ ದಾಳಿ ಚಿತ್ರಣ ಬಿಚ್ಚಿಟ್ಟ ಅರುಣ್‌ಕುಮಾರ್; ಸುರಕ್ಷತೆಗೆ ಮುಂದಾದ ಕನ್ನಡಿಗರ ಕೂಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದುಬೈನಲ್ಲಿ ಶನಿವಾರದಿಂದಲೂ ಆತಂಕದ ವಾತಾವರಣವಿದೆ. ಹಗಲೆಲ್ಲಾ ಸಹಜವಾಗಿದ್ದರೆ, ರಾತ್ರಿ ವೇಳೆ ಬಂದರು, ವಿಮಾನ ನಿಲ್ದಾಣ ಸಹಿತ ನಿಗದಿತ ತಾಣಗಳ ಮೇಲೆ ದಾಳಿಯಾಗುತ್ತಿದೆ. ಡ್ರೋನ್‌ಗಳನ್ನು ಬಳಸಲಾಗುತ್ತಿದೆ. ನಾವು ಸುರಕ್ಷಿತವಾಗಿದ್ದೇವೆ. ಪ್ರವಾಸಕ್ಕೆ ಬಂದಿರುವ ಕನ್ನಡಿಗರ ಸುರಕ್ಷತೆ ಕಡೆಗೂ ಗಮನ ನೀಡುತ್ತಿದ್ದೇವೆ’

ಮೈಸೂರು ಮೂಲದವರಾದರೂ 25 ವರ್ಷಗಳಿಂದ ಅಲ್ಲಿಯೇ ನೆಲೆಸಿ ಕಟ್ಟಡ ನಿರ್ಮಾಣ ಉದ್ಯಮಿಯಾಗಿರುವ, ದುಬೈ ಕನ್ನಡಿಗರ ಕೂಟದ ಅಧ್ಯಕ್ಷ ಎಂ.ಕೆ. ಅರುಣ್‌ಕುಮಾರ್ ಅವರು ಅಲ್ಲಿನ ಚಿತ್ರಣವನ್ನು ಬಿಡಿಸಿಟ್ಟರು.

ದುಬೈನಿಂದ ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಅವರು ಅವರು, ‘ಇರಾನ್ ಮೇಲೆ ಅಮೆರಿಕ ದಾಳಿ ತೀವ್ರಗೊಂಡ ನಂತರ ಇಲ್ಲಿಯೂ ದಾಳಿಗಳು ಶುರುವಾಗಿವೆ. ಶನಿವಾರ ರಾತ್ರಿ ಊಟಕ್ಕೆ ಹೋಗಿದ್ದಾಗ ಏಕಾಏಕಿ ದಾಳಿಗಳಾದವು. ವಿಷಯ ತಿಳಿದು ಭಯವೂ ಆಯಿತು. ಅದರಲ್ಲೂ ಅಮೆರಿಕದ ಸೇನಾ ನೆಲೆಗೆ ಸಹಕಾರ ನೀಡುತ್ತಿರುವ ಅಸಮಾಧಾನ ಇರಾನ್‌ಗೆ ಇರುವುದರಿಂದ ಮೊದಲ ಬಾರಿಗೆ ಇಲ್ಲಿ ದಾಳಿಯಾಗುತ್ತಿದ್ದು, ಮೊದಲ ದಿನ ರಾತ್ರಿ ಕತ್ತಲಲ್ಲಿ ಜೆಟ್‌ಗಳ ಹಾರಾಟ, ಕ್ಷಿಪಣಿ ಉಡಾಯಿಸುವುದನ್ನು ನೋಡಿದ್ದರಿಂದಲೂ ಭಯ ಹೆಚ್ಚಿತು. ಸೀಮಿತ ಪ್ರದೇಶ ಗುರಿಯಾಗಿಸಿ ದಾಳಿಯಾಗುತ್ತಿರುವ ಮಾಹಿತಿ ತಿಳಿದಿದ್ದರಿಂದ ಜನ ವಸತಿ ಪ್ರದೇಶದಲ್ಲಿ ಆತಂಕವಿಲ್ಲ’ ಎಂದರು.

ದುಬೈನಲ್ಲಿ ನೆಲಸಿರುವ ಕನ್ನಡಿಗರ ಜತೆಗೆ ಪ್ರವಾಸಕ್ಕೆ ಬಂದಿರುವವರೂ ಆತಂಕ ಪಡುವ ಅಗತ್ಯವಿಲ್ಲ. ದುಬೈ ಸುರಕ್ಷಿತ ಸ್ಥಳವಾಗಿರುವುದರಿಂದ ಆತಂಕ ಬೇಡ. ನಾವು ನಿಮ್ಮೊಂದಿಗೆ ಇದ್ದೇವೆ
ಎಂ.ಕೆ.ಅರುಣ್‌ಕುಮಾರ್,
ಅಧ್ಯಕ್ಷ, ದುಬೈ ಕನ್ನಡಿಗರ ಕೂಟ

‘ಇಲ್ಲಿ 2 ಲಕ್ಷಕ್ಕೂ ಅಧಿಕ ಕನ್ನಡಿಗರು ನೆಲೆಸಿದ್ದಾರೆ. ವಿವಿಧ ಕನ್ನಡ ಕೂಟಗಳು ಇಲ್ಲಿವೆ. ನಾವು 20 ವರ್ಷಗಳಿಂದಲೂ ಸಕ್ರಿಯವಾಗಿದ್ದೇವೆ. ಹಿಂದೆ ಕೋವಿಡ್ ಸಂಕಷ್ಟ, ಪ್ರವಾಹ ಸಂದರ್ಭದಲ್ಲಿ ಒಟ್ಟಿಗೆ ಕೆಲಸ ಮಾಡಿದ್ದೆವು. ಆದರೆ ಯುದ್ಧದ ವಾತಾವರಣ ವಿಭಿನ್ನವಾಗಿರುವುದರಿಂದ ಎಚ್ಚರಿಕೆ ವಹಿಸುತ್ತಿದ್ದು, ವಾಟ್ಸ್ ಆಪ್ ಗುಂಪು ರಚಿಸಿ ಸಂವಹನ ನಡೆಸುತ್ತಿದ್ದೇವೆ. ಸರ್ಕಾರದಿಂದ ಬರುತ್ತಿರುವ ಸೂಚನೆಗಳನ್ನು ರವಾನಿಸುತ್ತಿದ್ದೇವೆ. ಎಲ್ಲರೂ ಸುರಕ್ಷಿತರಾಗಿದ್ದಾರೆ. ಕುಟುಂಬದವರೊಂದಿಗೂ ಮಾತನಾಡಿದ್ದೇವೆ’ ಎಂದು ಹೇಳಿದರು.

‘ದುಬೈ ಸ್ಥಳೀಯ ಆಡಳಿತವೂ ಸಹಾಯವಾಣಿ ಆರಂಭಿಸಿ ಎಲ್ಲಾ ಮುನ್ನೆಚ್ಚರಿಕೆ ಕೈಗೊಂಡಿದೆ. ಭಾರತೀಯ ರಾಯಭಾರ ಕಚೇರಿ ಮೂಲಕವೂ ಸಹಾಯವಾಣಿ, ಇ ಮೇಲ್ ಐಡಿ ನೀಡಿ ಸಂಪರ್ಕಕ್ಕೆ ಸೂಚಿಸಲಾಗುತ್ತಿದೆ’ ಎಂದು ಅವರು ವಿವರಿಸಿದರು.

‘ಕರ್ನಾಟಕ ಸರ್ಕಾರದ ಅನಿವಾಸಿ ಭಾರತೀಯ ಸಮಿತಿಯ ಉಪಾಧ್ಯಕ್ಷರಾದ ಡಾ.ಆರತಿ ಕೃಷ್ಣ ಹಿಂದಿನಿಂದಲೂ ಸಂಪರ್ಕದಲ್ಲಿದ್ದಾರೆ. ಎಲ್ಲ ಮಾಹಿತಿಯನ್ನು ನಾವು ನೀಡುತ್ತಿದ್ದೇವೆ. ನೇರವಾಗಿ ಅಲ್ಲದೇ, ಸಾಮಾಜಿಕ ಮಾಧ್ಯಮದ ಮೂಲಕ ಸಂಪರ್ಕಿಸುವ ಕನ್ನಡಿಗರ ಹಿತರಕ್ಷಣೆಗೆ ಒತ್ತು ನೀಡುತ್ತಿದ್ದೇವೆ’ ಎಂದು ಅರುಣ್‌ಕುಮಾರ್ ತಿಳಿಸಿದರು.

‘ಹಲವಾರು ಕನ್ನಡಿಗರು ಇಲ್ಲಿಗೆ ಪ್ರವಾಸ ಬಂದಿದ್ದಾರೆ. ಅವರು ಹೋಟೆಲ್‌ಗಳಲ್ಲಿ ತಂಗಿದ್ದು, ಕೆಲವರನ್ನು ಖುದ್ದು ಭೇಟಿ ಮಾಡಿ ಬಂದಿದ್ದೇವೆ. ಇತರೆ ಒಕ್ಕೂಟದವರು ಭೇಟಿ ಮಾಡಿ ಅವರಿಗೆ ಆತ್ಮವಿಶ್ವಾಸ ತುಂಬುತ್ತಿದ್ದಾರೆ. ವಿಮಾನ ಸಂಚಾರ ಸ್ಥಗಿತಗೊಂಡಿದೆ. ಹೊರಗಡೆ ಗುಂಪಾಗಿ ಹೋಗದಂತೆ ಸೂಚನೆ ನೀಡುತ್ತಿರುವುದರಿಂದ ಪ್ರವಾಸಿಗರೂ ಹೋಟೆಲ್‌ನಲ್ಲಿಯೇ ಉಳಿದಿದ್ದಾರೆ’ ಎಂದು ಹೇಳಿದ್ದಾರೆ.

ಇಲ್ಲಿಗೆ ಕರೆ ಮಾಡಿ

ದುಬೈನಲ್ಲಿ ಸಿಲುಕಿರುವ ಕನ್ನಡಿಗರು ಹಾಗೂ ಅಲ್ಲಿ ನೆಲಸಿರುವವರು, ಕರ್ನಾಟಕದಲ್ಲಿರುವ ಅವರ ಸಂಬಂಧಿಕರ ನೆರವಿಗೆ ಈ ನಂಬರ್‌ಗೆ ಕರೆಮಾಡಬಹುದು.

+971 56 9916774
+971 52 929 7799
+971 543090571

ಟೋಲ್ ಫ್ರೀ ನಂಬರ್: 80046342
ನೋಂದಣಿಗೆ: https://www.cgidubai.gov.in/register/

ಬೆಂಗಳೂರಲ್ಲೂ ಸಹಾಯವಾಣಿ

ಯುದ್ಧ ಪೀಡಿತ ಮಧ್ಯಪ್ರಾಚ್ಯ ದೇಶಗಳಲ್ಲಿ ಸಿಲುಕಿರುವ ಬೆಂಗಳೂರು ನಗರ ಜಿಲ್ಲೆಯವರು ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರಕ್ಕೆ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ಜಿ. ಜಗದೀಶ ತಿಳಿಸಿದ್ದಾರೆ.

ಜಿಲ್ಲಾ ಕಛೇರಿಯ ವಿಪತ್ತು ನಿರ್ವಹಣಾ ಕೇಂದ್ರದ ದೂ.ಸಂ: 080-22967200 ಅಥವಾ ವಾಟ್ಸ್ ಆಪ್ ನಂಬರ್ - 810599707/ 9538047199 ಕ್ಕೆ ಸಂದೇಶದ ಮೂಲಕ ಅಥವಾ ಕರೆ ಮಾಡುವಂತೆ ಕೋರಿದ್ದಾರೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹510
	12 ಕ್ಕೆ	₹72
ಮೈಸೂರು:	100 ಕ್ಕೆ	₹510

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹595-800
ದ್ವಿತಳಿ (ಬಿ.ವಿ)	₹400-902

ಅಫ್ಗಾನ್–ಪಾಕ್ ಸಂಘರ್ಷ: ಇಬ್ಬರ ಸಾವು

ಕಾಬೂಲ್ (ಎಎಫ್‌ಪಿ): ಅಫ್ಗಾನಿಸ್ತಾನ ಮತ್ತು ಪಾಕಿಸ್ತಾನ ಪಡೆಗಳ ನಡುವೆ ಗಡಿಭಾಗದಲ್ಲಿ ನಡೆಯುತ್ತಿರುವ ಸಂಘರ್ಷ ತೀವ್ರಗೊಂಡಿದೆ.

ತಿಂಗಳುಗಳಿಂದ ಗಡಿಯಲ್ಲಿ ಸಂಘರ್ಷ ನಡೆಯುತ್ತಿತ್ತು. ಆದರೆ, ಅಫ್ಗಾನಿಸ್ತಾನ ಗುರುವಾರದಿಂದ ಗಡಿಯುದ್ದಕ್ಕೂ ದಾಳಿಯನ್ನು ತೀವ್ರಗೊಳಿಸಿದ್ದರಿಂದ ಪರಿಸ್ಥಿತಿಯು ಉದ್ವಿಗ್ನಗೊಂಡಿತ್ತು. ಪಾಕಿಸ್ತಾನವು ವಾಯುದಾಳಿ ಮೂಲಕ ಪ್ರತ್ಯುತ್ತರ ನೀಡುತ್ತಿದೆ.

ರಾತ್ರಿಯಿಡಿ ದಾಳಿ–ಪ್ರತಿದಾಳಿ ನಡೆದಿದ್ದು, ಡ್ರೋನ್ ದಾಳಿಯಲ್ಲಿ ಇಬ್ಬರು ನಾಗರಿಕರು ಮತಪಟ್ಟಿದ್ದಾರೆ ಎಂದು ಅಫ್ಗಾನಿಸ್ತಾನ ಅಧಿಕಾರಿಗಳು ತಿಳಿಸಿದ್ದಾರೆ.

ಇಲ್ಲಿಯವರೆಗಿನ ಸೇನಾ ಕಾರ್ಯಾಚರಣೆಯಲ್ಲಿ 415 ತಾಲಿಬಾನಿ ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಪಾಕಿಸ್ತಾನದ ಮಾಹಿತಿ– ಪ್ರಸಾರ ಇಲಾಖೆ ತಿಳಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಸೌಂದರ್ಯ-ಆರೋಗ್ಯ

Health Clinic

ಸೆಲೆಬ್ರಿಟಿ ವೆಲ್ನೆಸ್ನಲ್ಲಿ ಕರ್ನಾಟಕದಾದ್ಯಂತಹ ಇರುವಂತಹ ಸ್ಪಾ ಮತ್ತು ಬ್ಯೂಟಿ ಪಾರ್ಲರ್ ಇದ್ದವರು ಹೊಸದಾಗಿ ಈ ತರಬೇತಿಯು ಸಂಪೂರ್ಣ ಉಚಿತವಾಗಿ ಇರುತ್ತದೆ. ವಿದ್ಯಾ ಅರ್ಹತೆ SSLC, PUC/Degree ಉತ್ತೀರ್ಣರು. ಮಂಡಿ, ಬೆನ್ನು, ಭುಜದನೋವು, ಲಕ್ವ, ಕೀಲುನೋವು, ವೆರಿಕೋಸ್ ವೇಯನ್ಸ್ ಸಮಸ್ಯೆಗೆ ಯಾವುದೇ ರೀತಿಯ ಶಸ್ತ್ರ ಚಿಕಿತ್ಸೆ, ಔಷಧಿ ಇಲ್ಲದೆ ವಿಶೇಷವಾದ ಹೈಡ್ರೊ ಥೆರಪಿಯಿಂದ ಉಚಿತ ಚಿಕಿತ್ಸೆ ಪಡೆಯಿರಿ. ತರಬೇತಿ ಪಡೆದವರಿಗೆ 5 ಲಕ್ಷದವರೆಗೆ ನಾವು ಸಾಲ ಕೊಡಲಾಗುವುದು ಶೇಷಾದ್ರಿಪುರಂ, ಬೆಂಗಳೂರು - 9019626612

ವೈಯಕ್ತಿಕ

Change of Name

I, SANDHYA Suresh Kumar, W/o Suresh Kumar R, R/o Hebbal, Bengaluru, have changed my name from Sandhya Laxminarayana Kemtur to Sandhya Suresh Kumar for all future purposes.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀಮತಿ ವಿಜಯಲಕ್ಷ್ಮಿ ಬಿ ಎಸ್
ಏಪ್ರಿಲ್ 1955 – ಮಾರ್ಚ್ 2025
ಶ್ರೀ ದಯಾಕರ್ ಡಿ ಸಿ, ನಿವೃತ್ತ ಸಹಾಯಕ ನಿರ್ದೇಶಕರು (ಕೃಷಿ ಇಲಾಖೆ) ಇವರ ಧರ್ಮಪತ್ನಿ
ನೀವು ಭೌತಿಕವಾಗಿ ನಮ್ಮೊಂದಿಗೆ ಕಳೆದ 1 ವರ್ಷದಿಂದ ಇಲ್ಲದಿದ್ದರೂ ನಿಮ್ಮ ಆತ್ಮ ನಮ್ಮೊಂದಿಗೇ ಇದ್ದು ಮಾರ್ಗದರ್ಶಕರಾಗಿರುವುದನ್ನು ಕಾಣುತ್ತಿದ್ದೇವೆ! ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಸದಾ ಪ್ರಾರ್ಥಿಸುತ್ತಿರುವ...
ಪ್ರೀತಿಯ ಪತಿ, ಮಕ್ಕಳು, ಸೊಸೆಯಂದಿರು ಹಾಗೂ ಕುಟುಂಬ ವರ್ಗದವರು. ಮೊ: 9448361656

ಪುಣ್ಯಸ್ಮರಣೆ

ಶ್ರೀ ಮರಿಯಪ್ಪ
04-03-1932 - 24-12-2011
ಶ್ರೀಮತಿ ವಿಶಾಲಾಕ್ಷಿ
08-05-1944 - 03-03-2025
ನಿಮ್ಮ ಆದರ್ಶಗಳು ನಮಗೆ ದಾರಿದೀಪ ನಿಮ್ಮ ಆಶೀರ್ವಾದ ಎಂದೆಂದೂ ನಮಗಿರಲಿ
ನಿಮ್ಮ ಆತ್ಮಕ್ಕೆ ಶಾಂತಿ ಕೋರುವ
ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಮತ್ತು ಬಂಧುವರ್ಗದವರು
Ph: 9845898268

ಧನುಷ್

‘ಡಿ56’ನಲ್ಲಿ ಒಂದಾದ ಧನುಷ್–ಮರಿ ಸೆಲ್ವರಾಜ್

ತಮಿಳಿನ ನಟ ಧನುಷ್ ಹಾಗೂ ನಿರ್ದೇಶಕ ಮರಿ ಸೆಲ್ವರಾಜ್ ಸಿನಿಮಾ ಎಂದರೆ ಸಹಜವಾಗಿ ಕುತೂಹಲ ಹೆಚ್ಚುತ್ತದೆ. ಈ ಜೋಡಿ ‘ಕರ್ಣನ್’ ಚಿತ್ರದಿಂದ ಬಲು ಜನಪ್ರಿಯವಾಗಿತ್ತು. ಇದೀಗ ಮತ್ತೊಂದು ಸಿನಿಮಾದಲ್ಲಿ ಇಬ್ಬರು ಒಂದಾಗಿರುವುದು ಖಚಿತವಾಗಿದ್ದು, ಈ ವರ್ಷ ಸೆಪ್ಟೆಂಬರ್‌ನಿಂದ ಚಿತ್ರದ ಚಿತ್ರೀಕರಣ ಪ್ರಾರಂಭವಾಗಲಿದೆ.

ಧನುಷ್ ಅವರ 56ನೇ ಚಿತ್ರ ಇದಾಗಿದ್ದು, ಕಾಲ್ಪನಿಕ ಕಥೆಯ ಜತೆಗೆ ಇತಿಹಾಸ, ರಾಜಕೀಯದ ಅಂಶಗಳು ಈ ಚಿತ್ರದಲ್ಲಿವೆ ಎಂಬುದು ಗೊತ್ತಾಗಿದೆ. ಈ ಬಗ್ಗೆ ತಮಿಳು ಮಾಧ್ಯಮಗಳ ಜತೆ ಮಾತನಾಡಿರುವ ಮರಿ ಸೆಲ್ವರಾಜ್, ‘ಇದು ನನ್ನ ವೃತ್ತಿ ಜೀವನದ ಅತಿ ದೊಡ್ಡ ಸಿನಿಮಾ. ಇದು ನಮ್ಮಿಬ್ಬರ ವೃತ್ತಿ ಜೀವನದ ಅತಿ ದೊಡ್ಡ ಸಿನಿಮಾವಾಗಬೇಕೆಂದು ಧನುಷ್ ಹೇಳಿದ್ದರು. ಹೀಗಾಗಿ ನನ್ನ ಹಿಂದಿನ ಸಿನಿಮಾಗಳಿಗಿಂತ ಭಿನ್ನವಾಗಿರುವುದನ್ನು ಈ ಸಿನಿಮಾದಲ್ಲಿ ಯತ್ನಿಸುತ್ತಿರುವೆ’ ಎಂದಿದ್ದಾರೆ.

ಸದ್ಯ ಧನುಷ್ ‘ಅಮರನ್’ ಚಿತ್ರ ನಿರ್ದೇಶಕ ರಾಜ್‌ಕುಮಾರ್ ಪೆರಿಯಸಾಮಿ ಜತೆ ‘ಡಿ55’ ಚಿತ್ರದ ಚಿತ್ರೀಕರಣದಲ್ಲಿ ಮಗ್ನರಾಗಿದ್ದಾರೆ. ಈ ಚಿತ್ರ ಪೂರ್ಣಗೊಂಡ ಬಳಿಕ ಮರಿ ಸೆಲ್ವರಾಜ್ ನಿರ್ದೇಶನದ ಚಿತ್ರ ಪ್ರಾರಂಭವಾಗಲಿದೆ. ಈ ಚಿತ್ರಕ್ಕೆ ಎ.ಆರ್.ರೆಹಮಾನ್ ಸಂಗೀತವಿರಲಿದೆ ಎಂದು ವರದಿಯಾಗಿದೆ.

‘ತ್ರಿಕಾರಂ’ನ ಮತ್ತೊಂದು ಹಾಡು ಬಿಡುಗಡೆ

ನಿಶ್ಚಿತ, ಹರ್ಷವರ್ಧನ್

ಬಹುತೇಕ ಹೊಸಬರಿಂದಲೇ ಕೂಡಿರುವ ‘ತ್ರಿಕಾರಂ’ ಚಿತ್ರದ ಎರಡನೇ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ‘ಸೀದಾ ನಿಂತರೂ ಲೋಕ ಯಾಕೆ ಉಲ್ಟಾ ಕಾಣ್ತದೆ’ ಎಂಬ ಗೀತೆಗೆ ಕೇಶು-ಚೇತನ್ ಸಾಹಿತ್ಯ, ರಾಜೇಶ್ ಕೃಷ್ಣನ್ ಧ್ವನಿ, ವಿವೇಕ್ ಚಕ್ರವರ್ತಿ ಸಂಗೀತವಿದೆ.

ದಿಲೀಪ್ ಕುಮಾರ್ ಜೆ.ಆರ್. ನಿರ್ದೇಶನದ ಚಿತ್ರ ಎಲ್ಲ ಕೆಲಸಗಳನ್ನು ಮುಗಿಸಿ ಬಿಡುಗಡೆಗೆ ಸಿದ್ಧವಿದೆ. ಜಿ.ಗಣೇಶ್ ಮೂರ್ತಿ ಚಿತ್ರಕ್ಕೆ ಬಂಡವಾಳ ಹೂಡುವುದರ ಜತೆಗೆ ಖಳನಾಯಕನಾಗಿ ಕಾಣಿಸಿಕೊಂಡಿದ್ದಾರೆ.

‘ದೇವರು ಮತ್ತು ದುಷ್ಟರ ನಡುವಿನ ಹೋರಾಟದ ಕಥೆಯನ್ನು ಸಸ್ಪೆನ್ಸ್, ಥ್ರಿಲ್ಲರ್ ಶೈಲಿಯಲ್ಲಿ ಹೇಳಿದ್ದೇವೆ. ಅದು ಯಾವ ರೀತಿಯ ಹೋರಾಟ? ಶಿವನನ್ನು ತ್ರಿಕಾರಂ ಎಂದು ಏಕೆ ಕರೆಯುತ್ತಾರೆ? ಎಂಬಿತ್ಯಾದಿ ವಿಷಯಗಳನ್ನು ಚಿತ್ರದಲ್ಲಿಯೇ ನೋಡಬೇಕು. ಶೀಘ್ರದಲ್ಲಿಯೇ ಚಿತ್ರ ತೆರೆಗೆ ಬರಲಿದೆ’ ಎಂದರು ನಿರ್ದೇಶಕ.

‘ಇದು ಸ್ಮಶಾನ ಅಲ್ಲ’ ಎಂಬ ಅಡಿಬರಹ ಚಿತ್ರಕ್ಕಿದೆ. ಮುಗ್ಧ ಹಾಗೂ ರುದ್ರನಾಗಿ ಎರಡು ಅವತಾರಗಳಲ್ಲಿ ಹರ್ಷವರ್ಧನ್ ಕಾಣಿಸಿಕೊಂಡಿದ್ದಾರೆ. ನಿಶ್ಚಿತ ಶೆಟ್ಟಿ ನಾಯಕಿ. ನಾಗೇಂದ್ರ ಅರಸ್, ಬಲ ರಾಜವಾಡಿ, ಮಂಜು ಪಾವಗಡ ಮುಂತಾದವರು ಅಭಿನಯಿಸಿದ್ದಾರೆ.

ಹೊನ್ನಾಳಿ ಯಾಸಿನ್ ಛಾಯಾಚಿತ್ರಗ್ರಹಣ, ಸತೀಶ್ ಚಂದ್ರಯ್ಯ ಸಂಕಲನ ಚಿತ್ರಕ್ಕಿದೆ.



ವಿಜಯ್ ದೇವರಕೊಂಡ, ರಶ್ಮಿಕಾ

ರಣಬಾಲಿಯಲ್ಲಿ ಒಂದಾದ ರಶ್ಮಿಕಾ-ವಿಜಯ್

ಈ ಹಿಂದೆ ಕೆಲ ಚಿತ್ರಗಳಲ್ಲಿ ಜೋಡಿಯಾಗಿದ್ದ ರಶ್ಮಿಕಾ ಮಂದಣ್ಣ, ವಿಜಯ್ ದೇವರಕೊಂಡ ಇತ್ತೀಚೆಗಷ್ಟೇ ರಿಯಲ್ ಬದುಕಿನಲ್ಲಿಯೂ ಜೋಡಿಯಾಗಿದ್ದಾರೆ. ಆ ಸುದ್ದಿ ಚಾಲ್ತಿಯಲ್ಲಿರುವಾಗಲೇ ಅವರು ರೀಲ್‌ನಲ್ಲಿಯೂ ಮತ್ತೆ ಜೋಡಿಯಾಗಿ ಸದ್ದು ಮಾಡುತ್ತಿದ್ದಾರೆ. ಇಬ್ಬರೂ ತೆರೆ ಮೇಲೆ ಸತಿ-ಪತಿಯಾಗಿ ಕಾಣಿಸಿಕೊಂಡಿರುವ ‘ರಣಬಾಲಿ’ ಚಿತ್ರದ ಮೊದಲ ಹಾಡು ಹಾಗೂ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ರಾಹುಲ್ ಸಾಂಕೃತ್ಯಾಯನ್ ನಿರ್ದೇಶನದ ಚಿತ್ರದ ‘ಏನಯ್ಯ ಸ್ವಾಮಿ’ ಗೀತೆಯಲ್ಲಿ ವಿಜಯ್, ರಶ್ಮಿಕಾ ಗಂಡ ಹೆಂಡತಿಯಾಗಿ ಹೆಜ್ಜೆ ಹಾಕಿದ್ದಾರೆ. ಈ ಚಿತ್ರದಲ್ಲಿ ವಿಜಯ್ ದೇವರಕೊಂಡ ರಣಬಾಲಿ ಎಂಬ ಸ್ವಾತಂತ್ರ್ಯ ಹೋರಾಟಗಾರನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ರಶ್ಮಿಕಾ ಜಯಮ್ಮ ಎಂಬ ಪಾತ್ರದಲ್ಲಿ ನಟಿಸಿದ್ದಾರೆ.

ಈ ಚಿತ್ರವನ್ನು ಮೈತ್ರಿ ಮೂವಿ ಮೇಕರ್ಸ್ ನಿರ್ಮಿಸಿ, ಟಿ-ಸಿರೀಸ್ ಪ್ರಸ್ತುತಪಡಿಸುತ್ತಿದೆ.

19ನೇ ಶತಮಾನದ ಬ್ರಿಟಿಷ್ ಆಡಳಿತದ ಸಮಯದಲ್ಲಿ ನಡೆದ ನಿಜ ಘಟನೆಗಳಿಂದ ಪ್ರೇರಿತವಾದ ಕಥೆ ಹೊಂದಿರುವ ಚಿತ್ರವು ಸೆಪ್ಟೆಂಬರ್ 11 ರಂದು ಬಿಡುಗಡೆಯಾಗಲಿದೆ. ತೆಲುಗು, ಹಿಂದಿ ಸೇರಿದಂತೆ ಹಲವು ಭಾಷೆಗಳಲ್ಲಿ ಚಿತ್ರ ಬಿಡುಗಡೆಗೊಳ್ಳಲಿದೆ. ಅಜಯ್ ಅತುಲ್ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ.

ಕರಾಚಿ: 10 ಪ್ರತಿಭಟನಕಾರರ ಸಾವು

ಪಾಕಿಸ್ತಾನ, ಇರಾಕ್‌ನಲ್ಲಿ ಅಮೆರಿಕ ರಾಯಭಾರ ಕಚೇರಿಗೆ ನುಗ್ಗಲು ಯತ್ನ

ಕರಾಚಿ (ಪಿಟಿಐ): ಇರಾನ್ ನಾಯಕ ಅಯಾತೊಲ್ಲಾ ಅಲಿ ಖಮೇನಿ ಹತ್ಯೆ ಖಂಡಿಸಿ ಪಾಕಿಸ್ತಾನದ ಕರಾಚಿಯಲ್ಲಿರುವ ಅಮೆರಿಕ ರಾಯಭಾರ ಕಚೇರಿಗೆ ನುಗ್ಗಲು ಪ್ರತಿಭಟನಕಾರರು ಭಾನುವಾರ ಯತ್ನಿಸಿದ್ದಾರೆ.

ಪೊಲೀಸರು ಮತ್ತು ಪ್ರತಿಭಟನಕಾರರ ನಡುವೆ ಘರ್ಷಣೆ ನಡೆದು ಕನಿಷ್ಠ 10 ಮಂದಿ ಮೃತಪಟ್ಟಿದ್ದು, 30ಕ್ಕೂ ಹೆಚ್ಚು ಮಂದಿಗೆ ಗಾಯಗಳಾಗಿವೆ.

ಖಮೇನಿ ಸಾವು ದೃಢಪಡುತ್ತಿದ್ದಂತೆ ರಸ್ತೆಯಲ್ಲಿ ಜಮಾಯಿಸಿದ್ದ ಶಿಯಾ ಸಂಘಟನೆಯ ಹಲವರು ರಾಯಭಾರ ಕಚೇರಿಯತ್ತ ನುಗ್ಗಲು ಯತ್ನಿಸಿದರು. ಪೊಲೀಸರು ತಡೆದಾಗ ಘರ್ಷಣೆ ಉಂಟಾಗಿದೆ.

‘ಪೊಲೀಸರ ಮೇಲೆ ಪ್ರತಿಭಟನಕಾರರು ದಾಳಿ ನಡೆಸಿ, ಪೊಲೀಸ್ ವಾಹನಗಳಿಗೆ ಬೆಂಕಿ ಹಚ್ಚಿದ್ದರಿಂದ ಲಾಠಿ ಪ್ರಯೋಗಿಸಲಾಯಿತು. ಪರಿಸ್ಥಿತಿ ನಿಯಂತ್ರಣಕ್ಕೆ ಬಾರದೆ ಇದ್ದಾಗ ಅಶ್ರುವಾಯು ಸಿಡಿಸಿ, ರಬ್ಬರ್ ಗುಂಡುಗಳನ್ನು ಹಾರಿಸಿದೆವು. ಆದರೂ ರಾಯಭಾರ ಕಚೇರಿಗೆ ನುಗ್ಗಲು ಕೆಲವರು ಯತ್ನಿಸಿದಾಗ ಗುಂಡು ಹಾರಿಸಿ ಪರಿಸ್ಥಿತಿ ನಿಯಂತ್ರಣಕ್ಕೆ ತರಲಾಯಿತು’ ಎಂದು ಎಸ್‌ಎಸ್‌ಪಿ ಅಸದ್ ರೆಜಾ ತಿಳಿಸಿದ್ದಾರೆ.

‘ಯಾರೊಬ್ಬರೂ ಕಾನೂನು ಕೈಗೆತ್ತಿಕೊಳ್ಳಲು ಅವಕಾಶ ನೀಡುವುದಿಲ್ಲ. ಘಟನೆ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲಾಗುವುದು ಎಂದು ಸಿಂಧ್ ಆಂತರಿಕ ವ್ಯವಹಾರಗಳ ಸಚಿವ ಜಿಯಾವುಲ್ ಹಸನ್ ಲ್ಯಾಂಗರ್ ತಿಳಿಸಿದ್ದಾರೆ.

ರಾಯಭಾರ ಕಚೇರಿ ಭದ್ರತೆಗಿದ್ದ ಅಮೆರಿಕದ ಗಾರ್ಡ್‌ಗಳ ದಾಳಿಯಿಂದ ಪ್ರತಿಭಟನಕಾರರು ಮೃತಪಟ್ಟಿದ್ದಾರೆ ಎಂಬುದನ್ನು ಹಸನ್ ಅಲ್ಲಗಳೆದಿದ್ದಾರೆ.

ಹಲವೆಡೆ ಪ್ರತಿಭಟನೆ: ಖಮೇನಿ ಅವರ ಹತ್ಯೆ ಖಂಡಿಸಿ ಇಸ್ಲಾಮಾಬಾದ್, ಲಾಹೋರ್ ಸೇರಿ ಪಾಕಿಸ್ತಾನದ ಇನ್ನೂ ಹಲವು ಪ್ರದೇಶಗಳಲ್ಲಿ ಭಾನುವಾರ ಪ್ರತಿಭಟನೆಗಳು ನಡೆದಿವೆ.

ಇಸ್ಲಾಮಾಬಾದ್‌ನಲ್ಲಿ ಪ್ರತಿಭಟನೆಗೆ ತೆಹ್ರೀಕ್ -ಇ-ಜೆಫಾರಿಯಾ ಪಾಕಿಸ್ತಾನ್ ಕರೆ ನೀಡಿ, ಅಮೆರಿಕ ರಾಯಭಾರ ಕಚೇರಿಗೆ ನುಗ್ಗಲು ಮುಂದಾಗಿತ್ತು. ಪೊಲೀಸರು ತಡೆದರು.

‘ಪಾಕಿಸ್ತಾನದ ಉತ್ತರಭಾಗದಲ್ಲಿರುವ ಸ್ಕರ್ದು ನಗರದಲ್ಲಿ ವಿಶ್ವಸಂಸ್ಥೆಗೆ ಸೇರಿದ ಕಚೇರಿಗೆ ಪ್ರತಿಭಟನಕಾರರು ಬೆಂಕಿ ಹಚ್ಚಿದ್ದಾರೆ’ ಎಂದು ಸ್ಥಳೀಯ ಸರ್ಕಾರದ ವಕ್ತಾರ ಶಬ್ಬೀರ್ ಮಿರ್ ತಿಳಿಸಿದ್ದಾರೆ. ಪಾಕಿಸ್ತಾನದಲ್ಲಿರುವ ಹಲವು ಬಹುರಾಷ್ಟ್ರೀಯ ಕಂಪನಿಗಳು ವಿಮಾನ ಸಂಚಾರ ಕೈಗೊಳ್ಳದಂತೆ ಸಿಬ್ಬಂದಿಗೆ ತಿಳಿಸಿವೆ. ಕಚೇರಿ ಮತ್ತು ಕಂಪನಿಗಳ ಭದ್ರತೆ ಹೆಚ್ಚಳ ಮಾಡುತ್ತಿವೆ.

ಅಮೆರಿಕ ನಾಗರಿಕರಿಗೆ ಎಚ್ಚರಿಕೆ: ಇಸ್ಲಮಾಬಾದ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿ ಈ ಬಗ್ಗೆ ಪ್ರತಿಕ್ರಿಯಿಸಿದ್ದು, ‘ಕರಾಚಿ ಮತ್ತು ಲಾಹೋರ್ ಕಚೇರಿಗಳ ಬಳಿ ನಡೆದ ಪ್ರತಿಭಟನೆಗಳ ವರದಿ ಪಡೆಯುತ್ತಿದ್ದೇವೆ. ಇಸ್ಲಮಾಬಾದ್ ಮತ್ತು ಪೇಶಾವರ ಕಚೇರಿಗಳ ಭದ್ರತೆ ಹೆಚ್ಚಿಸಲಾಗಿದೆ’ ಎಂದು ಹೇಳಿದೆ.

‘ಪಾಕಿಸ್ತಾನದಲ್ಲಿರುವ ಅಮೆರಿಕ ಪ್ರಜೆಗಳು ಎಚ್ಚರದಿಂದ ಇರಬೇಕು. ಮನೆ, ಹೋಟೆಲ್‌ಗಳಿಂದ ಹೊರಗೆ ಹೋಗುವವರು ಪ್ರವಾಸ ಮಾಹಿತಿ ನೀಡುವಂತೆ’ ಸೂಚಿಸಲಾಗಿದೆ ಎಂದು ತಿಳಿಸಿದೆ.

ಖಮೇನಿ ಹತ್ಯೆ ಖಂಡಿಸಿ ಪಾಕಿಸ್ತಾನದ ಕರಾಚಿಯಲ್ಲಿ ಶಿಯಾ ಸಮುದಾಯದ ನೂರಾರು ಮಂದಿ ಭಾನುವಾರ ಪ್ರತಿಭಟನೆ ನಡೆಸಿ ಪೊಲೀಸ್ ವಾಹನಕ್ಕೆ ಬೆಂಕಿ ಹಚ್ಚಿದರು — ಪಿಟಿಐ ಚಿತ್ರ

ಇರಾಕ್‌ನಲ್ಲೂ ಪ್ರತಿಭಟನೆ

ಇರಾನ್ ಮೇಲಿನ ದಾಳಿ ಹಾಗೂ ಆಯತೊಲ್ಲಾ ಖಮೇನಿ ಹತ್ಯೆ ಖಂಡಿಸಿ ಇರಾಕ್‌ನಲ್ಲೂ ಭಾನುವಾರ ಪ್ರತಿಭಟನೆಗಳು ನಡೆದವು.

ರಾಜಧಾನಿ ಬಾಗ್ದಾದ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿ ಮುಂದೆ ಜಮಾಯಿಸಿದ ನೂರಾರು ಮಂದಿ ಇರಾನ್ ಬೆಂಬಲಿಗರನ್ನು ಅಶ್ರುವಾಯು ಮತ್ತು ಗ್ರೆನೇಡ್‌ಗಳನ್ನು ಸಿಡಿಸಿ ಪೊಲೀಸರು ಚದುರಿಸಿದರು.

ಶಿಯಾ ಸಮುದಾಯದ ಪ್ರತಿಭಟನಕಾರರು ‘ಇಸ್ರೇಲ್ ಸರ್ವನಾಶ, ಅಮೆರಿಕ ಸರ್ವನಾಶ’ ಎನ್ನುವ ಘೋಷಣೆಗಳನ್ನು ಕೂಗಿದರು.

‘ಹೊಸ ನಾಯಕತ್ವ ಮಂಡಳಿಯಿಂದ ಕೆಲಸ ಆರಂಭ’

ದುಬೈ (ಎಪಿ): ‘ಇರಾನ್‌ನ ಅಯತೊಲ್ಲಾ ಅಲಿ ಖಮೇನಿ ಹತ್ಯೆಯ ಬಳಿಕ ದೇಶದ ಹೊಸ ನಾಯಕತ್ವ ಮಂಡಳಿಯು ತನ್ನ ಕೆಲಸ ಆರಂಭಿಸಿದೆ’ ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ತಿಳಿಸಿದ್ದಾರೆ.

ಮೊದಲೇ ರೆಕಾರ್ಡ್ ಮಾಡಿದ ಪೆಜೆಶ್ಕಿಯಾನ್ ಅವರ ಧ್ವನಿಯನ್ನು ಇರಾನ್‌ನ ಸರ್ಕಾರಿ ಸ್ವಾಮ್ಯದ ಸುದ್ದಿವಾಹಿನಿಗಳು ಪ್ರಸಾರ ಮಾಡಿದವು.

ಸಮಿತಿಯಲ್ಲಿ ಪೆಜೆಶ್ಕಿಯಾನ್ ಸೇರಿದಂತೆ ಮೂವರಿದ್ದಾರೆ. ಮತ್ತಿಬ್ಬರು ನ್ಯಾಯಾಂಗ ಇಲಾಖೆಯ ಮುಖ್ಯಸ್ಥ ಗೊಲಮ್ ಹೊಸೈನ್ ಮೊಹ್‌ಸೆನಿ ಎಜೆಹೈ ಹಾಗೂ ಅಯತೊಲ್ಲಾ ಅಲಿ ರೆಜಾ ಅರಾಫಿ ಇದ್ದಾರೆ.

ಒಂದೆರಡು ದಿನಗಳಲ್ಲಿ ಆಯ್ಕೆ: ‘ಇರಾನ್‌ನ ಸರ್ವೋಚ್ಚ ನಾಯಕನನ್ನು ಮುಂದಿನ ಒಂದು ಅಥವಾ ಎರಡು ದಿನದ ಒಳಗಾಗಿ ಆಯ್ಕೆ ಮಾಡಲಾಗುವುದು’ ಎಂದು ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ತಿಳಿಸಿದ್ದಾರೆ. ಖಮೇನಿ ಹತ್ಯೆ ಮಾಡಿದ ಬಳಿಕ ಅಲ್ ಜಜೀರಾ ಸುದ್ದಿವಾಹಿನಿಗೆ ಮಾತನಾಡಿ ಈ ವಿಷಯ ತಿಳಿಸಿದ್ದಾರೆ.

ವಿದೇಶಿ ಪ್ರಜೆಗಳ ವೀಸಾ ವಿಸ್ತರಣೆಗೆ ಕ್ರಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ಏಷ್ಯಾದಲ್ಲಿನ ಬೆಳವಣಿಗೆಗಳಿಂದ ಪ್ರಯಾಣದ ಯೋಜನೆಗಳಲ್ಲಿ ವ್ಯತ್ಯಾಸವಾಗಿರುವ ವಿದೇಶಿ ಪ್ರಜೆಗಳಿಗೆ ವೀಸಾ ವಿಸ್ತರಣೆ ಅಥವಾ ದೇಶದಲ್ಲಿ ತಮ್ಮ ವಾಸ್ತವ್ಯವನ್ನು ಕ್ರಮಬದ್ಧಗೊಳಿಸಲು ಹತ್ತಿರದ ವಿದೇಶಿಗರ ಪ್ರಾದೇಶಿಕ ನೋಂದಣಿ ಕಚೇರಿಯನ್ನು (ಎಫ್‌ಆರ್‌ಆರ್‌ಒ) ಸಂಪರ್ಕಿಸುವಂತೆ ಭಾರತದ ವಿದೇಶಾಂಗ ಸಚಿವಾಲಯ (ಎಂಇಎ) ತಿಳಿಸಿದೆ.

ಇರಾನ್‌ನ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆ ಬೆನ್ನಲ್ಲೇ, ಕೊಲ್ಲಿ ರಾಷ್ಟ್ರಗಳಲ್ಲಿನ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿ ಇರಾನ್ ಭಾರಿ ದಾಳಿ ನಡೆಸಿದೆ. ಇದರಿಂದಾಗಿ ಕೊಲ್ಲಿ ರಾಷ್ಟ್ರಗಳಲ್ಲಿ ವಿಮಾನ ಹಾರಾಟ ನಿಷೇಧ ವಲಯ ಘೋಷಿಸಲಾಗಿದೆ. ಇದರ ಪರಿಣಾಮ ಹಲವು ವಿಮಾನಗಳ ಹಾರಾಟ ರದ್ದಾಗಿದೆ.

ಇದರಿಂದ ಪ್ರಯಾಣದ ತೊಂದರೆ ಎದುರಿಸುತ್ತಿರುವ ವಿದೇಶಿ ಪ್ರಜೆಗಳಿಗೆ ವೀಸಾ ವಿಸ್ತರಿಸಲು ಎಂಇಎ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

‘ಇರಾನ್ ಮೇಲೆ ಅಮೆರಿಕ–ಇಸ್ರೇಲ್ ದಾಳಿಯ ಬಳಿಕ ಅಂತರರಾಷ್ಟ್ರೀಯ ವಿಮಾನ ಪ್ರಮಾಣದ ಮೇಲೆ ತೀವ್ರ ಪರಿಣಾಮ ಬೀರಿದೆ. ಇದರಿಂದಾಗಿ ತಮ್ಮ ಪ್ರಯಾಣದ ಯೋಜನೆಗಳನ್ನು ಬದಲಿಸಬೇಕಾದ ವಿದೇಶಿ ಪ್ರಜೆಗಳು ತಮ್ಮ ವೀಸಾ ವಿಸ್ತರಣೆ ಅಥವಾ ವಾಸ್ತವ್ಯವನ್ನು ಕ್ರಮಬದ್ಧಗೊಳಿಸಲು ಎಫ್‌ಆರ್‌ಆರ್‌ಒಗಳನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆ’ ಎಂದು ಎಂಇಎ ಭಾನುವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಕುರಿತು ವಿದೇಶಿ ಪ್ರಜೆಗಳ ಕೋರಿಕೆಗೆ ಅಗತ್ಯ ನೆರವು ನೀಡುವಂತೆ ಸಂಬಂಧಪಟ್ಟ ಎಫ್‌ಆರ್‌ಆರ್‌ಒ ಅಧಿಕಾರಿಗಳಿಗೆ ಎಂಇಎ ಸೂಚಿಸಿದೆ.

ಅಘೋಷಿತ ಬಂದ್; ಮೂರು ದಿನ ಶೋಕಾಚರಣೆ

ಅಲೀಪುರ ಜನರ ಕಣ್ಣೀರು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಇರಾನ್ ನಾಯಕ ಅಯಾತೊಲ್ಲಾ ಅಲಿ ಖಮೇನಿ ಹತ್ಯೆಗೆ ಗೌರಿಬಿದನೂರು ತಾಲ್ಲೂಕಿನ ಅಲೀಪುರದ ಶಿಯಾ ಮುಸ್ಲಿಮರು ಕಣ್ಣೀರು ಹಾಕಿದರು. ಪಟ್ಟಣದಲ್ಲಿ ಅಘೋಷಿತ ಬಂದ್ ಸ್ಥಿತಿ ಇತ್ತು.

ಖಮೇನಿ ಅವರ ಹತ್ಯೆ ಸುದ್ದಿ ತಿಳಿದು ಭಾನುವಾರ ಬೆಳಿಗ್ಗೆ ಎಲ್ಲರೂ ಸ್ವಯಂ ಪ್ರೇರಿತವಾಗಿ ಅಂಗಡಿಗಳು ಬಾಗಿಲು ಮುಚ್ಚಿದರು. ಅಂಜುಮನ್ ಎ ಜಾಫರಿಯಾ ಸಮಿತಿ ಪ್ರತಿಭಟನೆಗೆ ಕರೆ ನೀಡಿತ್ತು.

ಜನರು ಕಪ್ಪು ಬಟ್ಟೆ ಧರಿಸಿ, ಕಪ್ಪು ಬಾವುಟ ಹಿಡಿದು ಮಸೀದಿ ಬಳಿ ದೊಡ್ಡ ಸಂಖ್ಯೆಯಲ್ಲಿ ಸೇರಿದರು. ಖಮೇನಿ ಅವರ ಭಾವಚಿತ್ರ ಹಿಡಿದು ಪ್ರಾರ್ಥನೆ ಸಲ್ಲಿಸಿದರು. ಕುರ್‌ಆನ್ ಪಠಿಸಿದರು. ಈ ವೇಳೆ ಬಹಳಷ್ಟು ಜನರು ಅವರನ್ನು ನೆನೆದು ಕಣ್ಣೀರು ಹಾಕಿದರು. ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮಧ್ಯಾಹ್ನ ಮಸೀದಿಯಿಂದ ಸೈಯದ್ ಮುಸ್ತಫಾ ಹುಸೇನ್ ವೃತ್ತದವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಹಾಡಿನ ಮೂಲಕ ಅವರ ಸಾಧನೆ ಸ್ಮರಿಸಲಾಯಿತು.

ಭಾನುವಾರ ಸೇರಿ ಮೂರು ದಿನ ಅಲೀಪುರ ಪಟ್ಟಣದಲ್ಲಿ ಶೋಕಾಚರಣೆ ಇರಲಿದೆ. ಇಡೀ ದಿನ ಪಟ್ಟಣದಲ್ಲಿ ವ್ಯಾಪಕವಾದ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಅಲೀಪುರದಲ್ಲಿ 25 ಸಾವಿರ ಮತ್ತು ಪಕ್ಕದ ಪೋತೇನಹಳ್ಳಿಯಲ್ಲಿ ಒಂದು ಸಾವಿರ ಶಿಯಾ ಮುಸ್ಲಿಮರು ವಾಸವಾಗಿದ್ದಾರೆ.

ಇರಾನ್ ಸರ್ವೋಚ್ಚ ನಾಯಕ ಆಯಾತೊಲ್ಲಾ ಅಲಿ ಖಮೇನಿ ಹತ್ಯೆ ಖಂಡಿಸಿ ಗೌರಿಬಿದನೂರು ತಾಲ್ಲೂಕಿನ ಅಲೀಪುರದಲ್ಲಿ ಶಿಯಾ ಮುಸ್ಲಿಮರು ಪ್ರತಿಭಟನೆ ನಡೆಸಿದರು

ಖಮೇನಿ ಹತ್ಯೆಗೆ ಭಾರತದಲ್ಲಿ ಆಕ್ರೋಶ: ಅಮೆರಿಕ ವಿರುದ್ಧ ಕಿಡಿ

ಹಲವೆಡೆ ಪ್ರತಿಭಟನೆ, ಶೋಕಾಚರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಮೆರಿಕ ಮತ್ತು ಇಸ್ರೇಲ್ ದಾಳಿ ಮಾಡಿ ಇರಾನ್‌ನ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಹತ್ಯೆ ಮಾಡಿರುವುದನ್ನು ಖಂಡಿಸಿ ದೇಶದ ಹಲವೆಡೆ ಭಾನುವಾರ ಪ್ರತಿಭಟನೆ ಮತ್ತು ಶೋಕಾಚರಣೆಗಳು ನಡೆದವು.

ಶಿಯಾ ಸಮುದಾಯದ 15 ಲಕ್ಷ ಜನರಿರುವ ಕಾಶ್ಮೀರದ ಲಾಲ್ ಚೌಕ್, ಸೈದಾ ಕದಲ್, ಬದ್ಗಾಮ್, ಬಂಡಿಪೋರಾ, ಅನಂತನಾಗ್ ಮತ್ತು ಪುಲ್ವಾಮಗಳಲ್ಲಿ ಪ್ರತಿಭಟನೆ ತೀವ್ರವಾಗಿತ್ತು.

ಪ್ರತಿಭಟನಕಾರರು ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಹಾಕುತ್ತ ಎದೆಗೆ ಕೈಯಿಂದ ಬಡಿದುಕೊಂಡರು

ಸೋಮವಾರವೂ ಬಂದ್‌ಗೆ ಕರೆ ನೀಡಲಾಗಿದೆ. ಮುಂಜಾಗ್ರತಾ ಕ್ರಮವಾಗಿ ಕಾಶ್ಮೀರದಾದ್ಯಂತ ಶಾಲಾ–ಕಾಲೇಜುಗಳಿಗೆ ಎರಡು ದಿನ ರಜೆ ಘೋಷಿಸಲಾಗಿದೆ.

ದೇಶದಲ್ಲಿನ ಅನೇಕ ಮುಸ್ಲಿಂ ಸಂಘ–ಸಂಸ್ಥೆಗಳು ಹಲವು ದಿನಗಳ ಶೋಕಾಚರಣೆಯನ್ನು ಘೋಷಿಸಿವೆ ಮತ್ತು ಸೋಮವಾರ ಪ್ರತಿಭಟನೆಗೆ ಕರೆ ನೀಡಿವೆ.

ಉತ್ತರಪ್ರದೇಶದ ಬಾರಾ ಇಮಾಂಬಾರ ಮಸೀದಿ ಬಳಿ ಜನರು ಪ್ರತಿಭಟನೆ ನಡೆಸಿದರು. ಮಹಿಳೆಯರು ಖಮೇನಿ ಚಿತ್ರಗಳನ್ನು ಹಿಡಿದುಕೊಂಡು ಶೋಕತಪ್ತರಾಗಿದ್ದರು.

‘ಸೋಮವಾರ ನಡೆಯಲಿರುವ ಪ್ರತಿಭಟನೆಯಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಪ್ರತಿಕೃತಿಗಳನ್ನು ದಹಿಸುವುದಾಗಿ’ ಅಖಿಲ ಭಾರತೀಯ ಶಿಯಾ ವೈಯಕ್ತಿಕ ಕಾನೂನು ಮಂಡಳಿ ಅಧ್ಯಕ್ಷ ಮೌಲನಾ ಯಾಸೂಬ್ ಅಬ್ಬಾಸ್ ಘೋಷಿಸಿದ್ದಾರೆ.

‘ಶಿಯಾ ಸಮುದಾಯವು ಮೂರು ದಿನ ಶೋಕಾಚರಣೆಯನ್ನು ನಡೆಸಲಿದೆ. ಈ ಸಂದರ್ಭದಲ್ಲಿ ಕಪ್ಪು ಬಟ್ಟೆ ಧರಿಸಿ, ಮನೆಗಳಲ್ಲಿ ಕಪ್ಪು ಧ್ವಜಗಳನ್ನು ಹಾರಿಸಿ, ವಿಶೇಷ ಪ್ರಾರ್ಥನೆಗಳನ್ನು ಸಲ್ಲಿಸಲಾಗುವುದು’ ಎಂದು ಅವರು ಹೇಳಿದ್ದಾರೆ. ಪಂಜಾಬ್‌ನ ಲೂಧಿಯಾನದಲ್ಲಿಯೂ ಪ್ರತಿಭಟನೆ ಮತ್ತು ಪ್ರತಿಕೃತಿ ದಹನ ನಡೆಯಿತು. ಅಜ್ಮೇರ್‌ನಲ್ಲಿ ಶೋಕಾಚರಣೆ ಘೋಷಿಸಲಾಗಿದೆ.

ಶಿಯಾ ಸಮುದಾಯದವರು ಶ್ರೀನಗರದಲ್ಲಿ ಪ್ರತಿಭಟನೆ ನಡೆಸಿದರು — ಎಎಫ್‌ಪಿ ಚಿತ್ರ

‘ಮಾನವೀಯ ಮೌಲ್ಯಗಳ ಕೊಲೆ’

ಮಾಸ್ಕೊ: ಇರಾನ್‌ನ ಸರ್ವೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಹಾಗೂ ಅವರ ಕುಟುಂಬಸ್ಥರ ಹತ್ಯೆಯ ಮೂಲಕ ಮಾನವೀಯ ಮೌಲ್ಯಗಳು ಹಾಗೂ ಅಂತರರಾಷ್ಟ್ರೀಯ ಕಾನೂನುಗಳನ್ನು ಕಗ್ಗೊಲೆ ಮಾಡಲಾಗಿದೆ ಎಂದು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ.



ಪುಟಿನ್

ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರಿಗೆ ಬರೆದ ಪತ್ರ ದಲ್ಲಿ ಪುಟಿನ್ ಈ ರೀತಿ ಸಂತಾಪ ಸೂಚಿಸಿ ದ್ದಾರೆಂದು ಕ್ರೆಮ್ಲಿನ್ ಬಿಡುಗಡೆಗೊಳಿಸಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ರಷ್ಯಾ–ಇರಾನ್ ನಡುವಿನ ಸ್ನೇಹ ಸಂಬಂಧವನ್ನು ವೃದ್ಧಿಸುವಲ್ಲಿ ಹಾಗೂ ಉಭಯ ರಾಷ್ಟ್ರಗಳ ನಡುವೆ ಸಮಗ್ರ ಕಾರ್ಯತಂತ್ರ ಪಾಲುದಾರಿಕೆಯನ್ನು ಸಾಕಾರ ಗೊಳಿಸುವಲ್ಲಿ ಖಮೇನಿ ಬಹುಮುಖ್ಯ ಪಾತ್ರ ವಹಿಸಿದ್ದರು. ಅವರನ್ನು ನಮ್ಮ ದೇಶದಲ್ಲಿ ಶ್ರೇಷ್ಠ ನಾಯಕ ಎಂದೇ ಸ್ಮರಿಸಲಾಗುವುದು’ ಎಂದೂ ಪುಟಿನ್ ಹೇಳಿದ್ದಾರೆ.

ತೈಲ ಟ್ಯಾಂಕರ್ ಮೇಲೆ ಕ್ಷಿಪಣಿ ದಾಳಿ

ಹೊರ್ಮುಜ್ ಜಲಸಂಧಿಯಲ್ಲಿ ಸಿಲುಕಿರುವ 15 ಮಂದಿ ಭಾರತೀಯರು

ದುಬೈ (ಪ್ರಜಾವಾಣಿ ವಾರ್ತೆ): ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸೇನಾ ಕಾರ್ಯಾಚರಣೆಯಲ್ಲಿ ತೈಲ ಟ್ಯಾಂಕರ್ ಮೇಲೆ ಕ್ಷಿಪಣಿ ದಾಳಿ ನಡೆಸಲಾಗಿದ್ದು, ಅದರಲ್ಲಿ 15 ಮಂದಿ ಭಾರತೀಯರಿದ್ದರು ಎಂದು ತಿಳಿದುಬಂದಿದೆ. ದಾಳಿಯಿಂದ ಕನಿಷ್ಠ 4 ಮಂದಿ ಗಾಯಗೊಂಡಿದ್ದು, ತಕ್ಷಣವೇ ವೈದ್ಯಕೀಯ ಚಿಕಿತ್ಸೆ ಕಲ್ಪಿಸಲಾಗಿದೆ ಎಂದು ಒಮಾನ್‌ನ ಕಡಲ ಭದ್ರತಾ ಕೇಂದ್ರವು ತಿಳಿಸಿದೆ.

ಟ್ಯಾಂಕರ್‌ನಲ್ಲಿ 20 ಮಂದಿ ಪ್ರಯಾಣಿಸುತ್ತಿದ್ದರು. ಈ ಪೈಕಿ ಐದು ಮಂದಿ ಇರಾನ್ ನಾಗರಿಕರು. ಈ ಟ್ಯಾಂಕರ್ ಹೊರ್ಮುಜ್ ಜಲಸಂಧಿಯತ್ತ ಹೊರಟಿತ್ತು. ಮುಸಾಡಂಮ್ ಕಸಾಬ್ ಬಂದರಿನಿಂದ ಐದು ನಾಟಿಕಲ್ ಮೈಲಿ ದೂರದಲ್ಲಿದ್ದ ವೇಳೆ ಈ ದಾಳಿ ನಡೆದಿದೆ.

‘ಹೊರ್ಮುಜ್ ಜಲಸಂಧಿಯ ಮೂಲಕ ಯಾವುದೇ ಸರಕು ಸಾಗಣೆಗೆ ಅವಕಾಶ ನೀಡುವುದಿಲ್ಲ’ ಎಂದು ಗಲ್ಫ್ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಸಂಘರ್ಷದ ಬಳಿಕ ಇರಾನ್‌ನ ರೆವಲ್ಯೂಷನರಿ ಗಾರ್ಡ್ ಹೇಳಿಕೆ ನೀಡಿದೆ. ಆ ಮೂಲಕ ಗಲ್ಫ್‌ನಲ್ಲಿ ತೈಲ ಉತ್ಪಾದಿಸುತ್ತಿರುವ ಅಮೆರಿಕ ಹಾಗೂ ಮಿತ್ರಪಡೆಗಳ ತೈಲ ವಿತರಣೆಯನ್ನು ಸ್ಥಗಿತಗೊಳಿಸಲು ಇರಾನ್ ಸಿದ್ಧತೆ ನಡೆಸಿದೆ.



ಹೊರ್ಮುಜ್ ಜಲಸಂಧಿಯು ಇರಾನ್ ಹಾಗೂ ಒಮಾನ್ ನಡುವಿನ ಕಿರಿದಾದ ಮಾರ್ಗವಾಗಿದ್ದು, ಜಾಗತಿಕ ವಹಿವಾಟಿನ ಐದನೇ ಒಂದು ಭಾಗವನ್ನು ಹೊಂದಿದೆ. ತೈಲ ಹಾಗೂ ಅನಿಲ ಟ್ಯಾಂಕರ್‌ನ ಶೇಕಡಾ 20ರಷ್ಟು ಇದೇ ಮಾರ್ಗದ ಮೂಲಕ ವಿವಿಧ ದೇಶಗಳಿಗೆ ತಲುಪುತ್ತವೆ.

ಕಿರಿದಾದ ಸ್ಥಳದಲ್ಲಿ 33 ಕಿ.ಮೀ ಅಗಲವಿರುವ ಈ ಮಾರ್ಗವು ಒಪೆಕ್ ರಾಷ್ಟ್ರಗಳಾದ (ಪೆಟ್ರೋಲ್ ರಫ್ತು ಮಾಡುವ ಸದಸ್ಯ ರಾಷ್ಟ್ರಗಳು) ಕುವೈತ್, ಬಹರೇನ್, ಕತಾರ್, ಸಂಯುಕ್ತ ಅರಬ್ ಒಕ್ಕೂಟ (ಯುಎಇ), ಇರಾಕ್ ದೇಶಕ್ಕೂ ಅರೇಬಿಯನ್ ಸಮುದ್ರದೊಂದಿಗೆ ಸಂಪರ್ಕ ಕಲ್ಪಿಸುವ ಏಕೈಕ ಸಮುದ್ರ ಮಾರ್ಗವಾಗಿದೆ. ಕೆಂಪು ಸಮುದ್ರ ಹಾಗೂ ಸೂಯೆಜ್ ಕಾಲುವೆಯ ಮೂಲಕ ಉತ್ತರ ಅಮೆರಿಕ ಹಾಗೂ ಪಶ್ಚಿಮ ಯುರೋಪ್ ರಾಷ್ಟ್ರಗಳಿಗೆ ಈ ಮಾರ್ಗವೂ ಸಂಪರ್ಕ ಕಲ್ಪಿಸುತ್ತದೆ. ಈ ಜಲಸಂಧಿಯು ಒಮಾನ್ ಹಾಗೂ ಇರಾನ್ ನಡುವೆ ಇದೆ. ಅತ್ಯಂತ ಕಿರಿದಾದ ಮಾರ್ಗದಲ್ಲಿ 33 ಕಿ.ಮೀ ಅಗಲ ಹೊಂದಿದ್ದು, ಹಡಗುಗಳು ಸಂಚರಿಸುವ ಮಾರ್ಗಗಳು ಎರಡು ಭಾಗದಲ್ಲಿ 3 ಕಿ.ಮೀನಷ್ಟೇ ಅಗಲ ಹೊಂದಿದೆ.

ಖಮೇನಿ ಹತ್ಯೆ; ಉತ್ತರ ಪ್ರದೇಶದ ಬಾರಾಬಂಕಿಯಲ್ಲಿ ನೀರವ

ಶೋಕ ಸಾಗರದಲ್ಲಿ ‘ಕಿಂಟೂರು’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಗ್ರಾಮಕ್ಕೆ ಖಮೇನಿ ಕುಟುಂಬದೊಂದಿಗೆ ಐತಿಹಾಸಿಕ ನಂಟು
- ಖಮೇನಿ ಅಜ್ಜ ಮೌಸವಿ ಜನಿಸಿದ್ದು ಇದೇ ಗ್ರಾಮದಲ್ಲಿ

ಲಖನೌ: ಇರಾನ್‌ನ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆಯಾದ ಬೆನ್ನಲ್ಲೇ ಅಲ್ಲಿ 40 ದಿನಗಳ ಕಾಲ ಶೋಕಾಚರಣೆ ಘೋಷಿಸಲಾಗಿದೆ.

ಅದೇ ರೀತಿ, ಉತ್ತರ ಪ್ರದೇಶದ ಬಾರಾಬಂಕಿ ಜಿಲ್ಲೆಯ ಗ್ರಾಮವೊಂದು ಶೋಕ ಸಾಗರದಲ್ಲಿ ಮುಳುಗಿದೆ. ಅದಕ್ಕೆ ಕಾರಣ, ಈ ಗ್ರಾಮವು ಖಮೇನಿ ಕುಟುಂಬದೊಂದಿಗೆ ಐತಿಹಾಸಿಕ ನಂಟು ಹೊಂದಿದೆ.

ಖಮೇನಿ ಹತ್ಯೆ ಖಾತರಿಯಾಗುತ್ತಿದ್ದಂತೆಯೇ, ಇಲ್ಲಿನ ‘ಕಿಂಟೂರು’ ಗ್ರಾಮದಲ್ಲಿ ಬೇಸರದ ಜೊತೆಗೆ ಆಕ್ರೋಶ ಹುಟ್ಟುಹಾಕಿದೆ.

ಖಮೇನಿ ಅವರ ಅಜ್ಜ ಸೈಯದ್ ಅಹಮ್ಮದ್ ಮುಸಾವಿ ಹಿಂದಿ ಅವರು ಕೂಡ ಇದೇ ಗ್ರಾಮದಲ್ಲಿ ಜನಿಸಿದ್ದರು. ಹೀಗಾಗಿ, ಖಮೇನಿ ಮೂಲದವರು ಇದೇ ಗ್ರಾಮದವರು ಎಂದು ಅವರ ವಂಶಸ್ಥರಾದ ಸೈಯದ್ ನಿಹಾಲ್ ಅಹಮ್ಮದ್ ಖಾಜ್ಮಿ ಎಂದು ನೆನಪಿಸಿಕೊಂಡರು.

ಒಂದು ಕಾಲದಲ್ಲಿ ಗ್ರಾಮದಲ್ಲಿ ‘ಮುಸಾವಿ’ ಕುಟುಂಬಸ್ಥರ 500 ಮನೆಗಳಿದ್ದವು. ಅವರನ್ನು ‘ಸೈಯದ್‌ವಾರಾ’ ಎಂದೇ ಕರೆಯಲಾಗುತ್ತಿತ್ತು. ಕ್ರಮೇಣ, ಇಲ್ಲಿನ ಕುಟುಂಬಸ್ಥರು ವಲಸೆ ಹೋಗಿದ್ದು, ಈಗ ಗ್ರಾಮದಲ್ಲಿ ಐದು ಕುಟುಂಬಗಳು ಮಾತ್ರ ಉಳಿದಿವೆ.

ಕಾಲಾನಂತರದಲ್ಲಿ ಗ್ರಾಮದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಆದರೆ, ಖಮೇನಿ ಕುಟುಂಬದ ಜೊತೆ ಹೊಂದಿದ ವಂಶಾವಳಿ ಹಾಗೂ ಭಾವನಾತ್ಮಕ ನಂಟನ್ನು ಇಲ್ಲಿನವರು ಮೆಲುಕು ಹಾಕುತ್ತಾರೆ.

‘ಮುಸಾವಿ ಅವರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರು. ಶಿಯಾ ಮುಸಲ್ಮಾನರ ಪ್ರಮುಖ ಧಾರ್ಮಿಕ ಸ್ಥಳವಾದ ಇರಾಕ್‌ನ ನಜಾಫ್ ಪಟ್ಟಣಕ್ಕೆ ವಲಸೆ ಹೋಗಿದ್ದರು. ನಂತರ ಭಾರತಕ್ಕೆ ಹಿಂತಿರುಗಲು ನಿರ್ಧರಿಸಿದ್ದರು. ಸ್ವಾತಂತ್ರ್ಯ ಹೋರಾಟಗಾರರು ಎಂಬ ಕಾರಣಕ್ಕೆ ಭಾರತಕ್ಕೆ ಮರಳಿ ಬರಲು ಬ್ರಿಟಿಷರು ಅನುಮತಿ ನೀಡಲಿಲ್ಲ. ಹೀಗಾಗಿ ಅವರು, 19ನೇ ಶತಮಾನದ ವೇಳೆಗೆ ಖೊಮೆನಿ ಪಟ್ಟಣದಲ್ಲಿಯೇ ನೆಲೆಯೂರಿದ್ದರು’ ಎಂದು ಖಾಜ್ಮಿ ವಿವರಿಸುತ್ತಾರೆ.

ಖಮೇನಿ ಅವರ ಸಾವು ಇಡೀ ಗ್ರಾಮಸ್ಥರಲ್ಲಿ ಆಘಾತ ಉಂಟು ಮಾಡಿದೆ. ‘ನಾವು ಅವರಿಗಾಗಿ ಶೋಕ ವ್ಯಕ್ತಪಡಿಸುತ್ತಿದ್ದೇವೆ. ಅದೇ ರೀತಿ, ಇರಾನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಸುರಕ್ಷಿತವಾಗಿ ಕರೆತರುವಂತೆ ಪ್ರಾರ್ಥಿಸುತ್ತಿದ್ದೇವೆ’ ಎಂದು ನಿವಾಸಿ ಸೈಯದ್ ಹುಸೈನ್ ಜೈದಿ ಹೇಳಿದ್ದಾರೆ. ಲಖನೌ ನಗರದಲ್ಲಿರುವ ಅತ್ಯಂತ ಹಳೆಯ ಕಾಲೇಜು ನಿರ್ಮಾಣದಲ್ಲಿ ಕೂಡ ಖಮೇನಿ ಕುಟುಂಬಸ್ಥರು ಪ್ರಮುಖ ಪಾತ್ರ ವಹಿಸಿದ್ದರು ಎಂದು ಹಿರಿಯರು ನೆನಪಿಸಿಕೊಳ್ಳುತ್ತಾರೆ.

‘ಕಿಂಟೂರು’ ಗ್ರಾಮಸ್ಥರ ಪಾಲಿಗೆ ಖಮೇನಿ ವಿದೇಶಿ ನಾಯಕರಷ್ಟೇ ಅಲ್ಲ, ತಮ್ಮ ನೆಲದ ನಾಯಕರೇ ಎಂದೇ ಪರಿಗಣಿಸುತ್ತಾರೆ. ದಶಕಗಳ ಕಾಲ ಇರಾನ್ ಮುನ್ನಡೆಸುವ ಮೂಲಕ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿ ದ್ದರು ಎಂದು ನೆನಪಿಸಿಕೊಳ್ಳುತ್ತಾರೆ.

ನಾಲ್ಕರ ಘಟ್ಟಕ್ಕೆ ಭಾರತ ಲಗ್ಗೆ

ಸಂಜು ಸ್ಯಾಮ್ಸನ್ ರನ್ ಫೆಸ್ಟ್
ವೆಸ್ಟ್ ಇಂಡೀಸ್ ಟೂರ್ನಿಯಿಂದ ಔಟ್

ಕೋಲ್ಕತ್ತ (ಪಿಟಿಐ): ಅತ್ಯಗತ್ಯ ಸಂದರ್ಭದಲ್ಲಿ ಮರಳಿ ಅರಳಿದ ಸಂಜು ಸ್ಯಾಮ್ಸನ್ ಭರ್ಜರಿ ಬ್ಯಾಟಿಂಗ್‌ನಿಂದಾಗಿ 'ಹಾಲಿ ಚಾಂಪಿಯನ್' ಭಾರತ ತಂಡವು ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿತು.

ಈಡನ್ ಗಾರ್ಡನ್‌ನಲ್ಲಿ ತಮ್ಮ ವೃತ್ತಿಜೀವನದ ಅವಿಸ್ಮರಣೀಯ ಇನಿಂಗ್ಸ್ ಆಡಿದ ಕೇರಳದ ಸಂಜು (ಅಜೇಯ 97, 50ಎ, 4X12, 6X4) ನೆರವಿನಿಂದ 5 ವಿಕೆಟ್‌ಗಳಿಂದ ವೆಸ್ಟ್ ಇಂಡೀಸ್ ಎದುರು ಜಯಿಸಿತು.

196 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಭಾರತ ತಂಡವನ್ನು ಆರಂಭಿಕ ಬ್ಯಾಟರ್ ಸಂಜು ಅವರು ಗೆಲುವಿನತ್ತ ಮುನ್ನಡೆಸಿದರು. ಅವರಿಗೆ ತಿಲಕ್ ವರ್ಮಾ (27 ರನ್) ಮತ್ತು ಹಾರ್ದಿಕ್ ಪಾಂಡ್ಯ (17 ರನ್) ಬೆಂಬಲ ನೀಡಿದರು. ಆತಿಥೇಯ ತಂಡವು 19.2 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 199 ರನ್ ಗಳಿಸಿತು.

ಇದೇ 5ರಂದು ಮುಂಬೈನಲ್ಲಿ ನಡೆಯಲಿರುವ ನಾಲ್ಕರ ಘಟ್ಟದ ಪಂದ್ಯದಲ್ಲಿ ಭಾರತವು ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಸೂಪರ್ 8ರ ಒಂದನೇ ಗುಂಪಿನಲ್ಲಿ ವೆಸ್ಟ್ ಇಂಡೀಸ್ ಮತ್ತು ಭಾರತ ತಂಡಗಳು ಈ ಪಂದ್ಯಕ್ಕೂ ಮುನ್ನ ತಲಾ 2 ಅಂಕ ಗಳಿಸಿದ್ದವು. ಸೆಮಿಫೈನಲ್ ಅವಕಾಶಕ್ಕಾಗಿ ಈ ಪಂದ್ಯದಲ್ಲಿ ಜಯಿಸುವುದು ಉಭಯ ತಂಡಗಳಿಗೆ ಮುಖ್ಯವಾಗಿತ್ತು. ಆದ್ದರಿಂದ ಎರಡೂ ತಂಡಗಳು ತೀವ್ರ ಹೋರಾಟ ನಡೆಸಿದವು.

ವಿಂಡೀಸ್ ತಂಡದ ಬೌಲರ್‌ಗಳು ಅಭಿಷೇಕ್ ಶರ್ಮಾ, ಇಶಾನ್ ಕಿಶನ್ ಹಾಗೂ ಸೂರ್ಯಕುಮಾರ್ ಯಾದವ್ ಅವರನ್ನು ಬೇಗನೇ ಔಟ್ ಮಾಡಿದರು. ಆದರೆ ಸಂಜು ಮಾತ್ರ ದಿಟ್ಟವಾಗಿ ಬೌಲರ್‌ಗಳನ್ನು ಎದುರಿಸಿದರು. ಸತತ ವೈಫಲ್ಯದಿಂದ ಹೊರಬಂದರು. ತಂಡದ ಮ್ಯಾನೇಜ್‌ಮೆಂಟ್ ತಮ್ಮ ಮೇಲಿಟ್ಟ ವಿಶ್ವಾಸವನ್ನು ಉಳಿಸಿಕೊಂಡರು.

ಹೋಪ್–ಚೇಸ್ ಜೊತೆಯಾಟ: ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ಶಾಯ್ ಹೋಪ್ ಮತ್ತು ರಾಸ್ಟನ್ ಚೇಸ್ ಅವರು ನೀಡಿದ ಉತ್ತಮ ಆರಂಭದ ಬಲದಿಂದ ವೆಸ್ಟ್ ಇಂಡೀಸ್ ತಂಡವು ಭಾರತಕ್ಕೆ ಕಠಿಣ ಗುರಿಯೊಡ್ಡಿತು.

ಚೇಸ್ (40 ರನ್) ಮತ್ತು ಹೋಪ್ (32 ರನ್) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 68 ರನ್ ಗಳಿಸಿದರು. ಈ ಅಡಿಪಾಯದ ಮೇಲೆ ಉಳಿದ ಬ್ಯಾಟರ್‌ಗಳು ಪುಟ್ಟ ಪುಟ್ಟ ಮೊತ್ತಗಳ ಕಾಣಿಕೆ ನೀಡಿದರು. ಅದರಿಂದಾಗಿ ವಿಂಡೀಸ್ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 195 ರನ್ ಗಳಿಸಿತು.

ಸ್ಪಿನ್ನರ್ ವರುಣ್ ಚಕ್ರವರ್ತಿ ಹಾಕಿದ ಎಸೆತವನ್ನು ಅಂದಾಜಿಸುವಲ್ಲಿ ಎಡವಿದ ಹೋಪ್ ಕ್ಲೀನ್‌ಬೌಲ್ಡ್ ಆದರು. ಬೂಮ್ರಾ ಹಾಕಿದ್ದ ಐದನೇ ಓವರ್‌ನಲ್ಲಿ ಚೇಸ್ ನೀಡಿದ ಸುಲಭ ಕ್ಯಾಚನ್ನು ಫೀಲ್ಡರ್ ಅಭಿಷೇಕ್ ಶರ್ಮಾ ಕೈಚೆಲ್ಲಿದರು. 12ನೇ ಓವರ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ (36ಕ್ಕೆ2) ಚೇಸ್ ಮತ್ತು ಶಿಮ್ರಾನ್ ಹೆಟ್ಮೆಯರ್ (27; 12ಎ, 4x1, 6x2) ಅವರಿಬ್ಬರಿಗೂ ಪೆವಿಲಿಯನ್ ದಾರಿ ತೋರಿಸಿದರು. ಹೆಟ್ಮೆಯರ್ ಅವರು ವಿಕೆಟ್‌ಕೀಪರ್ ಸಂಜುಗೆ ಕ್ಯಾಚ್ ಕೊಟ್ಟರು. ಚೇಸ್ ಅವರ ಕ್ಯಾಚ್ ಸೂರ್ಯ ಪಡೆದರು. ಈ ಹಂತದಲ್ಲಿ ತಂಡವು 3 ವಿಕೆಟ್‌ಗಳಿಗೆ 102 ರನ್ ಗಳಿಸಿತ್ತು.

ಶರ್ಫೇನ್ ರುದರ್‌ಫೋರ್ಡ್ (14; 9ಎ, 6X1) ಅವರು ಆಟಕ್ಕೆ ಕುದುರಿಕೊಳ್ಳುತ್ತಿರುವಾಗಲೇ ಹಾರ್ದಿಕ್ ಪಾಂಡ್ಯ ಬೌಲಿಂಗ್‌ನಲ್ಲಿ ಸಂಜುಗೆ ಕ್ಯಾಚಿತ್ತರು. 13ನೇ ಓವರ್‌ನಲ್ಲಿ ಅಕ್ಷರ್ ಪಟೇಲ್ ಎಸೆತವನ್ನು ಮೇಲಕ್ಕೆತ್ತಿದ ರುದರ್‌ಫೋರ್ಡ್ ಅವರ ಕ್ಯಾಚ್ ಪಡೆಯುವಲ್ಲಿ ತಿಲಕ್ ವರ್ಮಾ ಮಾಡಿದ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಆದರೆ 19ನೇ ಓವರ್ ಹಾಕಿದ ಅರ್ಷದೀಪ್ ಬೌಲಿಂಗ್ ನಲ್ಲಿ ಅಭಿಷೇಕ್ ಅವರು ಪೊವೆಲ್ ಕ್ಯಾಚ್ ಬಿಟ್ಟರು. ಇದರಿಂದಾಗಿ ಪೊವೆಲ್ ಅಂತಿಮ ಹಂತದಲ್ಲಿ ಬೀಸಾಟವಾಡಿದರು.

ಆಲ್‌ರೌಂಡರ್ ಜೋಡಿ ರೋವ್ಮನ್ ಪೊವೆಲ್ (ಔಟಾಗದೇ 34; 19ಎ, 4x3, 6x2) ಮತ್ತು ಜೇಸನ್ ಹೋಲ್ಡರ್ (ಔಟಾಗದೇ 37; 22ಎ, 4x2, 6x3) ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 35 ಎಸೆತಗಳಲ್ಲಿ 76 ರನ್ ಸೇರಿಸಿದರು.

ಸೆಮಿಫೈನಲ್ ಮುಖಾಮುಖಿ

ಮಾರ್ಚ್ 4
ದಕ್ಷಿಣ ಆಫ್ರಿಕಾ–ನ್ಯೂಜಿಲೆಂಡ್
ತಾಣ: ಕೋಲ್ಕತ್ತ, ರಾತ್ರಿ 7

ಮಾರ್ಚ್ 5
ಭಾರತ–ಇಂಗ್ಲೆಂಡ್
ತಾಣ: ಮುಂಬೈ, ರಾತ್ರಿ 7

ಸಂಜು ಸ್ಯಾಮ್ಸನ್
ರನ್ 97*
ಎಸೆತ 50
ಬೌಂಡರಿ 12
ಸಿಕ್ಸರ್ 4

ಸ್ಕೋರ್ ಕಾರ್ಡ್

ವೆಸ್ಟ್ ಇಂಡೀಸ್: 20 ಓವರುಗಳಲ್ಲಿ 4 ವಿಕೆಟ್‌ಗೆ 195
ಹೋಪ್ ಬಿ ವರುಣ್ 32 (33ಎ, 4x3, 6x1)
ಚೇಸ್ ಸಿ ಯಾದವ್ ಬಿ ಬೂಮ್ರಾ 40 (25ಎ, 4x5, 6x1)
ಹೆಟ್ಮೆಯರ್ ಸಿ ಸ್ಯಾಮ್ಸನ್ ಬಿ ಬೂಮ್ರಾ 27 (12ಎ, 4x15, 6x2)
ರುದರ್‌ಫೋರ್ಡ್ ಸಿ ಸ್ಯಾಮ್ಸನ್ ಬಿ ಪಾಂಡ್ಯ 14 (9ಎ, 6x1)
ಪೊವೆಲ್ ಔಟಾಗದೇ 34 (19ಎ, 4x3, 6x2)
ಹೋಲ್ಡರ್ ಔಟಾಗದೇ 37 (22ಎ, 4x2, 6x3)
ಇತರೆ: 11 (ಲೆಗ್‌ಬೈ 1, ವೈಡ್ 10)
ವಿಕೆಟ್ ಪತನ: 1–68 (ಶಾಯ್ ಹೋಪ್, 8.5), 2–102 (ಶಿಮ್ರಾನ್ ಹೆಟ್ಮೆಯರ್, 11.3), 3–103 (ರಾಸ್ಟನ್ ಚೇಸ್, 11.5), 4–119 (ಶರ್ಫೇನ್ ರುದರ್‌ಫೋರ್ಡ್, 14.1)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–43–0; ಹಾರ್ದಿಕ್ ಪಾಂಡ್ಯ 4–0–40–1; ಅಕ್ಷರ್ ಪಟೇಲ್ 4–0–35–0; ಜಸ್‌ಪ್ರೀತ್ ಬೂಮ್ರಾ 4–0–36–2; ವರುಣ್ ಚಕ್ರವರ್ತಿ 4–0–40–1.

ಭಾರತ: 19.2 ಓವರ್‌ಗಳಲ್ಲಿ 5 ವಿಕೆಟ್‌ಗೆ 199
ಅಭಿಷೇಕ್ ಸಿ ಹೆಟ್ಮೆಯರ್ ಬಿ ಹುಸೇನ್ 10 (11ಎ, 4x2)
ಸಂಜು ಸ್ಯಾಮ್ಸನ್ ಔಟಾಗದೇ 97 (50ಎ, 4x12, 6x4)
ಇಶಾನ್ ಸಿ ಹೆಟ್ಮೆಯರ್ ಬಿ ಹೋಲ್ಡರ್ 10 (6ಎ, 4x2)
ಸೂರ್ಯಕುಮಾರ್ ಸಿ ರುದರ್‌ಫೋರ್ಡ್ ಬಿ ಜೋಸೆಫ್ 18 (16ಎ, 4x1, 6x1
ತಿಲಕ್ ಸಿ ಹೆಟ್ಮೆಯರ್ ಬಿ ಹೋಲ್ಡರ್ 27 (15ಎ, 4x4, 6x1)
ಹಾರ್ದಿಕ್ ಸಿ ಹೋಲ್ಡರ್ ಬಿ ಜೋಸೆಫ್ 17 (14ಎ, 4x2)
ಶಿವಂ ದುಬೆ ಔಟಾಗದೇ 8 (4ಎ, 4x2)
ಇತರೆ: 12 (ಲೆಗ್‌ಬೈ 5, ವೈಡ್ 7)
ವಿಕೆಟ್ ಪತನ: 1-29 (ಅಭಿಷೇಕ್ ಶರ್ಮಾ, 2.6), 2-41 (ಇಶನ್ ಕಿಶನ್, 4.3), 3-99 (ಸೂರ್ಯಕುಮಾರ್ ಯಾದವ್, 10.2), 4–141 (ತಿಲಕ್ ವರ್ಮಾ, 14.4), 5–179 (ಹಾರ್ದಿಕ್ ಪಾಂಡ್ಯ, 18.2)
ಬೌಲಿಂಗ್: ಅಕೀಲ್ ಹುಸೇನ್ 2–0–22–1, ಮ್ಯಾಥ್ಯೂ ಫೋರ್ಡ್ 3–0–22–0, ಜೇಸನ್ ಹೋಲ್ಡರ್ 4–0–38–2, ಗುಡಕೇಶ್ ಮೋತಿ 2–0–18–0, ರೊಮೆರಿಯೊ ಶೆಫರ್ಡ್ 2.2–0–34–0, ಶಮರ್ ಜೋಸೆಫ್ 4–0–42–2, ರೋಸ್ಟನ್ ಚೇಸ್ 2–0–18–0
ಪಂದ್ಯದ ಆಟಗಾರ: ಸಂಜು ಸ್ಯಾಮ್ಸನ್

ಫಲಿತಾಂಶ: ಭಾರತಕ್ಕೆ ಐದು ವಿಕೆಟ್‌ಗಳ ಗೆಲುವು, ಸೆಮಿಫೈನಲ್‌ಗೆ ಅರ್ಹತೆ

ಟಿ20 ವಿಶ್ವಕಪ್: ಹೆಚ್ಚು ರನ್ ಯಶಸ್ವಿ ಚೇಸ್

ರನ್	ತಂಡ	ಎದುರಾಳಿ	ತಾಣ	ವರ್ಷ
230	ಇಂಗ್ಲೆಂಡ್	ದಕ್ಷಿಣ ಆಫ್ರಿಕಾ	ವಾಂಖೆಡೆ	2016
206	ದಕ್ಷಿಣ ಆಫ್ರಿಕಾ	ವೆಸ್ಟ್ ಇಂಡೀಸ್	ವಾಂಡರರ್ಸ್	2007
196	ಭಾರತ	ವೆಸ್ಟ್ ಇಂಡೀಸ್	ಈಡನ್ ಗಾರ್ಡನ್	2026
195	ಅಮೆರಿಕ	ಕೆನಡಾ	ಡಲ್ಲಾಸ್	2024
193	ವೆಸ್ಟ್ ಇಂಡೀಸ್	ಭಾರತ	ವಾಂಖೆಡೆ	2016

97*
ಸಂಜು ಸ್ಯಾಮ್ಸನ್ ಗಳಿಸಿದ ರನ್. ಸುರೇಶ್ ರೈನಾ (101) ಹೊರತುಪಡಿಸಿ ಭಾರತದ ಆಟಗಾರನೊಬ್ಬ ಟಿ20 ವಿಶ್ವಕಪ್‌ನಲ್ಲಿ ಗಳಿಸಿದ ಗರಿಷ್ಠ ರನ್ ಇದಾಗಿದೆ

6
ಭಾರತ ತಂಡವು ಟಿ20 ವಿಶ್ವಕಪ್‌ನಲ್ಲಿ ಸೆಮಿಫೈನಲ್ ಪ್ರವೇಶ. ಪಾಕಿಸ್ತಾನ ಮತ್ತು ಇಂಗ್ಲೆಂಡ್ ತಂಡಗಳು ಇಷ್ಟೇ ಬಾರಿ ನಾಲ್ಕರ ಘಟ್ಟ ಪ್ರವೇಶಿಸಿವೆ

ಜಿಂಬಾಬ್ವೆ ನಾಯಕ ರಝಾ ಆಟಕ್ಕೆ ಒಲಿಯದ ಜಯ
ದಕ್ಷಿಣ ಆಫ್ರಿಕಾ ಅಜೇಯ ಓಟ

ನವದೆಹಲಿ (ಪಿಟಿಐ): ಜಿಂಬಾಬ್ವೆ ತಂಡದ ನಾಯಕ ಸಿಕಂದರ್ ರಝಾ ಅವರ ಆಲ್‌ರೌಂಡ್ ಆಟದ ಹೊರತಾಗಿಯೂ ದಕ್ಷಿಣ ಆಫ್ರಿಕಾ ತಂಡವು ಟಿ20 ವಿಶ್ವಕಪ್‌ನ ಸೂಪರ್ 8ರ ಹಂತದ ತನ್ನ ಕೊನೆಯ ಪಂದ್ಯದಲ್ಲಿ ಐದು ವಿಕೆಟ್‌ಗಳಿಂದ ಜಯ ಸಾಧಿಸಿತು. ಇದರೊಂದಿಗೆ ಏಡನ್ ಮರ್ಕರಂ ಪಡೆ ಹಾಲಿ ಟೂರ್ನಿಯಲ್ಲಿ ಸತತ ಏಳನೇ ಗೆಲುವಿನೊಂದಿಗೆ ಅಜೇಯ ಓಟವನ್ನು ಮುಂದುವರಿಸಿತು.

ಹಾಲಿ ರನ್ನರ್ಸ್ ಅಪ್ ದಕ್ಷಿಣ ಆಫ್ರಿಕಾ ಈ ಮೊದಲೇ ಸೆಮಿಫೈನಲ್‌ಗೆ ಅರ್ಹತೆ ಪಡೆದಿದ್ದು, ಜಿಂಬಾಬ್ವೆ ನಾಕೌಟ್ ರೇಸ್‌ನಿಂದ ಹೊರಬಿದ್ದಿದ್ದರಿಂದ ಈ ಪಂದ್ಯಕ್ಕೆ ಹೆಚ್ಚಿನ ಮಹತ್ವ ಇರಲಿಲ್ಲ. ಆದರೆ ಗೆಲುವಿನೊಂದಿಗೆ ಅಭಿಯಾನ ಮುಗಿಸುವ ಛಲದಲ್ಲಿದ್ದ ಸಿಕಂದರ್ ಪಡೆಗೆ ನಿರಾಸೆಯಾಯಿತು. ಸೂಪರ್ ಎಂಟರ ಒಂದನೇ ಗುಂಪಿನಲ್ಲಿ ಅಗ್ರಸ್ಥಾನ ಪಡೆದ ದಕ್ಷಿಣ ಆಫ್ರಿಕಾ ತಂಡವು ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ಇದೇ 4ರಂದು ನಡೆಯುವ ಮೊದಲ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಜಿಂಬಾಬ್ವೆ ತಂಡವು ಸಿಕಂದರ್ (73;43ಎ) ಅವರ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 153 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಗಳಿಸಿತು.

ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡಕ್ಕೆ ಸಿಕಂದರ್ ಆರಂಭದಲ್ಲೇ ಪೆಟ್ಟು ನೀಡಿದರು. ಪವರ್‌ಪ್ಲೇ ಅವಧಿಯ ತನ್ನ ಮೊದಲ ಎರಡು ಓವರ್‌ಗಳಲ್ಲಿ ಮರ್ಕರಂ (4) ಮತ್ತು ಕ್ವಿಂಟನ್ ಡಿಕಾಕ್ (0) ಸ್ಫೋಟಕ ಶೈಲಿಯ ಬ್ಯಾಟಿಂಗ್ ಜೋಡಿಯನ್ನು ಔಟ್ ಮಾಡಿದರು. ಅರ್ಧಶತಕದತ್ತ ಸಾಗುತ್ತಿದ್ದ ಡಿವಾಲ್ಡ್ ಬ್ರೆವಿಸ್ (42;18ಎ) ಅವರ ವಿಕೆಟ್ ಪಡೆದು ಮಿಂಚಿದರು.

ಒಂದು ಹಂತದಲ್ಲಿ 11 ಓವರ್‌ಗಳಲ್ಲಿ ಐದು ವಿಕೆಟ್ ಕಳೆದುಕೊಂಡು 101 ರನ್ ಗಳಿಸಿದ್ದ ದಕ್ಷಿಣ ಆಫ್ರಿಕಾ ತಂಡವು ಒತ್ತಡಕ್ಕೆ ಒಳಗಾಯಿತು. ಗೆಲುವಿಗೆ 53 ರನ್ ಬೇಕಿದ್ದಾಗ ಟ್ರಿಸ್ಟನ್ ಸ್ಟಬ್ಸ್ (ಔಟಾಗದೇ 21) ಮತ್ತು ಜಾರ್ಜ್ ಲಿಂಡೆ (ಔಟಾಗದೇ 30) ಅವರು ಎಚ್ಚರಿಕೆಯ ಆಟವಾಡಿ ತಂಡವನ್ನು ದಡ ಸೇರಿಸಿದರು. 17.5 ಓವರ್‌ಗಳಲ್ಲಿ 5 ವಿಕೆಟ್‌ಗೆ 154 ರನ್ ಗಳಿಸಿತು.

ಇದಕ್ಕೂ ಮುನ್ನ ಜಿಂಬಾಬ್ವೆ ತಂಡದ ಆರಂಭವೂ ಉತ್ತಮವಾಗಿರಲಿಲ್ಲ. ಕ್ವೇನಾ ಮಫಾಕ (21ಕ್ಕೆ 2) ಮತ್ತು ಕಾರ್ಬಿನ್ ಬಾಷ್ (40ಕ್ಕೆ 2) ಅವರ ದಾಳಿಗೆ ನಿಯಮಿತವಾಗಿ ವಿಕೆಟ್‌ಗಳು ಉರುಳಿದವು. ಆದರೆ, ಸಿಕಂದರ್ ಮಾತ್ರ ಎದುರಾಳಿ ಬೌಲರ್‌ಗಳನ್ನು ಸಮರ್ಥವಾಗಿ ದಂಡಿಸಿದರು. ಅವರ ಇನಿಂಗ್ಸ್‌ನಲ್ಲಿ ಎಂಟು ಬೌಂಡರಿ ಮತ್ತು ನಾಲ್ಕು ಸಿಕ್ಸರ್‌ಗಳು ಸೇರಿದ್ದವು. ಕೊನೆಯಲ್ಲಿ ಕ್ಲೈವ್ ಮದಾಂದೆ (ಔಟಾಗದೇ 26) ಹೋರಾಟ ತೋರಿ ತಂಡದ ಮೊತ್ತವನ್ನು 150ರ ಗಡಿ ದಾಟಿಸಿದರು.

ಸಂಕ್ಷಿಪ್ತ ಸ್ಕೋರು: ಜಿಂಬಾಬ್ವೆ: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 153 (ಸಿಕಂದರ್ ರಝಾ 73, ಕ್ಲೈವ್ ಮದಾಂದೆ ಔಟಾಗದೇ 26; ಕ್ವೇನಾ ಮಫಾಕ 21ಕ್ಕೆ 2, ಕಾರ್ಬಿನ್ ಬಾಷ್ 40ಕ್ಕೆ 2). ದಕ್ಷಿಣ ಆಫ್ರಿಕಾ: 17.5 ಓವರ್‌ಗಳಲ್ಲಿ 5 ವಿಕೆಟ್‌ಗೆ 154 (ರಿಯಾನ್ ರಿಕೆಲ್ಟನ್ 31, ಡಿವಾಲ್ಡ್ ಬ್ರೆವಿಸ್ 42, ಜಾರ್ಜ್ ಲಿಂಡೆ ಔಟಾಗದೇ 30; ಸಿಕಂದರ್ ರಝಾ 29ಕ್ಕೆ 3).
ಪಂದ್ಯದ ಆಟಗಾರ: ಸಿಕಂದರ್ ರಝಾ

ಜಿಂಬಾಬ್ವೆ ತಂಡದ ನಾಯಕ ಸಿಕಂದರ್ ರಝಾ ಪಿಟಿಐ ಚಿತ್ರ

'ಸೂಪರ್ 8' ಹಂತದ ಅಂಕಪಟ್ಟಿ (ಒಂದನೇ ಗುಂಪು)

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ದಕ್ಷಿಣ ಆಫ್ರಿಕಾ	3	3	0	0	6	2.259
ಭಾರತ	3	2	1	0	4	0.106
ವೆಸ್ಟ್ ಇಂಡೀಸ್	3	1	2	0	2	0.993
ಜಿಂಬಾಬ್ವೆ	3	0	3	0	0	-3.415

ಸಂಕ್ಷಿಪ್ತ ಸುದ್ದಿ

ವಿಶ್ವಕಪ್ ಹಾಕಿ ಕ್ವಾಲಿಫೈಯರ್ಸ್ ತಂಡದಿಂದ ಹೊರಗುಳಿದ ಸವಿತಾ

ಹೈದರಾಬಾದ್ (ಪಿಟಿಐ): ಅನುಭವಿ ಗೋಲ್‌ಕೀಪರ್ ಸವಿತಾ ಪೂನಿಯಾ ಅವರು ಎಫ್‌ಐಎಚ್ ಹಾಕಿ ವಿಶ್ವಕಪ್ ಕ್ವಾಲಿಫೈಯರ್ಸ್ ಪಂದ್ಯಗಳಿಂದ ಹೊರಗುಳಿಯಲು ನಿರ್ಧರಿಸಿದ್ದಾರೆ. 20 ಆಟಗಾರ್ತಿಯರ ತಂಡವನ್ನು 'ಹಾಕಿ ಇಂಡಿಯಾ' ಭಾನುವಾರ ಪ್ರಕಟಿಸಿದ್ದು, ಮಿಡ್‌ಫೀಲ್ಡರ್ ಸಲೀಮಾ ಟೇಟೆ ಅವರು ತಂಡವನ್ನು ಮುನ್ನಡೆಸಲಿದ್ದಾರೆ.

'ಕೌಟುಂಬಿಕ ಕಾರಣಗಳಿಂದಾಗಿ ಸವಿತಾ ಅವರು ರಾಷ್ಟ್ರೀಯ ತರಬೇತಿ ಶಿಬಿರಕ್ಕೂ ಹಾಜರಾಗಿಲ್ಲ. ಹೀಗಾಗಿ, ಅವರನ್ನು ತಂಡದ ಆಯ್ಕೆ ವೇಳೆ ಪರಿಗಣಿಸಲಾಗಿಲ್ಲ' ಎಂದು ಮೂಲಗಳು ತಿಳಿಸಿವೆ.

ಗೋಲ್‌ಕೀಪರ್‌ಗಳಾದ ಬನ್ಸಾರಿ ಸೋಳಂಕಿ ಹಾಗೂ ಬಿಚೂ ದೇವಿ ಖಾರೀಬಾಮ್ ಅವರು ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಕ್ವಾಲಿಫೈಯರ್ಸ್ ಪಂದ್ಯಗಳು ಇದೇ 8ರಿಂದ 14ರವರೆಗೆ ಇಲ್ಲಿ ನಡೆಯಲಿವೆ. ಆತಿಥೇಯ ಭಾರತ, ಇಂಗ್ಲೆಂಡ್, ಸ್ಕಾಟ್ಲೆಂಡ್, ಕೊರಿಯಾ, ಇಟಲಿ, ಉರುಗ್ವೆ, ವೇಲ್ಸ್ ಹಾಗೂ ಆಸ್ಟ್ರಿಯಾ ತಂಡಗಳು ಕಣಕ್ಕಿಳಿಯಲಿವೆ. ಈ ಪೈಕಿ, ಮೂರು ತಂಡಗಳು ಆಗಸ್ಟ್‌ನಲ್ಲಿ ನಡೆಯಲಿರುವ ಟೂರ್ನಿಗೆ ಅರ್ಹತೆ ಪಡೆಯಲಿವೆ.

ಗುಕೇಶ್‌ಗೆ ಒಲಿಯದ ಗೆಲುವು

ಪ್ರಾಗ್ (ಝೆಕ್ ರಿಪಬ್ಲಿಕ್), (ಪಿಟಿಐ): ಪ್ರಾಗ್ ಇಂಟರ್‌ನ್ಯಾಷನಲ್ ಚೆಸ್ ಟೂರ್ನಿಯಲ್ಲಿ ಮೊದಲ ಗೆಲುವು ಸಾಧಿಸುವ ಭಾರತದ ತಾರೆ ಡಿ.ಗುಕೇಶ್ ಅವರ ಯತ್ನ ನಾಲ್ಕನೇ ಸುತ್ತಿನಲ್ಲೂ ಕೈಗೂಡಲಿಲ್ಲ. ಅವರು ಆತಿಥೇಯ ಝೆಕ್ ಆಟಗಾರ ಡೇವಿಡ್ ನವಾರ ಜೊತೆ ಪಾಯಿಂಟ್ ಹಂಚಿಕೊಳ್ಳಬೇಕಾಯಿತು.

ವಿಶ್ವ ಚಾಂಪಿಯನ್ ಗುಕೇಶ್ ಈ ಟೂರ್ನಿಯಲ್ಲಿ ಮೂರು ಪಂದ್ಯಗಳನ್ನು ಡ್ರಾ ಮಾಡಿಕೊಂಡರೆ, ಒಂದರಲ್ಲಿ ಸೋಲನುಭವಿಸಿದ್ದು ಒಟ್ಟು ಒಂದೂವರೆ ಪಾಯಿಂಟ್ಸ್ ಕಲೆಹಾಕಿದ್ದಾರೆ.

ಹಾಲೆಂಡ್‌ನ ಜೋರ್ಡನ್ ವಾನ್ ಫೋರಿಸ್ಟ್ (3 ಪಾಯಿಂಟ್ಸ್) ಅವರು ಸತತ ಮೂರನೇ ಗೆಲುವು ದಾಖಲಿಸಿ, ಹತ್ತು ಆಟಗಾರರ ಕಣದಲ್ಲಿ ಅಗ್ರಸ್ಥಾನಕ್ಕೇರಿದರು. ಡಚ್ ಆಟಗಾರ, ಭಾನುವಾರ ನಡೆದ ಪಂದ್ಯದಲ್ಲಿ ಉಜ್ಬೇಕಿಸ್ತಾನದ ನಾದಿರ್ಬೆಕ್ ಯಾಕುಬೊಯೆವ್ (2) ಅವರನ್ನು ಸೋಲಿಸಿದರು.

ಹಾಲಿ ಚಾಂಪಿಯನ್ ಅರವಿಂದ ಚಿದಂಬರಮ್ (1.5) ಅವರು ಜರ್ಮನಿಯ ವಿನ್ಸೆಂಟ್ ಕೀಮರ್ (2) ಎದುರು ಸೋತರು. ಚಾಲೆಂಜರ್ ವಿಭಾಗದಲ್ಲಿ ಕಣದಲ್ಲಿರುವ ಭಾರತದ ಇಬ್ಬರೂ ಡ್ರಾ ಮಾಡಿಕೊಂಡರು. ದಿವ್ಯಾ ದೇಶಮುಖ್ (1.5) ಅವರು ವಾಂಕ್ಲಾವ್ ಫಿನೆಕ್ (3) ಜೊತೆ ಡ್ರಾ ಮಾಡಿಕೊಂಡರೆ, ಸೂರ್ಯಶೇಖರ ಗಂಗೂಲಿ (1) ಅವರು ಆತಿಥೇಯ ದೇಶದ ಸ್ಟೀಫನ್ ಹರ್ಬೆಕ್ (2.5) ಜೊತೆ ಪಾಯಿಂಟ್ ಹಂಚಿಕೊಂಡರು.

ಕೋಚ್ ಹುದ್ದೆ ತ್ಯಜಿಸಲು ಮುಂದಾದ ಜಯಸೂರ್ಯ

ಕೊಲಂಬೊ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶ್ರೀಲಂಕಾ ತಂಡದ ಕಳಪೆ ಪ್ರದರ್ಶನದಿಂದಾಗಿ ಮುಖ್ಯ ಕೋಚ್ ಸ್ಥಾನದಿಂದ ಕೆಳಗಿಳಿಯಲು ಸನತ್ ಜಯಸೂರ್ಯ ನಿರ್ಧರಿಸಿದ್ದಾರೆ.

'ಜೂನ್ ಅಂತ್ಯಕ್ಕೆ ನನ್ನ ಒಪ್ಪಂದ ಅಂತ್ಯಗೊಳ್ಳಲಿದೆ. ಆದರೆ, ಅದಕ್ಕೂ ಮೊದಲೇ ಕೋಚ್ ಸ್ಥಾನದಿಂದ ಕೆಳಗಿಳಿಯಲು ನಿರ್ಧರಿಸಿದ್ದೇನೆ. ಈ ಬಗ್ಗೆ ಶ್ರೀಲಂಕಾ ಕ್ರಿಕೆಟ್ ಮಂಡಳಿಯೊಂದಿಗೆ ಚರ್ಚಿಸಲಿದ್ದೇನೆ' ಎಂದು ಜಯಸೂರ್ಯ ಅವರು ಪಾಕಿಸ್ತಾನ ವಿರುದ್ಧ ಶನಿವಾರ ನಡೆದ ಪಂದ್ಯದ ನಂತರ ಸುದ್ದಿಗಾರರಿಗೆ ತಿಳಿಸಿದರು.

'ವನಿಂದು ಹಸರಂಗ, ಮತೀಶ ಪಥಿರಾಣ ಹಾಗೂ ಕುಸಾಲ್ ಮೆಂಡಿಸ್ ಅವರು ಗಾಯಗೊಂಡಿದ್ದು ತಂಡಕ್ಕೆ ಪೆಟ್ಟು ನೀಡಿತು. ಬದಲಿ ಆಟಗಾರರು ಅಗತ್ಯ ಕಾಣಿಕೆ ನೀಡುವಲ್ಲಿ ವಿಫಲರಾದರು. ಹಸರಂಗ ವೈಯಕ್ತಿಕವಾಗಿ ನನ್ನ ಫೇವರಿಟ್ ಆಟಗಾರನಾಗಿದ್ದರು. ಅಂತಹ ಆಟಗಾರರಿಗೆ ಬದಲಿ ಆಟಗಾರರು ಸಿಗುವುದು ಕಷ್ಟ' ಎಂದು ಜಯಸೂರ್ಯ ಅಭಿಪ್ರಾಯಪಟ್ಟರು.

ಮೂರನೇ ಏಕದಿನ ಪಂದ್ಯದಲ್ಲೂ ಆಸ್ಟ್ರೇಲಿಯಾ ಮಹಿಳೆಯರಿಗೆ ಜಯ
ವಿದಾಯ ಪಂದ್ಯದಲ್ಲಿ ಹೀಲಿ ಶತಕ

ಹೋಬಾರ್ಟ್ (ಪಿಟಿಐ): ಆಸ್ಟ್ರೇಲಿಯಾ ಮಹಿಳಾ ಕ್ರಿಕೆಟ್‌ನ ದಂತಕತೆ, ನಾಯಕಿ ಅಲೀಸಾ ಹೀಲಿ ಅಮೋಘ ಸರಣಿ ಗೆಲುವಿನೊಡನೆ ಏಕದಿನ ಕ್ರಿಕೆಟ್‌ಗೆ ವಿದಾಯ ಹೇಳಿದರು.

ಅವರ ಭರ್ಜರಿ ಶತಕದ ನೆರವಿನಿಂದ ಆಸ್ಟ್ರೇಲಿಯಾ ತಂಡ ಮಹಿಳಾ ಏಕದಿನ ಕ್ರಿಕೆಟ್ ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ವಿಶ್ವ ಚಾಂಪಿಯನ್ ಭಾರತ ತಂಡದ ಎದುರು 185 ರನ್‌ಗಳ ಭರ್ಜರಿ ಜಯ ಸಾಧಿಸಿತು.

ಸರಣಿಯನ್ನು ಆತಿಥೇಯರು 3–0 ಯಿಂದ ಗೆದ್ದುಕೊಂಡರು. ಭಾರತ ತಂಡ ಈ ಸರಣಿಯ ನಂತರ ಏಕೈಕ ಟೆಸ್ಟ್ ಪಂದ್ಯವನ್ನು ಮಾರ್ಚ್ 6ರಿಂದ ಆಡಲಿದೆ. ಇದು ಪಿಂಕ್‌ಬಾಲ್ (ಅಹರ್ನಿಶಿ) ಪಂದ್ಯವಾಗಿದೆ.

ಆರಂಭ ಆಟಗಾರ್ತಿಯಾದ 35 ವರ್ಷ ವಯಸ್ಸಿನ ಅಲೀಸಾ 158 ರನ್ ಬಾರಿಸಿದರೆ, ಮಧ್ಯಮ ಕ್ರಮಾಂಕದಲ್ಲಿ ಬೆತ್ ಮೂನಿ ಅಜೇಯ 106 ರನ್ ಗಳಿಸಿದರು. ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಆಸ್ಟ್ರೇಲಿಯಾ 7 ವಿಕೆಟ್‌ಗೆ 409 ರನ್‌ಗಳ ಭಾರಿ ಮೊತ್ತ ಗಳಿಸಿತು. ಈ ಮೊತ್ತವನ್ನು ಬೆನ್ನಟ್ಟಿದ ಭಾರತ 45.1 ಓವರುಗಳಲ್ಲಿ 224 ರನ್‌ಗಳಿಗೆ ಆಲೌಟ್ ಆಯಿತು.

ಏಕೈಕ ಟೆಸ್ಟ್ ಪಂದ್ಯವನ್ನು ಆಡಿದ ನಂತರ ಅಲೀಸಾ ವೃತ್ತಿಬದುಕಿಗೆ ನಿವೃತ್ತಿ ಹೇಳಲಿದ್ದಾರೆ. ಅವರು 126 ಏಕದಿನ ಪಂದ್ಯಗಳನ್ನು ಆಡಿದ್ದು, 3777 ರನ್ ಗಳಿಸಿದ್ದಾರೆ. ಇದರಲ್ಲಿ ಎಂಟು ಶತಕಗಳು, 19 ಅರ್ಧಶತಕಗಳು ಒಳಗೊಂಡಿವೆ.

ಹೀಲಿ ಎರಡನೇ ವಿಕೆಟ್‌ಗೆ ಜಾರ್ಜಿಯಾ ವೋಲ್ (62, 52 ಎಸೆತ, 4x7, 6x1) ಅವರೊಂದಿಗೆ 134 ರನ್ ಸೇರಿಸಿದರು. ಹೀಲಿ ಮತ್ತು ಬೆತ್ ಮೂನಿ ನಡುವೆ ಮೂರನೇ ವಿಕೆಟ್‌ಗೆ 145 ರನ್ ಹರಿದುಬಂದಿದ್ದು ಆಸ್ಟ್ರೇಲಿಯಾ ದೊಡ್ಡ ಮೊತ್ತಕ್ಕೆ ದಾರಿಯಾಯಿತು. ಹೀಲಿ ಕೇವಲ 98 ಎಸೆತಗಳ ಇನಿಂಗ್ಸ್‌ನಲ್ಲಿ ಎರಡು ಸಿಕ್ಸರ್‌ಗಳ ಜೊತೆ 27 ಬೌಂಡರಿಗಳನ್ನು ಬಾರಿಸಿದರು.

ಮೂನಿ ಅವರ ಅಜೇಯ ಶತಕದಲ್ಲಿ ಒಂದು ಸಿಕ್ಸರ್, 10 ಬೌಂಡರಿಗಳಿದ್ದವು.

ಈ ದೊಡ್ಡ ಮೊತ್ತಕ್ಕೆ ಉತ್ತರವಾಗಿ ಭಾರತ ಹೋರಾಟ ತೋರದೇ ವಿಕೆಟ್‌ಗಳನ್ನು ಕಳೆದುಕೊಂಡಿತು. ಜೆಮಿಮಾ ರಾಡ್ರಿಗಸ್ (42, 29 ಎಸೆತ, 4x9) ಮತ್ತು ಸ್ನೇಹ ರಾಣಾ (44, 74 ಎಸೆತ, 4x6) ಮಾತ್ರ ಸ್ವಲ್ಪ ಹೋರಾಡಿದರು.

ಪಾಯಿಂಟ್ ಲೆಕ್ಕ: ಬಹುಮಾದರಿಯ ಈ ಸರಣಿಯನ್ನು ಪಾಯಿಂಟ್ಸ್ ಆಧಾರದಲ್ಲಿ ನಿರ್ಧರಿಸಲಾಗುತ್ತದೆ. ಇದಕ್ಕೆ ಮೊದಲು ನಡೆದ ಟಿ20 ಸರಣಿಯನ್ನು ಪ್ರವಾಸಿ ಭಾರತ 2–1 ರಿಂದ ಗೆದ್ದುಕೊಂಡಿತು. ಪ್ರತಿ ಪಂದ್ಯಗಳ ಗೆಲುವಿಗೆ ಎರಡು ಪಾಯಿಂಟ್ಸ್ ನೀಡಲಾಗುತ್ತದೆ.

ಇದರ ನಂತರ ಏಕೈಕ ಟೆಸ್ಟ್ ಪಂದ್ಯ ನಡೆಯಲಿದ್ದು ಅಲ್ಲಿ ಗೆಲುವಿಗೆ ನಾಲ್ಕು ಅಂಕ ನೀಡಲಾಗುವುದು. ಸದ್ಯ ಆಸ್ಟ್ರೇಲಿಯಾ 8–4 ಮುನ್ನಡೆ ಸಾಧಿಸಿದೆ.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 50 ಓವರುಗಳಲ್ಲಿ 9 ವಿಕೆಟ್‌ಗೆ 409 (ಅಲೀಸಾ ಹೀಲಿ 158, ಜಾರ್ಜಿಯಾ ವೋಲ್ 62, ಬೆತ್ ಮೂನಿ ಔಟಾಗದೇ 106; ಶ್ರೀಚರಣಿ 106ಕ್ಕೆ2, ಸ್ನೇಹ ರಾಣಾ 66ಕ್ಕೆ2); ಭಾರತ: 45.1 ಓವರುಗಳಲ್ಲಿ 224 (ಪ್ರತಿಕಾ ರಾವಲ್ 27, ಜೆಮಿಮಾ ರಾಡ್ರಿಗಸ್ 42, ಹರ್ಮನ್‌ಪ್ರೀತ್ ಕೌರ್ 25, ದೀಪ್ತಿ ಶರ್ಮಾ 29, ಸ್ನೇಹ ರಾಣಾ 44; ಅಲಾನಾ ಕಿಂಗ್ 33ಕ್ಕೆ4, ಜಾರ್ಜಿಯಾ ವೇರ್ಹ್ಯಾಮ್ 3ಕ್ಕೆ2). ಪಂದ್ಯದ ಆಟಗಾರ್ತಿ: ಅಲೀಸಾ ಹೀಲಿ.



ಅಲೀಸಾ ಹೀಲಿ
ರನ್ 158
ಎಸೆತ 98
ಬೌಂಡರಿ 27
ಸಿಕ್ಸರ್ 2

ಶತಕ ಗಳಿಸಿದ ಸಂಭ್ರಮದಲ್ಲಿ ಅಲೀಸಾ ಹೀಲಿ ಐಸಿಸಿ ಎಕ್ಸ್ ಚಿತ್ರ

ಕರ್ನಾಟಕ ಶೂಟಿಂಗ್ ಲೀಗ್ ಟೂರ್ನಿಯಲ್ಲಿ ಚಾಂಪಿಯನ್ ಆದ ಟ್ರಿಗರ್ ಟ್ಯಾಕ್ಟಿಷಿಯನ್ ತಂಡದ ಶೂಟರ್‌ಗಳು ಟ್ರೋಫಿಯೊಂದಿಗೆ ಸಂಭ್ರಮಿಸಿದರು

ಟ್ರಿಗರ್ ಟ್ಯಾಕ್ಟಿಷಿಯನ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ರಿಗರ್ ಟ್ಯಾಕ್ಟಿಷಿಯನ್ ತಂಡವು ಕರ್ನಾಟಕ ರಾಜ್ಯ ರೈಫಲ್ ಸಂಸ್ಥೆಯ ಆಶ್ರಯದಲ್ಲಿ ನಡೆದ ಚೊಚ್ಚಲ 'ಕರ್ನಾಟಕ ಶೂಟಿಂಗ್ ಲೀಗ್' ಟೂರ್ನಿಯಲ್ಲಿ ಚಾಂಪಿಯನ್ ಆಯಿತು.

ಮೈಸೂರು ರಸ್ತೆಯ 'ಸಾಯ್' ಆವರಣದಲ್ಲಿ ಶನಿವಾರ ಅರ್ಹತಾ ಸುತ್ತು, ಭಾನುವಾರ ಪ್ರಶಸ್ತಿ ಸುತ್ತಿನ ಸ್ಪರ್ಧೆಗಳು ನಡೆದವು. ಒಟ್ಟು ಎಂಟು ಫ್ರ್ಯಾಂಚೈಸಿಗಳ ತಂಡಗಳು ಸ್ಪರ್ಧಾ ಕಣದಲ್ಲಿದ್ದವು. ಆರು ಶೂಟಿಂಗ್ ವಿಭಾಗಗಳ ಸ್ಪರ್ಧೆಗಳಲ್ಲಿ 88 ಮಂದಿ ಶೂಟರ್‌ಗಳು ತಮ್ಮ ಪ್ರತಿಭಾ ಕೌಶಲ ಪ್ರದರ್ಶಿಸಿದರು.

ಅಂತಿಮ ಸುತ್ತಿನ 25 ಮೀಟರ್ ಸ್ಪೋರ್ಟ್ಸ್ ಪಿಸ್ತೂಲ್, ಟ್ರಾಪ್ ಶೂಟಿಂಗ್, ಸ್ಕೀಟ್ ಶೂಟಿಂಗ್, ಏರ್ ಪಿಸ್ತೂಲ್‌ನಲ್ಲಿ ಟ್ಯಾಕ್ಟಿಷಿಯನ್ ತಂಡದ ಶೂಟರ್‌ಗಳು ಪಾರಮ್ಯ ಮೆರೆದರು. 50 ಮೀಟರ್ ಪ್ರೋನ್, 10 ಮೀಟರ್ ಪೀಪ್ ಸೈಟ್ ಏರ್ ರೈಫಲ್‌ನಲ್ಲಿ ಬೆಂಗಳೂರು ಬ್ರಿಗೇಡ್ ತಂಡವು ಮೇಲುಗೈ ಸಾಧಿಸಿತು.

ಚೊಚ್ಚಲ ಪ್ರಶಸ್ತಿಯನ್ನು ಗೆದ್ದುಕೊಂಡ ಟ್ಯಾಕ್ಟಿಷಿಯನ್ ತಂಡವು ₹4 ಲಕ್ಷ ಬಹುಮಾನ ತನ್ನದಾಗಿಸಿಕೊಂಡಿತು. ರನ್ನರ್ಸ್ ಅಪ್ ಆದ ಬೆಂಗಳೂರು ಬ್ರಿಗೇಡ್ ತಂಡವು ₹2 ಲಕ್ಷ ಮತ್ತು ಮೂರನೇ ಸ್ಥಾನ ಪಡೆದ ಕ್ಯಾಲಿಬರ್ ಕ್ಯಾಪಿಟಲ್ಸ್ ತಂಡವು ₹1.5 ಲಕ್ಷ ಬಹುಮಾನ ಗೆದ್ದುಕೊಂಡಿತು.

ಭಾರತ ರೈಫಲ್ ಸಂಸ್ಥೆಯ ಅಧ್ಯಕ್ಷ ಕಲಿಕೇಶ್ ನಾರಾಯಣ್ ಸಿಂಗ್ ದೇವ್, ಕರ್ನಾಟಕ ರಾಜ್ಯ ರೈಫಲ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜಿ.ಸುಶೀಲಾ, ಖಜಾಂಜಿ ಮುರುಳಿ ವಿ., ಕರ್ನಾಟಕ ರಾಜ್ಯ ಕ್ರೀಡಾ ಸಲಹಾ ಸಮಿತಿ ಸದಸ್ಯ ಪ್ರಕಾಶ್ ನಂಜಪ್ಪ ಉಪಸ್ಥಿತರಿದ್ದರು.

ದುಬೈ ವಿಮಾನ ನಿಲ್ದಾಣದಲ್ಲಿ ಸಿಲುಕಿಕೊಂಡ ಸಿಂಧು
'100 ಮೀ. ದೂರದಲ್ಲಿ ಸ್ಫೋಟವಾಯಿತು'

ನವದೆಹಲಿ (ಪಿಟಿಐ): ಒಲಿಂಪಿಯನ್ ಪಿ.ವಿ.ಸಿಂಧು ಅವರು ದುಬೈ ವಿಮಾನ ನಿಲ್ದಾಣದಲ್ಲಿ ಸಿಲುಕಿಕೊಂಡಿದ್ದು, ಅಲ್ಲಿನ ಉದ್ವಿಗ್ನ ಪರಿಸ್ಥಿತಿಯ ಬಗ್ಗೆ ಹಾಗೂ ಎದುರಾದ ಸಂಕಷ್ಟಗಳ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

'ಬೆಂಗಳೂರಿನಿಂದ ನಾವು ಹೊರಟಿದ್ದ ವಿಮಾನವು ದುಬೈ ವಿಮಾನ ನಿಲ್ದಾಣದಲ್ಲಿ ಇಳಿಯುವಷ್ಟರಲ್ಲಿ ಪರಿಸ್ಥಿತಿ ಕೈಮೀರಿತ್ತು. ಎಲ್ಲ ವಿಮಾನಗಳು ರದ್ದಾಗಿ ನಾವು ಅತಂತ್ರಗೊಂಡೆವು. ಸ್ವಲ್ಪ ಹೊತ್ತಿನ ನಂತರ, ಕೋಚ್ ಇರ್ವಾನ್‌ಸ್ಯಾ ಆದಿ ಪ್ರಥಮ ಅವರಿಂದ ಕೇವಲ 100 ಮೀ. ದೂರದಲ್ಲಿಯೇ ಸ್ಫೋಟ ಸಂಭವಿಸಿತು. ನಾವು ಭೀತಿಗೊಳಗಾಗಿದ್ದೆವು' ಎಂದು ಸಿಂಧು ಅವರು ವಿಮಾನ ನಿಲ್ದಾಣದಲ್ಲಿನ ಪರಿಸ್ಥಿತಿಯನ್ನು ಕಟ್ಟಿಕೊಟ್ಟರು.

'ವಿಮಾನ ನಿಲ್ದಾಣದಲ್ಲಿ ಅತಂತ್ರ ಸ್ಥಿತಿಯಲ್ಲಿದ್ದ ನಮ್ಮನ್ನು ಸದ್ಯ ಸುರಕ್ಷಿತ ಸ್ಥಳಕ್ಕೆ ಕಳುಹಿಸಿಕೊಡಲಾಗಿದೆ' ಎಂದು ಸಿಂಧು ಹೇಳಿದರು.

'ವಿಮಾನ ನಿಲ್ದಾಣದ ಅಧಿಕಾರಿಗಳು ನಮ್ಮನ್ನು ಹೋಟೆಲ್‌ಗೆ ಸ್ಥಳಾಂತರಿಸಿದ್ದಾರೆ. ನಾವು ಸುರಕ್ಷಿತವಾಗಿದ್ದೇವೆ. ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ಸ್‌ನಲ್ಲಿ ಸಿಂಧು ಬುಧವಾರ ಕಣಕ್ಕಿಳಿಯಬೇಕಿದೆ. ಆದರೆ, ಅಷ್ಟರೊಳಗೆ ಬರ್ಮಿಂಗ್‌ಹ್ಯಾಮ್‌ಗೆ ತೆರಳುವುದು ಹೇಗೆ ಎಂಬ ಸವಾಲು ಎದುರಾಗಿದೆ' ಎಂದು ಕೋಚ್ ಇರ್ವಾನ್‌ಸ್ಯಾ ಹೇಳಿದರು.

ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ಸ್ ಬರ್ಮಿಂಗ್‌ಹ್ಯಾಮ್‌ನಲ್ಲಿ ಮಂಗಳವಾರ ಆರಂಭವಾಗಲಿದೆ. ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ, ಸಿಂಗಲ್ಸ್ ಆಟಗಾರರಾದ ಲಕ್ಷ್ಯ ಸೇನ್, ಆಯುಷ್ ಶೆಟ್ಟಿ, ಮಾಳವಿಕಾ ಬನ್ಸೋಡ್ ಅವರು ಈಗಾಗಲೇ ಬರ್ಮಿಂಗ್‌ಹ್ಯಾಮ್‌ಗೆ ತಲುಪಿದ್ದಾರೆ. ಆದರೆ, ಉನ್ನತಿ ಹೂಡ ಅವರು ಪಯಣಿಸಬೇಕಿದ್ದ ನವದೆಹಲಿ–ಬರ್ಮಿಂಗ್‌ಹ್ಯಾಮ್ ನಡುವಿನ ನೇರ ವಿಮಾನ ಕೊನೆಯ ಕ್ಷಣದಲ್ಲಿ ರದ್ದಾಗಿದೆ.

'ಪರಿಸ್ಥಿತಿಯ ಬಗ್ಗೆ ನಿಗಾ ವಹಿಸಿದ್ದೇವೆ. ಆಟಗಾರರ ಪ್ರಯಾಣಕ್ಕೆ ಎದುರಾಗಿರುವ ಸವಾಲುಗಳನ್ನು ಬ್ಯಾಡ್ಮಿಂಟನ್ ಇಂಗ್ಲೆಂಡ್ ಸಂಸ್ಥೆಗೆ ಮನವರಿಕೆ ಮಾಡಿಕೊಡುತ್ತಿದ್ದೇವೆ. ಸಿಂಗಪುರ ಮಾರ್ಗದಲ್ಲಿ ಪ್ರಯಾಣಿಸಲು ಆಟಗಾರರಿಗೆ ಅವಕಾಶ ಮಾಡಿಕೊಡಲು ಯತ್ನಿಸುತ್ತಿದ್ದೇವೆ' ಎಂದು ಬಿಎಐ ಕಾರ್ಯದರ್ಶಿ ಸಂಜಯ್ ಮಿಶ್ರಾ ತಿಳಿಸಿದ್ದಾರೆ.

ಪಿಟಿಐ ಜೊತೆಗಿನ ವಿಡಿಯೊ ಸಂದರ್ಶನದಲ್ಲಿ ಪಿ.ವಿ.ಸಿಂಧು ಮಾತನಾಡಿದರು

ಶಾಹೀನ್ಸ್–ಲಯನ್ಸ್ ಪಂದ್ಯ ರದ್ದು

ಕರಾಚಿ (ಪಿಟಿಐ): ಅಬುಧಾಬಿಯಲ್ಲಿ ಶನಿವಾರ ನಡೆಯಬೇಕಿದ್ದ ಪಾಕಿಸ್ತಾನ ಶಾಹೀನ್ಸ್ ಹಾಗೂ ಇಂಗ್ಲೆಂಡ್ ಲಯನ್ಸ್ ನಡುವಣ ಮೂರನೇ 'ಏಕದಿನ' ಪಂದ್ಯವನ್ನು ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನ ಪರಿಸ್ಥಿತಿಯ ಕಾರಣಕ್ಕೆ ರದ್ದುಗೊಳಿಸಲಾಗಿದೆ.

'ಇಂಗ್ಲೆಂಡ್‌ಗೆ ಕರೆಸಿಕೊಳ್ಳಿ': ಇಂಗ್ಲೆಂಡ್ ಲಯನ್ಸ್ ತಂಡದ ಕೋಚ್ ಜಾನಿ ಬೇಸ್ಟೊ ತಮ್ಮನ್ನು ಸುರಕ್ಷಿತವಾಗಿ ಸ್ವದೇಶಕ್ಕೆ ಕರೆಸಿಕೊಳ್ಳುವಂತೆ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರಿಗೆ ಮನವಿ ಮಾಡಿದ್ದಾರೆ. ಕೊಲ್ಲಿ ಯುದ್ಧದ ಬಗ್ಗೆ ಸ್ಟಾರ್ಮರ್ ಅವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದ ವಿಡಿಯೊಗೆ ಪ್ರತಿಕ್ರಿಯಿಸಿ ಬೇಸ್ಟೊ ಮನವಿ ಮಾಡಿಕೊಂಡಿದ್ದಾರೆ.